ಶುಕ್ರವಾರ, ಜೂನ್ 5, 2026 | ₹ 7.00

prajavani.net | prajavani | www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ



ಪ್ರಸಿದ್ಧ ತಾಲೀಮು
ಮುಲ್ಲನಪುರದಲ್ಲಿ ನಡೆಯಲಿರುವ ಅಫ್ಘಾನಿಸ್ತಾನ ಎದುರಿನ ಟೆಸ್ಟ್ ಪಂದ್ಯದಲ್ಲಿ ಆಡಲಿರುವ ಭಾರತ ತಂಡದ ಆಟಗಾರ ಬೆಂಗಳೂರಿನ ಪ್ರಸಿದ್ಧ ಕೃಷ್ಣ ಅವರು ಗುರುವಾರ ಅಭ್ಯಾಸ ಮಾಡಿದರು



ಜೀವಜಲ ಹೊತ್ತು...
ಮಧ್ಯಪ್ರದೇಶದ ಭೋಪಾಲ್‌ನಲ್ಲಿ ನೀರು ಹೊತ್ತು ಸಾಗಿದ ಬಾಲಕಿ

‘ಅಧಿಕಾರ ಬೇಕಾದವರು ಡಿಕೆಶಿ ಬಳಿ ಹೋಗಿ’

ನನ್ನದು ಪಕ್ಷದ ಕೆಲಸವಷ್ಟೆ, ಬೇರೇನೂ ಇಲ್ಲ: ಕೆಪಿಸಿಸಿ ಅಧ್ಯಕ್ಷ ಬಿ.ಕೆ. ಹರಿಪ್ರಸಾದ್ ಹೇಳಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಅಧಿಕಾರ, ಸಚಿವ ಸ್ಥಾನ, ಸ್ಥಾನಮಾನ ಬೇಕು ಎನ್ನುವವರು ಡಿ.ಕೆ. ಶಿವಕುಮಾರ್ ಬಳಿಗೆ ಹೋಗಿ. ಪಕ್ಷ, ಹೋರಾಟ, ಸೋನಿಯಾ, ಖರ್ಗೆ ಕೈ ಬಲಪಡಿಸುವವರು ನನ್ನ ಜತೆ ಬನ್ನಿ’ ಎಂದು ಕೆಪಿಸಿಸಿ ನೂತನ ಅಧ್ಯಕ್ಷ ಬಿ.ಕೆ. ಹರಿಪ್ರಸಾದ್ ಅವರು, ಪಕ್ಷದ ಕಾರ್ಯಕರ್ತರನ್ನು ಉದ್ದೇಶಿಸಿ ಹೇಳಿದರು.

ಸುದ್ದಿಗಾರರ ಜೊತೆ ಗುರುವಾರ ಮಾತನಾಡಿದ ಅವರು, ‘ಸಂಘಟನೆ ಮತ್ತು ಸರ್ಕಾರವನ್ನು ಹಂಚಿಕೊಂಡು ಮುಂದೆ ಹೋಗೋಣವೆಂದು ಪಕ್ಷದ ಕಾರ್ಯಕರ್ತರಲ್ಲಿ ನಾನು ಕಳಕಳಿಯಿಂದ ಪ್ರಾರ್ಥನೆ ಮಾಡುತ್ತೇನೆ’ ಎಂದರು.

‘ಅಧಿಕಾರ ಬೇಕಿರುವವರು ಶಿವಕುಮಾರ್ ಹತ್ತಿರ ಹೋಗಿ’ ಎಂಬ ತಮ್ಮ ಹೇಳಿಕೆ ಬಗ್ಗೆ ಬಳಿಕ ಸ್ಪಷ್ಟನೆ ನೀಡಿದ ಅವರು, ‘ಕೆಲವರು ಅಧಿಕಾರ ಕೊಡಿಸುವಂತೆ ನನಗೆ ಅರ್ಜಿ ಕೊಟ್ಟಿದ್ದಾರೆ. ಅಧಿಕಾರ ಕೊಡುವುದು ನನ್ನ ಕೆಲಸವಲ್ಲ. ನಮ್ಮದು ಪಕ್ಷದ ಕೆಲಸವಷ್ಟೆ, ಬೇರೇನೂ ಇಲ್ಲ’ ಎಂದರು.

‘ಸೋನಿಯಾ ಗಾಂಧಿ ಅವರ ಆಶೀರ್ವಾದ, ರಾಹುಲ್ ಗಾಂಧಿ, ಮಲ್ಲಿಕಾರ್ಜುನ ಖರ್ಗೆ ಹಾಗೂ ಇತರೆ ವರಿಷ್ಠ ನಾಯಕರು ನನ್ನನ್ನು ಅಧ್ಯಕ್ಷನನ್ನಾಗಿ ಆಯ್ಕೆ ಮಾಡಿದ್ದಾರೆ. ವಿದ್ಯಾರ್ಥಿ ದೆಸೆಯಿಂದಲೂ ನಾನು ಪಕ್ಷದಲ್ಲಿ ತೊಡಗಿಸಿಕೊಂಡಿದ್ದೇನೆ ಎಂದೂ ಸಚಿವ ಸ್ಥಾನ ಬೇಕು ಅಂದಿಲ್ಲ. ನಾನು ಅಧಿಕಾರಕ್ಕೆ ಇರುವವನಲ್ಲ. ನಾನು ಕಾಂಗ್ರೆಸ್ ಸಿಪಾಯಿ’ ಎಂದರು.

‘ನಮ್ಮ ಹಿರಿಯರ ಆದರ್ಶ ಪಾಲಿಸಿಕೊಂಡು ಜವಾಬ್ದಾರಿ ನಿರ್ವಹಿಸುತ್ತೇನೆ. ಈ ದೇಶ ಕವಲು ದಾರಿಯಲ್ಲಿದೆ. ನಾನು ಹಿಂದುಳಿದ ವರ್ಗದವನೊ, ಮುಂದುವರಿದ ವರ್ಗಕ್ಕೆ ಸೇರಿದವನೊ ಎನ್ನುವುದು ಮುಖ್ಯ ಅಲ್ಲ. ನಾನು ಮುಂದುವರಿದವರಿಗಿಂತ ಮುಂದುವರಿದವನು. 2028ಕ್ಕೆ ನಾನು ಮುಖ್ಯಮಂತ್ರಿ ಅಭ್ಯರ್ಥಿ ಎನ್ನುವುದು ವಾಟ್ಸ್ ಆ್ಯಪ್ ವಿಶ್ವವಿದ್ಯಾಲಯದ ಅಪಪ್ರಚಾರ’ ಎಂದರು.

‘ನನಗೆ ಪಕ್ಷ ಕಟ್ಟುವ ಜವಾಬ್ದಾರಿ ಇದೆ. ಮತದಾರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ, ಪೌರತ್ವ (ತಿದ್ದುಪಡಿ) ಕಾಯ್ದೆ (ಸಿಎಎ) ವಿರುದ್ಧ ಹೋರಾಡುವ ಹೊಣೆ ಇದೆ. ಅಧಿಕಾರ ನನಗೆ ಮುಖ್ಯ ಅಲ್ಲ. ನಾವು ಬೀದಿಗಿಳಿದು ಹೋರಾಟ ಮಾಡಬೇಕು. ಗುಜರಾತ್ ಮಾದರಿ ನಮಗೆ ಬೇಕಿಲ್ಲ. ಕರ್ನಾಟಕ ಮಾದರಿ ಬಗ್ಗೆ ಹೆಮ್ಮೆ ಇದೆ. ಇದರಲ್ಲಿ ಯಾವುದೇ ಬಣ್ಣ ಇಲ್ಲ. ಸರ್ಕಾರ ಮತ್ತು ಪಕ್ಷದಲ್ಲಿ ಸಮನ್ವಯದಿಂದ ಕೆಲಸ ಮಾಡಿಕೊಂಡು ಹೋಗುತ್ತೇವೆ’ ಎಂದರು.

ಸಿದ್ದರಾಮಯ್ಯ ಭೇಟಿಗೆ ಸಚಿವರ ದಂಡು

ಬೆಂಗಳೂರು: ಸಿದ್ದರಾಮಯ್ಯ ಅವರು ಮುಖ್ಯಮಂತ್ರಿ ಹುದ್ದೆ ತೊರೆದರೂ ಅವರ ಭೇಟಿಗೆ ಸಚಿವರು, ಶಾಸಕರು, ಅಭಿಮಾನಿಗಳು ಸೇರಿದಂತೆ ಜನರ ದಂಡೇ ಗುರುವಾರ ಹರಿದು ಬಂದಿತು.

ಮುಖ್ಯಮಂತ್ರಿಯಾಗಿ ಬುಧವಾರ ಡಿ.ಕೆ.ಶಿವಕುಮಾರ್ ಅವರು ಪ್ರಮಾಣವಚನ ಸ್ವೀಕರಿಸಿದ ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದ ಅವರು ಮರುದಿನ ಕಾವೇರಿ ನಿವಾಸದಲ್ಲೇ ಹೆಚ್ಚಿನ ಸಮಯ ಕಳೆದರು. ಬೆಳಿಗ್ಗೆ 6ಕ್ಕೆ ನಿತ್ಯದ ದಿನಚರಿ ಆರಂಭಿಸಿದ ಅವರು, 6.30ರಿಂದ 7.30ರವರೆಗೆ ನಡಿಗೆ, ಲಘು ವ್ಯಾಯಾಮ ಮುಗಿಸಿದರು. ಒಂದಷ್ಟು ಸಮಯ ಪತ್ರಿಕೆಗಳ ಓದು, ಉಪಾಹಾರದ ಮುಗಿಸುವಷ್ಟರಲ್ಲೇ ಅತಿಥಿಗಳ ಬರುವಿಕೆ ಶುರುವಾಯಿತು.

ಸಿದ್ದರಾಮಯ್ಯ ಅವರನ್ನು ಭೇಟಿಯಾದ ಶಿವಕುಮಾರ್ ಅವರು ಸಚಿವರಿಗೆ ಖಾತೆ ಹಂಚಿಕೆ ಕುರಿತು ಕೆಲಹೊತ್ತು ಸಮಾಲೋಚನೆ ನಡೆಸಿದರು. ಸಚಿವರಾದ ಎಂ.ಬಿ.ಪಾಟೀಲ, ಬೈರತಿ ಸುರೇಶ್ ಹಾಗೂ ಲಕ್ಷ್ಮಿ ಹೆಬ್ಬಾಳಕರ ಸೇರಿ 40ಕ್ಕೂ ಹೆಚ್ಚು ಶಾಸಕರು ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿದರು. ಹೆಚ್ಚಿನ ಶಾಸಕರು ಸಚಿವ ಸ್ಥಾನಕ್ಕೆ ಶಿಫಾರಸು ಮಾಡುವಂತೆ ದುಂಬಾಲು ಬಿದ್ದರು. ಹೈಕಮಾಂಡ್ ನಾಯಕರ ಜತೆ ಚರ್ಚಿಸುವ ಭರವಸೆ ನೀಡಿದರು.

ಕೆಪಿಸಿಸಿ ನೂತನ ಅಧ್ಯಕ್ಷರಾಗಿ ನೇಮಕವಾಗಿರುವ ಬಿ.ಕೆ.ಹರಿಪ್ರಸಾದ್ ಅವರು ಸಿದ್ದರಾಮಯ್ಯ ಅವರನ್ನು ಭೇಟಿಯಾಗಿ ಧನ್ಯವಾದ ಸಲ್ಲಿಸಿದರು. ‘ಪಕ್ಷ ಸಂಘಟನೆಗೆ ಹೊಸ ಆಯಾಮ ನೀಡುವಂತೆ, 2028ರಲ್ಲಿ ಕೋಮುವಾದಿ ಶಕ್ತಿಗಳನ್ನು ಸೋಲಿಸಿ ಮತ್ತೆ ಅಧಿಕಾರಕ್ಕೆ ತರಲು ಪಕ್ಷವನ್ನು ಸಜ್ಜುಗೊಳಿಸಿ’ ಎಂದು ಈ ವೇಳೆ ಸಲಹೆ ನೀಡಿದರು.



ಕೆಪಿಸಿಸಿ ಅಧ್ಯಕ್ಷರಾಗಿ ನೇಮಕಗೊಂಡ ಬಿ.ಕೆ. ಹರಿಪ್ರಸಾದ್ ಅವರನ್ನು ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅಭಿನಂದಿಸಿದರು. ಸಚಿವ ಯತೀಂದ್ರ ಸಿದ್ದರಾಮಯ್ಯ, ಶಾಸಕರಾದ ಕೆ.ಎನ್. ರಾಜಣ್ಣ, ಬಸನಗೌಡ ಪಾಟೀಲ ದದ್ದಲ್, ವಿಧಾನ ಪರಿಷತ್ ಸದಸ್ಯರಾದ ಉಮಾಶ್ರೀ ಜತೆಗಿದ್ದರು

‘ಪರಸ್ಪರ ಭೇಟಿ ಸಹಜ. ಯಾವುದೇ ಕಾರ್ಯಸೂಚಿ ಇಲ್ಲ’

ಮುಖ್ಯಮಂತ್ರಿ ಡಿ.ಕೆ ಶಿವಕುಮಾರ್, ನಿಕಟಪೂರ್ವ ಮುಖ್ಯಮಂತ್ರಿ ಸಿದ್ದರಾಮಯ್ಯ, ವೀರಪ್ಪ ಮೊಯಿಲಿ, ಮಾರ್ಗರೇಟ್ ಆಳ್ವ, ಕೆ.ಎಚ್. ಮುನಿಯಪ್ಪ ಸೇರಿದಂತೆ ಹಲವು ನಾಯಕರನ್ನು ಹರಿಪ್ರಸಾದ್ ಭೇಟಿ ಮಾಡಿದರು. ಉಪ ಮುಖ್ಯಮಂತ್ರಿ ಜಿ. ಪರಮೇಶ್ವರ, ಸಚಿವ ಎಂ.ಬಿ. ಪಾಟೀಲ, ಶಾಸಕ ಸಂತೋಷ್ ಲಾಡ್ ಸೇರಿದಂತೆ ಇನ್ನೂ ಕೆಲವರ ಜೊತೆಗೂ ಮಾತುಕತೆ ನಡೆಸಿದರು.

ಕೆಪಿಸಿಸಿ ಅಧ್ಯಕ್ಷ ಸ್ಥಾನದ ಮೇಲೆ ಕಣ್ಣಿಟ್ಟಿದ್ದ ಸಚಿವ ಸತೀಶ ಜಾರಕಿಹೊಳಿ ಅವರನ್ನೂ ಭೇಟಿ ಮಾಡಿ ಪಕ್ಷ ಸಂಘಟನೆಯ ಕುರಿತು ಕೆಲಹೊತ್ತು ಚರ್ಚೆ ನಡೆಸಿದರು. ‘ಪಕ್ಷದ ಅಧ್ಯಕ್ಷ ಮತ್ತು ಮುಖ್ಯಮಂತ್ರಿಯ ಪರಸ್ಪರ ಭೇಟಿ ಸಹಜ. ಯಾವುದೇ ಕಾರ್ಯಸೂಚಿ ಇಲ್ಲ’ ಎಂದು ಹರಿಪ್ರಸಾದ್ ಪ್ರತಿಕ್ರಿಯಿಸಿದರು.

ಸುದ್ದಿ 2 ನಿಮಿಷ

‘ಮೂರು–ನಾಲ್ಕು ಡಿಸಿಎಂ ಮಾಡುವ ಅಭಿಪ್ರಾಯ ಇತ್ತು’

ಬೆಂಗಳೂರು: ‘ಸಂಪುಟ ರಚನೆ ವಿಷಯ ನಾಲ್ಕು ಗೋಡೆಗಳ ಮಧ್ಯೆ ಆಗುವ ತೀರ್ಮಾನ. ಕೆಲವು ಮಾನದಂಡಗಳ ಆಧಾರದಲ್ಲಿ ತೀರ್ಮಾನ ಮಾಡುತ್ತಾರೆ’ ಎಂದು ಸಚಿವ ಎಂ.ಬಿ. ಪಾಟೀಲ ಹೇಳಿದರು.

ಲಿಂಗಾಯತ ಸಮುದಾಯಕ್ಕೆ ಉಪ ಮುಖ್ಯಮಂತ್ರಿ ಸ್ಥಾನ ತಪ್ಪಿದ ಬಗ್ಗೆ ಪ್ರತಿಕ್ರಿಯಿಸಿದ ಅವರು, ‘ಉಪ ಮುಖ್ಯಮಂತ್ರಿ ಮಾಡಿ ಎಂದು ನಾನು ಹೇಳಿಲ್ಲ. 3–4 ಉಪ ಮುಖಮಂತ್ರಿ ಮಾಡಬೇಕೆಂಬ ಅಭಿಪ್ರಾಯ ಇತ್ತು. ಈಗ ಒಂದು ಸ್ಥಾನವನ್ನು ಪರಮೇಶ್ವರ ಅವರಿಗೆ ನೀಡಿದ್ದಾರೆ. ಮುಂದೆ ಏನು ಮಾಡುತ್ತಾರೊ ಕಾದು ನೋಡೋಣ’ ಎಂದರು.

‘ಲಿಂಗಾಯತ ಸಮುದಾಯಕ್ಕೆ ವಿಧಾನ ಪರಿಷತ್ ಸ್ಥಾನ ಕೊಡುವಂತೆ ನಾವು ಗಟ್ಟಿಯಾಗಿಯೇ ಕೇಳುತ್ತೇವೆ’ ಎಂದೂ ಹೇಳಿದರು.



ಕೆಪಿಸಿಸಿಗೆ ನೂತನ ಅಧ್ಯಕ್ಷರ ನೇಮಕ ಕುರಿತು ಮಾತನಾಡಿದ ಅವರು, ‘ಬಿ.ಕೆ. ಹರಿಪ್ರಸಾದ್ ಕೇಂದ್ರದಲ್ಲಿ ಅನೇಕ ಹುದ್ದೆಗಳಲ್ಲಿ ಕೆಲಸ ಮಾಡಿದ್ದಾರೆ. ಅವರಿಗೆ ಸಾಕಷ್ಟು ಅನುಭವ ಇದೆ. ಇದು ಕೋಮುವಾದಿಗಳ ವಿರುದ್ಧ ಹೋರಾಟ ಮಾಡುವ ನಿಲುವು. ಸಿದ್ದರಾಮಯ್ಯ ಮಾರ್ಗದರ್ಶನದಲ್ಲಿ ಎಲ್ಲವೂ ಆಗಿದೆ’ ಎಂದರು.

‘ನಾವೆಲ್ಲರೂ ಒಟ್ಟಾಗಿ ಕೆಲಸ ಮಾಡುತ್ತೇವೆ. 2028ರಲ್ಲಿ ಮತ್ತೆ ನಾವು ಅಧಿಕಾರಕ್ಕೆ ಬರುತ್ತೇವೆ. 2029ರ ಲೋಕಸಭಾ ಚುನಾವಣೆಯಲ್ಲಿ ಕನಿಷ್ಠ 20 ಸ್ಥಾನ ಗೆಲ್ಲುತ್ತೇವೆ’ ಎಂದೂ ಅವರು ವಿಶ್ವಾಸ ವ್ಯಕ್ತಪಡಿಸಿದರು.

ವಿದ್ಯಾರ್ಥಿಗಳಿಗೆ ಉಚಿತ ಬಸ್ ಪಾಸ್‌ಗೆ ಒಪ್ಪಿಗೆ

ಬೆಂಗಳೂರು: ರಾಜ್ಯದ ಶಾಲಾ, ಕಾಲೇಜು ವಿದ್ಯಾರ್ಥಿಗಳಿಗೆ ಉಚಿತ ಬಸ್ ಪಾಸ್ ಸೌಲಭ್ಯ ವಿಸ್ತರಿಸುವ ಯೋಜನೆಗೆ ತಾತ್ವಿಕ ಅನುಮೋದನೆ ನೀಡಿ ಸರ್ಕಾರ ಗುರುವಾರ ಆದೇಶ ಹೊರಡಿಸಿದೆ.

ಕೆಎಸ್‌ಆರ್‌ಟಿಸಿ, ಬಿಎಂಟಿಸಿ, ಎನ್‌ಡಬ್ಲ್ಯುಆರ್‌ಟಿಸಿ, ಕೆಕೆಆರ್‌ಟಿಸಿ ನಿಗಮಗಳ ಬಸ್‌ಗಳಲ್ಲಿ ಎಲ್ಲ ವಿದ್ಯಾರ್ಥಿಗಳಿಗೆ ಉಚಿತ ಬಸ್ ಪಾಸ್ ಸೌಲಭ್ಯ ವಿಸ್ತರಿಸುವ ಬಗ್ಗೆ ಡಿ.ಕೆ. ಶಿವಕುಮಾರ್ ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದ ನಡೆಸಿದ ಮೊದಲ ಸಚಿವ ಸಂಪುಟ ಸಭೆಯಲ್ಲಿ ನಿರ್ಧಾರ ಕೈಗೊಳ್ಳಲಾಗಿತ್ತು.

ಈ ಯೋಜನೆಯ ಅನುಷ್ಠಾನದ ಬಗ್ಗೆ ವಿವರವಾದ ಷರತ್ತು ಮತ್ತು ನಿಬಂಧನೆಗಳನ್ನು ಪ್ರತ್ಯೇಕವಾಗಿ ಹೊರಡಿಸಲಾಗುವುದು ಎಂದು ಸಾರಿಗೆ ಇಲಾಖೆ ಹೊರಡಿಸಿದ ಆದೇಶದಲ್ಲಿ ತಿಳಿಸಲಾಗಿದೆ.

ಶಕ್ತಿ ಯೋಜನೆಯಡಿ ವಿದ್ಯಾರ್ಥಿನಿಯರು ಸಾರಿಗೆ ನಿಗಮಗಳ ಬಸ್‌ಗಳಲ್ಲಿ ಈಗಾಗಲೇ ಉಚಿತವಾಗಿ ಪ್ರಯಾಣಿಸುತ್ತಿದ್ದಾರೆ.

ಚಿಟಿಕೆ ಸುದ್ದಿ

‘ಒಪ್ಪಂದದಂತೆ ನಡೆದುಕೊಂಡರೆ ಸಾಕು’



ಮೈಸೂರು: 'ನಮಗೆ ಯಾವ ಸರ್ಕಾರದಿಂದಲೂ ವೈಯಕ್ತಿಕವಾಗಿ ನಿರೀಕ್ಷೆಗಳಿಲ್ಲ. ಹಿಂದೆ ಆಗಿರುವ ಒಪ್ಪಂದದಂತೆ ನಡೆದುಕೊಂಡರೆ ಸಾಕು’ ಎಂದು ಮೈಸೂರು ಸಂಸ್ಥಾನದ ರಾಜವಂಶಸ್ಥೆ ಪ್ರಮೋದಾದೇವಿ ಒಡೆಯರ್ ಹೇಳಿದರು.

ಗುರುವಾರ ಇಲ್ಲಿ ಮಾಧ್ಯಮಗಳಿಗೆ ಪ್ರತಿಕ್ರಿಯೆ ನೀಡಿದ ಅವರು, ಮೈಸೂರು ಸಂಸ್ಥಾನ ಭಾರತದ ಒಕ್ಕೂಟದ ಜೊತೆ ವಿಲೀನವಾದ ಸಂದರ್ಭ ಏನು ಒಪ್ಪಂದ ಆಗಿತ್ತೋ ಅದಕ್ಕೆ ಅನುಗುಣವಾಗಿ ಸರ್ಕಾರಗಳು ನಡೆದುಕೊಂಡರೆ ಸಾಕು. ಆದರೆ, ಯಾವುದೋ ಕಾರಣಕ್ಕೆ ಸರಿಯಾಗಿ ಸ್ಪಂದನೆ ಆಗುತ್ತಿಲ್ಲ. ಉಳಿದಂತೆ ಯಾವುದೇ ನಿರೀಕ್ಷೆಗಳಿಲ್ಲ ಎಂದರು.

ಹಿಂದಿನ ಸಿದ್ದರಾಮಯ್ಯ ಸರ್ಕಾರ ಹಾಗೂ ಮೈಸೂರು ಸಂಸ್ಥಾನದ ನಡುವಿನ ಹಗ್ಗಜಗ್ಗಾಟದ ಕುರಿತು ಪ್ರತಿಕ್ರಿಯಿಸಿದ ಅವರು, ‘ಅದು ಜನರು ಹಾಗೂ ಮಾಧ್ಯಮದವರ ಅಭಿಪ್ರಾಯವಷ್ಟೇ. ಅದು ನೋಡಿದವರಿಗೆ, ಕೇಳಿದವರಿಗಷ್ಟೇ ಗೊತ್ತು. ಈ ಬಗ್ಗೆ ನಾನೇನೂ ಟೀಕಿಸುವುದಿಲ್ಲ. ಹೊಸ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ರಾಜ್ಯದ ಎಲ್ಲರ ಏಳಿಗೆಗೆ ಕೆಲಸ ಮಾಡಲಿ’ ಎಂದು ಆಶಿಸಿದರು.

ಮತ್ತೊಮ್ಮೆ ಶೇ 50 ರಿಯಾಯಿತಿ

ಬೆಂಗಳೂರು: ಸಂಚಾರ ನಿಯಮ ಉಲ್ಲಂಘನೆಯ ಪ್ರಕರಣಗಳಿಗೆ ಸಂಬಂಧಿಸಿದಂತೆ ಶೇ 50ರ ರಿಯಾಯಿತಿ ಅಡಿ ದಂಡ ಪಾವತಿಸಲು ರಾಜ್ಯ ಸರ್ಕಾರ ಮತ್ತೊಮ್ಮೆ ಅವಕಾಶ ಕಲ್ಪಿಸಿ ಆದೇಶಿಸಿದೆ. ಜೂನ್ 21ರಿಂದ ಜುಲೈ 10ರ ವರೆಗೆ ಕಾಲಾವಕಾಶ ನೀಡಿ ಆದೇಶಿಸಿದೆ.

20 ದಿನ ನೀಡಿರುವ ಕಾಲಾವಕಾಶ ಬಳಸಿಕೊಂಡು ವಾಹನಗಳ ಮಾಲೀಕರು ದಂಡ ಪಾವತಿಸಬಹುದು ಎಂದು ಆದೇಶದಲ್ಲಿ ತಿಳಿಸಲಾಗಿದೆ.

2026ರ ಮೇ ಮೊದಲು ಪೊಲೀಸ್ ಇಲಾಖೆಯ ಸಂಚಾರ ಇ–ಚಲನ್‌ಗಳಲ್ಲಿ ದಾಖಲಾಗಿ ಬಾಕಿ ಇರುವ ಪ್ರಕರಣಗಳ ದಂಡದ ಮೊತ್ತದಲ್ಲಿ ಮತ್ತು ಸಾರಿಗೆ ಇಲಾಖೆಯಲ್ಲಿ 1991ರಿಂದ 2022ರ ಅವಧಿಯಲ್ಲಿ ದಾಖಲಾಗಿ ಪಾವತಿಗೆ ಬಾಕಿ ಇರುವ ಪ್ರಕರಣಗಳ ದಂಡದ ಮೊತ್ತದಲ್ಲಿ ಶೇ 50 ರಿಯಾಯಿತಿ ನೀಡಿ ಆದೇಶಿಸಲಾಗಿದೆ.

ನೀನಾಸಂ ಅರ್ಜಿ ಆಹ್ವಾನ

ಶಿವಮೊಗ್ಗ: ನೀನಾಸಂ ರಂಗಶಿಕ್ಷಣ ಕೇಂದ್ರವು 2025–26ನೇ ಸಾಲಿನ ಒಂದು ವರ್ಷದ ರಂಗಶಿಕ್ಷಣಕ್ಕೆ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಿದೆ.

ರಂಗಭೂಮಿಯಲ್ಲಿ ಆಸಕ್ತಿ ಇದ್ದು, ಸ್ವಲ್ಪಮಟ್ಟಿನ ಅನುಭವ ಅಗತ್ಯ. ಊಟ, ವಸತಿ ವ್ಯವಸ್ಥೆಯ ವೆಚ್ಚ, ಭಾಗಶಃ ವಿದ್ಯಾರ್ಥಿ ವೇತನ ದೊರೆಯುತ್ತದೆ.

ಕೇಂದ್ರದಲ್ಲಿ ವಿದ್ಯಾರ್ಥಿಗಳಿಗೆ ರಂಗಕಲ್ಪನೆ, ರಂಗ ಇತಿಹಾಸ, ನಾಟಕ ಇತಿಹಾಸ, ರಂಗ ನಟನೆ, ರಂಗ ಸಿದ್ಧತೆ, ರಂಗ ವ್ಯವಸ್ಥೆ ಬಗ್ಗೆ ವಿಸ್ತಾರವಾದ ಸೈದ್ಧಾಂತಿಕ ಹಾಗೂ ಪ್ರಾಯೋಗಿಕ ಶಿಕ್ಷಣ ನೀಡಲಾಗುತ್ತದೆ.

ಹೆಚ್ಚಿನ ವಿವರಗಳು ಮತ್ತು ಅರ್ಜಿ www.ninasam.orgನಲ್ಲಿ ಲಭ್ಯವಿದೆ.

ಆತ್ಮಸಾಕ್ಷಿಗೆ ತಕ್ಕಂತೆ ಕೆಲಸ ಮಾಡಿ; ಅಧಿಕಾರಿಗಳಿಗೆ ಮುಖ್ಯಮಂತ್ರಿ ಶಿವಕುಮಾರ್ ಸಲಹೆ

‘ಇತಿಹಾಸ ಸೃಷ್ಟಿಸಿ, ಸಾಕ್ಷಿಗುಡ್ಡೆ ಬಿಟ್ಟು ಹೋಗಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಇತಿಹಾಸ ಓದಲು, ಇತಿಹಾಸ ಬರೆಯಲು ಇಷ್ಟವಿಲ್ಲ. ಆದರೆ, ಇತಿಹಾಸ ಸೃಷ್ಟಿಸಿ ಸಾಕ್ಷಿ ಗುಡ್ಡೆ ಬಿಟ್ಟು ಹೋಗಬೇಕು. ಆದ್ದರಿಂದ ನೀವು ನಿಮ್ಮ ಆತ್ಮಸಾಕ್ಷಿಗೆ ತಕ್ಕಂತೆ ಕೆಲಸ ಮಾಡಿ’.

ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಗುರುವಾರ ನಡೆದ ಸಭೆಯಲ್ಲಿ ಹಿರಿಯ ಅಧಿಕಾರಿಗಳಿಗೆ ಹೇಳಿದ ಕಿವಿ ಮಾತುಗಳಿವು.

‘ಕಾನೂನು ಹೊರತಾಗಿ ಬೇರೆ ಯಾವುದೇ ಒತ್ತಡಕ್ಕೂ ಮಣಿಯಬಾರದು. ಮಂತ್ರಿಗಳು, ಶಾಸಕರು, ನನ್ನ ಕಚೇರಿಯವರ ಮಾತು ಕೇಳದೇ, ಕಾನೂನು ವ್ಯಾಪ್ತಿಯಲ್ಲಿ ಸಕಾರಾತ್ಮಕ ಮನೋಭಾವದಲ್ಲಿ ಕೆಲಸ ಮಾಡಿ. ಸಮಸ್ಯೆಗಳಿಗೆ ವ್ಯವಸ್ಥೆಯ ಚೌಕಟ್ಟಿನಲ್ಲೇ ಪರಿಹಾರ ಹುಡುಕಬೇಕು ಎಂದು ಅಧಿಕಾರಿಗಳಿಗೆ ಸೂಚಿಸಿದ್ದೇನೆ’ ಎಂದು ಶಿವಕುಮಾರ್ ಸುದ್ದಿಗೋಷ್ಠಿಯಲ್ಲಿ ಹೇಳಿದರು.

‘ರಾಜ್ಯದಲ್ಲಿ ಸುಮಾರು ₹8,000 ಕೋಟಿಯಷ್ಟು ಸಿಎಸ್‌ಆರ್ ನಿಧಿ ಇದೆ. ಯಾವ ಸಂಸ್ಥೆ ಯಾವ ಉದ್ದೇಶಕ್ಕೆ ಈ ಹಣ ಬಳಕೆ ಮಾಡುತ್ತಿದೆ ಎಂಬ ಮಾಹಿತಿ ಇಲ್ಲ. ಹೀಗಾಗಿ ನಮ್ಮ ರಾಜ್ಯದಲ್ಲಿ ಸಿಎಸ್‌ಆರ್ ನಿಧಿ ಯಾವುದಕ್ಕೆ ಬಳಕೆಯಾಗುತ್ತಿದೆ ಎಂಬ ಸ್ಪಷ್ಟ ಮಾಹಿತಿ ಸರ್ಕಾರದ ಬಳಿ ಇರಬೇಕು’ ಎಂದರು.

‘ನಾವು ಈಗಾಗಲೇ ಸಿಎಸ್‌ಆರ್ ನಿಧಿಯಲ್ಲಿ ಪ್ರತಿ ಮೂರು ಗ್ರಾಮ ಪಂಚಾಯಿತಿಗೆ ಒಂದರಂತೆ ಕೆಪಿಎಸ್ ಶಾಲೆಗಳ ನಿರ್ಮಾಣಕ್ಕೆ ಮುಂದಾಗಿದ್ದೇವೆ. ಸರ್ಕಾರ ಕೂಡ ಪ್ರಾಥಮಿಕ ಶಿಕ್ಷಣಕ್ಕೆ ಹೆಚ್ಚಿನ ಆದ್ಯತೆ ನೀಡುತ್ತಿದ್ದು, ಈ ಕ್ಷೇತ್ರಕ್ಕೆ ನಿಮ್ಮ ಸಿಎಸ್‌ಆರ್ ನಿಧಿ ಬಳಸಿ ಎಂದು ಮನವಿ ಮಾಡಿ ಪತ್ರ ಬರೆಯಲಾಗುವುದು. ಶಿಕ್ಷಣದ ಬಳಿಕ ಆರೋಗ್ಯ ಕ್ಷೇತ್ರಕ್ಕೂ ಈ ನಿಧಿ ಬಳಸಲಾಗುವುದು’ ಎಂದು ವಿವರಿಸಿದರು.

ಮೇಕೆದಾಟು-ನಮ್ಮ ಕೆಲಸ ನಾವು ಮಾಡ್ತೇವೆ: ‘ಮೇಕೆದಾಟು ವಿಚಾರವಾಗಿ ನಮ್ಮ ಕೆಲಸ ಏನಿದೆಯೊ ಅದನ್ನು ಮಾಡುತ್ತೇವೆ. ತಮಿಳುನಾಡಿನ ಅಭಿಪ್ರಾಯವನ್ನು ನಾವು ಗೌರವಿಸುತ್ತೇವೆ’ ಎಂದು ಶಿವಕುಮಾರ್ ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

‘ಕರ್ನಾಟಕದ ನೀರಾವರಿ ಯೋಜನೆಗಳನ್ನು ತಮಿಳುನಾಡಿನವರು 30–40 ವರ್ಷಗಳಿಂದ ವಿರೋಧಿಸುತ್ತಲೇ ಬಂದಿದ್ದಾರೆ. ಈ ವಿಷಯವಾಗಿ ನ್ಯಾಯಾಲಯ ಈಗಾಗಲೇ ತನ್ನ ತೀರ್ಮಾನ ಹೇಳಿದೆ. ಕೇಂದ್ರ ಸರ್ಕಾರಕ್ಕೆ ನಾವು ಈಗಾಗಲೇ ನಮ್ಮ ಡಿಪಿಆರ್ ಸಲ್ಲಿಕೆ ಮಾಡಿದ್ದೇವೆ. ಅದನ್ನು ಅವರು ಪರಿಶೀಲಿಸುತ್ತಾರೆ. ಈ ವಿಚಾರ ಕೇಂದ್ರದ ಮುಂದಿದೆ’ ಎಂದು ಹೇಳಿದರು.

‘ತಮಿಳುನಾಡಿನವರು ಪಕ್ಷಾತೀತವಾಗಿ ರಾಜಕೀಯ ಮಾಡುತ್ತಾರೆ. ಈಗಾಗಲೇ ಅವರು ಸುಪ್ರೀಂಕೋರ್ಟ್‌ಗೆ ಹೋಗಿದ್ದಾರೆ. ಸುಪ್ರೀಂಕೋರ್ಟ್ ತನ್ನ ತೀರ್ಪನ್ನು ಪರಿಶೀಲನೆ ಮಾಡಬೇಕು ಎಂದೂ ಅವರು ಮನವಿ ಮಾಡಿದ್ದಾರೆ. ಈ ವಿಚಾರವಾಗಿ ನ್ಯಾಯಾಲಯ ಈಗಾಗಲೇ ನಿರ್ಧಾರ ತೆಗೆದುಕೊಂಡಿದೆ’ ಎಂದರು.



ಅಧಿಕಾರಿಗಳ ಸಭೆಯಲ್ಲಿ ಹಿರಿಯ ಪೊಲೀಸ್ ಅಧಿಕಾರಿಗಳ ಜತೆ ಶಿವಕುಮಾರ್

ಎಸ್‌ಐಆರ್: ಪರಿಶೀಲನೆಗೆ ಸೂಚನೆ

‘ರಾಜ್ಯದಲ್ಲಿ ಎಸ್‌ಐಆರ್ ಪ್ರಕ್ರಿಯೆ ನಡೆಯುತ್ತಿದ್ದು, ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಕಡ್ಡಾಯವಾಗಿ ಆಯಾ ಜಿಲ್ಲೆಗಳಲ್ಲಿರುವ ತಾಲ್ಲೂಕುಗಳಿಗೆ ಹೋಗಿ ಪರಿಶೀಲನೆ ನಡೆಸಬೇಕು’ ಎಂದು ಶಿವಕುಮಾರ್ ಸೂಚಿಸಿದರು.

‘ಯಾವುದೇ ವ್ಯಕ್ತಿ ಎಸ್‌ಐಆರ್‌ನಲ್ಲಿ ಮತದಾನದ ಹಕ್ಕು ಕಳೆದುಕೊಳ್ಳಬಾರದು. ಈ ಪ್ರಕ್ರಿಯೆಯಲ್ಲಿ ತಮ್ಮ ಹೆಸರು ನೋಂದಣಿ ಮಾಡಿಕೊಳ್ಳದಿದ್ದರೆ ಸವಲತ್ತುಗಳನ್ನು ಕಳೆದುಕೊಳ್ಳಲಿದ್ದಾರೆ. ಮುಖ್ಯಮಂತ್ರಿ ಇರಲಿ, ಉಪ ಮುಖ್ಯಮಂತ್ರಿ ಇರಲಿ ಎಲ್ಲರೂ ಮತದಾರರೇ. ಎನ್ಯುಮರೇಷನ್ ಅರ್ಜಿ ತುಂಬಿ, ಸಹಿ ಹಾಕಿ, ದಾಖಲೆ ಸಮೇತ ಸಲ್ಲಿಕೆ ಮಾಡಬೇಕು. ಇಲ್ಲವಾದರೆ ಮತದಾನದ ಹಕ್ಕು ಕಳೆದುಕೊಳ್ಳುತ್ತಾರೆ. ಈ ಬಗ್ಗೆ ಜಾಗೃತಿ ಮೂಡಿಸಲಾಗುವುದು. ಇದಕ್ಕೆ ಅಗತ್ಯವಿರುವ ಸಿದ್ಧತೆ ಮಾಡಿಕೊಳ್ಳಲು ನಿರ್ದೇಶನ ನೀಡಿರುವೆ’ ಎಂದರು.

ಎನ್‌ಆರ್‌ಐ ಕನ್ನಡಿಗರಿಗೆ ಸಚಿವಾಲಯ

‘ರಾಜ್ಯದಲ್ಲಿ ಅನಿವಾಸಿ ಭಾರತೀಯ ಕನ್ನಡಿಗರ ಸಚಿವಾಲಯವನ್ನು ಸ್ಥಾಪಿಸಲಾಗುವುದು’ ಎಂದು ಶಿವಕುಮಾರ್ ತಿಳಿಸಿದರು.


‘ನಮ್ಮ ರಾಜ್ಯದಲ್ಲಿ ಅನಿವಾಸಿ ಭಾರತೀಯರು ಬಂಡವಾಳ ಹೂಡಿಕೆಗೆ ಆಸಕ್ತಿ ಹೊಂದಿದ್ದರೆ ಅವರಿಗೆ ಅಗತ್ಯ ಸೌಲಭ್ಯ ಕಲ್ಪಿಸಲು ಈ ಸಚಿವಾಲಯ ಸಹಾಯವಾಗುತ್ತದೆ. ಇದಕ್ಕೆ ಅಗತ್ಯ ಸಿದ್ಧತೆ ಮಾಡಿಕೊಳ್ಳಲು ಸೂಚಿಸಿರುವೆ’ ಎಂದರು.

ಅನಿವಾಸಿ ಸಚಿವಾಲಯ ಸಾಕಾರ: ‘ಅನಿವಾಸಿ ಸಚಿವಾಲಯ ಸ್ಥಾಪಿಸಬೇಕು ಎಂಬ ನಮ್ಮ ಬೇಡಿಕೆ ಈಡೇರಿದೆ. ಇದರಿಂದ ಅನಿವಾಸಿ ಕನ್ನಡಿಗರಿಗೆ ಬಹಳಷ್ಟು ಪ್ರಯೋಜನವಾಗುತ್ತದೆ. ಇದನ್ನು ಸಾಕಾರಗೊಳಿಸಿರುವ ಮುಖ್ಯಮಂತ್ರಿ ಶಿವಕುಮಾರ ಅವರಿಗೆ ಅಭಿನಂದನೆಗಳು’ ಎಂದು ವಿಧಾನಪರಿಷತ್ ಸದಸ್ಯೆ ಆರತಿ ಕೃಷ್ಣ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

‘ಡಿಕೆಶಿಗೆ ಹನಿಮೂನ್ ಪಿರಿಯಡ್ ಇಲ್ಲ’

ಪ್ರಜಾವಾಣಿ ವಾರ್ತೆ

ಮಂಡ್ಯ: ‘ಡಿ.ಕೆ. ಶಿವಕುಮಾರ್ ಮಂತ್ರಿಮಂಡಲ ನೋಡಿದಾಗ ಅದು ಸಿದ್ದರಾಮಯ್ಯ ಕ್ಯಾಬಿನೆಟ್ ಎಂದು ಸ್ಪಷ್ಟವಾಗುತ್ತದೆ. ಕುರ್ಚಿಯಿಂದ ಇಳಿದು ಹೋಗುವಾಗ ಸಿದ್ದರಾಮಯ್ಯ ಗೂಗ್ಲಿ ಎಸೆದು ಹೋಗಿದ್ದಾರೆ. ಹೀಗಾಗಿ ಹೊಸ ಮುಖ್ಯಮಂತ್ರಿಗೆ ಹನಿಮೂನ್ ಪಿರಿಯಡ್ ಇರುವುದಿಲ್ಲ’ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ವ್ಯಂಗ್ಯವಾಡಿದರು.



ಬಿ.ವೈ. ವಿಜಯೇಂದ್ರ


ಕೆ.ಆರ್.ಪೇಟೆಯಲ್ಲಿ ಗುರುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಶಿವಕುಮಾರ್ ಮುಖ್ಯಮಂತ್ರಿ ಆಗುವ ಆಸೆ ಪೂರೈಸಿಕೊಂಡಿದ್ದಾರೆ. ಈಗ ಅವರ ಮುಂದೆ ಹಲವು ಸವಾಲುಗಳಿವೆ. ಸಿದ್ದರಾಮಯ್ಯ ಕಡೇ ಕ್ಷಣದಲ್ಲಿ ಹಿಂದುಳಿದ ವರ್ಗಗಳ ಆಯೋಗದ ವರದಿ ಸ್ವೀಕರಿಸಿ, ಹೊಸ ಸಿ.ಎಂ ಏನು ಮಾಡುತ್ತಾರೆ ಎಂಬ ಸವಾಲು ಬಿಟ್ಟು ಹೋಗಿದ್ದಾರೆ ಎಂದರು. ಅಲ್ಪಸಂಖ್ಯಾತರ ಓಲೈಕೆ ಬಿಟ್ಟು ಕಳೆದ ಮೂರು ವರ್ಷಗಳಲ್ಲಿ ರಾಜ್ಯ ಸರ್ಕಾರ ಗ್ಯಾರಂಟಿ ಯೋಜನೆಗಳಿಂದಾಗಿ ಯಾವುದೇ ಅಭಿವೃದ್ಧಿ ಕೆಲಸ ಮಾಡಿಲ್ಲ. ಇದನ್ನೇ ಶಿವಕುಮಾರ್ ಮುಂದುವರಿಸಿಕೊಂಡು ಹೋಗಬೇಕಾಗುತ್ತದೆಯೇ ಹೊರತು ಅವರಿಂದಲೂ ಅಭಿವೃದ್ಧಿ ಕೆಲಸ ಮಾಡಲು ಸಾಧ್ಯವಾಗುವುದಿಲ್ಲ. ಎಲ್ಲರನ್ನೂ ಸಂಭಾಳಿಸಿಕೊಂಡು ಹೋಗುವುದೇ ಅವರ ಮುಂದಿರುವ ದೊಡ್ಡ ಸವಾಲು ಎಂದರು.

ಸಿದ್ದರಾಮಯ್ಯ ಕೈಲಿ ಸರ್ಕಾರದ ರಿಮೋಟ್: ಅಶೋಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ನೇತೃತ್ವದಲ್ಲಿ ರಚನೆಯಾದ ಹೊಸ ಸಚಿವ ಸಂಪುಟವು ರಾಹುಲ್ ಗಾಂಧಿ ಮತ್ತು ಸಿದ್ದರಾಮಯ್ಯ ಅವರ ರಿಮೋಟ್ ಕಂಟ್ರೋಲ್‌ನಿಂದ ನಡೆಯಲಿದೆ’ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ ಲೇವಡಿ ಮಾಡಿದರು.

ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ರಾಜ್ಯದಲ್ಲಿ ಮುಖ್ಯಮಂತ್ರಿ ಬದಲಾಗಿರುವುದು ಹಳೆಯ ಸಿನಿಮಾದ ಪೋಸ್ಟರ್ ಬದಲಾದಂತಿದೆ. ಮುಖ್ಯಮಂತ್ರಿ ನಿವಾಸದ ಮುಂಭಾಗದ ಫಲಕದಲ್ಲಿ ಹೆಸರಷ್ಟೇ ಬದಲಾಗಿದ್ದು, ಜನರ ಕಷ್ಟಗಳೇನೂ ನೀಗಿಲ್ಲ. ರಾಜ್ಯಕ್ಕೆ ಹೊಸ ಸಚಿವರು ಸಿಗುತ್ತಾರೆ ಎಂಬ ನಿರೀಕ್ಷೆ ಸುಳ್ಳಾಗಿದೆ’ ಎಂದರು.



ಆರ್.ಅಶೋಕ

‘ಪ್ರಮಾಣವಚನ ಸ್ವೀಕಾರದ ವೇಳೆ ಶಿವಕುಮಾರ್ ಅವರು ಸಂವಿಧಾನದ ಪ್ರತಿ ಹಿಡಿದುಕೊಂಡಿದ್ದರು, ಆದರೆ ನೈಜ ಅಧಿಕಾರವೇ ಅವರಿಗೆ ಸಿಕ್ಕಿಲ್ಲ. ನೂತನ ಸಚಿವ ಸಂಪುಟದಲ್ಲಿ ಶಿವಕುಮಾರ್ ಬಣದ ಒಬ್ಬರಿಗೂ ಸ್ಥಾನ ಸಿಕ್ಕಿಲ್ಲ. ಸಚಿವರ ಪಟ್ಟಿಯನ್ನು ಸಿದ್ದರಾಮಯ್ಯ ಮತ್ತು ಕಾಂಗ್ರೆಸ್ ಹೈಕಮಾಂಡ್ ತೀರ್ಮಾನ ಮಾಡಿದೆ. ಮುಖ್ಯಮಂತ್ರಿಗೆ ಸಚಿವರನ್ನು ಆಯ್ಕೆ ಮಾಡುವ ಸ್ವಾತಂತ್ರ್ಯವೂ ಇಲ್ಲ’ ಎಂದು ಹೇಳಿದರು.

‘ರಾಜ್ಯ ಸರ್ಕಾರದ ನೂತನ ಸಚಿವ ಸಂಪುಟದಲ್ಲಿ ಒಬ್ಬ ಮಹಿಳೆಯೂ ಇಲ್ಲ. ಮಹಿಳೆಯರಿಗೆ ಕಾಂಗ್ರೆಸ್ ಬಗೆದ ದ್ರೋಹವಿದು’ ಎಂದು ಆರೋಪಿಸಿದರು.

‘ಸರ್ಕಾರದಲ್ಲಿ ಹಣವೇ ಇಲ್ಲ. ಹೀಗಾಗಿಯೇ 56,000 ಹುದ್ದೆಗಳಿಗೆ ನೇಮಕಾತಿ ನಡೆಯುತ್ತಿಲ್ಲ. ಅದನ್ನು ಹೇಳುವ ಬದಲಿಗೆ ನೂತನ ಮುಖ್ಯಮಂತ್ರಿ ಸುಳ್ಳು ಹೇಳಿದ್ದಾರೆ. ಕಾಂಗ್ರೆಸ್‌ನ ನಿರಾಶ್ರಿತರಿಗೆ ಆಶ್ರಯ ಕಲ್ಪಿಸಲು ಭಾರತ್ ಜೋಡೊ ಅಭಿಯಾನ ನಡೆಸಲು ಹೊರಟಿದ್ದಾರೆ’ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಅಣಕು ಕಾರ್ಯಾಚರಣೆ....

ಪ್ರಜಾವಾಣಿ ಚಿತ್ರ: ಗೋವಿಂದರಾಜ ಜವಳಿ



ಪ್ರವಾಹದ ಸಂದರ್ಭದಲ್ಲಿ ಜನರ ರಕ್ಷಣಾ ಪ್ರಕ್ರಿಯೆ ಹೇಗಿರಬೇಕೆಂದು ತಿಳಿಸಲು ಮತ್ತು ಜಾಗೃತಿ ಮೂಡಿಸಲು ಅಗ್ನಿಶಾಮಕ ದಳದ ಸಿಬ್ಬಂದಿ ಗುರುವಾರ ಹುಬ್ಬಳ್ಳಿಯ ಉಣಕಲ್ ಕೆರೆಯಲ್ಲಿ ಅಣಕು ಕಾರ್ಯಾಚರಣೆ ನಡೆಸಿದರು

ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಕಳವಳ

‘ಯಾದಗಿರಿ ಸ್ಥಿತಿ ನೋಡಿದರೆ ಅಳು ಬರುತ್ತದೆ’

ಪ್ರಜಾವಾಣಿ ವಾರ್ತೆ

ಯಾದಗಿರಿ: ‘ಕರ್ನಾಟಕದ ನಕ್ಷೆಯಲ್ಲಿ ಯಾದಗಿರಿ ಜಿಲ್ಲೆಯು ಮೇಲಿದ್ದರೂ ಮಾನವ ಅಭಿವೃದ್ಧಿ ಸೂಚ್ಯಂಕದಲ್ಲಿ ಕೊನೆಯ ಸ್ಥಾನದಲ್ಲಿರುವುದು ಬೇಸರದ ಸಂಗತಿ. ಇದನ್ನು ನೋಡಿದರೆ ನನಗೆ ನಿಜವಾಗಿಯೂ ಅಳು ಬರುತ್ತದೆ’ ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಕಳವಳ ವ್ಯಕ್ತಪಡಿಸಿದರು.

ಗುರುಮಠಕಲ್ ತಾಲ್ಲೂಕಿನ ಬದ್ದೇಪಲ್ಲಿ ಗ್ರಾಮದಲ್ಲಿ ರೈತರ ತರಬೇತಿ ಮತ್ತು ಕೃಷಿ ಸಂಸ್ಕರಣೆಗೆ ಸಾಮಾನ್ಯ ಸೌಲಭ್ಯ ಕೇಂದ್ರವನ್ನು (ಸಿಎಫ್‌ಸಿ) ಗುರುವಾರ ಉದ್ಘಾಟಿಸಿ ಅವರು ಮಾತನಾಡಿದರು.

‘ದೇಶದಲ್ಲಿ 25 ಕೋಟಿ ಜನರನ್ನು ಬಹುಆಯಾಮಗಳ ಬಡತನದಿಂದ ಹೊರಗೆ ತಂದಿದ್ದರೂ ಯಾದಗಿರಿಯಲ್ಲಿನ ಬಡತನದ ಬಗ್ಗೆ ಬೇಸರವಾಗುತ್ತದೆ’ ಎಂದು ಬೇಸರಿಸಿದರು.

‘ಬೆಂಗಳೂರು ನಗರದ ತಲಾ ಆದಾಯವು ದೇಶದಲ್ಲೇ ಅತ್ಯಧಿಕವಾಗಿದೆ. ಕರ್ನಾಟಕದಲ್ಲಿರುವ ಪ್ರತಿಯೊಬ್ಬನೂ ಈ ಬಗ್ಗೆ ಹೆಮ್ಮೆಪಟ್ಟು ಸಂತಸದಿಂದ ಬೀಗಬಹುದು. ಆದರೆ, ಯಾದಗಿರಿಯ ತಲಾ ಆದಾಯ ನೋಡಿದರೆ ಕೆಳಗಿನಿಂದ ಎರಡನೇ ಸ್ಥಾನದಲ್ಲಿದೆ’ ಎಂದು ವಿಷಾದ ವ್ಯಕ್ತಪಡಿಸಿದರು.

‘ನಾನು ಕೇವಲ ಹಿಂದೆ ಬಿದ್ದಿರುವ ಯಾದಗಿರಿಯ ಬಗ್ಗೆ ಮಾತನಾಡಲು ಬಂದಿಲ್ಲ. ಬದಲಿಗೆ, ಕಲ್ಯಾಣ ಕರ್ನಾಟಕದ ಜನರಿಗೆ ಕೆಲಸ ಕೊಟ್ಟು, ರೈತರು ತಮ್ಮ ಬೆಳೆಗಳನ್ನು ಒಳ್ಳೆಯ ಬೆಲೆಗೆ ಮಾರಾಟ ಮಾಡುವ ಅವಕಾಶ ಕಲ್ಪಿಸಲು ಬಂದಿದ್ದೇನೆ. ಕೃಷಿ ಉತ್ಪನ್ನಗಳ ಮೌಲ್ಯವರ್ಧನೆ ಮಾಡಿ, ಸಂಸ್ಕರಣೆ ಮಾಡಿದ ನಂತರ ಅವುಗಳನ್ನು ಮಾರಾಟ ಮಾಡುವ ಅವಕಾಶ ಒದಗಿಸುತ್ತಿದ್ದೇನೆ. ಈ ಭಾಗದ ಏಳು ಜಿಲ್ಲೆಗಳಲ್ಲಿ ಆಯಾ ಜಿಲ್ಲೆಗಳಲ್ಲಿ ಸಿಗುವಂತಹ ಸ್ಥಳೀಯ ಉತ್ಪನ್ನಗಳನ್ನು ಬಳಸಿ, ಅವುಗಳ ಮೌಲ್ಯವರ್ಧನೆ ಮಾಡಿ, ಮಹಿಳೆಯರು ಹಾಗೂ ಪುರುಷರಿಗೆ ಉದ್ಯೋಗ ನೀಡಿ ಮಾರುಕಟ್ಟೆಯ ಸಂಪರ್ಕ ಕಲ್ಪಿಸಿಕೊಡುವ ಸಣ್ಣ ಪ್ರಯತ್ನ ಮಾಡುತ್ತಿದ್ದೇನೆ’ ಎಂದು ನಿರ್ಮಲಾ ಹೇಳಿದರು.



ಯಾದಗಿರಿಯ ಗುರುಮಠಕಲ್ ತಾಲ್ಲೂಕಿನ ಬದ್ದೇಪಲ್ಲಿ ಗ್ರಾಮದಲ್ಲಿ ರೈತರ ತರಬೇತಿ ಮತ್ತು ಕೃಷಿ ಸಂಸ್ಕರಣೆಗೆ ಸಾಮಾನ್ಯ ಸೌಲಭ್ಯ ಕೇಂದ್ರವನ್ನು ಗುರುವಾರ ಉದ್ಘಾಟಿಸಿದ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಶೇಂಗಾ ಸಂಸ್ಕರಣಾ ಘಟಕ ವೀಕ್ಷಿಸಿದರು

648 ಟನ್ ಶೇಂಗಾ ಸಂಸ್ಕರಣೆ

ಬದ್ದೇಪಲ್ಲಿಯ ಶೇಂಗಾ ಸಂಸ್ಕರಣಾ ಘಟಕವು ವಾರ್ಷಿಕ ಸುಮಾರು 648 ಟನ್ ಶೇಂಗಾ ಸಂಸ್ಕರಣೆ ಮಾಡಲಿದೆ. ಇದರಲ್ಲಿ ಗುಣಮಟ್ಟ ಮತ್ತು ಉತ್ಪನ್ನಗಳ ತಪಾಸಣೆಯ ಪ್ರಯೋಗಾಲಯ, ಸಿಪ್ಪೆ ತೆಗೆಯುವ, ಶೇಂಗಾ ಎಣ್ಣೆ, ಪೀನಟ್ ಬಟರ್, ಶೇಂಗಾ ಹಿಂಡಿ, ಹುರಿದ ಮತ್ತು ಉಪ್ಪು ಬೆರೆಸಿ ಶೇಂಗಾ ತಯಾರಿಸುವಂತಹ ಯಂತ್ರಗಳಿವೆ. ಬದ್ದೇಪಲ್ಲಿಯ ಮಹಿಳಾ ರೈತ ಉತ್ಪಾದಕ ಸಂಸ್ಥೆಯು ರೈತರಿಂದ ನೇರವಾಗಿ ಶೇಂಗಾ ಖರೀದಿಸಿ, ವಿವಿಧ ಬಗೆಯ ಉತ್ಪನ್ನಗಳನ್ನಾಗಿ ಮಾಡಿ ಅವುಗಳನ್ನು ಮಾರಾಟ ಮಾಡುತ್ತದೆ.

ರಾಜ್ಯಸಭೆ: ಖರ್ಗೆ, ಪವನ್, ಮನ್ಸೂರ್ ಅಭ್ಯರ್ಥಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ವಿಧಾನಸಭೆಯಿಂದ ಆಯ್ಕೆಯಾಗಬೇಕಾದ ರಾಜ್ಯಸಭೆಯ ಮೂರು ಸ್ಥಾನಗಳಿಗೆ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ವಕ್ತಾರ ಪವನ್ ಖೇರಾ, ಮನ್ಸೂರ್ ಅಲಿಖಾನ್ ಅವರ ಹೆಸರನ್ನು ಕಾಂಗ್ರೆಸ್ ಅಂತಿಮಗೊಳಿಸಿದೆ.

ಖರ್ಗೆಯವರು ರಾಜ್ಯಸಭೆಯ ವಿರೋಧ ಪಕ್ಷದ ನಾಯಕರಾಗಿದ್ದು, ಸದ್ಯ ಅವರು ಕರ್ನಾಟಕವನ್ನು ಪ್ರತಿನಿಧಿಸುತ್ತಿದ್ದಾರೆ. ರಾಜ್ಯಸಭೆಯ ಉಪಸಭಾಪತಿಯಾಗಿದ್ದ ಹಾಗೂ ಕೆಪಿಸಿಸಿ ಶಿಸ್ತು ಸಮಿತಿ ಅಧ್ಯಕ್ಷ ರೆಹಮಾನ್ ಖಾನ್ ಪುತ್ರ ಮನ್ಸೂರ್ ಖಾನ್ ಅವರಿಗೆ ಎಐಸಿಸಿ ಅವಕಾಶ ಕಲ್ಪಿಸಿದೆ.

ಚುನಾವಣೆಗೆ ಪಕ್ಷದ ಅಭ್ಯರ್ಥಿಗಳು ಶುಕ್ರವಾರ ಮಧ್ಯಾಹ್ನ 1.30ಕ್ಕೆ ನಾಮಪತ್ರ ಸಲ್ಲಿಸುತ್ತಿದ್ದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಪಾಲ್ಗೊಳ್ಳಲಿದ್ದಾರೆ.

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಜೆಡಿಎಸ್ ವರಿಷ್ಠ ಎಚ್.ಡಿ. ದೇವೇಗೌಡ, ನಾರಾಯಣ ಕೊರಗಪ್ಪ, ಈರಣ್ಣ ಕಡಾಡಿ ಅವರ ಅವಧಿ ಮುಕ್ತಾಯವಾಗಲಿದ್ದು, ಕರ್ನಾಟಕದಿಂದ ಆಯ್ಕೆಯಾಗಬೇಕಾದ ರಾಜ್ಯಸಭೆಯ ಈ ನಾಲ್ಕು ಸ್ಥಾನಗಳು ಸೇರಿ ರಾಜ್ಯಸಭೆಯ ಒಟ್ಟು 24 ಸ್ಥಾನಗಳಿಗೆ ಇದೇ 18ರಂದು ಚುನಾವಣೆ ನಿಗದಿಯಾಗಿದೆ. ಕರ್ನಾಟಕದಲ್ಲಿ ಕಾಂಗ್ರೆಸ್‌ಗೆ ಮೂರು ಹಾಗೂ ಬಿಜೆಪಿಗೆ ಒಂದು ಸ್ಥಾನ ಸಿಗಲಿದೆ.

ನಾಮಪತ್ರ ಸಲ್ಲಿಸಲು ಇದೇ 8 ಕೊನೆ ದಿನವಾಗಿದೆ. ನಾಮಪತ್ರಗಳ ಪರಿಶೀಲನೆ 9ಕ್ಕೆ ನಡೆಯಲಿದ್ದು, ನಾಮಪತ್ರ ಹಿಂದಕ್ಕೆ ಪಡೆಯಲು 10 ಕೊನೆ ದಿನ. 18ರಂದು ಮತದಾನ ನಡೆಯಲಿದೆ. ಮತಗಳ ಎಣಿಕೆ ಸಂಜೆ 5ಕ್ಕೆ ನಡೆಯಲಿದೆ.

ಮೇಲ್ಮನೆ: ಕಾಂಗ್ರೆಸ್‌ನ ಐದನೇ ಅಭ್ಯರ್ಥಿ

ಕರ್ನಾಟಕ ವಿಧಾನ ಪರಿಷತ್ ಚುನಾವಣೆಗೆ ನಾಲ್ವರು ಅಭ್ಯರ್ಥಿಗಳ ಹೆಸರನ್ನು ಘೋಷಿಸಿರುವ ಕಾಂಗ್ರೆಸ್ ಐದನೇ ಅಭ್ಯರ್ಥಿಯನ್ನು ಕಣಕ್ಕೆ ಇಳಿಸಲು ಮುಂದಾಗಿದೆ. ಹಾಲಿ ಸದಸ್ಯರಾದ ಬಿ.ಕೆ. ಹರಿಪ್ರಸಾದ್ ಹಾಗೂ ತಿಪ್ಪಣ್ಣಪ್ಪ ಕಮಕನೂರ ಅವರಿಗೆ ಪಕ್ಷ ಮತ್ತೆ ಅವಕಾಶ ನೀಡಿದೆ. ಮತ್ತಿಬ್ಬರು ಅಭ್ಯರ್ಥಿಗಳನ್ನಾಗಿ ಎಐಸಿಸಿ ಕಾರ್ಯದರ್ಶಿ ಪಿ.ವಿ.ಮೋಹನ್ ಹಾಗೂ ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಶಿವಣ್ಣ ಮಳವಳ್ಳಿ ಅವರನ್ನು ಪಕ್ಷ ಆಯ್ಕೆ ಮಾಡಿದೆ.

ರಾಜ್ಯ ವಿಧಾನಸಭೆಯಿಂದ ವಿಧಾನ ಪರಿಷತ್ತಿಗೆ ಚುನಾಯಿತರಾದ ಏಳು ಸದಸ್ಯರ ಅವಧಿ ಇದೇ 30ಕ್ಕೆ ಮುಗಿಯಲಿದ್ದು, ಆ ಸ್ಥಾನಗಳಿಗೆ ಇದೇ 18ಕ್ಕೆ ಚುನಾವಣೆ ನಡೆಯಲಿದೆ. ವಿಧಾನಸಭೆಯ ಈಗಿನ ಬಲ 222 ಇದ್ದು, ಈ ಲೆಕ್ಕಾಚಾರದ ಪ್ರಕಾರ ಕಾಂಗ್ರೆಸ್‌ನಿಂದ ನಾಲ್ವರು ಮತ್ತು ಬಿಜೆಪಿಯಿಂದ ಇಬ್ಬರು ಸದಸ್ಯರು ಚುನಾಯಿತರಾಗುವುದು ಖಚಿತವಾಗಿದೆ. ಉಳಿದ ಒಂದು ಸ್ಥಾನವನ್ನೂ ತನ್ನದಾಗಿಸಿಕೊಳ್ಳಲು ಕಾಂಗ್ರೆಸ್ ತಂತ್ರ ರೂಪಿಸಿದೆ. ‘ಐದನೇ ಅಭ್ಯರ್ಥಿಯನ್ನು ಕಣಕ್ಕೆ ಇಳಿಸಲಾಗುವುದು. ಗೆಲುವಿಗೆ ಅಗತ್ಯ ಸಂಖ್ಯಾಬಲವನ್ನು ಪಡೆಯಲಾಗುವುದು’ ಎಂದು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿದ್ದಾರೆ.

ಹಕ್ಕಿ ಗೂಡು...



ಅಸ್ಸಾಂನ ನಾಗಾಂವ್ ಜಿಲ್ಲೆಯಲ್ಲಿ ಮರವೊಂದರಲ್ಲಿ ಗೀಜಗವೊಂದು ಗೂಡು ಕಟ್ಟಿಕೊಳ್ಳುತ್ತಿರುವುದು ಕ್ಯಾಮೆರಾ ಕಣ್ಣಿಗೆ ಬಿದ್ದಿದ್ದು ಹೀಗೆ

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಕ್ಷಣ ಕ್ಷಣದ ಅಪ್‌ಡೇಟ್‌ಗಳಿಗಾಗಿ ಸ್ಕ್ಯಾನ್ ಮಾಡಿ

ಸೆನ್ಸೆಕ್ಸ್ 74,360 | ನಿಫ್ಟಿ 23,416 | $/₹ 95.74 | ಚಿನ್ನ (Std. 10g) ₹1,60,800 (ಬೆಂಗಳೂರು) | ಶುದ್ಧ ಬೆಳ್ಳಿ (kg) ₹2,76,000 (ಬೆಂಗಳೂರು)

ಕಗ್ಗಂಟು ನಡುವೆ ಖಾತೆ ಹಂಚಿಕೆ

ರಾಮಲಿಂಗಾರೆಡ್ಡಿಗೆ ಜಲಸಂಪನ್ಮೂಲ ● ಪರಮೇಶ್ವರಗೆ ಕಂದಾಯ, ಪ್ರಿಯಾಂಕ್‌ಗೆ ಗೃಹ ● ರಾಜ್ಯಪಾಲರ ಅಂಕಿತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ನೇತೃತ್ವದ ಸಂಪುಟದ ಸಚಿವರಿಗೆ ಖಾತೆ ಹಂಚಿಕೆ ಅಂತಿಮವಾಗಿದ್ದು, ಉಪಮುಖ್ಯಮಂತ್ರಿ ಪರಮೇಶ್ವರ ಅವರಿಗೆ ಕಂದಾಯ, ಯುವ ಜನಸೇವಾ ಮತ್ತು ಕ್ರೀಡಾ ಇಲಾಖೆ, ಪ್ರಿಯಾಂಕ್ ಖರ್ಗೆಗೆ ಗೃಹ ಖಾತೆ ನೀಡಲಾಗಿದೆ.

ಸಚಿವರಿಗೆ ಖಾತೆ ಹಂಚಿಕೆ ಮಾಡಲಾದ ಪಟ್ಟಿಗೆ ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರು ಅಂಕಿತ ಹಾಕಿದ್ದು, ರಾಜ್ಯಪತ್ರದಲ್ಲಿ ಅಧಿಕೃತವಾಗಿ ಗುರುವಾರ ಪ್ರಕಟಿಸಲಾಗಿದೆ.

ಸಿದ್ದರಾಮಯ್ಯ ನೇತೃತ್ವದ ಸರ್ಕಾರದಲ್ಲಿದ್ದ ಸಚಿವರಾದ ಕೆ.ಜೆ. ಜಾರ್ಜ್, ಎಂ.ಬಿ. ಪಾಟೀಲ, ಕೆ.ಎಚ್. ಮುನಿಯಪ್ಪ ಅವರಿಗೆ ಹಿಂದೆ ನಿರ್ವಹಿಸಿದ್ದ ಖಾತೆಯನ್ನೇ ನೀಡಲಾಗಿದೆ. ಸಭಾಧ್ಯಕ್ಷ ರಾಗಿದ್ದ ಯು.ಟಿ. ಖಾದರ್‌ಗೆ, ಅವರು ಸಿದ್ದರಾಮಯ್ಯ ಸರ್ಕಾರದ ಮೊದಲ ಅವಧಿಯಲ್ಲಿ(2013-18) ನಿಭಾಯಿಸಿದ್ದ ಆರೋಗ್ಯ ಖಾತೆಯನ್ನೇ ವಹಿಸಲಾಗಿದೆ.

'ನಿರ್ದಿಷ್ಟ ಖಾತೆಯೇ ಬೇಕು' ಎಂದು ಕೆಲವರು ಪಟ್ಟು ಹಿಡಿದಿದ್ದರಿಂದ, ಖಾತೆ ಹಂಚಿಕೆ ಶಿವಕುಮಾರ್ ಅವರಿಗೆ ಕಗ್ಗಂಟಾಗಿ ಪರಿಣಮಿಸಿತ್ತು. ಸಿದ್ದರಾಮಯ್ಯ ಅವರನ್ನು ಗುರುವಾರ ಭೇಟಿಯಾದ ಶಿವಕುಮಾರ್, ಈ ವಿಷಯದಲ್ಲಿ ನೆರವು ನೀಡುವಂತೆ ಕೋರಿದರು. ಸಚಿವರ ಪಟ್ಟು ಕುರಿತು ಕಾಂಗ್ರೆಸ್ ವರಿಷ್ಠರಿಗೂ ಶಿವಕುಮಾರ್ ಅವರು ಮಾಹಿತಿ ನೀಡಿದರು ಎಂದು ಗೊತ್ತಾಗಿದೆ.

ಹಿರಿಯ ಸಚಿವರಾದ ರಾಮಲಿಂಗಾ ರೆಡ್ಡಿಯವರು ಜಲ ಸಂಪನ್ಮೂಲ ಬದಲು, ಬೆಂಗಳೂರು ಅಭಿವೃದ್ಧಿ ಖಾತೆಯೇ ಬೇಕು ಎಂದು ಪಟ್ಟು ಹಿಡಿದಿದ್ದರು. ಹಿಂದಿನ ಸರ್ಕಾರದಲ್ಲಿ ಕಂದಾಯ ಸಚಿವರಾಗಿದ್ದ ಕೃಷ್ಣ ಬೈರೇಗೌಡ ಅದೇ ಖಾತೆಗೆ ಒಲವು ತೋರಿದ್ದರು.

▸11

ಯಾರಿಗೆ, ಯಾವ ಖಾತೆ?

ಡಿ.ಕೆ. ಶಿವಕುಮಾರ್ (ಮುಖ್ಯಮಂತ್ರಿ)	ಹಣಕಾಸು, ಆಡಳಿತ ಸುಧಾರಣೆ, ಗುಪ್ತಚರ, ವಾರ್ತಾ ಇಲಾಖೆ ಮತ್ತು ಹಂಚಿಕೆಯಾಗದೆ ಉಳಿದಿರುವ ಖಾತೆಗಳು
ಜಿ. ಪರಮೇಶ್ವರ (ಉಪ ಮುಖ್ಯಮಂತ್ರಿ)	ಕಂದಾಯ (ಮುಜರಾಯಿ ಹೊರತುಪಡಿಸಿ) ಯುವಜನ ಸೇವೆ ಮತ್ತು ಕ್ರೀಡೆ
ಪ್ರಿಯಾಂಕ್ ಖರ್ಗೆ	ಗೃಹ (ಗುಪ್ತಚರ ಹೊರತುಪಡಿಸಿ) ಮತ್ತು ಐಟಿಬಿಟಿ
ಈಶ್ವರ್ ಖಂಡ್ರೆ	ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್
ಎಂ. ಬಿ. ಪಾಟೀಲ	ಬೃಹತ್ ಮತ್ತು ಮಧ್ಯಮ ಕೈಗಾರಿಕೆ, ಮೂಲಸೌಲಭ್ಯ
ಕೆ.ಜೆ. ಜಾರ್ಜ್	ಇಂಧನ
ಸತೀಶ ಜಾರಕಿಹೊಳಿ	ಲೋಕೋಪಯೋಗಿ
ಬೈರತಿ ಸುರೇಶ್	ಸಾರಿಗೆ
ಕೆ.ಎಚ್. ಮುನಿಯಪ್ಪ	ಆಹಾರ ಮತ್ತು ನಾಗರಿಕ ಪೂರೈಕೆ, ಗ್ರಾಹಕ ವ್ಯವಹಾರ
ರಾಮಲಿಂಗಾರೆಡ್ಡಿ	ಜಲ ಸಂಪನ್ಮೂಲ
ಕೃಷ್ಣ ಬೈರೇಗೌಡ	ಬೆಂಗಳೂರು ಅಭಿವೃದ್ಧಿ
ಯತೀಂದ್ರ ಸಿದ್ದರಾಮಯ್ಯ	ನಗರಾಭಿವೃದ್ಧಿ ಮತ್ತು ನಗರ ಯೋಜನೆ (ಬೆಂಗಳೂರು ಬಿಟ್ಟು)
ಯು.ಟಿ. ಖಾದರ್	ಆರೋಗ್ಯ ಮತ್ತು ಕುಟುಂಬ ಕಲ್ಯಾಣ
ಶರಣಪ್ರಕಾಶ ಪಾಟೀಲ	ವೈದ್ಯಕೀಯ ಶಿಕ್ಷಣ

ನಮಗೆ ಜಮೀರ್ ಅವಶ್ಯ: ಜಾರಕಿಹೊಳಿ

'ನಮಗೆ ಜಮೀರ್ ಅವರ ಅಗತ್ಯ ಇದೆ. ಈ ಬಗ್ಗೆ ಹೈಕಮಾಂಡ್ ತೀರ್ಮಾನ ಮಾಡಲಿದೆ' ಎಂದು ಸತೀಶ ಜಾರಕಿಹೊಳಿ ಅಭಿಪ್ರಾಯಪಟ್ಟರು.

ಜಮೀರ್ ಅಹಮದ್ ಖಾನ್ ಅವರಿಗೆ ಸಚಿವ ಸ್ಥಾನ ಕುರಿತು ಪ್ರತಿಕ್ರಿಯಿಸಿದ ಅವರು, 'ಸಚಿವ ಸ್ಥಾನ ತಪ್ಪಿಸಬೇಕೆಂಬ ಉದ್ದೇಶದಿಂದಲೇ ಜಮೀರ್ ಮಾತನಾಡಿದ್ದಾರೆ ಎನ್ನಲಾದ ಆಡಿಯೊ ವೈರಲ್ ಮಾಡಿದಂತಿದೆ. ಆಡಿಯೊ ಬಿಟ್ಟವರ ತಂತ್ರ ಸಫಲ ಆಯಿತು ಅಷ್ಟೆ' ಎಂದೂ ಹೇಳಿದರು. ಜಮೀರ್ ಅಹಮದ್ ಖಾನ್ ಅವರದ್ದು ಎನ್ನಲಾದ ಆಡಿಯೊ ವೈರಲ್ ಆಗಿರುವ ವಿಚಾರದ ಕುರಿತು ಪ್ರತಿಕ್ರಿಯಿಸಿದ ಕೃಷ್ಣ ಬೈರೇಗೌಡ, 'ಕಾಂಗ್ರೆಸ್ ಅಭ್ಯರ್ಥಿಯನ್ನೇ ಸೋಲಿಸುವ ಬಗ್ಗೆ ಮಾತನಾಡಿರುವುದು ಗಂಭೀರ ವಿಚಾರ. ಪಕ್ಷದ ಮುಖ್ಯವಾಹಿನಿಯಲ್ಲಿ ಇದ್ದವರೇ ಹೀಗೆ ಹೇಳಿದ್ದು ತಪ್ಪು. ಸಚಿವ ಸ್ಥಾನ ತಪ್ಪಿರಬಹುದು. ಆಡಿಯೋ ಸತ್ಯಾಸತ್ಯತೆ ಬಂದ ಮೇಲೆ ಸ್ಪಷ್ಟವಾಗಲಿದೆ' ಎಂದರು.



ಸತೀಶ ಜಾರಕಿಹೊಳಿ

'ಕೆಪಿಸಿಸಿ ಅಧ್ಯಕ್ಷ, ಸಚಿವ ಸ್ಥಾನ ಎರಡೂ ಬೇಕಿತ್ತು'

'ಕೆಪಿಸಿಸಿ ಅಧ್ಯಕ್ಷ ಹುದ್ದೆಯ ಜೊತೆಗೆ ಸಚಿವ ಸ್ಥಾನವೂ ಬೇಕಿತ್ತು' ಎಂದು ಸತೀಶ ಜಾರಕಿಹೊಳಿ ತಮ್ಮ ಮನದ ಇಂಗಿತ ವ್ಯಕ್ತಪಡಿಸಿದರು. ಕೆಪಿಸಿಸಿ ಅಧ್ಯಕ್ಷ ಸ್ಥಾನದ ಮೇಲೆ ಕಣ್ಣಿಟ್ಟಿದ್ದ ಅವರಿಗೆ, ಆ ಸ್ಥಾನ ಕೈತಪ್ಪಿದೆ. ಈ ಬಗ್ಗೆ ಸುದ್ದಿಗಾರರರು ಕೇಳಿದ ಪ್ರಶ್ನೆಗೆ ಗುರುವಾರ ಪ್ರತಿಕ್ರಿಯಿಸಿ, 'ಕೆಪಿಸಿಸಿ ಹುದ್ದೆಯಿಂದ ವಂಚಿತ ಎಂದೇನೂ ಅಲ್ಲ. ಒಬ್ಬರಿಗೆ ಒಂದು ಹುದ್ದೆ ಎಂದು ಬಂದಾಗ ಇಷ್ಟೆಲ್ಲ ಆಯಿತು' ಎಂದರು.

▸11

ಮುಂಗಾರು ಮಳೆಯೇ...

ಪಿಟಿಐ ಚಿತ್ರ



ನೈರುತ್ಯ ಮುಂಗಾರು ಗುರುವಾರ ಕೇರಳಂ ಪ್ರವೇಶಿಸಿದ್ದು, ಕೊಚ್ಚಿ ನಗರದ ಆಗಸದಲ್ಲಿ ದಟ್ಟ ಕಾರ್ಮೋಡ ಕವಿದಿದ್ದ ದೃಶ್ಯ

ರಾಜೇಶ್ ಎಕ್ಸ್‌ಪೋರ್ಟ್ಸ್ ವಿರುದ್ಧ ಸೆಬಿ ಆರೋಪ

₹15 ಲಕ್ಷ ಕೋಟಿ ತಪ್ಪು ಲೆಕ್ಕ

ನವದೆಹಲಿ (ಪಿಟಿಐ): ಚಿನ್ನದ ವಹಿವಾಟಿನಲ್ಲಿ ತೊಡಗಿರುವ ರಾಜೇಶ್ ಎಕ್ಸ್‌ಪೋರ್ಟ್ಸ್ ಲಿಮಿಟೆಡ್ (ಆರ್‌ಇಎಲ್) ಕಂಪನಿಯು ಐದು ವರ್ಷಗಳಲ್ಲಿ ತನ್ನ ಒಟ್ಟು ವರಮಾನವನ್ನು ₹15 ಲಕ್ಷ ಕೋಟಿಗಿಂತ ಹೆಚ್ಚಿನ ಮೊತ್ತಕ್ಕೆ ಹಿಗ್ಗಿಸಿ ತೋರಿಸಿದೆ ಎಂದು ಭಾರತೀಯ ಷೇರುಪೇಟೆ ನಿಯಂತ್ರಣ ಮಂಡಳಿ (ಸೆಬಿ) ನೀಡಿರುವ ಮಧ್ಯಂತರ ಆದೇಶದಲ್ಲಿ ಉಲ್ಲೇಖಿಸಲಾಗಿದೆ.

ಷೇರುಪೇಟೆ ನೋಂದಾಯಿತ ಈ ಕಂಪನಿಯು ಬೆಂಗಳೂರಿನ ಕುಮಾರಕೃಪಾ ರಸ್ತೆಯಲ್ಲಿ ಪ್ರಧಾನ ಕಚೇರಿಯನ್ನು ಹೊಂದಿದೆ. ಇದು ತನ್ನ ಅಂಗಸಂಸ್ಥೆಗಳಿಂದ, ಅದರಲ್ಲೂ ಮುಖ್ಯವಾಗಿ ಸ್ವಿಟ್ಜರ್ಲೆಂಡ್ ಮೂಲದ ವಲ್ಕಂಬಿ ಎಸ್‌ಎ ಕಂಪನಿಯಿಂದ ಭಾರಿ ವರಮಾನ ಲಭಿಸಿದೆ ಎಂದು ತೋರಿಸಿದೆ. ಆದರೆ ವಾಸ್ತವದಲ್ಲಿ ಈ ಕಂಪನಿಯಿಂದ ಸಿಕ್ಕಿರುವುದು ಆ ಭಾರಿ ಮೊತ್ತದ ಒಂದು ಸಣ್ಣ ಅಂಶ ಮಾತ್ರ ಎಂದು ಸೆಬಿ ಹೇಳಿದೆ.

ಕಂಪನಿಯು ಹಣಕಾಸಿನ ವಿಚಾರದಲ್ಲಿ ತಪ್ಪು ಮಾಹಿತಿ ನೀಡಿರುವುದು ಮೇಲ್ನೋಟಕ್ಕೆ ಕಾಣುತ್ತಿದೆ ಎಂದು ಸೆಬಿ ಹೇಳಿದೆ. ಆರ್‌ಇಎಲ್ ತನ್ನ ಬಹುಪಾಲು ವರಮಾನವು ವಿದೇಶಗಳಲ್ಲಿನ ಅಂಗಸಂಸ್ಥೆಗಳಿಂದ ಬಂದಿರುವುದಾಗಿ ಹೇಳುತ್ತಿದೆ. ಆದರೆ ಇವುಗಳ ಹಣಕಾಸು ವಿವರ ಬಹಿರಂಗವಾಗಿಲ್ಲ ಎಂದು ಸೆಬಿ ಹೇಳಿದೆ.

▸10

ಸೆಬಿ ಆದೇಶದಲ್ಲಿ ಏನಿದೆ?

ವಲ್ಕಂಬಿ ಕಂಪನಿಯು ಅಮೂಲ್ಯ ಲೋಹಗಳ ಸಂಸ್ಕರಣೆಯಲ್ಲಿ ತೊಡಗಿರುವ ಕಂಪನಿ. ಸಂಸ್ಕರಣಾ ಸೇವೆ ಹಾಗೂ ಬ್ರ್ಯಾಂಡ್ ಮಾಡಿರುವ ಚಿನ್ನದ ಉತ್ಪನ್ನಗಳ ಮಾರಾಟ ತನ್ನ ವರಮಾನ ಮೂಲ ಎಂದು ಅದು ಹೇಳಿದೆ. ಆದರೆ ಲೆಕ್ಕಪತ್ರಗಳಲ್ಲಿ ಅದು ಪ್ರಕ್ರಿಯೆ ಶುಲ್ಕ ಅಥವಾ ಮೌಲ್ಯವರ್ಧನೆಯನ್ನು ಮಾತ್ರ ವರಮಾನವನ್ನಾಗಿ ತೋರಿಸಿದೆ.

ಈ ಲೆಕ್ಕ ಹಾಗೂ ಆರ್‌ಇಎಲ್, ವಲ್ಕಂಬಿಯ ಮಾಲೀಕತ್ವ ಹೊಂದಿರುವ ಗ್ಲೋಬಲ್ ಗೋಲ್ಡ್ ರಿಫೈನರೀಸ್ (ಜಿಜಿಆರ್) ತೋರಿಸಿರುವ ವರಮಾನದ ನಡುವೆ ಬಹಳಷ್ಟು ವ್ಯತ್ಯಾಸ ಕಂಡುಬಂದಿದೆ. ಉದಾಹರಣೆಗೆ, 2023ರಲ್ಲಿ ವಲ್ಕಂಬಿಯ ವರಮಾನ ಸರಿಸುಮಾರು ₹543 ಕೋಟಿ. ಇದೇ ಅವಧಿಯಲ್ಲಿ ಜಿಜಿಆರ್ ಹಾಗೂ ಆರ್‌ಇಎಲ್ ವರಮಾನ ಕ್ರಮವಾಗಿ ₹2.93 ಲಕ್ಷ ಕೋಟಿ ಹಾಗೂ ₹2.81 ಲಕ್ಷ ಕೋಟಿ ಎಂದು ತೋರಿಸಲಾಗಿದೆ. ಅಂದರೆ ವಲ್ಕಂಬಿಯ ವರಮಾನವು ಒಟ್ಟು ವರಮಾನದ ಶೇ 0.5ಕ್ಕಿಂತ ಕಡಿಮೆ ಆಗುತ್ತದೆ.

▸10

'ಒತ್ತಡದಿಂದ ಎಲ್‌ಐಸಿ ಷೇರು ಖರೀದಿ?'

'ಸಂಶಯಾಸ್ಪದ ವಹಿವಾಟುಗಳ ಕಾರಣಕ್ಕಾಗಿ ಸೆಬಿ ತನಿಖೆ ಎದುರಿಸುತ್ತಿರುವ ರಾಜೇಶ್ ಎಕ್ಸ್‌ಪೋರ್ಟ್ ಲಿಮಿಟೆಡ್‌ನಿಂದ ಭಾರತೀಯ ಜೀವವಿಮಾ ನಿಗಮವು ಶೇಕಡ 10.8ರಷ್ಟು ಷೇರು ಖರೀದಿಸಿದೆ. ವ್ಯವಸ್ಥೆಯೊಳಗಿನವರ ಒತ್ತಡದಿಂದಲೇ ಈ ಖರೀದಿ ನಡೆದಿದೆಯೇ' ಎಂದು ಕಾಂಗ್ರೆಸ್ ಪ್ರಶ್ನಿಸಿದೆ.

ವಿವರ ಪುಟ ▸10

ಚಿನಕುರುಳಿ ಪ್ರಕಾಶ್ ಶೆಟ್ಟಿ



ಅನರ್ಹರ 'ಗ್ಯಾರಂಟಿ' ಸೌಲಭ್ಯಕ್ಕೆ ಕತ್ತರಿ?

ಯೋಜನೆಗಳ ಫಲಾನುಭವಿಗಳ ಮಾಹಿತಿ ಸಂಗ್ರಹ : ಸಿ.ಎಂ ಡಿ.ಕೆ.ಶಿವಕುಮಾರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಐದು 'ಗ್ಯಾರಂಟಿ' ಯೋಜನೆಗಳ ಲಾಭವನ್ನು ಅನರ್ಹರೂ ಪಡೆದುಕೊಳ್ಳುತ್ತಿದ್ದು, ಅರ್ಹರಿಗಷ್ಟೇ ಪ್ರಯೋಜನ ಸಿಗಬೇಕು ಎಂಬ ತೀರ್ಮಾನಕ್ಕೆ ಬಂದಿರುವ ಸರ್ಕಾರ, ಅರ್ಹ-ಅನರ್ಹರ ನಿಖರ ಮಾಹಿತಿ ಕಲೆಹಾಕಲು ಮುಂದಾಗಿದೆ. ಮುಂದಿನ ದಿನಗಳಲ್ಲಿ 'ಗ್ಯಾರಂಟಿ'ಗಳ ಪರಿಷ್ಕರಣೆ ಮಾಡುವ ಸುಳಿವನ್ನೂ ನೀಡಿದೆ.

ಡಿ.ಕೆ.ಶಿವಕುಮಾರ್ ಅವರು ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಂಡ ಬಳಿಕ ಹಿರಿಯ ಅಧಿಕಾರಿಗಳ ಮೊದಲ ಸಭೆಯನ್ನು ಗುರುವಾರ ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ನಡೆಸಿದರು. ಗ್ಯಾರಂಟಿ ಯೋಜನೆ ಫಲಾನುಭವಿಗಳ ಮಾಹಿತಿಯನ್ನು ಸಂಗ್ರಹಿಸುವಂತೆ ಸೂಚನೆಯನ್ನು ಅಧಿಕಾರಿಗಳಿಗೆ ನೀಡಿದರು. ಯೋಜನೆಗಳ ಸೌಲಭ್ಯಗಳು ದುರ್ಬಳಕೆಯಾಗುತ್ತಿವೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

▸5



> ನಮ್ಮ ಸರ್ಕಾರ ಜಾತಿ, ಧರ್ಮ, ಪ್ರಭಾವಕ್ಕೆ ಮಣಿಯುವುದಿಲ್ಲ. ಯಾವುದೇ ಅಧಿಕಾರಿ ಇದಕ್ಕೆ ಮಣಿಯಬಾರದು ಹಾಗೂ ಹೊಣೆಗಾರಿಕೆಯಿಂದ ವರ್ತಿಸಬೇಕು ಎಂಬ ಸಂದೇಶ ನೀಡಿದ್ದೇನೆ
>
> **ಡಿ.ಕೆ.ಶಿವಕುಮಾರ್,** ಮುಖ್ಯಮಂತ್ರಿ

ಕುಂದು ಕೊರತೆ ಆಲಿಸಲು ಪ್ರತ್ಯೇಕ ಸಚಿವಾಲಯ

'ನಮ್ಮ ಸರ್ಕಾರದಲ್ಲಿ ಸಾರ್ವಜನಿಕರ ಕುಂದುಕೊರತೆ ಆಲಿಸಿ, ಸ್ಪಂದಿಸಲು ಪ್ರತ್ಯೇಕ ಸಚಿವಾಲಯ ಆರಂಭಿಸಲಾಗುವುದು' ಎಂದು ಶಿವಕುಮಾರ್ ತಿಳಿಸಿದರು. 'ಈ ಸಚಿವಾಲಯ ಆರಂಭಿಸಿ, ಜನರ ಅರ್ಜಿ, ಅಹವಾಲು, ಸಮಸ್ಯೆ ಆಲಿಸಲು ಪ್ರತ್ಯೇಕ ಸಚಿವರ ನೇಮಕ ಮಾಡಲಾಗುವುದು. ನಿತ್ಯ ವಿವಿಧ ತಂಡಗಳು ಪ್ರತಿಭಟನೆ ನಡೆಸುತ್ತಿದ್ದು, ಅವರ ವಿಚಾರ ಆಲಿಸಿ, ಸ್ಪಂದಿಸಲು ಸರ್ಕಾರ ಸಿದ್ಧವಿದೆ' ಎಂದರು.



ಈ ಬೇಸಿಗೆಯಲ್ಲಿ ದಣಿದಂತೆ ಅನಿಸುತ್ತಿದೆಯೇ ?

ಇದು ಕೇವಲ
ಹೆಚ್ಚುತ್ತಿರುವ ತಾಪಮಾನವೇ ?

(or)

ನಿಮ್ಮ ದೇಹವು ನಿಮಗೆ
ಎಚ್ಚರಿಕೆ ನೀಡುತ್ತಿರಬಹುದೇ ?

ಮಧುಮೇಹ | ಥೈರಾಯ್ಡ್ ಅಸಮತೋಲನ | ವಿಟಮಿನ್ ಕೊರತೆಗಳು |
ಹೃದಯದ ಅಪಾಯಗಳು ಸರಳ ಲಕ್ಷಣಗಳೊಂದಿಗೆ ಪ್ರಾರಂಭವಾಗಬಹುದು

ಸಂಪೂರ್ಣ ಆರೋಗ್ಯ ತಪಾಸಣೆಯೊಂದಿಗೆ ಶುಲ್ಕ ವಿಧಿಸಿ

ಸಮ್ಮರ್ ಪ್ರೊಟೆಕ್ಟ್ ಪ್ಲಸ್

85 ಪರೀಕ್ಷೆಗಳು ಮೂಲ ತಪಾಸಣೆ

ಅಲ್ಟ್ರಾಸೌಂಡ್ (ಹೊಟ್ಟೆ)
ಎಕ್ಸ್-ರೇ (ಎದೆ)
ಇಸಿಜಿ (ಹೃದಯ)

80+ ರಕ್ತ ಪರೀಕ್ಷೆಗಳು
(ಮಧುಮೇಹ, ಥೈರಾಯ್ಡ್, ಯಕೃತ್ತು, ಮೂತ್ರಪಿಂಡ, ಸಿಬಿಸಿ, ಕೊಲೆಸ್ಟ್ರಾಲ್ ಪ್ರೊಫೈಲ್‌ಗಳು)

~~₹4250~~ ₹1699

ಬೇಸಿಗೆಯ ಕೊಡುಗೆ 60% OFF

ಬೇಸಿಗೆ ಚಿನ್ನವನ್ನು ರಕ್ಷಿಸಿ

93 ಪರೀಕ್ಷೆಗಳು | ಸುಧಾರಿತ ತಪಾಸಣೆ

ಜನ ಸೇವಾ ಪ್ಲಸ್‌ನಲ್ಲಿ ಎಲ್ಲಾ ಪರೀಕ್ಷೆಗಳು
+

CT ಕ್ಯಾಲ್ಸಿಯಂ ಸ್ಕ್ರೀನಿಂಗ್ ಅಥವಾ ECHO ಸ್ಕ್ಯಾನ್
(ಹೃದಯಾಘಾತದ ಅಪಾಯ)

ಕ್ಯಾನ್ಸರ್ ಸ್ಕ್ರೀನಿಂಗ್ - ರಕ್ತ ಪರೀಕ್ಷೆಗಳು
(ಪ್ರಾಸ್ಟೇಟ್, ಅಂಡಾಶಯಗಳು, ಕೊಲೊನ್, ಯಕೃತ್ತು, ಮೇದೋಜ್ಜೀರಕ ಗ್ರಂಥಿ)

ವಿಟಮಿನ್ ಬಿ 12 ಮತ್ತು ವಿಟಮಿನ್ ಡಿ

ಉಚಿತ ಮನೆ ರಕ್ತ ಸಂಗ್ರಹ

~~₹14450~~ ₹4999

ಬೇಸಿಗೆಯ ಕೊಡುಗೆ 65% OFF

Offer Valid till - 7th June 2026

ಕೈಗೆಟುಕುವ ರಕ್ತ ಪರೀಕ್ಷೆ ಮತ್ತು ಸ್ಕ್ಯಾನ್ ಬೆಲೆಗಳು - ವರ್ಷವಿಡೀ

ಇಡೀ ದೇಹ PET CT ಸ್ಕ್ಯಾನ್ ~~₹22000~~ ₹11000

MRI ಸ್ಕ್ಯಾನ್

ಮಾರುಕಟ್ಟೆ ದರ: ~~₹7500~~

Starting From

₹2900

MRI Brain/Each Spine

ರಕ್ತ ಪರೀಕ್ಷಣೆಯಲ್ಲಿ

Upto 50% OFF

ಉಚಿತ ಮನೆ ರಕ್ತ ಸಂಗ್ರಹ

CT ಸ್ಕ್ಯಾನ್

ಮಾರುಕಟ್ಟೆ ದರ: ~~₹3500~~

Starting From

₹1250

CT Brain/PNS

38 ವರ್ಷಗಳು ನಂಬಿಕೆ

12 ರಾಜ್ಯಗಳು & 250 + ಶಾಖೆಗಳು

NABL ಮಾನ್ಯತೆ ಪಡೆದಿದೆ MC-5593

1 ಕುಟುಂಬದಿಂದ 7 ವೈದ್ಯರು ನಡೆಸಲಾಗುತ್ತಿದೆ

aarthiscan.com

70224 70224

1.7 ಕೋಟಿಗೂ ಹೆಚ್ಚು ಜನರ ವಿಶ್ವಾಸ

This pictorial representation of the map of India does not purport to be the political map of India

ಬೆಂಗಳೂರಿನಲ್ಲಿ 18 ಶಾಖೆಗಳು

- ಜಯ ನಗರ
- ಮಾರತಹಳ್ಳಿ
- ಹೆಣ್ಣೂರು
- ಜಲಹಳ್ಳಿ ಕ್ರಾಸ್
- ಇಂದಿರಾ ನಗರ
- ಜೆಪಿ ನಗರ
- ನಾಗರಭಾವಿ
- ಫ್ರೇಜರ್ ಟೌನ್
- ರಾಜಾಜಿನಗರ
- ಕೆ.ಆರ್ . ಪುರಂ
- ವೈಟ್ ಫೀಲ್ಡ್
- ರಾಜರಾಜೇಶ್ವರಿ ನಗರ
- ಪದ್ಮನಾಭ ನಗರ
- ಹೆಬ್ಬಾಳ
- ಹುಳಿಮಾವು
- ಕೋರಮಂಗಲ
- ಶಿವಾಜಿನಗರ
- ಯಲಹಂಕ

For Franchise Enquiry - 99401 10520

Cashless Facility for CGHS & ECHS

ಆರ್ತಿ ಸ್ಕ್ಯಾನ್ಸ್ & ಲ್ಯಾಬ್ಸ್
Ethical & Affordable Diagnostics

ಬೆಂಗಳೂರು ಮುಂಬೈ ನವ ದೆಹಲಿ ಚೆನ್ನೈ ಹೈದರಾಬಾದ್ ಕೋಲ್ಕತ್ತಾ ಗುರ್ಗಾಂವ್ ಪುಣೆ ಅಹಮದಾಬಾದ್ ತಿರುವನಂತಪುರ ಪಾಂಡಿಚೇರಿ

ಈ ಬಾರಿ,
ಇಲೆಕ್ಟ್ರಿಕ್ ಕಾರ್ ಆರಿಸಿರಿ.

ಕಾಲ ಬದಲಾಗುತ್ತದೆ.
ನೀವೂ ಬದಲಾಗುತ್ತೀರಿ.
ನೀವು ಯೋಚಿಸುವ ರೀತಿ, ನಿಮ್ಮ ಜೀವನ, ನಿಮ್ಮ ಆಯ್ಕೆ -
ಎಲ್ಲವೂ ಬದಲಾಗುತ್ತದೆ.

ಹಾಗಿದ್ದಲ್ಲಿ ನಿಮ್ಮ ಡ್ರೈವಿಂಗ್ ಶೈಲಿಯೂ ಬದಲಾಗಬೇಕು ತಾನೆ;
ಅದು ನಂತರವಲ್ಲ, ಇನ್ನೊಂದು ದಿನವಲ್ಲ, ಇಂದೇ.

ಮಹಿಂದ್ರಾ ಇಲೆಕ್ಟ್ರಿಕ್ SUV ನಿಮ್ಮದಾಗಿಸಿಕೊಳ್ಳಿ,
ಈಗಾಗಲೇ ತಮ್ಮದಾಗಿಸಿಕೊಂಡಿರುವ 64000 ವ್ಯಕ್ತಿಗಳಂತೆ.

ಏಕೆಂದರೆ ಬದಲಾವಣೆ ಇಷ್ಟೊಂದು ಚೆನ್ನಾಗಿರುವಾಗ,
ನೀವೂ ಅದರ ಅಂಶವಾಗಲು ತಡವೇಕೆ?

ELECTRIC ORIGIN SUVs | mahindra

ಚಾರ್ಜಿಂಗ್ ಕ್ರೆಡಿಟ್ ಮೇಲೆ ಸೀಮಿತ ಆಫರ್
XEV 9e ಮತ್ತು BE 6 ಮೇಲೆ ₹20 000.00 ಮುಂಗಡವಾಗಿ.
ಅಂದಾಜು 6 ತಿಂಗಳುಗಳ ಸಾಮಾನ್ಯ ನಡೆಸುವಿಕೆ.##

ನಿಮ್ಮ ಸಮೀಪದ ಡೀಲರ್‌ಶಿಪ್ ಎಲ್ಲಿದೆ ಎಂದು ನೋಡಲು ಸ್ಕ್ಯಾನ್ ಮಾಡಿ.

ರೇಂಜ್‌ನ ವಿಶ್ವಾಸ	ರಿಯಲ್ ಉಳಿತಾಯ	ಬ್ಯಾಟರಿ ಆಶ್ವಾಸನೆ	ಫಾಸ್ಟ್ ಚಾರ್ಜ್	ವಿಸ್ತಾರಿತ ವಾರಂಟಿ
500 km ರಿಯಲ್ ವರ್ಲ್ಡ್ ರೇಂಜ್*	₹10-17 ಲಕ್ಷಗಳು 5 ವರ್ಷಗಳಲ್ಲಿ**	ಲೈಫ್‌ಟೈಮ್ ಬ್ಯಾಟರಿ ವಾರಂಟಿ#	20 ನಿಮಿಷಗಳಲ್ಲಿ 20%ದಿಂದ 80% ಚಾರ್ಜ್^	4th ಮತ್ತು 5th ವರ್ಷ, ಉಚಿತ^^



BE6 XEV 9e XEV 9S

##ಸದ್ಯದ ಟ್ಯಾರಿಫ್ ದರಗಳಲ್ಲಿ, ಹಿಸ್ಟಾರಿಕಲ್ AC-DC ಚಾರ್ಜಿಂಗ್ ಮಿಕ್ಸ್-ಅನ್ನು ಆಧರಿಸಿದೆ. ಅನುರೂಪವಾದ ಚಾರ್ಜರ್‌ಗಳಿಗೆ ಸಂಬಂಧಪಟ್ಟಂತೆ, 6 ತಿಂಗಳು / ₹20 000.00 ಈ ಪೈಕಿ ಯಾವುದು ಮೊದಲೋ ಅಲ್ಲಿಯವರೆಗೆ, ಉಚಿತ ಚಾರ್ಜಿಂಗ್ ಪ್ರಯೋಜನಗಳು ಮಾನ್ಯವಾಗಿರುತ್ತವೆ. ಆಫರ್ ಜುಲೈ 31, 2026ರವರೆಗೆ ಅನ್ವಯಿಸುತ್ತದೆ. ವಿವರವಾದ ಮಾಹಿತಿಗಾಗಿ ದಯವಿಟ್ಟು ನಿಮ್ಮ ಡೀಲರನ್ನು ಸಂಪರ್ಕಿಸಿ. *ವಾತಾವರಣದ ಮಧ್ಯಮ ತಾಪಮಾನ, ಕಡಿಮೆ HVACಯೊಂದಿಗೆ ಸಿಟಿ ಡ್ರೈವ್, ಒಣ ರಸ್ತೆ ಮತ್ತು ಆಪ್ಟಿಮಲ್ ಡ್ರೈವ್ ಮೋಡ್‌ನಲ್ಲಿ ಮಾಡಿದ ಆಂತರಿಕ ಪರೀಕ್ಷಣೆಗಳ ಪ್ರಕಾರ. **ತಿಂಗಳಿಗೆ 1500-3000 km ಬಳಕೆಯ ಆಧಾರದ ಮೇಲೆ, ಪೆಟ್ರೋಲ್ SUV ಗಳಿಗೆ ಹೋಲಿಸಿದರೆ ಸೂಚಕಾತ್ಮಕ ಉಳಿತಾಯ. ಉಳಿತಾಯದಲ್ಲಿ ಚಾಲನೆ, ಉಸ್ತುವಾರಿ ವೆಚ್ಚಗಳು ಮತ್ತು ಡಿಪ್ರಿಸಿಯೇಶನ್ ಪ್ರಯೋಜನಗಳು ಸೇರಿವೆ. #ಖಾಸಗಿ ನೋಂದಣಿಯೊಂದಿಗೆ, ಮೊದಲ ನೋಂದಾಯಿತ ಮಾಲೀಕರಿಗೆ ಮಾತ್ರ 15 ವರ್ಷಗಳವರೆಗೆ ಮಾನ್ಯ. ಮಾಲೀಕತ್ವ ಬದಲಾದಲ್ಲಿ, HV ಬ್ಯಾಟರಿಯ ಮೇಲಿನ ವಾರಂಟಿಯು 10 ವರ್ಷಗಳು ಅಥವಾ 2 00 000 km – ಈ ಪೈಕಿ ಯಾವುದು ಮೊದಲೋ ಅದು ಅನ್ವಯಿಸುತ್ತದೆ. ^180 kW DC ಫಾಸ್ಟ್ ಚಾರ್ಜರ್ / 400A ಚಾರ್ಜರ್ ಇನ್‌ಪುಟ್‌ನೊಂದಿಗೆ. ಕಾರ್ಯಾಚರಣೆಯ ಪರಿಸ್ಥಿತಿಗಳನ್ನು ಆಧರಿಸಿ, DC ಚಾರ್ಜಿಂಗ್ ಕಾಲಾವಧಿ ಬದಲಾಗಬಹುದು. ^^ನಿಬಂಧನೆಗಳು ಮತ್ತು ಷರತ್ತುಗಳು ಅನ್ವಯಿಸುತ್ತವೆ. ಆಫರ್ XEV 9eಗೆ ಮಾತ್ರ ಮಾನ್ಯವಾಗಿದ್ದು , ಜುಲೈ 31, 2026ರವರೆಗೆ ಅನ್ವಯಿಸುತ್ತದೆ ಮತ್ತು ಇದು ವೇರಿಯಂಟ್ ಹಾಗೂ ಖರೀದಿಸುವ ನಗರಕ್ಕೆ ಅನುಗುಣವಾಗಿ ಬದಲಾಗಬಹುದು.

ಹವಾಮಾನ ಮುನ್ಸೂಚನೆ: ನಗರದಲ್ಲಿ ಮೋಡ ಕವಿದ ವಾತಾವರಣ ಇರಲಿದ್ದು, ಗುಡುಗು ಸಹಿತ ಸಾಧಾರಣ ಮಳೆ ಬೀಳುವ ಸಾಧ್ಯತೆ ಇದೆ

ಕಸಕ್ಕೆ ಬೆಂಕಿ: ನಾಲ್ವರು ವಿದ್ಯಾರ್ಥಿಗಳಿಗೆ ಗಾಯ

ಕಾರ್ಕಳ: ತಾಲ್ಲೂಕಿನ ಕುಕ್ಕುಜೆ ಸರ್ಕಾರಿ ಪ್ರಾಥಮಿಕ ಶಾಲೆಯಲ್ಲಿ ಕಸದ ರಾಶಿಗೆ ಬೆಂಕಿ ಹಾಕಿದ್ದ ವೇಳೆ ಅದರಲ್ಲಿದ್ದ ಡಬ್ಬದಂತಹ ವಸ್ತು ಸ್ಫೋಟಗೊಂಡು ನಾಲ್ವರು ವಿದ್ಯಾರ್ಥಿಗಳು ಗುರುವಾರ ಗಾಯಗೊಂಡಿದ್ದಾರೆ. ವಿದ್ಯಾರ್ಥಿಗಳಾದ ಸಂಸ್ಕೃತ್, ಗಗನ್, ಹೃತ್ವಿಕ್ ಹಾಗೂ ಅದ್ವಿನ್ ಗಾಯಗೊಂಡವರು.

ಕೆಸರಿನಲ್ಲಿ ಸಿಲುಕಿ ಕಾಡಾನೆ ಸಾವು

ಪ್ರಜಾವಾಣಿ ವಾರ್ತೆ

ಮಡಿಕೇರಿ: ಕುಶಾಲನಗರ ತಾಲ್ಲೂಕಿನ 7ನೇ ಹೊಸಕೋಟೆ ಗ್ರಾಮದ ತೊಂಡೂರು ಭಾಗದ ತೋಟವೊಂದರ ಕೆಸರಿನ ತೋಡಿನಲ್ಲಿ ಗುರುವಾರ ಗಂಡಾನೆಯ ಮೃತದೇಹ ಪತ್ತೆಯಾಗಿದೆ.

ಆನೆ ಓಡುವಾಗ ಕೆಸರಿನಲ್ಲಿ ಸಿಲುಕಿ ಪಕ್ಕದಲ್ಲೇ ಇದ್ದ ಸೋಲಾರ್ ವಿದ್ಯುತ್ ತಂತಿಬೇಲಿ ತಗುಲಿ ಮೃತಪಟ್ಟಿರಬಹುದು ಎಂದು ಶಂಕಿಸಲಾಗಿದೆ. ಮರಣೋತ್ತರ ಪರೀಕ್ಷೆ ನಂತರ ಸಾವಿಗೆ ನಿಖರ ಕಾರಣ ಗೊತ್ತಾಗಬಹುದು ಎಂದು ವಲಯ ಅರಣ್ಯಾಧಿಕಾರಿ ರಕ್ಷಿತ್ ತಿಳಿಸಿದ್ದಾರೆ.



ಕಾರ್ಯಕ್ರಮದಲ್ಲಿ ಸನ್ಮಾನಿತರಾದ ಪೌರಕಾರ್ಮಿಕರೊಂದಿಗೆ ಶಾಸಕಿ ಮಂಜುಳಾ ಲಿಂಬಾವಳಿ, ರಾಜ್ಯಸಭೆಯ ಮಾಜಿ ಸದಸ್ಯ ಕೆ.ಸಿ.ರಾಮಮೂರ್ತಿ, ಬೆಂಗಳೂರು ಕ್ಲೈಮೇಟ್ ಸಮ್ಮಿಟ್ ಸ್ಥಾಪಕರಾದ ವಿನಯ್ ಶಿಂಧೆ, ಮದನ್ ಪದಕಿ ಉಪಸ್ಥಿತರಿದ್ದರು

‘ಸುಂದರ ಬೆಂಗಳೂರಿಗೆ ಪಣ’

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: ‘ತಾಪಮಾನ ಹೆಚ್ಚಳದಿಂದ ಉಂಟಾಗುವ ದುಷ್ಪರಿಣಾಮಗಳನ್ನು ಎದುರಿಸಲು ಹೆಚ್ಚು ಗಿಡಗಳನ್ನು ನೆಡಬೇಕು. ಸುಂದರ ಬೆಂಗಳೂರಿಗಾಗಿ ಎಲ್ಲರೂ ಪಣ ತೊಡಬೇಕು’ ಎಂದು ಶಾಸಕಿ ಮಂಜುಳಾ ಲಿಂಬಾವಳಿ ಹೇಳಿದರು.

ಮಹದೇವಪುರ ಕ್ಷೇತ್ರದ ಎಇಸಿಎಸ್ ಬಡಾವಣೆಯ ಸಿಎಂಆರ್ ಕಾಲೇಜಿನಲ್ಲಿ ವಿ-ಮೂವ್ ಫೌಂಡೇಷನ್ ಹಮ್ಮಿಕೊಂಡಿದ್ದ ‘ಬೆಂಗಳೂರು ಕ್ಲೈಮೇಟ್ ಸಮ್ಮಿಟ್- ಅಲ್ಟರ್ನೇಟಿವ್ 26’ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

‘ನವ ಬೆಂಗಳೂರಿಗಾಗಿ ಫೌಂಡೇಷನ್ ಹಲವು ಯೋಜನೆಗಳನ್ನು ರೂಪಿಸಿದ್ದು, ಮೊದಲ ಭಾಗವಾಗಿ ಮಹದೇವಪುರದ ಕ್ಷೇತ್ರದಲ್ಲಿ ನಡೆಯುವ ಪ್ರಯತ್ನಗಳಿಗೆ ಅನುದಾನ ತರಲು ಪ್ರಯತ್ನಿಸುವೆ’ ಎಂದು ಹೇಳಿದರು.

ರಾಜ್ಯಸಭೆಯ ಮಾಜಿ ಸದಸ್ಯ ಕೆ.ಸಿ. ರಾಮಮೂರ್ತಿ, ‘ಬೆಂಗಳೂರನ್ನು ಹಸಿರಾಗಿಸುವ ಜೊತೆಗೆ ಹವಾಮಾನ ವೈಪರೀತ್ಯವನ್ನು ತಗ್ಗಿಸುವ ಪರ್ಯಾಯ ಪ್ರಯತ್ನಗಳೂ ಅಗತ್ಯವಾಗಿವೆ’ ಎಂದರು.

‘1 ಬ್ರಿಡ್ಜ್’ ಸಿಇಒ ಮದನ್ ಪದಕಿ, ‘ಹವಾಮಾನ ವೈಪರೀತ್ಯ ನಿಯಂತ್ರಣದ ಬಗ್ಗೆ ಜಾಗತಿಕ ಮಟ್ಟದಲ್ಲಿ ಯಶಸ್ವಿ ಪ್ರಯತ್ನಗಳನ್ನು ಮಾಡಿದವರೊಂದಿಗೆ ಸಂವಾದ ಅಗತ್ಯ. ಆಗ ಮಾತ್ರ ನಾವು ಏನು ಮಾಡಬೇಕೆಂಬುದು ಸ್ಪಷ್ಟವಾಗುತ್ತದೆ’ ಎಂದು ಹೇಳಿದರು.

ಇದೇ ವೇಳೆ ವಿಶೇಷವಾಗಿ ರೂಪಿಸಿದ್ದ ಕಲಾ ಗ್ಯಾಲರಿಯನ್ನು ಗಣ್ಯರು ವೀಕ್ಷಿಸಿದರು. ಪೌರಕಾರ್ಮಿಕರನ್ನು ಸನ್ಮಾನಿಸಲಾಯಿತು.

ಬೆಂಗಳೂರು ಕ್ಲೈಮೇಟ್ ಸಮ್ಮಿಟ್ ಸ್ಥಾಪಕರಾದ ವಿನಯ್ ಶಿಂಧೆ, ಮಹದೇವಪುರ ಟಾಸ್ಕ್ ಫೋರ್ಸ್‌ನ ಜಯಕುಮಾರ್ ಇದ್ದರು.

ದತ್ತಾಂಶ ವಿಶ್ಲೇಷಕ ಹುದ್ದೆಗೆ ಅರ್ಜಿ

ಬೆಂಗಳೂರು: ಬೆಂಗಳೂರು ವಿಶ್ವವಿದ್ಯಾಲಯ ಮತ್ತು ಐ.ಸಿ.ಎಸ್.ಎಸ್.ಆರ್ ಸಂಯೋಜಿತ ಯೋಜನೆ ‘ವಿಕಸಿತ ಭಾರತ 2047’ರ ಗುರಿ ಸಾಧಿಸಲು, ಶಿಕ್ಷಣ, ಕೌಶಲ, ಅಭಿವೃದ್ಧಿ ಮತ್ತು ಸಮಗ್ರ ಸಾಮಾಜಿಕ–ಆರ್ಥಿಕ ಪ್ರಗತಿಯ ಮೇಲೆ ಮಹಿಳಾ ಕೇಂದ್ರಿತ ಸರ್ಕಾರಿ ಉಪಕ್ರಮಗಳ ಪ್ರಭಾವ: ಕರ್ನಾಟಕ ರಾಜ್ಯದಲ್ಲಿ ಒಂದು ಅಧ್ಯಯನ’ ಯೋಜನೆಯಡಿ ಗುತ್ತಿಗೆ ಆಧಾರದಲ್ಲಿ ಕಾರ್ಯ ನಿರ್ವಹಿಸಲು ದತ್ತಾಂಶ ವಿಶ್ಲೇಷಕರಿಂದ ಅರ್ಜಿಯನ್ನು ಆಹ್ವಾನಿಸಲಾಗಿದೆ.

ಅರ್ಜಿಯನ್ನು icssrmrpbu.2026@gmail.comಗೆ ಜೂನ್ 5ರ ಸಂಜೆಯೊಳಗೆ ಮೇಲ್ ಮಾಡಬಹುದು. ವಿದ್ಯುನ್ಮಾನ ಮಾಧ್ಯಮ ವಿಭಾಗದ ಪ್ರಾಧ್ಯಾಪಕರಾದ ವಾಹಿನಿ ಅವರನ್ನು ಸಂಪರ್ಕಿಸಬಹುದು.

ಭೂಮಿ ಹಬ್ಬ ನಾಳೆ

ಬೆಂಗಳೂರು: ವಿಸ್ತಾರ ಸಂಸ್ಥೆಯು ಇದೇ 6ರಂದು ಬೆಳಿಗ್ಗೆ 10ರಿಂದ ಸಂಜೆ 7ರವರೆಗೆ ಹೆಣ್ಣೂರು ಮುಖ್ಯರಸ್ತೆಯ ವಿಸ್ತಾರ ಕ್ಯಾಂಪಸ್‌ನಲ್ಲಿ ಭೂಮಿ ಹಬ್ಬದ 18ನೇ ಆವೃತ್ತಿ ಹಮ್ಮಿಕೊಂಡಿದೆ.

‘ಪುನಃ ಸ್ಥಾಪಿಸು, ಪುನಃ ಪಡೆದುಕೊಳ್ಳಿ–ಹವಾಮಾನ ಕ್ರಿಯೆಗೆ ಸಮುದಾಯ ಮಾರ್ಗಗಳು’ ವಿಷಯದ ಮೇಲೆ ಈ ಹಬ್ಬ ನಡೆಯಲಿದೆ. ಕಣ್ಮರೆ ಆಗುತ್ತಿರುವ ಪಾಕವಿಧಾನದ ಬಗ್ಗೆ ಕಾರ್ಯಾಗಾರ, ಸಾಂಪ್ರದಾಯಿಕ ಆಟಗಳು, ಸಾಂಪ್ರದಾಯಿಕ ಆಹಾರ, ಪ್ರದರ್ಶನ, ಕಥೆ ಹೇಳುವಿಕೆ ಸೇರಿದಂತೆ ಹಲವು ವಿಶೇಷಗಳಿವೆ. ಪ್ರವೇಶ ಶುಲ್ಕ ₹50 ಇದೆ ಎಂದು ವಿಸ್ತಾರದ ಸಹ ಸಂಸ್ಥಾಪಕ ಮರ್ಸಿ ಕಪ್ಪೆನ್ ಹೇಳಿದ್ದಾರೆ.

ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರ
ಉಪನಗರ ವರ್ತುಲ ರಸ್ತೆ (STRR) ಯೋಜನಾ ಪ್ರಾಧಿಕಾರ

ಬೆಂ.ಮ.ಪ್ರ.ಪ್ರಾ.

2ನೇ ಮಹಡಿ, ವನವಿಕಾಸ, ಕರ್ನಾಟಕ ಅರಣ್ಯ ಅಭಿವೃದ್ಧಿ ನಿಗಮ ನಿಯಮಿತ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು-560003. ದೂ.ಸಂ.: 22228263, 22228264

ಸಂಖ್ಯೆ: STRRPA/TP/LAO/07/2023-24 ದಿನಾಂಕ: 04.06.2026

ಸಾರ್ವಜನಿಕ ಪ್ರಕಟಣೆ

ದೇವನಹಳ್ಳಿ ತಾಲ್ಲೂಕು, ಕಸಬಾ ಹೋಬಳಿ, ಶೆಟ್ಟೇರಹಳ್ಳಿ ಗ್ರಾಮದ ಸ.ನಂ.78ರಲ್ಲಿ 3ಎಕರೆ–37ಗುಂಟೆ, 79ರಲ್ಲಿ 4–00ಎಕರೆ, 60ರಲ್ಲಿ 5ಎಕರೆ–37ಗುಂಟೆ, 57/1ರಲ್ಲಿ 1ಎಕರೆ–24ಗುಂಟೆ, 65ರಲ್ಲಿ 4ಎಕರೆ–11ಗುಂಟೆ, 68/1ರಲ್ಲಿ 1ಎಕರೆ–22ಗುಂಟೆ, 76/1ರಲ್ಲಿ 1ಎಕರೆ–19ಗುಂಟೆ, 104/1ರಲ್ಲಿ 2ಎಕರೆ–11ಗುಂಟೆ, 45/1ರಲ್ಲಿ 1ಎಕರೆ–23ಗುಂಟೆ, 64ರಲ್ಲಿ 4ಎಕರೆ–17ಗುಂಟೆ, 84ರಲ್ಲಿ 6ಎಕರೆ–35ಗುಂಟೆ, 107/2ರಲ್ಲಿ 4ಎಕರೆ–14ಗುಂಟೆ, 106/2ರಲ್ಲಿ 2ಎಕರೆ–22ಗುಂಟೆ, 77ರಲ್ಲಿ 5–00ಎಕರೆ, 85ರಲ್ಲಿ 4ಎಕರೆ–39ಗುಂಟೆ, 105ರಲ್ಲಿ 4ಎಕರೆ–37ಗುಂಟೆ, 66ರಲ್ಲಿ 5–00ಎಕರೆ, 67ರಲ್ಲಿ 5–00ಎಕರೆ, 86ರಲ್ಲಿ 4ಎಕರೆ–37ಗುಂಟೆ, 87/1ರಲ್ಲಿ 1ಎಕರೆ–20ಗುಂಟೆ, 88/1ರಲ್ಲಿ 1ಎಕರೆ–18ಗುಂಟೆ, 103/2ರಲ್ಲಿ 2ಎಕರೆ–33ಗುಂಟೆ, 59ರಲ್ಲಿ 5–00ಎಕರೆ, 56/1ರಲ್ಲಿ 1ಎಕರೆ–23ಗುಂಟೆ, 58ರಲ್ಲಿ 5–00ಎಕರೆ, 44/4ರಲ್ಲಿ 0–34ಗುಂಟೆ, 42/4ರಲ್ಲಿ 2ಎಕರೆ–10ಗುಂಟೆ, 43/2ರಲ್ಲಿ 2ಎಕರೆ–10ಗುಂಟೆ 36/1ರಲ್ಲಿ 1ಎಕರೆ–10ಗುಂಟೆ, 37ರಲ್ಲಿ 5ಎಕರೆ–19ಗುಂಟೆ, 38ರಲ್ಲಿ 6ಎಕರೆ–29ಗುಂಟೆ, 44/1ರಲ್ಲಿ 0–24ಗುಂಟೆ, 42/1ರಲ್ಲಿ 2ಎಕರೆ–25ಗುಂಟೆ, 43/1ರಲ್ಲಿ 2ಎಕರೆ–33ಗುಂಟೆ ಒಟ್ಟು 116ಎಕರೆ–33ಗುಂಟೆ ಪೈಕಿ ಅನುಭವದಲ್ಲಿರುವ 115ಎಕರೆ–16ಗುಂಟೆ ವಿಸ್ತೀರ್ಣದ ಪ್ರದೇಶದಲ್ಲಿ ತಾತ್ಕಾಲಿಕ ವಸತಿ ವಿನ್ಯಾಸ ನಕ್ಷೆಗೆ ಅನುಮೋದನೆಯನ್ನು ಈ ಕಛೇರಿಯಿಂದ ದಿನಾಂಕ: 19.12.2023ರಂದು ಮೆ॥ ಟ್ಯಾಂಗಲ್ಡ್ ಆಫ್ ಇನ್ ಗ್ರೀನ್ ಪ್ರಾಪರ್ಟೀಸ್ ಪ್ರೈ.ಲಿ ರವರಿಗೆ ನೀಡಲಾಗಿದೆ.

ಸದರಿ ಜಮೀನುಗಳಲ್ಲಿ ವಿನ್ಯಾಸ ಅಭಿವೃದ್ಧಿಪಡಿಸುವಾಗ ಅದೇ ಗ್ರಾಮದ ಇನ್ನಿತರೆ ಸ.ನಂ. 103/1, 106/1, 107/1ಗಳನ್ನು ಸೇರಿಸಿಕೊಂಡು ಅನುಮೋದಿತ ವಿನ್ಯಾಸಕ್ಕೆ ವ್ಯತಿರಿಕ್ತವಾಗಿ ಹೆಚ್ಚುವರಿ ಪ್ರದೇಶದಲ್ಲಿ ವಿನ್ಯಾಸ ಅಭಿವೃದ್ಧಿಪಡಿಸುತ್ತಿದ್ದುದರಿಂದ ಹಾಗೂ ಕಂದಾಯ ಇಲಾಖೆಯಿಂದ ಪಥ ಬದಲಾವಣೆಗೆ ಪೂರ್ವಾನುಮತಿ ಪಡೆಯದೇ ಬಡಾವಣೆ ನಿರ್ಮಿಸುತ್ತಿರುವುದರಿಂದ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಸೆಕ್ಷನ್ (15) & (17)ರನ್ನು ಅಭಿವೃದ್ಧಿದಾರರು ಉಲ್ಲಂಘನೆ ಮಾಡಿರುತ್ತಾರೆ. ಈ ಹಿನ್ನೆಲೆಯಲ್ಲಿ ದಿನಾಂಕ: 19.12.2023ರಂದು ನೀಡಲಾದ ತಾತ್ಕಾಲಿಕ ವಸತಿ ವಿನ್ಯಾಸ ನಕ್ಷೆ ಅನುಮೋದನೆಯನ್ನು ದಿನಾಂಕ: 19.05.2026ರಂದು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಸೆಕ್ಷನ್ 76(ಓ)ರನ್ವಯ ಅಮಾನತು ಮಾಡಲಾಗಿದೆ. ಆದ್ದರಿಂದ ಸದರಿ ವಿನ್ಯಾಸದಲ್ಲಿನ ನಿವೇಶನಗಳನ್ನು ಖರೀದಿ ಮಾಡಬಾರದು ಎಂದು ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸಲಾಗಿದೆ.

ಸಹಿ/–ಸದಸ್ಯ ಕಾರ್ಯದರ್ಶಿಗಳು ಹಾಗೂ ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು, ಉಪನಗರ ವರ್ತುಲ ರಸ್ತೆ (STRR) ಯೋಜನಾ ಪ್ರಾಧಿಕಾರ, ಬೆಂಗಳೂರು.

ವಾಸಾಸಂಇ/ಉನಿ-ಸಿ.ಪಿ/972/ಕೆಎಸ್‌ಎಂಸಿಎ/2026-27

ರೈಲು ಗಾಲಿ ಕಾರ್ಖಾನೆ

ಯಲಹಂಕ, ಬೆಂಗಳೂರು – 560 064
ವೆಬ್‌ಸೈಟ್: www.rwf.indianrailways.gov.in
ಇ–ಮೇಲ್: smm.rwfblr@gmail.com

ಟೆಂಡರ್ ಪ್ರಕಟಣೆ ಸಂಖ್ಯೆ: ಆರ್ ಡಬ್ಲ್ಯೂ ಎಫ್ /ಡಬ್ಲ್ಯೂ/26–27/05 ದಿನಾಂಕ: 04.06.2026

ಭಾರತದ ರಾಷ್ಟ್ರಪತಿಗಳ ಪರವಾಗಿ, ಉಪ ಮುಖ್ಯ ಇಂಜಿನಿಯರ್ ಈ ಕೆಳಗಿನ ಕಾಮಗಾರಿಗಳಿಗಾಗಿ http://www.ireps.gov.in (Works) ಮೂಲಕ ಇ– ಟೆಂಡರ್ ಆಹ್ವಾನಿಸಿದ್ದಾರೆ.

ಟೆಂಡರ್ ಸಂಖ್ಯೆ: ಡಬ್ಲ್ಯೂ.496/ಆರ್ ಡಬ್ಲ್ಯೂ ಎಫ್/ವೈ ಎನ್ ಕೆ /1085, **ಕಾಮಗಾರಿಯ ವಿವರ:** ರೈಲು ಗಾಲಿ ಕಾರ್ಖಾನೆ ಆವರಣದ ಒಳಗಿರುವ ಹೊಸ ಆಕ್ಸಲ್ ಫೋರ್ಜ್ ಕಾಂಪ್ಲೆಕ್ಸ್‌ನಲ್ಲಿ (ಗ್ರಿಡ್ O'Q' 35A ಇಂದ O'Q' 43) ಹೊಸ ಟ್ವಿನ್ ಟೆಂಪರಿಂಗ್ ಫರ್ನೇಸ್‌ಗಾಗಿ ಶೆಡ್ ನಿರ್ಮಾಣ ಕಾಮಗಾರಿ, **ಅಂದಾಜು ವೆಚ್ಚ:** ₹10,79,99,346.53, **ಇ.ಎಂ.ಡಿ:** ₹21,60,000.00, **ಟೆಂಡರ್ ಕೊನೆಗೊಳ್ಳುವ ದಿನಾಂಕ ಮತ್ತು ಸಮಯ:** 25 ಜೂನ್ 2026 ರಂದು ಮಧ್ಯಾಹ್ನ 3:00 ಗಂಟೆಗೆ

ಉಪ ಮುಖ್ಯ ಇಂಜಿನಿಯರ್

ರೈಲು ಗಾಲಿ ಕಾರ್ಖಾನೆ

ಯಲಹಂಕ, ಬೆಂಗಳೂರು – 560 064
ವೆಬ್‌ಸೈಟ್: www.rwf.indianrailways.gov.in

ಇ–ಟೆಂಡರ್: ಭಾರತದ ರಾಷ್ಟ್ರಪತಿಯವರ ಪರವಾಗಿ ಪ್ರಧಾನ ಮುಖ್ಯ ಮೆಕ್ಯಾನಿಕಲ್ ಇಂಜಿನಿಯರ್‌ರವರು ಕೆಳಕಂಡ ಕೆಲಸಕ್ಕೆ ವೆಬ್‌ಸೈಟ್ http://www.ireps.gov.in (WORKS) ಆನ್‌ಲೈನ್ ಮೂಲಕ ಎಲೆಕ್ಟ್ರಾನಿಕ್ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಇ–ಟೆಂಡರ್ ಪ್ರಕಟಣೆ ಸಂಖ್ಯೆ: ಆರ್‌ಡಬ್ಲ್ಯೂಎಫ್/ಎಂ/ಓಟಿ/ಎಎಂಎಸ್/2026–27/26 ದಿನಾಂಕ: 02/06/2026

ಟೆಂಡರ್ ಸಂಖ್ಯೆ: ಆರ್‌ಡಬ್ಲ್ಯೂಎಫ್/ಎಂ/ಓಟಿ/ಎಎಂಎಸ್/2026–27/26. **ಕೆಲಸದ ಹೆಸರು:** ಸಂಸ್ಥೆಯ ಆವರಣದಲ್ಲಿ ಒಟ್ಟು 6,000 ಸಂಖ್ಯೆಗಳ ಬಾಕ್ಸ್ ಆಕ್ಸಲ್‌ಗಳ ರಫ್ ಟರ್ನಿಂಗ್ / ಸೆಮಿ ಫಿನಿಷಿಂಗ್‌ನ ಹೊರಗುತ್ತಿಗೆ. **ಅಂದಾಜು ಮೌಲ್ಯ:** ರೂ.4,61,61,600.00. **ಮುಂಗಡ ಠೇವಣಿ ಹಣ:** ರೂ.9,23,200.00.

ಇ–ಟೆಂಡರ್ ಪ್ರಕಟಣೆ ಸಂಖ್ಯೆ: ಆರ್‌ಡಬ್ಲ್ಯೂಎಫ್/ಎಂ/ಓಟಿ/ಎಎಂಎಸ್/2026–27/27 ದಿನಾಂಕ: 02/06/2026

ಟೆಂಡರ್ ಸಂಖ್ಯೆ: ಆರ್‌ಡಬ್ಲ್ಯೂಎಫ್/ಎಂ/ಓಟಿ/ಎಎಂಎಸ್/2026–27/27. **ಕೆಲಸದ ಹೆಸರು:** ಸಂಸ್ಥೆಗಳ ಆವರಣಗಳಲ್ಲಿ ಒಟ್ಟು 6,000 ಸಂಖ್ಯೆಗಳ 25ಟಿ ಆಕ್ಸಲ್‌ಗಳ ರಫ್ ಟರ್ನಿಂಗ್ / ಸೆಮಿ ಫಿನಿಷಿಂಗ್‌ನ ಹೊರಗುತ್ತಿಗೆ. **ಅಂದಾಜು ಮೌಲ್ಯ:** ರೂ.4,61,61,600.00. **ಮುಂಗಡ ಠೇವಣಿ ಹಣ:** ರೂ.9,23,200.00.

ಟೆಂಡರ್‌ಗಳ ಕೊನೆಯ ದಿನಾಂಕ & ಸಮಯ: 24/06/2026 ರಂದು 10.30 ಗಂಟೆಗೆ. **ಪೂರ್ಣಗೊಳಿಸಲು ಕಾಲಾವಧಿ:** 06 ತಿಂಗಳು.

ಟೆಂಡರ್ ಪ್ರಕಟಣೆ ಹಾಗೂ ಅರ್ಹತಾ ಮಾನದಂಡಗಳನ್ನು ನಮ್ಮ ವೆಬ್‌ಸೈಟ್ "www.rwf.indianrailways.gov.in" ನಲ್ಲಿ ನೋಡಬಹುದು.

ಉಪ ಮುಖ್ಯ ಮೆಕ್ಯಾನಿಕಲ್ ಇಂಜಿನಿಯರ್/ಎಪಿ

ಐಆರ್‌ಇಎಲ್ (ಇಂಡಿಯಾ) ಲಿಮಿಟೆಡ್
ಹಿಂದಿನ ರೇರ್ ಅರ್ಥ್ಸ್ ಲಿಮಿಟೆಡ್

(ಭಾರತ ಸರ್ಕಾರದ ಅಧೀನ ಸಂಸ್ಥೆ)

ಸಿಐಎನ್: U15100MH1950GOI008187 ವೆಬ್‌ಸೈಟ್: www.irel.co.in
ಐಎಸ್‌ಒ 9001:2015, ಐಎಸ್‌ಒ 14001:2015 & ಐಎಸ್‌ಒ 45001:2018 ಕಂಪನಿ

ಟೆಂಡರ್ ಪ್ರಕಟಣೆ

ಉಲ್ಲೇಖ: ಜಾಹೀ.ಸಂ.26–27/4, ದಿನಾಂಕ: 01.06.2026 & 03.06.2026. ಐಆರ್‌ಇಎಲ್ (ಇಂಡಿಯಾ) ಲಿಮಿಟೆಡ್, ಚವಾರ ಇವರು ಕೆಳಕಂಡ ಐಟಂ/ಜಾಬ್ ವಿವರಗಳಿಗಾಗಿ ಬಿಡ್ ಆಹ್ವಾನಿಸಿದ್ದಾರೆ.

ಇವೆಂಟ್ ನಂ. (ಜಿಇಎಂ)	ಜಾಬ್/ಐಟಂ ವಿವರ
ಜೆಮ್/2026/ಬಿ/7605682	ಎಚ್‌ಯುಪಿ ಟೈಲ್ ಯಾರ್ಡ್ ಎಂಎಸ್‌ಪಿ ಟೈಲ್ ಯಾರ್ಡ್‌ನಲ್ಲಿನ ಟೈಲ್ ಸ್ಯಾಂಡ್ ಮರಳನ್ನು ಯಾಂತ್ರಿಕವಾಗಿ ಲೋಡಿಂಗ್ ಮಾಡಿ, ಚವಾರ ಗ್ರಾಮದ ಎಡತುರುತು ಪ್ರದೇಶದಲ್ಲಿ ಅಗೆಯಲಾಗಿರುವ ಗುಂಡಿಗಳನ್ನು ಸಮತಲಗೊಳಿಸುವ ಕಾಮಗಾರಿ – 100000 ಎಂಟಿ.
ಜೆಮ್/2026/ಬಿ/7614923	ಮಿನರಲ್ ಬ್ಯಾಗ್ಗಿಂಗ್ ಮತ್ತು ಹ್ಯಾಂಡ್ಲಿಂಗ್.

ಆಸಕ್ತಿಯುಳ್ಳ ಬಿಡ್‌ದಾರರು ಟೆಂಡರ್ ದಸ್ತಾವೇಜುಗಳನ್ನು http://irel.co.in ಅಥವಾ http://gem.gov.in ವೆಬ್‌ಸೈಟ್‌ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. ಸದರಿ ಟೆಂಡರ್‌ಗೆ ಯಾವುದೇ ತಿದ್ದುಪಡಿ/ವಿಸ್ತರಣೆ ಉಂಟಾದಲ್ಲಿ, ಅಂತಹುದನ್ನು ಮೇಲ್ಕಂಡ ವೆಬ್‌ಸೈಟ್‌ಗಳಲ್ಲಿ ಮಾತ್ರ ಪ್ರಕಟಿಸಲಾಗುತ್ತದೆ.

CBC 48139/11/0005/2627 ಸಹಿ/– ಮುಖ್ಯಸ್ಥರು, ಚವಾರ

ಭಾರತ ಸರ್ಕಾರ
ಸಿಬ್ಬಂದಿ ಹಾಗೂ ತರಬೇತಿ ಇಲಾಖೆ

ಸಿಬ್ಬಂದಿ, ಸಾರ್ವಜನಿಕ ಕುಂದುಕೊರತೆ ಮತ್ತು ಪಿಂಚಣಿಗಳ ಸಚಿವಾಲಯ
ಸಿಬ್ಬಂದಿ ನೇಮಕಾತಿ ಆಯೋಗ (ಕರ್ನಾಟಕ–ಕೇರಳ ವಲಯ)

ಮೊದಲನೇ ಮಹಡಿ, ‘ಇ’ ವಿಂಗ್, ಕೇಂದ್ರಿಯ ಸದನ, ಕೋರಮಂಗಲ, ಬೆಂಗಳೂರು–560034

ಪರೀಕ್ಷಾ ಪ್ರಕಟಣೆ–ಸಂಯೋಜಿತ ಪದವಿ ಮಟ್ಟದ ಪರೀಕ್ಷೆ, 2026

ಭಾರತ ಸರ್ಕಾರದ ವಿವಿಧ ಸಚಿವಾಲಯಗಳ/ ಇಲಾಖೆಗಳ/ ಸಂಸ್ಥೆಗಳಲ್ಲಿನ ಹಾಗೂ ವಿವಿಧ ಸಂವಿಧಾನಾತ್ಮಕ ಅಂಗಗಳು/ ಶಾಸನಬದ್ಧ ಅಂಗಸಂಸ್ಥೆಗಳು/ ನ್ಯಾಯಧೀಕರಣಗಳು ಮುಂತಾದ ಕಡೆಗಳಲ್ಲಿನ ನಾನ್ ಗೆಜೆಟೆಡ್ ‘ಬಿ’ ವೃಂದ ಹಾಗೂ ‘ಸಿ’ ವೃಂದದ ಹುದ್ದೆಗಳಿಗಾಗಿ, ಸಿಬ್ಬಂದಿ ನೇಮಕಾತಿ ಆಯೋಗ (ಎಸ್‌ಎಸ್‌ಸಿ) ಇವರು ಮುಕ್ತ ಸ್ಪರ್ಧಾತ್ಮಕ ಪರೀಕ್ಷೆಯನ್ನು ಕೈಗೊಳ್ಳಲಿದ್ದಾರೆ.

ವೇತನ ಹಂತ	ವೇತನ ಹಂತ 4 ರಿಂದ 8 ರವರೆಗೆ (7ನೇ ಸಿಪಿಸಿ ಮೇರೆಗೆ) (ವಿವಿಧ ಹುದ್ದೆಗಳಿಗೆ) ವಿಭಿನ್ನವಾಗಿರುತ್ತದೆ.
ವಯೋಮಿತಿ	18 ರಿಂದ 32 ವರ್ಷ (ವಿವಿಧ ಹುದ್ದೆಗಳಿಗೆ) ವಿಭಿನ್ನವಾಗಿರುತ್ತದೆ.
ಖಾಲಿಹುದ್ದೆಗಳು	12,256
ಶುಲ್ಕ	ರೂ.100/– (ಮಹಿಳಾ/ಎಸ್‌ಸಿ/ಎಸ್‌ಟಿ/ಇಎಸ್‌ಎಂ/ ಪಿಡಬ್ಲ್ಯುಬಿಡಿ ಅಭ್ಯರ್ಥಿಗಳಿಗೆ ವಿನಾಯಿತಿ)
ಅಗತ್ಯ ವಿದ್ಯಾರ್ಹತೆ	ಅಂಗೀಕೃತ ವಿಶ್ವವಿದ್ಯಾಲಯದಿಂದ ಬ್ಯಾಚುಲರ್ ಪದವಿ ಅಥವಾ ತತ್ಸಮಾನ. ವಿವಿಧ ಹುದ್ದೆಗಳ ವಿವರವಾದ ಇಕ್ಯೂ‘ಗಾಗಿ, ಸಿಬ್ಬಂದಿ ನೇಮಕಾತಿ ಆಯೋಗದ ದಿನಾಂಕ 21.05.2026ರ ಪ್ರಕಟಣೆಯಲ್ಲಿನ ಪ್ಯಾರಾ 8 ಪರಿಶೀಲಿಸಿರಿ.
ಅರ್ಜಿ ದಿನಾಂಕಗಳು	21.05.2026 ರಿಂದ 22.06.2026 (23:00) ರವರೆಗೆ ಅರ್ಜಿ ಸಲ್ಲಿಸಬಹುದು.
ಅರ್ಜಿ ವಿಧಾನ	ಸಿಬ್ಬಂದಿ ನೇಮಕಾತಿ ಆಯೋಗದ ssc.gov.in ವೆಬ್‌ಸೈಟ್ ಮೂಲಕ ಅಥವಾ ಆಂಡ್ರಾಯ್ಡ್ ಫೋನ್‌ಗಳಲ್ಲಿನ ಎಸ್‌ಎಸ್‌ಸಿ ಆಪ್ ಮುಖಾಂತರ **ಆನ್‌ಲೈನ್ ವಿಧಾನದಲ್ಲಿ** ಮಾತ್ರ ಅರ್ಜಿ ಸಲ್ಲಿಸತಕ್ಕದ್ದು.

ಹೆಚ್ಚಿನ ವಿವರಗಳಿಗಾಗಿ, ದಯವಿಟ್ಟು ssc.gov.in ವೆಬ್‌ಸೈಟ್‌ನಲ್ಲಿ ದಿನಾಂಕ 21.05.2026 ರಂದು ಪ್ರಕಟಗೊಂಡಿರುವ ವಿವರವಾದ ಜಾಹೀರಾತು ಪರಿಶೀಲಿಸಿರಿ.

CBC 32203/11/0008/2627

ಮಾಗಡಿ ಯೋಜನಾ ಪ್ರಾಧಿಕಾರ

ನಂ. 297/5588, ಬಾಗೇಗೌಡ ಬಡಾವಣೆ, ತಿರುಮಲೆ ರಸ್ತೆ, ಮಾಗಡಿ ಟೌನ್ ಬೆಂಗಳೂರು ದಕ್ಷಿಣ ಜಿಲ್ಲೆ – 562120. ದೂರವಾಣಿ ಸಂಖ್ಯೆ: 2774 5057

ಸಂ: ಮಾಯೋಪ್ರಾ/ಭೂ.ಉ.ಬ/02/2026–27 ದಿನಾಂಕ: 03.06.2026.

ಪ್ರಕಟಣೆ

(ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಸೆಕ್ಷನ್ 14 (ಎ) ರಡಿಯಲ್ಲಿ)

ಬೆಂಗಳೂರು ದಕ್ಷಿಣ ತಾಲ್ಲೂಕು, **ತಾವರೆಕೆರೆ ಹೋಬಳಿ, ಹೊನ್ನಿಗನಹಟ್ಟಿ ಗ್ರಾಮದ ಸ.ನಂ. 46/1 ರಲ್ಲಿ 02 ಎಕರೆ 17 ಗುಂಟೆ, ಸ.ನಂ. 46/2 ರಲ್ಲಿ 00 ಎಕರೆ 03.8 ಗುಂಟೆ, ಸ.ನಂ. 46/3ರಲ್ಲಿ 00 ಎಕರೆ 03.8 ಗುಂಟೆ, ಸ.ನಂ. 46/4ರಲ್ಲಿ 00 ಎಕರೆ 10 ಗುಂಟೆ, ಮತ್ತು ಸ.ನಂ. 46/5 ರಲ್ಲಿ 02 ಎಕರೆ 00 ಗುಂಟೆ ಒಟ್ಟು 04 ಎಕರೆ 34 ಗುಂಟೆ ವಿಸ್ತೀರ್ಣದ ಜಮೀನನ್ನು ಕೃಷಿ ವಲಯದಿಂದ ವಸತಿ ವಲಯಕ್ಕೆ** ಭೂ ಉಪಯೋಗ ಬದಲಾವಣೆ ಮಾಡಲು **ಶ್ರೀಮತಿ ಗಂಗಮ್ಮ ಕೋಂ. ಜಿ. ಗಂಗಾಧರಯ್ಯ ಮತ್ತು ಶ್ರೀ ಧನಂಜಯ ಜಿ ಬಿನ್ ಜಿ. ಗಂಗಾಧರಯ್ಯ, ನಂ.199, ಶಾಂತಿಧಾಮ, 3ನೇ ಕ್ರಾಸ್, ಮಾಗಡಿ ಮುಖ್ಯ ರಸ್ತೆ, ಸುಂಕದಕಟ್ಟೆ, ವಿಶ್ವನೀಡಂ ಪೋಸ್ಟ್, ಬೆಂಗಳೂರು–560091** ಇವರು ಈ ಪ್ರಾಧಿಕಾರಕ್ಕೆ ಅರ್ಜಿ ಸಲ್ಲಿಸಿರುತ್ತಾರೆ.

ಸದರಿ ಜಮೀನುಗಳನ್ನು ವಸತಿ ಉದ್ದೇಶಕ್ಕಾಗಿ ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆದು, ವಸತಿ ಅಭಿವೃದ್ಧಿ ಕಾಮಗಾರಿಗಳು ನಡೆಯುವಾಗ ಸ್ಥಳೀಯ ಕೂಲಿ ಕಾರ್ಮಿಕರಿಗೆ ಉದ್ಯೋಗ ದೊರಕುವ ಉದ್ದೇಶದೊಂದಿಗೆ, ವಿನ್ಯಾಸ ಅಭಿವೃದ್ಧಿಯಿಂದ ಸುತ್ತ–ಮುತ್ತಲಿನ ಪ್ರದೇಶ ಅಭಿವೃದ್ಧಿ ಹೊಂದುವುದಲ್ಲದೆ. ಯೋಜನಾ ಬದ್ಧವಾದ ವಿನ್ಯಾಸ ರಚನೆಯಿಂದ ಉತ್ತಮ ರಸ್ತೆಗಳು, ನಾಗರೀಕ ಸೌಲಭ್ಯದ ಜಾಗಗಳು ಮತ್ತು ಉದ್ಯಾನವನಗಳು ಸಾರ್ವಜನಿಕರ ಉಪಯೋಗಕ್ಕೆ ಲಭ್ಯವಾಗುತ್ತವೆ ಇದರಿಂದ ಸಾರ್ವಜನಿಕ ಹಿತಾಸಕ್ತಿ ಅಂಶ ಒಳಗೊಂಡಿರುತ್ತದೆ ಎಂದು ಅರ್ಜಿದಾರರು ತಿಳಿಸಿರುತ್ತಾರೆ.

ದಿನಾಂಕ: 01.06.2015 ರಂದು ಸರ್ಕಾರದಿಂದ ಅನುಮೋದನೆಯಾಗಿರುವ ಮಾಗಡಿ ಯೋಜನಾ ಪ್ರಾಧಿಕಾರದ ಸ್ಥಳೀಯ ಯೋಜನಾ ಪ್ರದೇಶದ ಮಹಾಯೋಜನೆ–2031 ರಲ್ಲಿ ಪ್ರಶ್ನಿತ ಜಮೀನನ್ನು ಕೃಷಿ ಉದ್ದೇಶಕ್ಕಾಗಿ ಕಾಯ್ದಿರಿಸಲಾಗಿರುತ್ತದೆ ಹಾಗೂ ಕರ್ನಾಟಕ ಸರ್ಕಾರ ಅಧಿಸೂಚನೆ ಸಂಖ್ಯೆ ಅಪಜೀ 177 ಇಎನ್‌ಜಿ 2024, ದಿನಾಂಕ: 02.01.2026 ರಂತೆ ಸದರಿ ಜಮೀನು ಟಿ.ಜಿ.ಆರ್ ವಲಯ–04ರಲ್ಲಿ ಬರುತ್ತದೆ.

ಕರ್ನಾಟಕ ನಗರ ಮತ್ತು ಗ್ರಾಮಾಂತರ ನಗರ ಯೋಜನಾ ಕಾಯ್ದೆ 1961 ರ ಕಲಂ 14 (ಎ) ರಡಿಯಲ್ಲಿ ಅರ್ಜಿದಾರರ ಮನವಿ ಬಗ್ಗೆ ಈ ಸಾರ್ವಜನಿಕ ಪ್ರಕಟಣೆಯನ್ನು ನೀಡಲಾಗಿರುತ್ತದೆ. ಈ ಸಂಬಂಧ ಸಾರ್ವಜನಿಕರಿಂದ ಯಾವುದೇ ಆಕ್ಷೇಪಣೆಗಳು ಇದ್ದಲ್ಲಿ ಅವುಗಳನ್ನು ಈ ಪ್ರಕಟಣೆಯ ದಿನಾಂಕದಿಂದ 15 ದಿವಸಗಳೊಳಗಾಗಿ ಸೂಕ್ತ ಕಾರಣಗಳೊಂದಿಗೆ ಲಿಖಿತವಾಗಿ ಸದಸ್ಯ ಕಾರ್ಯದರ್ಶಿಗಳು, ಮಾಗಡಿ ಯೋಜನಾ ಪ್ರಾಧಿಕಾರ, ಮಾಗಡಿ ಇವರಿಗೆ ಸಲ್ಲಿಸುವಂತೆ ಈ ಮೂಲಕ ತಿಳಿಸಲಾಗಿದೆ. ನಿಗದಿತ ಅವಧಿಯ ನಂತರ ಸ್ವೀಕೃತವಾಗುವ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಸಹಿ/– **ಸದಸ್ಯ ಕಾರ್ಯದರ್ಶಿ ಹಾಗೂ ಜಂಟಿ ನಿರ್ದೇಶಕರು ಮಾಗಡಿ ಯೋಜನಾ ಪ್ರಾಧಿಕಾರ, ಮಾಗಡಿ**

DIPR/BSD/81/SA/2026-27

ಆನೇಕಲ್ ಯೋಜನಾ ಪ್ರಾಧಿಕಾರ

“ಅಣ್ಣ” ನಂ.430, ಹೆನ್ನಾಗರ ಗೇಟ್, ಹೊಸೂರು ಮುಖ್ಯರಸ್ತೆ, ಬೆಂಗಳೂರು – 560099.
ದೂರವಾಣಿ: 080–27835122 ವೆಬ್‌ಸೈಟ್: www.anekal.tpa.gov.in, www.e-vinyasa.kar.nic.in

ಸಂಖ್ಯೆ: ಆಯೋಪ್ರಾ/ಭೂ.ಬ/101/2025–26 ದಿನಾಂಕ: 03–06–2026

ಪ್ರಕಟಣೆ

(ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 69 ರ ತಿದ್ದುಪಡಿ ಕಾಯ್ದೆಯಂತೆ)

ಆನೇಕಲ್ ಯೋಜನಾ ಪ್ರಾಧಿಕಾರದ ಸ್ಥಳೀಯ ಯೋಜನಾ ಪ್ರದೇಶದ ಮಹಾಯೋಜನೆಗೆ ಸರ್ಕಾರದ ಆದೇಶ ಸಂಖ್ಯೆ: ನಅಇ 151 ಬಿಎಂಆರ್ 2013, ಬೆಂಗಳೂರು ದಿನಾಂಕ: 03.09.2014 ರಂದು ಅನುಮೋದನೆ ನೀಡಲಾಗಿದ್ದು, ಐದು ವರ್ಷಗಳ ಅವಧಿಯು ಈಗಾಗಲೇ ಪೂರ್ಣಗೊಂಡಿದ್ದು, ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 69 (2) ರನ್ವಯ ಮಹಾಯೋಜನೆಯಲ್ಲಿ ಸಾರ್ವಜನಿಕ ಉಪಯೋಗಗಳಿಗೆ ಕಾಯ್ದಿರಿಸಿರುವ ಪ್ರದೇಶದ ಭೂ ಉಪಯೋಗವು ರದ್ದಾಗುತ್ತದೆ. ಆದ್ದರಿಂದ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 69 ರನ್ವಯ ಈ ಕೆಳಕಂಡ ಭೂ ಉಪಯೋಗ ನಿಗಧಿಪಡಿಸಲು ಅರ್ಜಿದಾರರು ಕೋರಿರುತ್ತಾರೆ. ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 69 (3) ರ ಅಡಿಯಲ್ಲಿ ಈ ಕೆಳಕಂಡಂತೆ ಭೂ ಉಪಯೋಗ ನಿಗಧಿಪಡಿಸುವ ಸಂಬಂಧ ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 (ಹದಿನೈದು) ದಿನಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ **ಸದಸ್ಯ–ಕಾರ್ಯದರ್ಶಿಗಳು, ಆನೇಕಲ್ ಯೋಜನಾ ಪ್ರಾಧಿಕಾರ, ಆನೇಕಲ್** ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗಧಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ. ಸಂ.	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮ	ಸ.ನಂ.	ವಿಸ್ತೀರ್ಣ (ಎ–ಗು)	ಅನುಮೋದಿತ ಮಹಾಯೋಜನೆ ಪ್ರಕಾರ ಭೂ ಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
1	ಶ್ರೀ ಕೆ.ಸಿ. ಜಯಪ್ರಕಾಶ್ ಬಿನ್ ಲೇ. ಚೌಡರೆಡ್ಡಿ	ಆನೇಕಲ್	ಸರ್ಜಾಪುರ	ಯಮರೆ	56/4	0–11 ಪೈಕಿ 0–01	ಉದ್ಯಾನವನ ಮತ್ತು ಬಯಲು ಜಾಗ	ವಾಣಿಜ್ಯ
2	ಶ್ರೀಮತಿ ಬಿ.ಕೆ. ಪವಿತ್ರ ಕೋಂ. ಕೆ.ಸಿ. ಜಯಪ್ರಕಾಶ್	ಆನೇಕಲ್	ಸರ್ಜಾಪುರ	ಯಮರೆ	56/6	0–05 ಪೈಕಿ 0–01.12	ಉದ್ಯಾನವನ ಮತ್ತು ಬಯಲು ಜಾಗ	ವಾಣಿಜ್ಯ

ಸಹಿ/– ಸದಸ್ಯ–ಕಾರ್ಯದರ್ಶಿ ಹಾಗೂ ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು, ಆನೇಕಲ್ ಯೋಜನಾ ಪ್ರಾಧಿಕಾರ, ಆನೇಕಲ್.

ವಾಸಾಸಂಇ/ವಾ.ಪ್ರ/982/ಅಡ್ವಟೋರ್/2026–27

‘ಬಿ–ಗ್ವಿನ್’ ಜಾಲ ಸ್ಥಾಪನೆ: ಜಲಮಂಡಳಿ ಚಿಂತನೆ

ಬೆಂಗಳೂರು ನಗರವನ್ನು ಜಾಗತಿಕ ‘ಜಲ-ನಾವೀನ್ಯತಾ ಕೇಂದ್ರ’ವನ್ನಾಗಿಸುವ ಪ್ರಯತ್ನ • ಸುಸ್ಥಿರ ಅಭಿವೃದ್ಧಿ ಗುರಿ

ಪ್ರಜಾವಾಣಿ ವಾರ್ತೆ



ಬೆಂಗಳೂರು ಜಲಮಂಡಳಿ

ಬೆಂಗಳೂರು: ‘ಬೆಂಗಳೂರು ನಗರದ ಸುಸ್ಥಿರ ಅಭಿವೃದ್ಧಿಗೆ ಪೂರಕವಾದ ವ್ಯವಸ್ಥೆಯನ್ನು ನಿರ್ಮಿಸಲು ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ ಮೂಲಕ ‘ಬೆಂಗಳೂರು ಗ್ಲೋಬಲ್ ವಾಟರ್ ಇನ್ನೋವೇಷನ್ ನೆಟ್‌ವರ್ಕ್’ (ಬಿ–ಗ್ವಿನ್) ಸ್ಥಾಪಿಸಲು ಚಿಂತನೆ ನಡೆದಿದೆ’ ಎಂದು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ತಿಳಿಸಿದ್ದಾರೆ.

‘ಇದು ಜಲ ಮತ್ತು ಒಳಚರಂಡಿ ವಲಯದ ಸವಾಲುಗಳನ್ನು ಸಮರ್ಥವಾಗಿ ಎದುರಿಸುವ ಜಾಗತಿಕ ಮಟ್ಟದ ಅತ್ಯಾಧುನಿಕ ವೇದಿಕೆಯಾಗಲಿದೆ. ವಿಶ್ವದ ಜಲ ನಿರ್ವಹಣಾ ಸಂಸ್ಥೆಗಳು, ಸರ್ಕಾರಿ ಸಂಸ್ಥೆಗಳು, ಶೈಕ್ಷಣಿಕ-ಸಂಶೋಧನಾ ಸಂಸ್ಥೆಗಳು, ಕೈಗಾರಿಕಾ ಸ್ಟಾರ್ಟ್‌ಅಪ್‌ಗಳು, ಇನ್‌ಕ್ಯುಬೇಟರ್‌ಗಳನ್ನು ಒಂದೇ ಸೂರಿನಡಿ ತರುವ ಮಹತ್ವದ ಪ್ರಯತ್ನವೂ ಆಗಲಿದೆ’ ಎಂದು ತಿಳಿಸಿದ್ದಾರೆ.

‘ಬೆಂಗಳೂರನ್ನು ಜಾಗತಿಕವಾಗಿ ಮನ್ನಣೆ ಪಡೆದ ಜಲ ನಾವೀನ್ಯತೆಯ ಕೇಂದ್ರವನ್ನಾಗಿಸಲಾಗುವುದು. ಜಲ ಭದ್ರತೆಯ ಮಾದರಿ ನಗರವಾಗಿಯೂ ಪರಿವರ್ತಿಸಲಾಗುವುದು. ಹೊಸ ತಂತ್ರಜ್ಞಾನಗಳ ಅಳವಡಿಕೆಯನ್ನು ಉತ್ತೇಜಿಸಿ ಅಂತರರಾಷ್ಟ್ರೀಯ ಅತ್ಯುತ್ತಮ ಪ್ರಯೋಗಗಳಿಗೆ ಅನುಗುಣವಾಗಿ ಮಾನವ ಸಂಪನ್ಮೂಲವನ್ನು ಅಭಿವೃದ್ಧಿಪಡಿಸಲಾಗುವುದು. ವಿಶ್ವ ಸಂಸ್ಥೆಯ ಸುಸ್ಥಿರ ಅಭಿವೃದ್ಧಿ ಗುರಿಗಳಾದ ಶುದ್ಧ ನೀರು, ಸುಸ್ಥಿರ ಇಂಧನ ಮತ್ತು ಸುರಕ್ಷಿತ ನಗರ ಸಮುದಾಯಗಳ ನಿರ್ಮಾಣವೂ ಈ ವೇದಿಕೆಯ ಉದ್ದೇಶ’ ಎಂದು ಅವರು ವಿವರಿಸಿದ್ದಾರೆ.

ಏನೇನು ಇರಲಿದೆ?: ‘ಅತ್ಯಾಧುನಿಕ ‘ಉತ್ಕೃಷ್ಟತಾ ಕೇಂದ್ರ’ದ ಅಡಿಯಲ್ಲಿ ತಂತ್ರಜ್ಞಾನ ನಾವೀನ್ಯತಾ ಹಬ್ ಸ್ಥಾಪಿಸಲಾಗುವುದು. ಈ ಕೇಂದ್ರವು ಕೃತಕ ಬುದ್ಧಿಮತ್ತೆ ಆಧಾರಿತ ಸ್ಮಾರ್ಟ್ ಮೀಟರಿಂಗ್ ಮತ್ತು ವಿಕೇಂದ್ರೀಕೃತ ನೀರು ಸಂಸ್ಕರಣಾ ವ್ಯವಸ್ಥೆಗಳ ಸುಧಾರಿತ ಸಂಶೋಧನೆಗೆ ಅವಕಾಶ ಕಲ್ಪಿಸಲಿದೆ. ಜಾಗತಿಕ ಜಲಮಂಡಳಿಗಳ ಪ್ರತಿನಿಧಿಗಳು, ಸರ್ಕಾರ ಮತ್ತು ಉದ್ಯಮ ರಂಗದ ತಜ್ಞರು ಕುಡಿಯುವ ನೀರಿನ ಶುದ್ಧೀಕರಣ ಮತ್ತು ಮರುಬಳಕೆಯ ತಂತ್ರಜ್ಞಾನಗಳನ್ನು ಆವಿಷ್ಕರಿಸಲಿದ್ದಾರೆ’ ಎಂದು ತಿಳಿಸಿದ್ದಾರೆ.

‘ಈ ಜಂಟಿ ಸಂಶೋಧನೆಯಿಂದ ಹೊರಹೊಮ್ಮುವ ಬೌದ್ಧಿಕ ಆಸ್ತಿ ಹಕ್ಕುಗಳ ಮೂಲಕ ರಾಯಧನ ಮತ್ತು ಲೈಸೆನ್ಸ್ ಮೂಲಕ ಆದಾಯ ಗಳಿಸುವ ಅವಕಾಶವೂ ನಿರ್ಮಾಣವಾಗಲಿದೆ. ಜಲ ವಲಯದ ಸಿಬ್ಬಂದಿಯ ಕೌಶಲವೃದ್ಧಿಗೂ ವಿವಿಧ ತರಬೇತಿ, ಕೋರ್ಸ್‌ಗಳನ್ನು ಆಯೋಜಿಸಲಾಗುವುದು’ ಎಂದಿದ್ದಾರೆ.

ಡಿಜಿಟಲ್ ವೇದಿಕೆ: ‘ಹವಾಮಾನ ಏರಿಳಿತಗಳಿಗೆ ಹೊಂದಿಕೊಳ್ಳುವುದು ಮುಖ್ಯ. ಅದಕ್ಕೆ ಅಂತರರಾಷ್ಟ್ರೀಯ ಧನಸಹಾಯ ಸಂಸ್ಥೆಗಳು, ದಾನಿ ಸಂಘಟನೆಗಳು ಹಾಗೂ ಸರ್ಕಾರದ ಅನುದಾನವನ್ನು ಕ್ರೋಡೀಕರಿಸಲಾಗುವುದು. ಖಾಸಗಿ ವಲಯದ ಪಾಲುದಾರಿಕೆಯಲ್ಲಿ ರಾಯಧನ ಮತ್ತು ಲಾಭ-ಹಂಚಿಕೆ ಮಾದರಿಯನ್ನು ಜಾರಿಗೊಳಿಸಲಾಗುವುದು. ಜಲ ಮಂಡಳಿಯನ್ನು ದತ್ತಾಂಶ ಆಧಾರಿತ ಮತ್ತು ಸಂಪೂರ್ಣ ಸುಸ್ಥಿರವಾದ ‘ಭವಿಷ್ಯದ ಜಲಸಂಸ್ಥೆ’ಯನ್ನಾಗಿ ರೂಪಿಸಲಾಗುವುದು’ ಎಂದಿದ್ದಾರೆ.

‘ಐತಿಹಾಸಿಕ ಹೆಜ್ಜೆ’

ಸುರಕ್ಷಿತ ಜಲ ಭವಿಷ್ಯವೇ ಬೆಂಗಳೂರಿನಂತಹ ಬಲಿಷ್ಠ ಮಹಾನಗರದ ತಳಪಾಯ. ‘ಬಿ-ಗ್ವಿನ್’ (B–GWIN) ಜಾಲವು ‘ಬ್ರ್ಯಾಂಡ್ ಬೆಂಗಳೂರು’ ಕನಸನ್ನು ಸಾಕಾರಗೊಳಿಸುವ ಐತಿಹಾಸಿಕ ಹೆಜ್ಜೆ. ಭವಿಷ್ಯದ ಸವಾಲುಗಳನ್ನು ಎದುರಿಸಲು ಭವ್ಯ ಬೆಂಗಳೂರು ಸಜ್ಜಾಗಬೇಕು. ಅದಕ್ಕಾಗಿ ಅತ್ಯಾಧುನಿಕ ತಂತ್ರಜ್ಞಾನಗಳ ಅಳವಡಿಕೆ ಹಾಗೂ ಜಾಗತಿಕ ಪಾಲುದಾರಿಕೆಯು ಅತ್ಯಗತ್ಯವಾಗಿದೆ ಎಂದು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ತಿಳಿಸಿದ್ದಾರೆ.

‘ಜಾಗತಿಕ ಜಲ-ಭದ್ರತೆ’

ಬೆಂಗಳೂರನ್ನು ಜಾಗತಿಕ ಜಲ-ಭದ್ರತೆಯ ಮಾದರಿ ನಗರವಾಗಿ ರೂಪಿಸುವುದೇ ಜಲಮಂಡಳಿಯ ಪ್ರಮುಖ ಗುರಿ. ಯುವ ಸ್ಟಾರ್ಟ್‌ಅಪ್‌ಗಳು ಮತ್ತು ಜಾಗತಿಕ ತಂತ್ರಜ್ಞಾನಗಳ ಪ್ರಾಯೋಗಿಕ ಅಳವಡಿಕೆಗೆ ಬೆಂಗಳೂರು ಅತ್ಯುತ್ತಮ ತಾಣವಾಗಲಿದೆ ಎಂದು ಬೆಂಗಳೂರು ಜಲಮಂಡಳಿ ಅಧ್ಯಕ್ಷ ಡಾ.ರಾಮ್ ಪ್ರಸಾತ್ ಮನೋಹರ್ ತಿಳಿಸಿದ್ದಾರೆ.

‘ತ್ಯಾಜ್ಯ ನಿರ್ವಹಣೆ: ಸಮನ್ವಯ ಇರಲಿ’


ಡಾ.ಕೆ.ವಿ. ರಾಜೇಂದ್ರ

ಬೆಂಗಳೂರು: ಘನತ್ಯಾಜ್ಯದ ನಿರ್ವಹಣೆಗೆ ಕಾಮಗಾರಿ ವಿಭಾಗ, ಅರಣ್ಯ ವಿಭಾಗ ಹಾಗೂ ಘನತ್ಯಾಜ್ಯ ನಿರ್ವಹಣೆ ವಿಭಾಗದ ಅಧಿಕಾರಿಗಳು ಸಮನ್ವಯದೊಂದಿಗೆ ಕಾರ್ಯ ನಿರ್ವಹಿಸಬೇಕು ಎಂದು ಪಶ್ಚಿಮ ನಗರ ಪಾಲಿಕೆ ಆಯುಕ್ತ ಡಾ. ಕೆ.ವಿ.ರಾಜೇಂದ್ರ ಸೂಚಿಸಿದರು.

ಹಸಿರು ತ್ಯಾಜ್ಯ ನಿರ್ವಹಣೆಗೆ ಸಂಬಂಧಿಸಿದಂತೆ ಘನತ್ಯಾಜ್ಯ ನಿರ್ವಹಣೆ ವಿಭಾಗದ ಉಪ ಪ್ರಧಾನ ವ್ಯವಸ್ಥಾಪಕರು (ಡಿಜಿಎಂ), ಸಹಾಯಕ ಪ್ರಧಾನ ವ್ಯವಸ್ಥಾಪಕರು (ಎಜಿಎಂ), ಎಲ್ಲ ಕಾರ್ಯಪಾಲಕ ಎಂಜಿನಿಯರ್ (ಇಇ) ಹಾಗೂ ಉಪ ವಲಯ ಅರಣ್ಯಾಧಿಕಾರಿಗಳು (ಡಿಆರ್‌ಎಫ್‌ಒ) ಸಮನ್ವಯದೊಂದಿಗೆ ಕಾರ್ಯತಂತ್ರ ರೂಪಿಸಿ ಕಾರ್ಯಪ್ರವೃತ್ತರಾಗಬೇಕು ಎಂದು ಅಧಿಕಾರಿಗಳ ಸಭೆಯಲ್ಲಿ ಗುರುವಾರ ನಿರ್ದೇಶನ ನೀಡಿದರು.

ಪಾಲಿಕೆ ವ್ಯಾಪ್ತಿಯಲ್ಲಿ ವಿವಿಧೆಡೆ ಗಾಳಿ–ಮಳೆಗೆ ಧರೆಗುರುಳಿರುವ ಮರಗಳು ಹಾಗೂ ಮುರಿದು ಬಿದ್ದಿರುವ ರೆಂಬೆ–ಕೊಂಬೆಗಳ ತೆರವು ಇನ್ನಷ್ಟು ಪರಿಣಾಮಕಾರಿಯಾಗಿ ನಡೆಯಬೇಕು. ಈ ಸಂಬಂಧ ಕಾರ್ಯಪಾಲಕ ಎಂಜಿನಿಯರ್‌ಗಳು ಕ್ರಮ ಕೈಗೊಳ್ಳಬೇಕು. ಎಜಿಎಂಗಳು ಹಾಗೂ ಅರಣ್ಯ ವಿಭಾಗದೊಂದಿಗೆ ಸಮನ್ವಯ ಸಾಧಿಸಿ, ವ್ಯವಸ್ಥಿತವಾಗಿ ಹಸಿರು ತ್ಯಾಜ್ಯ, ಮರಮುಟ್ಟುಗಳ ವಿಲೇವಾರಿ ನಡೆಸಬೇಕು. ಸಹಾಯಕ, ಕಿರಿಯ ಎಂಜಿನಿಯರ್‌ಗಳು ಪಾಲಿಕೆ ವ್ಯಾಪ್ತಿಯಲ್ಲಿ ಶಿಥಿಲವಾಗಿರುವ ಕಟ್ಟಡ, ಕಾಂಪೌಂಡ್‌ಗಳಿದ್ದರೆ ಗಮನಿಸಬೇಕು. ದುರ್ಘಟನೆಗಳು ಸಂಭವಿಸಿದರೆ ಕ್ರಮ ಕೈಗೊಳ್ಳಲಾಗುವುದು ಎಂದು ಎಚ್ಚರಿಸಿದರು.

ನಾಯಂಡಹಳ್ಳಿ ಮೇಲ್ಸೇತುವೆಯಲ್ಲಿ ಮಳೆ ನೀರು ಸಂಗ್ರಹವಾಗದಂತೆ ಕ್ರಮ ಕೈಗೊಳ್ಳಬೇಕು. ಅಧಿಕಾರಿಗಳು ತಮ್ಮ ವಾರ್ಡ್‌ನಲ್ಲಿ ಪಾದಚಾರಿ ಮಾರ್ಗಗಳ ಸ್ವಚ್ಛತೆ, ಅಭಿವೃದ್ಧಿ ಬಗ್ಗೆ ಗುರಿ ನಿಗದಿಪಡಿಸಿಕೊಂಡು ಕಾರ್ಯ ಪ್ರವೃತ್ತ ರಾಗಬೇಕು. ಪರಿಸರ ಸಂರಕ್ಷಣೆ, ಸ್ವಚ್ಛತೆ ಬಗ್ಗೆ ಡಿಜಿಟಲ್ ಅಭಿಯಾನದ ಯೋಜನೆ ರೂಪಿಸಬೇಕು ಎಂದು ಸೂಚಿಸಿದರು.

ರಾಮಯ್ಯ ವಿಜ್ಞಾನ ಮತ್ತು ವ್ಯವಹಾರ ನಿರ್ವಹಣಾ ಸಂಸ್ಥೆ ಉದ್ಘಾಟನೆ

‘ತಂತ್ರಜ್ಞಾನ: ಬಹುಶಿಸ್ತೀಯ ಕಲಿಕೆ ಅಗತ್ಯ’

ಪ್ರಜಾವಾಣಿ ವಾರ್ತೆ


‘ರಾಮಯ್ಯ ವಿಜ್ಞಾನ ಮತ್ತು ವ್ಯವಹಾರ ನಿರ್ವಹಣಾ ಸಂಸ್ಥೆ’ಯನ್ನು ಗೋಕುಲ ಎಜುಕೇಶನ್ ಫೌಂಡೇಷನ್ ಮುಖ್ಯಸ್ಥ ಎಂ.ಆರ್. ಜಯರಾಮ್ ಲೋಕಾರ್ಪಣೆ ಮಾಡಿದರು. ಪ್ರೊ.ಬಿ.ಎನ್.ರಘುನಂದನ್, ಪ್ರೊ.ಕ್ಯಾರೊಲ್ ಕಿಮ್, ಗುರುಚರಣ್ ಗೊಲ್ಲರಕೇರಿ, ಪ್ರೊ.ಹವಿದಾನ್ ರೋಡ್ರಿಗಸ್, ಕೇಶವದಾಸ್, ಎಂ.ಎಂ.ಪಲ್ಲಮ್ ರಾಜು ಪಾಲ್ಗೊಂಡಿದ್ದರು —ಪ್ರಜಾವಾಣಿ ಚಿತ್ರ

ಬೆಂಗಳೂರು: ‘ತಂತ್ರಜ್ಞಾನ ಕ್ಷೇತ್ರದಲ್ಲಿ ವೇಗವಾಗಿ ಬದಲಾವಣೆ ಆಗುತ್ತಿದ್ದು, ಹೊಸ ಕಾಲದ ತಂತ್ರಜ್ಞಾನಗಳನ್ನು ಬಹುಶಿಸ್ತೀಯವಾಗಿ ಕಲಿಸಬೇಕಿದೆ’ ಎಂದು ಗೋಕುಲ ಎಜುಕೇಶನ್ ಫೌಂಡೇಷನ್‌ನ ಕಾರ್ಯನಿರ್ವಾಹಕ ನಿರ್ದೇಶಕ ಗುರುಚರಣ್ ಗೊಲ್ಲರಕೇರಿ ಹೇಳಿದರು.

ಗುರುವಾರ ಇಲ್ಲಿ ನಡೆದ ‘ರಾಮಯ್ಯ ವಿಜ್ಞಾನ ಮತ್ತು ವ್ಯವಹಾರ ನಿರ್ವಹಣಾ ಸಂಸ್ಥೆ’ಯ (ಆರ್‌ಐಎಸ್‌ಎಂ) ಲೋಕಾರ್ಪಣೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ‘ಭವಿಷ್ಯದಲ್ಲಿ ಎಂಜಿನಿಯರಿಂಗ್ ಕ್ಷೇತ್ರವು ವೇಗವಾಗಿ ಬದಲಾವಣೆ ಕಾಣಲಿದೆ. ಕೃತಕ ಬುದ್ಧಿಮತ್ತೆ ಸೇರಿದಂತೆ ನವ ತಂತ್ರಜ್ಞಾನಗಳನ್ನು ಪರಿಣಾಮಕಾರಿಯಾಗಿ ಕಲಿಸಬೇಕಿದೆ’ ಎಂದರು.

‘ದೇಶದ ವಿಶ್ವವಿದ್ಯಾಲಯಗಳಲ್ಲಿ ಒಂದೇ ತಾಂತ್ರಿಕ ವಿಷಯದ ಪದವಿಗೆ ಆದ್ಯತೆ ನೀಡಲಾಗಿದೆ. ಎಲ್ಲ ತಂತ್ರಜ್ಞಾನಗಳ ತಿಳಿವಳಿಕೆ ಪ್ರತಿಯೊಬ್ಬ ವಿದ್ಯಾರ್ಥಿಗೂ ಅಗತ್ಯ. ಅದರಿಂದ ಉದ್ಯೋಗಾವಕಾಶ ಹೆಚ್ಚುತ್ತದೆ. ಆರ್‌ಐಎಸ್‌ಎಂ ಸಂಸ್ಥೆಯಲ್ಲಿ ಕಂಪ್ಯೂಟರ್ ಎಂಜಿನಿಯರಿಂಗ್, ಕೃತಕ ಬುದ್ಧಿಮತ್ತೆ, ಏರೋಸ್ಪೇಸ್, ಎಲೆಕ್ಟ್ರಿಕಲ್ ಸೈನ್ಸಸ್, ವ್ಯವಹಾರ ನಿರ್ವಹಣೆ ವಿಷಯಗಳಲ್ಲಿ 360 ಡಿಗ್ರಿ ಕಲಿಕೆಗೆ ಅವಕಾಶ ಇದೆ’ ಎಂದರು.

‘ಕೃತಕ ಬುದ್ಧಿಮತ್ತೆ ಉನ್ನತ ಶಿಕ್ಷಣದಲ್ಲಿ ಹೊಸ ಸವಾಲುಗಳನ್ನು ಒಡ್ಡಿದೆ. ಅದಕ್ಕೆ ಭಾರತದ ಶಿಕ್ಷಣ ವ್ಯವಸ್ಥೆ ಇನ್ನೂ ಸಿದ್ಧಗೊಂಡಿಲ್ಲ. ನಮ್ಮ ಜ್ಞಾನ ಪರಂಪರೆಯನ್ನು ಹೊಸ ಪೀಳಿಗೆಗೆ ವರ್ಗಾಯಿಸಲು ಹೊಸ ಮಾದರಿ ವ್ಯವಸ್ಥೆಯೊಂದನ್ನು ರೂಪಿಸಬೇಕು. ಅದಕ್ಕೆ ವಿದ್ಯಾರ್ಥಿ ಸ್ನೇಹಿ ಕಲಿಕಾ ಪರಿಸರ ನಿರ್ಮಾಣ ಅಗತ್ಯ. ತರಗತಿ ಕಲಿಕೆಗಿಂತಲೂ ಸಂಶೋಧನಾತ್ಮಕ ಕಲಿಕೆಗೆ ಆದ್ಯತೆ ಕೊಡಬೇಕಿದೆ’ ಎಂದು ಅಭಿಪ್ರಾಯಪಟ್ಟರು.

‘ವಿದ್ಯಾರ್ಥಿಗಳ ಪ್ರತಿಭೆಗೆ ಪ್ರೋತ್ಸಾಹ ನೀಡುವ ಜೊತೆಗೆ ನೈತಿಕತೆ, ಪ್ರಾಮಾಣಿಕತೆ, ಮೌಲ್ಯ, ಶಿಸ್ತು, ಸಹಾನುಭೂತಿ ಬೆಳೆಸಬೇಕು. ಸಾಕ್ಷ್ಯ ಆಧಾರಿತ, ಅನ್ವಯಿಕ ಬೋಧನಾ ವಿಧಾನಗಳನ್ನು ಶಿಕ್ಷಕರು ನಡೆಸಬೇಕು. ಆರ್‌ಐಎಸ್‌ಎಂ ಶೈಕ್ಷಣಿಕ ಅಭಿವೃದ್ಧಿಯಲ್ಲಿ ಹೊಸ ಸಾಧ್ಯತೆಗಳ ಹುಡುಕಾಟಕ್ಕೆ ಸಜ್ಜಾಗಿದೆ’ ಎಂದರು.

ಒಪ್ಪಂದ: ಇದೇ ವೇಳೆ ಆರ್‌ಐಎಸ್‌ಎಂ ಸಂಸ್ಥೆ ಹಾಗೂ ನ್ಯೂಯಾರ್ಕ್ ಅಲ್ಬನಿ ವಿಶ್ವವಿದ್ಯಾಲಯಗಳು ಶೈಕ್ಷಣಿಕ ಸಹಕಾರಕ್ಕೆ ಒಡಂಬಡಿಕೆ ಮಾಡಿಕೊಂಡವು. ಗೋಕುಲ ಎಜುಕೇಶನ್ ಫೌಂಡೇಷನ್ ಮುಖ್ಯಸ್ಥ ಎಂ.ಆರ್. ಜಯರಾಮ್, ಅಲ್ಬನಿ ವಿಶ್ವವಿದ್ಯಾಲಯದ ಅಧ್ಯಕ್ಷ ಪ್ರೊ. ಹವಿದಾನ್ ರೋಡ್ರಿಗಸ್ ಒಪ್ಪಂದಕ್ಕೆ ಸಹಿ ಹಾಕಿದರು.

ಅಲ್ಬನಿ ವಿಶ್ವವಿದ್ಯಾಲಯದ ಪ್ರೊ. ಕ್ಯಾರೊಲ್ ಕಿಮ್, ಕೇಂದ್ರದ ಮಾಜಿ ಸಚಿವ ಎಂ.ಎಂ.ಪಲ್ಲಮ್ ರಾಜು, ಸಂಸ್ಥೆಯ ಪ್ರೊ.ಬಿ.ಎನ್.ರಘುನಂದನ್, ವೆಂಕಟೇಶ್ ವೆಲ್ಲುರಿ, ಪ್ರೊ.ಕೇಶವದಾಸ್, ಜೆ.ವಿ.ದೇಸಾಯಿ ಪಾಲ್ಗೊಂಡಿದ್ದರು.

‘ಕಾಡಿನ ಕವಿ’ ವಿಚಾರಗೋಷ್ಠಿ 7ಕ್ಕೆ

ಪ್ರಜಾವಾಣಿ ವಾರ್ತೆ



ಬೆಂಗಳೂರು: ದೊಮ್ಮಲೂರಿನಲ್ಲಿರುವ ಬೆಂಗಳೂರು ಅಂತರರಾಷ್ಟ್ರೀಯ ಕೇಂದ್ರವು (ಬಿಐಸಿ) ವಿಶ್ವ ಪರಿಸರ ದಿನದ ಪ್ರಯುಕ್ತ ಇದೇ 7ರಂದು ಸಂಜೆ 6 ಗಂಟೆಗೆ ‘ಕಾಡಿನ ಕವಿ’ ಶೀರ್ಷಿಕೆಯಡಿ ವಿಚಾರಗೋಷ್ಠಿ ಹಮ್ಮಿಕೊಂಡಿದೆ.

ಕುವೆಂಪು ಅವರ ಪ್ರಕೃತಿ ಬಗೆಗಿನ ಬರವಣಿಗೆಯನ್ನು ಈ ವಿಚಾರಗೋಷ್ಠಿ ಕೇಂದ್ರೀಕರಿಸಲಿದೆ. ಅನುವಾದಕಿ ವನಮಾಲಾ ವಿಶ್ವನಾಥ್, ಅಭಿವೃದ್ಧಿ ಆಯುಕ್ತೆ ಉಮಾ ಮಹಾದೇವನ್, ಲೇಖಕ ಸುಂದರ್ ಸರುಕ್ಕೈ ಪಾಲ್ಗೊಳ್ಳಲಿದ್ದಾರೆ. ಪೆಂಗ್ವಿನ್ ರ್‍ಯಾಂಡಮ್ ಹೌಸ್ ಇಂಡಿಯಾದ ಕಾರ್ಯನಿರ್ವಾಹಕ ಸಂಪಾದಕ ಕಾರ್ತಿಕ್ ವೆಂಕಟೇಶ್ ಗೋಷ್ಠಿಯ ನಿರ್ವಹಣೆ ಮಾಡಲಿದ್ದಾರೆ.

ಮಲೆನಾಡು ಪ್ರದೇಶವಾದ ತೀರ್ಥಹಳ್ಳಿ ಬಳಿಯ ಕುಪ್ಪಳಿಯಲ್ಲಿ ಜನಿಸಿದ ಕುವೆಂಪು ಅವರು ಪ್ರಕೃತಿಯ ಆರಾಧಕರಾಗಿದ್ದರು. ಮಲೆನಾಡಿನ ಪ್ರಕೃತಿಯ ಮಡಿಲಲ್ಲಿ ಬೆಳೆದ ಅವರಿಗೆ, ಪ್ರಕೃತಿಯು ಕೇವಲ ವರ್ಣನೆಯ ವಸ್ತುವಾಗಿರದೆ, ಕಾವ್ಯ ಸೃಷ್ಟಿಯ ಜೀವಂತ ಸ್ಫೂರ್ತಿಯ ಚಿಲುಮೆಯಾಗಿತ್ತು. ಅವರ ‘ಕಾನೂರು ಹೆಗ್ಗಡತಿ’, ‘ಮಲೆಗಳಲ್ಲಿ ಮದುಮಗಳು’ ಮೊದಲಾದ ಕೃತಿಗಳಲ್ಲಿ ಪ್ರಕೃತಿಯ ವರ್ಣನೆಯಿದೆ.

ಕುವೆಂಪು ಅವರು ಪ್ರಕೃತಿಯನ್ನು ಯಾವ ರೀತಿ ನೋಡುತ್ತಾರೆ? ಪ್ರಕೃತಿ ಮತ್ತು ಮಾನವ ಪ್ರಪಂಚದ ಸಂಕಟದ ನಡುವಿನ ಸಂಬಂಧವನ್ನು ಅವರು ಹೇಗೆ ಕಲ್ಪಿಸಿಕೊಳ್ಳುತ್ತಾರೆ? ಕುವೆಂಪು ಅವರಿಗಿರುವ ಪ್ರಕೃತಿಯ ಮೇಲಿನ ಅಚಲ ನಂಬಿಕೆಯನ್ನು ನಾವು ಈಗ ಹೇಗೆ ಅರ್ಥಮಾಡಿಕೊಳ್ಳುತ್ತೇವೆ? ಹವಾಮಾನ ಬದಲಾವಣೆಯ ಸವಾಲುಗಳನ್ನು ಎದುರಿಸುವಾಗ ನಾವು ಕುವೆಂಪು ಅವರ ಪ್ರಸ್ತುತತೆಯನ್ನು ಹೇಗೆ ಓದುತ್ತೇವೆ? ಮೊದಲಾದ ವಿಷಯಗಳ ಮೇಲೆ ವಿಷಯ ತಜ್ಞರು ಚರ್ಚಿಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

21ರಿಂದ ಮುಕ್ತಿನಾಗ ರಥೋತ್ಸವ

ಬೆಂಗಳೂರು: ರಾಮೋಹಳ್ಳಿಯ ಮುಕ್ತಿನಾಗ ದೇವಸ್ಥಾನದಲ್ಲಿ ಲೋಕ ಕಲ್ಯಾಣಾರ್ಥ ಇದೇ 21ರಿಂದ 30ರವರೆಗೆ ಮುಕ್ತಿನಾಗ ರಥೋತ್ಸವ ಹಮ್ಮಿಕೊಳ್ಳಲಾಗಿದೆ.

21ರಂದು ಸಂಜೆ 5 ಗಂಟೆಗೆ ಯಾಗಶಾಲಾ ಪ್ರವೇಶ ಮತ್ತು ಧ್ವಜಾರೋಹಣ ನಡೆಯಲಿದೆ. 22ರಿಂದ 30ರವರೆಗೆ ಬೆಳಿಗ್ಗೆ 9 ಗಂಟೆಯಿಂದ ವಿವಿಧ ಧಾರ್ಮಿಕ ವಿಧಿವಿಧಾನಗಳು ನಡೆಯಲಿವೆ. ಸಹಸ್ರ ಮೋದಕ ಗಣಹೋಮ, ಆದಿತ್ಯಾದಿ ನವಗ್ರಹ ಹೋಮ, ಮೃತ್ಯುಂಜಯ ಹೋಮ, ಸುದರ್ಶನ ಹೋಮ, ಮಹಾಲಕ್ಷ್ಮಿ ಹೋಮ ಸೇರಿ ವಿವಿಧ ಹೋಮಗಳು ಹತ್ತು ದಿನಗಳ ರಥೋತ್ಸವದಲ್ಲಿ ನಡೆಯಲಿವೆ.

ಎಸ್‌ಐಆರ್: ಶೇ 72ರಷ್ಟು ಮ್ಯಾಪಿಂಗ್ ಪೂರ್ಣ

ಮನೆ-ಮನೆ ಸಮೀಕ್ಷೆ ಕಾರ್ಯ ಆರಂಭಿಸುವ ಮುನ್ನ ಅರಿವು

• ಜಿಬಿಎ ಮುಖ್ಯ ಆಯುಕ್ತ ಮಹೇಶ್ವರ್ ರಾವ್ ಮಾಹಿತಿ

ಮ್ಯಾಪಿಂಗ್ ವಿವರ

1,03,83,381	40,33,185	34,83,399	75,16,584
2025ರಂತೆ ಒಟ್ಟು ಮತದಾರರ ಸಂಖ್ಯೆ	ವಯಸ್ಸಿನ ಆಧಾರದಲ್ಲಿ ಮ್ಯಾಪಿಂಗ್	ಕುಟುಂಬದ ವರದಿಯ ಆಧಾರದಲ್ಲಿ ಮ್ಯಾಪಿಂಗ್	ಮ್ಯಾಪಿಂಗ್ ಆಗಿರುವ ಮತದಾರರ ಸಂಖ್ಯೆ

ಮ್ಯಾಪಿಂಗ್ ಪ್ರಗತಿ

ಬೆಂಗಳೂರು ಜಿಲ್ಲೆ	78.93%
ಕೇಂದ್ರ ನಗರ ಜಿಲ್ಲೆ	67.53%
ದಕ್ಷಿಣ ನಗರ ಜಿಲ್ಲೆ	67.93%
ಉತ್ತರ ನಗರ ಜಿಲ್ಲೆ	69.23%

ಯಾವ ವ್ಯಾಪ್ತಿಯಲ್ಲಿ ಯಾವ ವಿಧಾನಸಭೆ ಕ್ಷೇತ್ರ?

ಕೇಂದ್ರ ನಗರ ಜಿಲ್ಲೆ	ರಾಜರಾಜೇಶ್ವರಿ ನಗರ, ಶಿವಾಜಿನಗರ, ಶಾಂತಿನಗರ, ಗಾಂಧಿನಗರ, ರಾಜಾಜಿನಗರ, ಚಾಮರಾಜಪೇಟೆ, ಚಿಕ್ಕಪೇಟೆ
ಉತ್ತರ ನಗರ ಜಿಲ್ಲೆ	ಕೆ.ಆರ್. ಪುರ, ಮಹಾಲಕ್ಷ್ಮಿ ಲೇಔಟ್, ಮಲ್ಲೇಶ್ವರ, ಹೆಬ್ಬಾಳ, ಪುಲಕೇಶಿನಗರ, ಸರ್ವಜ್ಞನಗರ, ಸಿ.ವಿ. ರಾಮನ್‌ನಗರ
ದಕ್ಷಿಣ ನಗರ ಜಿಲ್ಲೆ	ಗೋವಿಂದರಾಜನಗರ, ವಿಜಯನಗರ, ಬಸವನಗುಡಿ, ಪದ್ಮನಾಭನಗರ, ಬಿಟಿಎಂ ಲೇಔಟ್, ಜಯನಗರ, ಬೊಮ್ಮನಹಳ್ಳಿ
ಬೆಂಗಳೂರು ಜಿಲ್ಲೆ	ಯಲಹಂಕ, ಬ್ಯಾಟರಾಯನಪುರ, ಯಶವಂತಪುರ, ದಾಸರಹಳ್ಳಿ, ಮಹದೇವಪುರ, ಬೆಂಗಳೂರು ದಕ್ಷಿಣ, ಆನೇಕಲ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆಯನ್ನು (ಎಸ್‌ಐಆರ್) ಸಮರ್ಪಕವಾಗಿ ನಡೆಸಲು ಎಲ್ಲಾ ರೀತಿಯ ಸಿದ್ಧತೆಗಳನ್ನು ಮಾಡಿಕೊಳ್ಳಲಾಗಿದ್ದು, ನಗರ ವ್ಯಾಪ್ತಿಯಲ್ಲಿ ಶೇ 72ರಷ್ಟು ಮ್ಯಾಪಿಂಗ್ ಕಾರ್ಯ ಪೂರ್ಣಗೊಂಡಿದೆ ಎಂದು ಜಿಬಿಎ ಮುಖ್ಯ ಆಯುಕ್ತ ಮಹೇಶ್ವರ್ ರಾವ್ ತಿಳಿಸಿದರು.

ಉಳಿದಿರುವ ಮ್ಯಾಪಿಂಗ್ ಕಾರ್ಯವನ್ನು ತ್ವರಿತಗತಿಯಲ್ಲಿ ಪೂರ್ಣಗೊಳಿಸಲು ಸಿಬ್ಬಂದಿಗೆ ಸೂಚನೆ ನೀಡಲಾಗಿದೆ ಎಂದು ಪತ್ರಿಕಾಗೋಷ್ಠಿಯಲ್ಲಿ ಗುರುವಾರ ಮಾಹಿತಿ ನೀಡಿದರು.

ಬೂತ್ ಮಟ್ಟದ ಅಧಿಕಾರಿಗಳು ಮನೆ-ಮನೆಗೆ ಭೇಟಿ ನೀಡಿ ಪರಿಶೀಲನೆ ನಡೆಸಿ, ನಮೂನೆಗಳ ಮೂಲಕ ಅಗತ್ಯ ಮಾಹಿತಿಯನ್ನು ಸಂಗ್ರಹಿಸಲಿದ್ದಾರೆ. ಇದಕ್ಕೆ ನಾಗರಿಕರು ಸಂಪೂರ್ಣ ಸಹಕಾರ ನೀಡಬೇಕು. ಬಳಿಕ ದತ್ತಾಂಶವನ್ನು ಪರಿಶೀಲಿಸಿ, ತಾಳೆ ಮಾಡಿ ಕರಡು ಮತದಾರರ ಪಟ್ಟಿಯನ್ನು ಪ್ರಕಟಿಸಲಾಗುವುದು ಎಂದು ತಿಳಿಸಿದರು.

ಅರ್ಹ ಮತದಾರರು, ಮತದಾನದ ಹಕ್ಕಿನಿಂದ ವಂಚಿತರಾಗಬಾರದು. ಅಲ್ಲದೆ ಅನರ್ಹರ ಹೆಸರು ಮತದಾರರ ಪಟ್ಟಿಯಲ್ಲಿ ಉಳಿಯದಂತೆ ನೋಡಿಕೊಳ್ಳುವ ಉದ್ದೇಶದಿಂದ ಭಾರತೀಯ ಚುನಾವಣಾ ಆಯೋಗವು ಎಸ್‌ಐಆರ್ ಹಮ್ಮಿಕೊಂಡಿದೆ. ಚುನಾವಣಾ ಆಯೋಗದ ಮಾರ್ಗಸೂಚಿಗಳ ಅನುಸಾರ ಪರಿಷ್ಕರಣೆ ಕಾರ್ಯಗಳನ್ನು ಕೈಗೊಳ್ಳಲಾಗುತ್ತಿದೆ ಎಂದು ಹೇಳಿದರು.

ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ-2026ರ ಪೂರ್ವಭಾವಿ ಚಟುವಟಿಕೆಯ ಅಂಗವಾಗಿ 2002ರ ಮತದಾರರ ಪಟ್ಟಿಗೆ 2025ರ ಮತದಾರರ ಪಟ್ಟಿಯನ್ನು ಮ್ಯಾಪಿಂಗ್ ಮಾಡುವ ಕಾರ್ಯ ಪ್ರಗತಿಯಲ್ಲಿದೆ. ಮುಖ್ಯ ಚುನಾವಣಾಧಿಕಾರಿ ನಿರ್ದೇಶನದಂತೆ 2026ರ ಜೂನ್ 16ರಂದು 'ಇ-ರೋಲ್ ಫ್ರೀಜ್' ಆಗಲಿದೆ. ಈ ಅವಧಿಯೊಳಗೆ ಬಾಕಿ ಉಳಿದಿರುವ ನಮೂನೆ-6, 6ಎ, 7 ಹಾಗೂ 8ರ ಅರ್ಜಿಗಳನ್ನು ವಿಲೇವಾರಿ ಮಾಡಲು ಅಗತ್ಯ ಕ್ರಮ ಕೈಗೊಳ್ಳಲಾಗುವುದು ಎಂದು ಮಾಹಿತಿ ನೀಡಿದರು.

ಮನೆ-ಮನೆ ಸಮೀಕ್ಷೆ ಕಾರ್ಯ ಆರಂಭಿಸುವ ಮುನ್ನ ಮತದಾರರ ನೋಂದಣಾಧಿಕಾರಿಗಳು ಹಾಗೂ ಬೂತ್ ಮಟ್ಟದ ಅಧಿಕಾರಿಗಳು ಬೂತ್ ಮಟ್ಟದ ಏಜೆಂಟ್‌ರೊಂದಿಗೆ ಸಭೆ ನಡೆಸಿ, ಎಸ್‌ಐಆರ್ ವೇಳಾಪಟ್ಟಿ ಹಾಗೂ ಕಾರ್ಯಚಟುವಟಿಕೆಗಳ ಕುರಿತು ಮಾಹಿತಿ ನೀಡಲಿದ್ದಾರೆ. ರಾಜಕೀಯ ಪಕ್ಷಗಳು ಎಸ್‌ಐಆರ್ ಕಾರ್ಯಚಟುವಟಿಕೆಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಲು ಆಯೋಗವು ಅವಕಾಶ ಕಲ್ಪಿಸಿದೆ. ಕರಡು ಮತದಾರರ ಪಟ್ಟಿ ಪ್ರಕಟಿಸುವವರೆಗೆ ಪ್ರತಿದಿನ 50 ನಮೂನೆಗಳನ್ನು ಬಿಎಲ್‌ಒಗಳಿಗೆ ಸಲ್ಲಿಸಲು ಅವಕಾಶವಿದ್ದು, ಕರಡು ಮತದಾರರ ಪಟ್ಟಿ ಪ್ರಕಟವಾದ ನಂತರ ದಿನಕ್ಕೆ 10 ನಮೂನೆಗಳನ್ನು ಮೀರದಂತೆ ಸಲ್ಲಿಸಲು ಅವಕಾಶವಿರುತ್ತದೆ ಎಂದರು.

ನಗರದಲ್ಲಿ ಎಸ್‌ಐಆರ್ ಕುರಿತು ನಾಗರಿಕರಲ್ಲಿ ಅರಿವು ಮೂಡಿಸಲು ಎಲ್ಲಾ ನಗರ ಪಾಲಿಕೆಗಳಲ್ಲಿ ಐಇಸಿ ಹಾಗೂ ಸ್ವೀಪ್ ಚಟುವಟಿಕೆಗಳನ್ನು ಆರಂಭಿಸಲು ನಿರ್ದೇಶನ ನೀಡಲಾಗುವುದು. ಅಲ್ಲದೆ, ಆಟೊ ಟಿಪ್ಪರ್‌ಗಳಲ್ಲಿ ಧ್ವನಿವರ್ಧಕಗಳ ಮೂಲಕ ಜಾಗೃತಿ ಮೂಡಿಸುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುವುದು ಎಂದು ತಿಳಿಸಿದರು.

ಮಾಹಿತಿ ಇಲ್ಲ: 'ನಗರವನ್ನು ನಾಲ್ಕು ಜಿಲ್ಲೆಗಳನ್ನಾಗಿ ವಿಂಗಡಿಸಿ ಎಸ್‌ಐಆರ್ ವ್ಯಾಪ್ತಿ ಗುರುತಿಸಲಾಗಿದೆ. ತಲಾ ಏಳು ವಿಧಾನಸಭೆ ಕ್ಷೇತ್ರಗಳನ್ನೊಯ ಜಿಲ್ಲೆಗಳನ್ನು ಗುರುತಿಸಲಾಗಿದೆ' ಎಂದು ಜಿಬಿಎ ಚುನಾವಣೆ ವಿಭಾಗದ ಸಹಾಯಕ ಆಯುಕ್ತರಾದ ಎಂ. ಶ್ರೀನಿವಾಸ ಮಾಹಿತಿ ನೀಡಿದರು.

'ಯಾವ ಜಿಲ್ಲೆಯಲ್ಲಿ ಯಾವ ವಿಧಾನ ಸಭೆ ಕ್ಷೇತ್ರಗಳು ಬರುತ್ತವೆ ಎಂಬ ಮಾಹಿತಿ ಶ್ರೀನಿವಾಸ್ ಅವರ ಬಳಿ ಲಭ್ಯವಿರಲಿಲ್ಲ. 'ಸಾರ್ವಜನಿಕ ಸಂಪರ್ಕಾಧಿಕಾರಿಯನ್ನು ಸಂಪರ್ಕಿಸಿ' ಎಂದು ಪ್ರತಿಕ್ರಿಯಿಸಿದರು.

ಸುದ್ದಿ 2 ನಿಮಿಷ


'ಕಾರ್ಮಿಕರ ವಜಾ ಕಾನೂನುಬಾಹಿರ'

ಬೆಂಗಳೂರು: 'ಕರ್ನಾಟಕ ಮಲ್ಪಾನಿ ಬಯೋಟೆಕ್ ಲಿಮಿಟೆಡ್'ನ (ಪ್ರಸ್ತುತ ಎಂಬಿಯೋ ಲಿಮಿಟೆಡ್) ಮಂಡ್ಯ ಶಾಖೆಯ 84 ಮಂದಿ ಕಾರ್ಮಿಕರನ್ನು ಸೇವೆಯಿಂದ ವಜಾಗೊಳಿಸಿರುವುದು ಕಾನೂನು ಬಾಹಿರ' ಎಂದು ಹೈಕೋರ್ಟ್ ಸಾರಿದೆ.

ಕಾರ್ಮಿಕರನ್ನು ಸೇವೆಯಿಂದ ವಜಾಗೊಳಿಸಿದ್ದ ಕಂಪನಿಯ ಕ್ರಮವನ್ನು ಎತ್ತಿಹಿಡಿದಿದ್ದ ಏಕಸದಸ್ಯ ನ್ಯಾಯಪೀಠದ ಆದೇಶ ಪ್ರಶ್ನಿಸಿ ಕಾರ್ಮಿಕ ಸಂಘಟನೆ ಸಲ್ಲಿಸಿದ್ದ ಮೇಲ್ಮನವಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಡಿ.ಕೆ. ಸಿಂಗ್ ನೇತೃತ್ವದ ವಿಭಾಗೀಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.

'ಕಾರ್ಮಿಕ ನ್ಯಾಯಮಂಡಳಿ ಹಾಗೂ ಏಕಸದಸ್ಯ ನ್ಯಾಯಪೀಠದ ಆದೇಶಗಳನ್ನು ರದ್ದುಗೊಳಿಸಲಾಗಿದೆ. ಪ್ರತಿಯೊಬ್ಬ ಸಂತ್ರಸ್ತ ಕಾರ್ಮಿಕನಿಗೆ ತಲಾ ₹3 ಲಕ್ಷ ಪರಿಹಾರವನ್ನು ಮುಂದಿನ 8 ವಾರದೊಳಗೆ ಪಾವತಿಸಬೇಕು' ಎಂದು ಕಂಪನಿಗೆ ನಿರ್ದೇಶಿಸಿದೆ.

ಪ್ರಕರಣವೇನು?: ಮಂಡ್ಯದ ಕೂಡಿನಕೆರೆ ಕೈಗಾರಿಕಾ ಪ್ರದೇಶದಲ್ಲಿರುವ ಅರ್ಜಿದಾರ ಸಂಸ್ಥೆಯು ಭಾರಿ ನಷ್ಟದ ನೆಪವೊಡ್ಡಿ 2009ರ ಜೂನ್ 22ರಂದು ಕಾರ್ಮಿಕರನ್ನು ತಾತ್ಕಾಲಿಕವಾಗಿ ವಜಾಗೊಳಿಸಿತ್ತು. ಬಳಿಕ ಆಗಸ್ಟ್ 6ರಂದು 84 ಮಂದಿಯನ್ನು ಕೆಲಸದಿಂದ ತೆಗೆದುಹಾಕಿತ್ತು. ಇದನ್ನು ಪ್ರಶ್ನಿಸಿ ಕಾರ್ಮಿಕ ಸಂಘಟನ ವ್ಯಾಜ್ಯ ನಡೆಸಿತ್ತು.



ಐಐಎಂಬಿ: 'ವಿಶಿಷ್ಟ ಹಳೆಯ ವಿದ್ಯಾರ್ಥಿಗಳ ಪ್ರಶಸ್ತಿ'

ಬೆಂಗಳೂರು: ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಬೆಂಗಳೂರು (ಐಐಎಂಬಿ) ವಿವಿಧ ಕ್ಷೇತ್ರಗಳಲ್ಲಿ ಅಸಾಧಾರಣ ಸಾಧನೆ ಮತ್ತು ಕೊಡುಗೆಗಳನ್ನು ನೀಡಿದ ತನ್ನ ಐವರು ಹಳೆ ವಿದ್ಯಾರ್ಥಿಗಳಿಗೆ 'ವಿಶಿಷ್ಟ ಹಳೆಯ ವಿದ್ಯಾರ್ಥಿಗಳ ಪ್ರಶಸ್ತಿ' (ಡಿಎಎ)-2026 ಘೋಷಿಸಿದೆ.

ಬೆಂಗಳೂರಿನ 'ಫುಟ್‌ಪಾತ್ ಮೇಯರ್' ಎಂದು ಜನಪ್ರಿಯವಾಗಿರುವ ಅರುಣ್ ಪೈ, ಎಸ್‌ಬಿಐ ಕಾರ್ಡ್ ವಿಭಾಗದ ಮುಖ್ಯ ಹಣಕಾಸು ಅಧಿಕಾರಿ ರಶ್ಮಿ ಮೊಹಂತಿ, ನೆಸ್ಲೆ ಇಂಡಿಯಾದ ವ್ಯವಸ್ಥಾಪಕ ನಿರ್ದೇಶಕ ಮತ್ತು ಅಧ್ಯಕ್ಷ ಮನೀಶ್ ತಿವಾರಿ, ಬ್ಲೂಮ್ ವೆಂಚರ್ಸ್‌ನ ಸಹ-ಸಂಸ್ಥಾಪಕ ಮತ್ತು ವ್ಯವಸ್ಥಾಪಕ ಪಾಲುದಾರ ಕಾರ್ತಿಕ್ ರೆಡ್ಡಿ ಮತ್ತು ಹ್ಯಾವೆಲ್ಸ್‌ನ ಮುಖ್ಯ ಟ್ರಸ್ಟ್ ಅಧಿಕಾರಿ ದೀಪೇಶ್ ಶಾ ಅವರು ಪ್ರಶಸ್ತಿ ಪುರಸ್ಕೃತರಾಗಿದ್ದಾರೆ.

ಜೂನ್ 14ರಂದು ನಡೆಯುವ ಕಾರ್ಯಕ್ರಮದಲ್ಲಿ ಪ್ರಶಸ್ತಿಗಳನ್ನು ಪ್ರದಾನ ಮಾಡಲಾಗುವುದು ಎಂದು ಪ್ರಕಟಣೆ ತಿಳಿಸಿದೆ.

ಜೀವನದ ಗುಣಮಟ್ಟವೂ ಸುಧಾರಣೆ: ಐಐಎಸ್‌ಸಿ ಅಧ್ಯಯನ ವರದಿ

'ಮೆಟ್ರೊ ಹಳದಿ ಮಾರ್ಗ: ಆರೋಗ್ಯ ಸುಧಾರಣೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಮ್ಮ ಮೆಟ್ರೊ ಹಳದಿ ಮಾರ್ಗದಲ್ಲಿ ರೈಲು ಸಂಚಾರ ಆರಂಭವಾಗಿರುವುದರಿಂದ ಜನರ ಆರೋಗ್ಯ ಮತ್ತು ಜೀವನಮಟ್ಟ ಸುಧಾರಣೆಯಾಗಬಲ್ಲದು ಎಂದು ಐಐಎಸ್‌ಸಿ ಅಧ್ಯಯನ ವರದಿ ಹೇಳಿದೆ.

ಸಾರ್ವಜನಿಕ ಆರೋಗ್ಯ, ಯೋಗ ಕ್ಷೇಮಮತ್ತು ನಗರ ವಾಸಯೋಗ್ಯಕ್ಕೆ ಸಂಬಂಧಿಸಿದಂತೆ ರಾಷ್ಟ್ರೀಯ ವಿದ್ಯಾಲಯ (ಆರ್‌ವಿ) ರಸ್ತೆ ಮತ್ತು ಬೊಮ್ಮಸಂದ್ರ ಸಂಪರ್ಕಿಸುವ ನಮ್ಮ ಮೆಟ್ರೊ ಹಳದಿ ಮಾರ್ಗದ ಸಂಭಾವ್ಯ ಪರಿಣಾಮಗಳ ಕುರಿತು ಭಾರತೀಯ ವಿಜ್ಞಾನ ಸಂಸ್ಥೆಯ (ಐಐಎಸ್‌ಸಿ) ಸುಸ್ಥಿರ ಸಾರಿಗೆ ಪ್ರಯೋಗಾಲಯ ನಡೆಸಿದ ಅಧ್ಯಯನದ ವಿವರಗಳನ್ನು ಬಯೋಕಾನ್ ಗ್ರೂಪ್‌ನ ಕಾರ್ಪೊರೇಟ್ ಸಾಮಾಜಿಕ ಹೊಣೆಗಾರಿಕೆ (ಸಿಎಸ್‌ಆರ್) ವಿಭಾಗವಾಗಿರುವ ಬಯೋಕಾನ್ ಫೌಂಡೇಷನ್ ಬಹಿರಂಗಪಡಿಸಿದೆ.

> **ಗಾಳಿಯ ಗುಣಮಟ್ಟ, ಆರೋಗ್ಯ ಮತ್ತು ಜೀವನದ ಗುಣಮಟ್ಟ ಸುಧಾರಿಸಲು ಸಾರ್ವಜನಿಕ ಸಾರಿಗೆ ಹೂಡಿಕೆಗಳನ್ನು ಪರಿಗಣಿಸುವುದರ ಮೇಲೆ ಅಧ್ಯಯನ ವರದಿ ಬೆಳಕು ಚೆಲ್ಲುತ್ತದೆ.**
> **ಆಶಿಶ್ ವರ್ಮಾ,** ಸಂಶೋಧಕ, ಐಐಎಸ್‌ಸಿ ಸುಸ್ಥಿರ ಸಾರಿಗೆ ಪ್ರಯೋಗಾಲಯದ ಸಂಚಾಲಕ

ಭಾರತೀಯ ವಿಜ್ಞಾನ ಸಂಸ್ಥೆಯಲ್ಲಿ (ಐಐಎಸ್‌ಸಿ) ಸಾರಿಗೆ ವ್ಯವಸ್ಥೆಗಳ ಎಂಜಿನಿಯರಿಂಗ್ ಪ್ರಾಧ್ಯಾಪಕ ಮತ್ತು 'ಐಐಎಸ್‌ಸಿ' ಸುಸ್ಥಿರ ಸಾರಿಗೆ ಪ್ರಯೋಗಾಲಯದ ಸಂಚಾಲಕ ಪ್ರೊ. ಆಶಿಶ್ ವರ್ಮಾ ಅಧ್ಯಯನದ ನೇತೃತ್ವ ವಹಿಸಿದ್ದರು. ತಂಡವು 2025ರ ಸೆಪ್ಟೆಂಬರ್‌ನಲ್ಲಿ ಮೆಟ್ರೊ ಹಳದಿ ಮಾರ್ಗದಲ್ಲಿ 600 ಪ್ರಯಾಣಿಕರು ಮತ್ತು ನಿವಾಸಿಗಳ ಸಮೀಕ್ಷೆ ನಡೆಸಿತ್ತು. ಮೆಟ್ರೊ ಸೇವೆ ಪ್ರಾರಂಭವಾದ ಆರು ತಿಂಗಳ ನಂತರ 2026ರ ಮಾರ್ಚ್‌ನಲ್ಲಿಯೂ ಸಮೀಕ್ಷೆ ನಡೆಸಲಾಗಿತ್ತು ಎಂದು ಬಯೋಕಾನ್ ಫೌಂಡೇಷನ್‌ನ ಮಿಷನ್ ಡೈರೆಕ್ಟರ್ ಅನುಪಮಾ ಶೆಟ್ಟಿ ತಿಳಿಸಿದ್ದಾರೆ.

ಸಮೀಕ್ಷೆಗೆ ಪ್ರತಿಕ್ರಿಯಿಸಿದವರಲ್ಲಿ ಶೇಕಡ 83ರಷ್ಟು ಜನರು ನಿತ್ಯದ ಅಗತ್ಯಗಳಿಗಾಗಿ ಇತರ ಸಾರಿಗೆ ವಿಧಾನಗಳ ಬದಲಿಗೆ ಹಳದಿ ಮಾರ್ಗದ ಮೆಟ್ರೊಗೆ ಬದಲಾಯಿಸಲು ಇಚ್ಛೆ ವ್ಯಕ್ತಪಡಿಸಿದ್ದಾರೆ. ಮೆಟ್ರೊ ಬಳಕೆಯು ಹೆಚ್ಚುವರಿ ನಡಿಗೆ ಮೂಲಕ ದೈಹಿಕ ಚಟುವಟಿಕೆ ಹೆಚ್ಚಿಸಲು ಕೊಡುಗೆ ನೀಡುತ್ತಿದೆ. ವಾಯು ಮಾಲಿನ್ಯ ಮತ್ತು ಬಿಸಿಲಿಗೆ ಕಡಿಮೆ ಒಡ್ಡಿಕೊಳ್ಳುವಿಕೆ, ಸುಧಾರಿತ ಮಾನಸಿಕ ಯೋಗಕ್ಷೇಮ, ಸಾಮಾಜಿಕ ಸಂಪರ್ಕ ಹೆಚ್ಚಳ, ಕೆಲಸದ ಉತ್ಪಾದಕತೆ ಹೆಚ್ಚಳ ಮತ್ತು ದ್ವಿಚಕ್ರ ವಾಹನಗಳ ಮೇಲಿನ ಅವಲಂಬನೆ ತಗ್ಗಿಸಿ, ರಸ್ತೆ ಅಪಘಾತದ ಅಪಾಯವನ್ನು ಕಡಿಮೆ ಮಾಡುವುದರ ಮೇಲೆಯೂ ಈ ಅಧ್ಯಯನವು ಬೆಳಕು ಚೆಲ್ಲಿದೆ.

ಮೆಟ್ರೊ ಹಾಗೂ ನಗರ ಸಾರಿಗೆ ಬಸ್ ನಿಲ್ದಾಣಗಳ ಮಧ್ಯೆ ಸಂಪರ್ಕ ಕಲ್ಪಿಸುವ ಫೀಡರ್ ಸೇವೆಗಳು, ಪ್ರಯಾಣಿಕರಿಗೆ ಹೆಚ್ಚುವರಿ ಬಸ್ ಸೌಲಭ್ಯ, ಕೊನೆಯ ಮೈಲಿ ಸಂಪರ್ಕ ಬಲಪಡಿಸುವಿಕೆ, ಸುರಕ್ಷಿತವಾಗಿ ನಿಲ್ದಾಣ ಪ್ರವೇಶಿಸಲು ಪಾದಚಾರಿ ಮಾರ್ಗ ನವೀಕರಿಸಬೇಕು ಎಂದು ಶಿಫಾರಸು ಮಾಡಿದೆ. ಸಾರ್ವಜನಿಕ ಆರೋಗ್ಯಕ್ಕೆ ಸಂಬಂಧಿಸಿದ ಕಾಳಜಿ ಪರಿಗಣಿಸುವುದನ್ನು ಸಾರಿಗೆ ಯೋಜನೆಯಲ್ಲಿ ಸಂಯೋಜಿಸುವುದು ಮತ್ತು ಜನರು ಮಾಲಿನ್ಯಕ್ಕೆ ಒಡ್ಡಿಕೊಳ್ಳುವುದನ್ನು ಕಡಿಮೆ ಮಾಡುವ ಮೆಟ್ರೊ ಸೌಲಭ್ಯ ವಿಸ್ತರಣೆ, ಮಾನಸಿಕ ಮತ್ತು ಸಾಮಾಜಿಕ ಯೋಗಕ್ಷೇಮ ಹೆಚ್ಚಿಸುವ ಸುಸ್ಥಿರ ಸಾರಿಗೆ ವಿಧಾನವಾಗಿ ಉತ್ತೇಜಿಸುವ ಅಗತ್ಯ ಇದೆ ಎಂದೂ ಅಧ್ಯಯನ ಶಿಫಾರಸು ಮಾಡಿದೆ.

'ಸಾರ್ವಜನಿಕ ಆರೋಗ್ಯ ಮತ್ತು ಜೀವನದ ಗುಣಮಟ್ಟದ ಮೇಲೆ ಮೆಟ್ರೊ ಹಳದಿ ಮಾರ್ಗದ ಸಮೂಹ ಕ್ಷಿಪ್ರ ಸಾರಿಗೆ (ಎಂಆರ್‌ಟಿ) ವ್ಯವಸ್ಥೆಯ ಪ್ರಭಾವದ ಮೌಲ್ಯಮಾಪನ; ನಗರದ ಸುಸ್ಥಿರ ಸಂಚಾರ ಗ್ರಹಿಕೆ' ಶೀರ್ಷಿಕೆಯ ಅಧ್ಯಯನ ನಡೆಸಲು ಬಯೋಕಾನ್ ಫೌಂಡೇಷನ್ ಹಣಕಾಸು ನೆರವು ಒದಗಿಸಿತ್ತು.

ಆಶಿಶ್ ವರ್ಮಾ ನೇತೃತ್ವದ ಅಧ್ಯಯನದ ತಂಡದಲ್ಲಿ ಪ್ರಿಯಾಂಕಾ ದಾಸ್, ಆ್ಯನ್ ದಾಸ್, ಐಸಾಕ್ ಸೆಂಟರ್ ಫಾರ್ ಪಬ್ಲಿಕ್ ಹೆಲ್ತ್, ಐಐಎಸ್‌ಸಿಯ ಪ್ರಭ್‌ದೀಪ್ ಕೌರ್, ಲಂಡನ್‌ನ ಇಂಪೀರಿಯಲ್ ಕಾಲೇಜಿನ ಅರುಣಾ ಶಿವಕುಮಾರ್ ಭಾಗವಹಿಸಿದ್ದರು.

ಅತಿಥಿ ಶಿಕ್ಷಕರ ಹುದ್ದೆಗೆ ಅರ್ಜಿ

ದೇವನಹಳ್ಳಿ: ಸಮಾಜ ಕಲ್ಯಾಣ ಇಲಾಖೆ ವ್ಯಾಪ್ತಿಯಲ್ಲಿ ಜಿಲ್ಲೆಯ ವಿವಿಧ ವಸತಿ ಶಾಲೆಗಳಲ್ಲಿ ತಾತ್ಕಾಲಿಕವಾಗಿ ಗೌರವಧನ ಆಧಾರದ ಮೇಲೆ ಅತಿಥಿ ಶಿಕ್ಷಕರನ್ನು ನೇಮಕ ಮಾಡಿಕೊಳ್ಳಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

ಕನ್ನಡ, ಇಂಗ್ಲಿಷ್, ಹಿಂದಿ, ಗಣಿತ, ವಿಜ್ಞಾನ, ಸಮಾಜ ವಿಜ್ಞಾನ, ಗಣಕಯಂತ್ರ ಹಾಗೂ ದೈಹಿಕ ಶಿಕ್ಷಣ ವಿಷಯಗಳಲ್ಲಿ ಅರ್ಹತೆ ಹೊಂದಿರುವವರು ಜೂನ್ 10ರೊಳಗೆ ಅರ್ಜಿ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗಾಗಿ ಮೊ.9845308319ಗೆ ಸಂಪರ್ಕಿಸಲು ಪ್ರಕಟಣೆ ತಿಳಿಸಿದೆ.

ನಿವೇಶನ ವಿಭಜನೆ, ವಿಲೀನಕ್ಕೆ ಅವಕಾಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರ ವ್ಯಾಪ್ತಿಯಲ್ಲಿ ನಿವೇಶನಗಳ ವಿಭಜನೆ ಹಾಗೂ ಒಂದುಗೂಡಿಸುವಿಕೆ (ವಿಲೀನ) ಪ್ರಕ್ರಿಯೆಯನ್ನು ಮರುಪ್ರಾರಂಭಿಸಲು, ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಯೋಜನಾ ಪ್ರದೇಶಕ್ಕೆ ನಿಯಮಗಳನ್ನು ರೂಪಿಸಿ, ನಗರಾಭಿವೃದ್ಧಿ ಇಲಾಖೆ ಕರಡು ಅಧಿಸೂಚನೆ ಹೊರಡಿಸಿದೆ.

'ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ -2015'ರ ಸೆಕ್ಷನ್ 13-ಇಗೆ ತಿದ್ದುಪಡಿ ತಂದು, ಪರಿಷ್ಕೃತ ಮಾಸ್ಟರ್ ಪ್ಲಾನ್-2015ರ ವಲಯ ನಿಯಮಗಳನ್ನು 'ಜಿಬಿಎ ಯೋಜನಾ ಪ್ರದೇಶಕ್ಕೆ (ತಿದ್ದುಪಡಿ) ನಿಯಮಗಳು-2026 ಎಂಬುದಾಗಿ ಅಧಿಸೂಚನೆ ಹೊರಡಿಸಿದ್ದು, ಆಕ್ಷೇಪಣೆ ಸಲ್ಲಿಸಲು 30 ದಿನ ಅವಕಾಶ ನೀಡಲಾಗಿದೆ.

ನಗರದ ವ್ಯಾಪ್ತಿಯಲ್ಲಿ ಹಲವು ವರ್ಷಗಳಿಂದ ನಿವೇಶನ ವಿಭಜನೆ ಹಾಗೂ ವಿಲೀನ ಪ್ರಕ್ರಿಯೆಯನ್ನು ನಿಲ್ಲಿಸಲಾಗಿತ್ತು. ಇದೀಗ ಅದಕ್ಕಾಗಿ ಹೊಸ ನಿಯಮಗಳನ್ನು ರೂಪಿಸಲಾಗಿದ್ದು, ಇ-ಖಾತಾ ಹೊಂದಿರುವ ಗರಿಷ್ಠ 2,500 ಚದರ ಮೀಟರ್ ನಿವೇಶನವನ್ನು ವಿಭಜನೆ ಮಾಡಿಕೊಳ್ಳಬಹುದಾಗಿದೆ.

ವಿಭಜನೆಗೆ ನಿಯಮಗಳು

- ಖಾಲಿ ನಿವೇಶನ,ಕಟ್ಟಡವಿರುವ ನಿವೇಶನ ಎ-ಖಾತಾ (ಇ-ಖಾತಾ) ಹೊಂದಿರಬೇಕು.
- ನೋಂದಾಯಿತ ನಗರ ಯೋಜಕ/ ಆರ್ಕಿಟೆಕ್ಟ್/ ಎಂಜಿನಿಯರ್ ನಿವೇಶನದ ಕುಟುಂಬ ವಿಭಜನೆ ನಕ್ಷೆಯನ್ನು ನಿಯಮದಂತೆ ರಚಿಸಿ, ಸಲ್ಲಿಸಬೇಕು
- ಗರಿಷ್ಠ 2000 ಚದರ ಮೀಟರ್‌ವರೆಗಿನ ನಿವೇಶನವನ್ನು ಮಾತ್ರ ವಿಭಜನೆ ಮಾಡಬಹುದು
- ವಿಭಜನೆಗೊಂಡ ಪ್ರತಿಯೊಂದು ನಿವೇಶನವೂ ರಸ್ತೆ ಹೊಂದಿದ್ದು, ಆ ಬದಿಗೆ ಕನಿಷ್ಠ 6 ಮೀಟರ್ ಹೊಂದಿರಬೇಕು. ಪ್ರತಿ ನಿವೇಶನದ ವಿಸ್ತೀರ್ಣ ಕನಿಷ್ಠ 50 ಚದರ ಮೀಟರ್ ಇರಬೇಕು.
- ಎ ಖಾತಾ ಇಲ್ಲದ ನಿವೇಶನಗಳು ವಿಭಜನೆಯಾಗಬೇಕಾದರೆ ಮಾರ್ಗಸೂಚಿ ದರದ ಶೇ 5ರಷ್ಟು ಶುಲ್ಕವನ್ನು ನಗರ ಪಾಲಿಕೆಗೆ ಪಾವತಿಸಬೇಕು

ಇದಕ್ಕೆ ಅಗತ್ಯವಾದ ಶುಲ್ಕವನ್ನು ಸರ್ಕಾರ ಮುಂದಿನ ದಿನಗಳಲ್ಲಿ ನಿಗದಿಪಡಿಸಲಿದೆ.

ಇ-ಖಾತಾ ಹೊಂದಿರುವ ಅಕ್ಕ-ಪಕ್ಕವಿರುವ ಎರಡು ಕಟ್ಟಡ- ನಿವೇಶನಗಳನ್ನು ಮಾತ್ರ ವಿಲೀನಗೊಳಿಸಿಕೊಳ್ಳಲು ಅವಕಾಶ ಕಲ್ಪಿಸಲಾಗಿದೆ. ನೀರುಗಾಲುವೆಗಳು ಎರಡು ನಿವೇಶನಗಳ ಮಧ್ಯೆ ಇದ್ದರೆ, ಬಫರ್ ವಲಯವನ್ನು ಹೊರತುಪಡಿಸಿ ಒಂದುಗೂಡಿಸಲು ಅವಕಾಶವಿದೆ. ಎರಡು ಅಥವಾ ಹೆಚ್ಚಿನ ನಿವೇಶನ-ಕಟ್ಟಡಗಳು ವಿಲೀನ ಆದ ಮೇಲೆ ಒಂದೇ ಆಸ್ತಿ ಐಡಿ ನೀಡಲಾಗುತ್ತದೆ.

ವಿಭಜನೆ ಹಾಗೂ ವಿಲೀನದ ಜೊತೆಗೆ ಇನ್ನಷ್ಟು ಹೊಸ ನಿಯಮಗಳನ್ನು, ವಿವರಣೆಗಳನ್ನು ಪ್ರಕಟಿಸಲಾಗಿದೆ. ಮೊದಲನೇ ಅಂತಸ್ತು ಎಂದರೆ, ನೆಲ ಅಂತಸ್ತು ಅಥವಾ ಸ್ಟಿಲ್ಟ್ ಅಂತಸ್ತಿನ ಮೇಲಿರುವುದು ಎಂದು ಸ್ಪಷ್ಟಪಡಿಸಲಾಗಿದೆ. 'ಹೈರೈಸ್ ಬಿಲ್ಡಿಂಗ್' ಎಂದರೆ, 21 ಮೀಟರ್ ಅಥವಾ ಅದಕ್ಕಿಂತ ಹೆಚ್ಚು ಎತ್ತರದ ಕಟ್ಟಡ ಎಂದು ಹೇಳಲಾಗಿದೆ. 6000 ಚದರ ಮೀಟರ್‌ಗಿಂತ ಹೆಚ್ಚಿನ ಪಾರ್ಕಿಂಗ್ ಬೇಸ್‌ಮೆಂಟ್ ಅಥವಾ ಯಾವುದೇ ಅಂತಸ್ತಿನಲ್ಲಿರುವ ಪ್ರದೇಶಕ್ಕೆ ಲಿಫ್ಟ್/ ಕಂಪ್ಯೂಟರೈಸ್ಡ್/ ಯಾಂತ್ರೀಕೃತ/ ಹೈಡ್ರಾಲಿಕ್ ಯಂತ್ರವನ್ನು ಅಳವಡಿಸಲು ಅನುಮತಿಸಲಾಗಿದೆ. ರ‍್ಯಾಂಪ್ ಅಳವಡಿಕೆಯಲ್ಲಿ ಅದರ ವಿಸ್ತೀರ್ಣ, ಸಂಖ್ಯೆಯಲ್ಲಿ ಕೆಲವು ಮಾರ್ಪಾಡು ತರಲಾಗಿದೆ.

ನಾಲ್ವರಿಗೆ ವನ್ಯಜೀವಿ ಸೇವಾ ಪ್ರಶಸ್ತಿ

ಬೆಂಗಳೂರು: ನಗರದ ಟೈಗರ್ ಕಪ್ ಕ್ರಿಕೆಟರ್ಸ್ ಫಾರ್ ವೈಲ್ಡ್‌ಲೈಫ್ ಕನ್ಸರ್ವೇಷನ್ ಸಂಸ್ಥೆಯು ನೀಡುವ 2026ನೇ ಸಾಲಿನ ವನ್ಯಜೀವಿ ಸೇವಾ ಪ್ರಶಸ್ತಿಗೆ ಅರಣ್ಯ ಇಲಾಖೆಯ ನಾಲ್ವರು ಗಸ್ತು ಪಾಲಕರು ಆಯ್ಕೆಯಾಗಿದ್ದಾರೆ.

ಬನ್ನೇರು ಘಟ್ಟ ರಾಷ್ಟ್ರೀಯ ಉದ್ಯಾನದ ಇ.ವಿನಯ್ ಕುಮಾರ್, ಮೈಸೂರಿನ ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶದ ವೀರನಹೊಸಹಳ್ಳಿ ವಲಯದ ವೆಂಕಟೇಶ್, ಬಿಳಿಗಿರಿರಂಗನಬೆಟ್ಟದ ಕೊಳ್ಳೇಗಾಲ ವಲಯದ ಸುನಿಲ್ ವಿ.ಬೆಳವಿ, ಕಾವೇರಿ ವನ್ಯಜೀವಿಧಾಮದ ಶರಣಪ್ಪ ಆಯ್ಕೆಯಾದವರು. ಇದರೊಂದಿಗೆ ಪರಿಸರ ಸಂರಕ್ಷಣೆಗೆ ನೀಡಿದ ಸೇವೆಗೆ ವಿಜ್ಞಾನಿ ಅವಿನಾಶ್ ಕೃಷ್ಣನ್, ವನ್ಯಜೀವಿ ತಜ್ಞ ಜಿ.ಮಲ್ಲೇಶಪ್ಪ ಅವರಿಗೂ ಸೇವಾ ಪ್ರಶಸ್ತಿ ನೀಡಲಾಗುತ್ತಿದೆ. ಜೂನ್ 6ರಂದು ಸಂಜೆ 4ಕ್ಕೆ ಎಂ.ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಕೆಎಸ್‌ಸಿಎ ಅಧ್ಯಕ್ಷ ಬಿ.ಕೆ.ವೆಂಕಟೇಶ್ ಪ್ರಸಾದ್ ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ ಎಂದು ಸಂಸ್ಥೆಯ ಜೋಸೆಫ್ ಹೂವರ್ ತಿಳಿಸಿದ್ದಾರೆ.


ವೆಂಕಟೇಶ್


ಶರಣಪ್ಪ


ಸುನಿಲ್ ವಿ.ಬೆಳವಿ


ವಿನಯ್ ಕುಮಾರ್

ಮುಳ್ಳೂರು ನಾಗರಾಜ್ ಕಾವ್ಯ ಪ್ರಶಸ್ತಿಗೆ ಮಂಜುನಾಥ ಆಯ್ಕೆ

ಬೆಂಗಳೂರು: ರಂಗವಾಹಿನಿ ಸಂಸ್ಥೆ ನೀಡುವ 15ನೇ ವರ್ಷದ ಮುಳ್ಳೂರು ನಾಗರಾಜ ರಾಜ್ಯಮಟ್ಟದ ಕಾವ್ಯ ಪ್ರಶಸ್ತಿಗೆ ಕೋಲಾರ ಜಿಲ್ಲೆಯ ಲಕ್ಕೂರಿನ ಎಸ್. ಮಂಜುನಾಥ ಅವರ 'ಹೆಬ್ಬಿರುಳಿನ ನಿಬ್ಬೆರಗು' ಕವನ ಸಂಕಲನ ಆಯ್ಕೆಯಾಗಿದೆ.

ಪ್ರಶಸ್ತಿಯು ₹ 10 ಸಾವಿರ ನಗದು ಹಾಗೂ ಸ್ಮರಣಿಕೆಯನ್ನು ಒಳಗೊಂಡಿದ್ದು, ಜೂನ್ 28ರಂದು ಮೈಸೂರಿನಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ರಂಗವಾಹಿನಿ ಸಂಸ್ಥೆ ಅಧ್ಯಕ್ಷ ಸಿ.ಎಂ. ನರಸಿಂಹಮೂರ್ತಿ ತಿಳಿಸಿದ್ದಾರೆ.


ಮಂಜುನಾಥ

'ಮನುಷ್ಯ ಯುದ್ಧದ ಬಣ್ಣಗಳು', 'ಚಾಟಿಗೆ ಕಟ್ಟದ ಗೆಜ್ಜೆ', ಕವನ ಸಂಕಲನ, 'ಫಲಿತಾಕ್ಷರ', 'ವಿಷ ಘಮ್ಮಲು', 'ಕೀಯ ಕೀಯ ರಾಜಕೀಯ', 'ಪುಟ್ಟಿ', 'ಗುಲಾಬಿ ಗ್ಯಾಂಗ್', 'ಟೈಮ್ ಲೈನ್', 'ಫ್ರಿಡ್ಜ್‌ನಲ್ಲೇನಿದೆ', 'ಏಕತಂತಿ ಏಕನಾದ' ಎಂಬ ಬೀದಿ ನಾಟಕಗಳನ್ನು ರಚಿಸಿದ್ದಾರೆ. 'ಕೌದಿ' ಚಲನಚಿತ್ರಕ್ಕೆ ಗೀತ ರಚನೆ ಮಾಡಿದ್ದು, 'ಡಿಎನ್‌ಎ' ಮತ್ತು 'ಚೆಲುವಿನ ಪರಂಗಿ ಗಿಡಗಳು' ಚಿತ್ರಕ್ಕೆ ಸಂಭಾಷಣೆ ಬರೆದಿದ್ದಾರೆ.

ಪರಿವರ್ತನಾ ಸಮಾವೇಶದಲ್ಲಿ ಸಮತಾ ಸೈನಿಕ ದಳ ಅಧ್ಯಕ್ಷ ಎಂ. ವೆಂಕಟಸ್ವಾಮಿ

'ದಲಿತರಿಗೆ ಸಿ.ಎಂ ಸ್ಥಾನ ನೀಡಿದರೆ ಪ್ರಬುದ್ಧ ಕರ್ನಾಟಕ'


ಪ್ರಜಾವಾಣಿ ವಾರ್ತೆ

ಬೆಂಗಳೂರು: 'ದಲಿತರಿಗೆ ಉಪ ಮುಖ್ಯಮಂತ್ರಿ ಸ್ಥಾನ ನೀಡಿದರೆ ಯಾವುದೇ ಪ್ರಯೋಜನವಾಗುವುದಿಲ್ಲ. ಮುಖ್ಯಮಂತ್ರಿಯನ್ನಾಗಿ ಮಾಡಬೇಕು. ದಲಿತರು ಆಳುವ ವರ್ಗ ಆದಾಗ ಮಾತ್ರ ಸದೃಢ, ಸಮೃದ್ಧ, ಪ್ರಬುದ್ಧ ಕರ್ನಾಟಕ ರೂಪುಗೊಳ್ಳಲಿದೆ' ಎಂದು ಸಮತಾ ಸೈನಿಕ ದಳ ಅಧ್ಯಕ್ಷ ಎಂ. ವೆಂಕಟಸ್ವಾಮಿ ಹೇಳಿದರು.

ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ 142ನೇ ಜಯಂತಿ, ಎಂ. ವೆಂಕಟಸ್ವಾಮಿ ಅವರ 72ನೇ ಜನ್ಮದಿನದ ಪ್ರಯುಕ್ತ ಗುರುವಾರ ಹಮ್ಮಿಕೊಂಡಿದ್ದ ಪರಿವರ್ತನಾ ಸಮಾವೇಶದಲ್ಲಿ ಅವರು ಮಾತನಾಡಿದರು.

'ದಲಿತರಿಗೆ ಮುಖ್ಯಮಂತ್ರಿ ಸ್ಥಾನ ನೀಡಿ ಎಂದು ಕಳೆದ ಒಂದೂವರೆ ದಶಕದಿಂದ ಹೋರಾಟ ಮಾಡುತ್ತಾ ಬಂದಿದ್ದೇವೆ. ಈ ಬಾರಿ ಕಾಂಗ್ರೆಸ್ ಅಧಿಕಾರಕ್ಕೆ ಬರಲು ದಲಿತರೇ ಕಾರಣರಾಗಿದ್ದರು. ರಾಜಕೀಯ ಸನ್ನಿವೇಶ ಬದಲಾಗಿ ಮುಖ್ಯಮಂತ್ರಿ ರಾಜೀನಾಮೆ ನೀಡಿದಾಗ ಈಗಲಾದರೂ ದಲಿತರಿಗೆ ಆ ಸ್ಥಾನ ಕೊಡಿ ಎಂದು 10 ದಿನ ಹೋರಾಟ ಮಾಡಿದೆವು. ಆದರೆ ಉಪ ಮುಖ್ಯಮಂತ್ರಿ ಸ್ಥಾನ ನೀಡಿದ್ದಾರೆ' ಎಂದು ಬೇಸರ ವ್ಯಕ್ತಪಡಿಸಿದರು.

'ದಲಿತರಿಗಾಗಿ ಕಾರ್ಯಕ್ರಮ ರೂಪಿಸಿದ್ದೇವೆ ಎಂದು ಬೊಗಳೆ ಬಿಡುತ್ತಾ ಬರಲಾಗಿದೆ. ಎಸ್‌ಸಿಎಸ್‌ಪಿ-ಟಿಎಸ್‌ಪಿ ಅನುದಾನ, ಪಿಟಿಸಿಎಲ್ ಕಾಯ್ದೆ ಪ್ರಕರಣಗಳು ಯಾವುದೂ ದಲಿತರಿಗೆ ಉಪಯೋಗವಾಗಲಿಲ್ಲ. 12 ಸಾವಿರ ಗ್ರಾಮ ಸಹಾಯಕರನ್ನು ಕಾಯಂ ಮಾಡಲಿಲ್ಲ' ಎಂದು ದೂರಿದರು.


'ಸಮತಾ ಸೈನಿಕ ದಳ' ಆಯೋಜಿಸಿದ್ದ ಪರಿವರ್ತನಾ ಸಮಾವೇಶದಲ್ಲಿ ಡಾ.ಬಿ.ಆರ್ ಅಂಬೇಡ್ಕರ್ ಪುತ್ಥಳಿಗೆ ಹಾಗೂ ನಾಲ್ವಡಿ ಕೃಷ್ಣರಾಜ ಒಡೆಯರ್ ಭಾವಚಿತ್ರಕ್ಕೆ ಎಂ.ವೆಂಕಟಸ್ವಾಮಿ, ಬಿ.ಟಿ. ಲಲಿತಾ ನಾಯಕ್, ಇಂದಿರಾ ಕೃಷ್ಣಪ್ಪ, ಕ್ಷಮಾವತಿ, ಅಗ್ನಿ ಶ್ರೀಧರ್, ಸಾ.ರಾ. ಗೋವಿಂದು ಪುಷ್ಪ ನಮನ ಸಲ್ಲಿಸಿದರು —ಪ್ರಜಾವಾಣಿ ಚಿತ್ರ

ಸಾಹಿತಿ ಕೋಟಿಗಾನಹಳ್ಳಿ ರಾಮಯ್ಯ ಮಾತನಾಡಿ, 'ಬಿ. ಬಸವಲಿಂಗಪ್ಪ ಅವರು ಕನ್ನಡ ಸಾಹಿತ್ಯದಲ್ಲಿ ಬಹುತೇಕ ಇರುವುದು ಬೂಸಾ ಎಂದು ಹೇಳಿದ್ದೇ ದಲಿತ ಸಂಘರ್ಷ ಸಮಿತಿ ಹುಟ್ಟಲು ಕಾರಣವಾಯಿತು ಎಂದು ತೀರ ಸರಳ ರೇಖೆಯ ರೀತಿಯಲ್ಲಿ ಹೇಳಲಾಗುತ್ತಿದೆ. ಅದು ಕಾರಣವಾಗಿದ್ದು ನಿಜ. ಆದರೆ, ಅದಕ್ಕಿಂತ ಹಿಂದೆಯೇ ಕೋಲಾರ, ಮೈಸೂರು ಸಹಿತ ಅನೇಕ ಕಡೆಗಳಲ್ಲಿ ದಲಿತರು ಒಟ್ಟಾಗಿ ವೈಚಾರಿಕ ಸಂಘಟನೆಗಳನ್ನು ಕಟ್ಟಿಕೊಂಡು ಹೋರಾಟ ನಡೆಸುತ್ತಿದ್ದರು. ಅಂಥ ಕಿರುತೊರೆಗಳನ್ನು ಮರೆಯಬಾರದು' ಎಂದು ಹೇಳಿದರು.

ಡಾ. ಮನಮೋಹನ್‌ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾಲಯದ ಕುಲಪತಿ ಬಿ. ರಮೇಶ್ ಅವರಿಗೆ ನಾಲ್ವಡಿ ಕೃಷ್ಣರಾಜ ಒಡೆಯರ್ ಪ್ರಶಸ್ತಿ ಪ್ರದಾನ ಮಾಡಲಾಯಿತು. ಚಾಮರಾಜನಗರ ನಳಂದ ವಿಶ್ವವಿದ್ಯಾಲಯದ ಬಿಕ್ಕು ಬೋಧಿದತ್ತ ಭಂತೇಜಿ ಅವರು ಪಂಚಶೀಲ ತತ್ತ್ವ ಬೋಧಿಸಿದರು.


ಎಂ. ವೆಂಕಟಸ್ವಾಮಿ ಅವರು ಬರೆದ 'ಸಾಮಾಜಿಕ ನ್ಯಾಯ ಪರಿವರ್ತನೆಯ ಪ್ರವರ್ತಕ ನಾಲ್ವಡಿ ಕೃಷ್ಣರಾಜ ಒಡೆಯರ್', ಅವರ ಆತ್ಮಕಥೆ 'ಸಂಘಂ ಸರಣಂ ಗಚ್ಚಾಮಿ', ಬಿ.ಎಂ. ಸುಬ್ಬಯ್ಯ ಸಂಪಾದಿಸಿದ 'ಬೆಂಕಿಯ ಮಳೆ' ಹೋರಾಟದ ಹಾಡುಗಳ ಸಂಗ್ರಹ, ಶರಣ್ಯ, ಶ್ರೇಯ ಎನ್. ಮೂರ್ತಿ ಅವರ 'ಭಾರತದ ಸಂವಿಧಾನ' ಅನುವಾದಿತ ಕೃತಿಗಳನ್ನು ಜನಾರ್ಪಣೆ ಮಾಡಲಾಯಿತು. ಪ್ರತಿಭಾವಂತ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು.

ನಗರದಲ್ಲಿ ಇಂದು

ವಿಶ್ವ ಪರಿಸರ ದಿನಾಚರಣೆ: ಅತಿಥಿ: ಇಬ್ರಾಹಿಂ ಮೈಗೂರ, ಕೋನಾ ವಂಶಿ ಕೃಷ್ಣ, ಆಯೋಜನೆ: ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ, ರೋಟರಿ ಮೈಸೂರು ಸಮೃದ್ಧಿ, ಸ್ಥಳ: ಲಾಲ್‌ಬಾಗ್ ಪಶ್ಚಿಮ ದ್ವಾರ, ಬೆಳಿಗ್ಗೆ 7.30

ವಿಶ್ವ ಪರಿಸರ ದಿನಾಚರಣೆ: ಜಾಗೃತಿ ಕಾರ್ಯಕ್ರಮ, ಆಯೋಜನೆ: ವಾಯ್ಸ್ ಆಫ್ ಸದಾಶಿವನಗರ, ಸ್ಥಳ: ಸ್ಯಾಂಕಿ ಕೆರೆ, ಬೆಳಿಗ್ಗೆ 8.30

ಬಿಜಿಎಸ್ ಎಸಿಎಚ್ ಹಾಸ್ಪಿಟಲ್‌ನ ಸೂಪರ್ ಸ್ಪೆಷಾಲಿಟಿ ಕೇಂದ್ರದ ಉದ್ಘಾಟನೆ: ಸಾನ್ನಿಧ್ಯ: ನಿರ್ಮಲಾನಂದನಾಥ ಸ್ವಾಮೀಜಿ, ಅತಿಥಿ: ಗಜೇಂದ್ರಸಿಂಗ್ ಶೇಖಾವತ್, ಕೆ.ಗೋವಿಂದರಾಜು, ಸ್ಥಳ: ಬಿಜಿಎಸ್ ಎಂಸಿಎಚ್ ಕ್ಯಾಂಪಸ್, ನಾಗರೂರು, ಬೆಳಿಗ್ಗೆ 9


ನಿರ್ಮಲಾನಂದ ನಾಥ ಸ್ವಾಮೀಜಿ

5 ಕೋಟಿ ಸಸಿ ನೆಡುವ ಅಭಿಯಾನಕ್ಕೆ ಚಾಲನೆ: ವಿಭು ಬಖ್ರು, ಅನು ಶಿವರಾಮನ್, ಆಯೋಜನೆ: ಹೈಕೋರ್ಟ್, ಅರಣ್ಯ ಇಲಾಖೆ, ಸ್ಥಳ: ರಾಜ್ಯ ಪಶುವೈದ್ಯಕೀಯ ಪರಿಷತ್ ಸಭಾಂಗಣ, ಹೆಬ್ಬಾಳ, ಬೆಳಿಗ್ಗೆ 9.15

ಪ್ರಕೃತಿಯೊಡನೆ ನಡಿಗೆ ಮತ್ತು ಪರಿಸರ ದಿನಾಚರಣೆ: ಉದ್ಘಾಟನೆ: ಪ್ರೊ.ಎಸ್.ವಿ.ಸುರೇಶ, ರಾಜೇಶ್ ಎಸ್. ಕಲಾಜೆ, ಆಯೋಜನೆ: ಬೆಂಗಳೂರು ಕೃಷಿ ವಿಶ್ವವಿದ್ಯಾಲಯ, ಸ್ಥಳ: ಜಿಕೆವಿಕೆ, ಬೆಳಿಗ್ಗೆ 9.30

ಬೆಂಗಳೂರು ಹವಾಮಾನ ಸಮಾವೇಶ: ಆಯೋಜನೆ: ವಿಮೋವೇ ಫೌಂಡೇಷನ್, ಸ್ಥಳ: ಸಿಎಂಆರ್‌ಐಟಿ, ಎಇಸಿಎಸ್ ಬಡಾವಣೆ, ವೈಟ್ ಫೀಲ್ಡ್, ಬೆಳಿಗ್ಗೆ 10

ವಿಶ್ವ ಪರಿಸರ ದಿನಾಚರಣೆ ಮತ್ತು ವಾರ್ಷಿಕ ಪ್ರಶಸ್ತಿ ಪ್ರದಾನ: ಉದ್ಘಾಟನೆ: ಎಲ್.ಎ.ರವಿ ಸುಬ್ರಹ್ಮಣ್ಯ, ಅತಿಥಿ: ಎ.ಆರ್.ಗೋವಿಂದಸ್ವಾಮಿ, ಅಧ್ಯಕ್ಷತೆ: ಬೈರಮಂಗಲ ರಾಮೇಗೌಡ, ಆಯೋಜನೆ: ಭಾರತೀಯ ಸಮಾಜ ಸೇವಾ ಟ್ರಸ್ಟ್, ಸ್ಥಳ: ಬಿಎಂಶ್ರೀ ಪ್ರತಿಷ್ಠಾನ, 3ನೇ ಮುಖ್ಯರಸ್ತೆ, ಎನ್.ಆರ್.ಕಾಲೊನಿ, ಬೆಳಿಗ್ಗೆ 10

ಮಾಟಿ ಕಲಾ ಪ್ರದರ್ಶನ: ಆಯೋಜನೆ: ಕದಂ ಇಂಡಿಯಾ ಸಂಸ್ಥೆ, ಸ್ಥಳ: ಸಭಾ ಬೆಂಗಳೂರು, ಶಿವಾಜಿನಗರ ಬೆಳಿಗ್ಗೆ 10

ವಿಶ್ವ ಪರಿಸರ ದಿನಾಚರಣೆ: ಆಯೋಜನೆ: ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಸ್ಥಳ: ತೇಜಸ್ವಿ ಸಭಾಂಗಣ, ಪರಿಸರ ಭವನ, ಬೆಳಿಗ್ಗೆ 10

ವಿಶ್ವ ಪರಿಸರ ದಿನಾಚರಣೆ: ಉದ್ಘಾಟನೆ: ಬಸವರಾಜ ಹೊರಟ್ಟಿ, ಅತಿಥಿ: ತಿಪ್ಪಣ್ಣಪ್ಪ ಕಮಕನೂರ, ಆಯೋಜನೆ: ಡಾ.ಮನಮೋಹನ್ ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾಲಯ, ಸ್ಥಳ: ಜ್ಞಾನಜ್ಯೋತಿ ಸಭಾಂಗಣ, ಸೆಂಟ್ರಲ್ ಕಾಲೇಜು, ಬೆಳಿಗ್ಗೆ 10.30

ವಿಶ್ವ ಪರಿಸರ ದಿನಾಚರಣೆ: ಅತಿಥಿ: ಸ್ವಾಮಿ ಶಿವಪ್ರಕಾಶಾನಂದ ಸರಸ್ವತಿ, ಶ್ರೀವತ್ಸ ಗೋವಿಂದರಾಜು, ಆಯೋಜನೆ: ವಿಭು ಫೌಂಡೇಷನ್, ಪೂರ್ಣಾಯು ಆಯುರ್ವೇದ ಕೇಂದ್ರ, ಸ್ಥಳ: ಪೂರ್ಣಾಯುರ್ಧಾಮ, ಕೆಂಪೇಗೌಡ ಬಡಾವಣೆ, ಬೆಳಿಗ್ಗೆ 10.30

ವನ್ಯಜೀವಿ ಛಾಯಾಚಿತ್ರ ಪ್ರದರ್ಶನ: ಉದ್ಘಾಟನೆ: ಕಲ್ಯಾಣ್ ವರ್ಮ, ಆಯೋಜನೆ: ಝುಡ್ ಕ್ರಿಯೇಟರ್ಸ್ ಕಮ್ಯುನಿಟಿ, ಸ್ಥಳ: ದೇವರಾಜ ಅರಸ್ ಗ್ಯಾಲರಿ, ಕರ್ನಾಟಕ ಚಿತ್ರಕಲಾ ಪರಿಷತ್ತು, ಬೆಳಿಗ್ಗೆ 10.30

ಬೆಂಗಳೂರು ಕಸದ ಸಮಸ್ಯೆ ಪರಿಹಾರಕ್ಕೆ ದುಂಡುಮೇಜಿನ ಚರ್ಚೆ: ಅಧ್ಯಕ್ಷತೆ: ಸೀತಾರಾಮ ಗುಂಡಪ್ಪ, ಉಷಾ ಮೋಹನ್, ಸತೀಶ್ ಕುಮಾರ್, ವಿಚಾರ ಮಂಡನೆ: ರಾಜೇಶ್ ಬಾಬು, ವಿಜಯ್ ನಿಶಾಂತ್, ಆಯೋಜನೆ: ಆಮ್ ಆದ್ಮಿ ಪಕ್ಷ, ಸ್ಥಳ: ವಿನೋಬಾ ಹಾಲ್, ಗಾಂಧಿಭವನ, ಬೆಳಿಗ್ಗೆ 10.30

ಕನ್ನಡ ಬಾರದವರಿಗೆ ಕನ್ನಡ ಕಲಿಕೆ ತರಗತಿಗಳ ಸಮಾರೋಪ ಸಮಾರಂಭ: ಪ್ರಮಾಣ ಪತ್ರ ವಿತರಣೆ: ಪುರುಷೋತ್ತಮ ಬಿಳಿಮಲೆ, ಅತಿಥಿ: ಆರ್. ಪ್ರಭುಶಂಕರ್, ಸಂತೋಷ್ ಹಾನಗಲ್, ಆಯೋಜನೆ: ಕನ್ನಡ ಅಭಿವೃದ್ಧಿ ಪ್ರಾಧಿಕಾರ, ಸ್ಥಳ: ಮನರಂಜನಾ ಕೂಟ ಆವರಣ, ಕೇಂದ್ರೀಯ ಸದನ, ಕೋರಮಂಗಲ, ಬೆಳಿಗ್ಗೆ 11.45


ಪುರುಷೋತ್ತಮ ಬಿಳಿಮಲೆ

'ಸೌಹಾರ್ದ ನೆಲೆಗಳು' ಉಪನ್ಯಾಸ ಮಾಲಿಕೆ ಹಾಗೂ 'ಮಹಿಳಾ ಮುನ್ನಡೆ' ಪುಸ್ತಕ ಸರಣಿ ಬಿಡುಗಡೆ: ಎಸ್.ಜಿ.ಸಿದ್ದರಾಮಯ್ಯ, ಆರ್.ಸುನಂದಮ್ಮ, ಉಪನ್ಯಾಸ: ಎಸ್.ನಟರಾಜ ಬೂದಾಳು, ಅಧ್ಯಕ್ಷತೆ: ಎಲ್.ಎನ್. ಮುಕುಂದರಾಜ್, ಆಯೋಜನೆ: ಕರ್ನಾಟಕ ಸಾಹಿತ್ಯ ಅಕಾಡೆಮಿ, ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ.ರಸ್ತೆ, ಮಧ್ಯಾಹ್ನ 3.30

ಶ್ರೀಹರಿ ಮುರಳಿ ಪೌರಾಣಿಕ ನಾಟಕ ಪ್ರದರ್ಶನ: ವಿಕೆಎಂ ತಿಮ್ಮಯ್ಯ ಅವರಿಗೆ ಸರ್ವಜ್ಞ ಪ್ರಶಸ್ತಿ ಪ್ರದಾನ, ಆಯೋಜನೆ: ಕುಶಲ ಕಲಾ ತಂಡ, ಸ್ಥಳ: ಸಂಸ ಬಯಲು ರಂಗ ಮಂದಿರ, ರವೀಂದ್ರ ಕಲಾಕ್ಷೇತ್ರ, ಸಂಜೆ 4

ಕಂಠೀರವ ನರಸಿಂಹರಾಜ ಒಡೆಯರ್ ಅವರ 138ನೇ ಜಯಂತಿ, ಕಂಚಿನ ಪುತ್ಥಳಿ ಅನಾವರಣ, ಪ್ರಶಸ್ತಿ ಪ್ರದಾನ: ಪ್ರಶಸ್ತಿ ಪುರಸ್ಕೃತರು: ಆರ್. ಗಣೇಶ್, ಸುರೇಶ್ ಮೂನ, ಧರ್ಮೇಂದ್ರ ಕುಮಾರ್ ಆರೇನಹಳ್ಳಿ, ಉದ್ಘಾಟನೆ: ತೇಜಸ್ವಿ ಸೂರ್ಯ, ಯು.ಬಿ.ವೆಂಕಟೇಶ್, ಟಿ.ಎ.ಶರವಣ, ಉಪಸ್ಥಿತಿ: ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ವಿಶೇಷ ಪ್ರದರ್ಶನ: ಅರಮನೆ ಪೊಲೀಸ್ ಬ್ಯಾಂಡ್, ಆಯೋಜನೆ: ಶ್ರೀಕಂಠೀರವ ನರಸಿಂಹರಾಜ ಒಡೆಯರ್ ಸಾಂಸ್ಕೃತಿಕ ಕಲಾಸಂಘ, ಸ್ಥಳ: ಸುಬ್ಬರಾಮಚೆಟ್ಟಿ ರಸ್ತೆ, ನರಸಿಂಹರಾಜ ಕಾಲೊನಿ, ಸಂಜೆ 4


ಆರ್.ಗಣೇಶ್

ಪೌರಾಣಿಕ ನಾಟಕೋತ್ಸವ- ಶ್ರೀಹರಿ ಮುರಳಿ ನಾಟಕ ಪ್ರದರ್ಶನ: ತಂಡ: ರಂಗಪಂಮಿ ವೇದಿಕೆ, ವಿಕೆಎಂ ತಿಮ್ಮಯ್ಯ ಅವರಿಗೆ ಸರ್ವಜ್ಞ ಪ್ರಶಸ್ತಿ ಪ್ರದಾನ, ಆಯೋಜನೆ: ಕುಶಲ ಕಲಾವೃಂದ, ಪುಟ್ಟಿ ಕಲಾವೇದಿಕೆ, ಸ್ಥಳ: ಸಂಸ ಬಯಲು ರಂಗ ಮಂದಿರ, ರವೀಂದ್ರ ಕಲಾಕ್ಷೇತ್ರ, ಸಂಜೆ 4

26ನೇ ವರ್ಷದ ಪ್ರವಚನ ವಾಹಿನಿ: ಸನಾತನ ಧರ್ಮ ಮತ್ತು ವಿಜ್ಞಾನ ಕುರಿತು ಉಪನ್ಯಾಸ: ಮೋಹನ್ ಗೌಡ, ಆಯೋಜನೆ ಮತ್ತು ಸ್ಥಳ: ಸಾಂಸ್ಕೃತಿಕ ಮಂದಿರ, ರಾಗೀಗುಡ್ಡ ಶ್ರೀ ಪ್ರಸನ್ನ ಆಂಜನೇಯ ಸ್ವಾಮಿ ಭಕ್ತಮಂಡಳಿ ಟ್ರಸ್ಟ್, ಜಯನಗರ 9ನೇ ಬಡಾವಣೆ, ಸಂಜೆ 6.30

'ನಮ್ಗೇನ್ ಬೆಲೆನೇ ಇಲ್ವಾ?' ನಾಟಕ ಪ್ರದರ್ಶನ: ತಂಡ: ಪಯಣ, ನಿರ್ದೇಶನ: ಅರುಣ್ ಸೂರ್ಯ, ಸ್ಥಳ: ಸೇವಾ ಸದನ, ಮಲ್ಲೇಶ್ವರ, ಸಂಜೆ 7.15

'ರಿದಮ್ಸ್ ಆಫ್ ಲೈಫ್' ಶಾಸ್ತ್ರೀಯ ಸಂಗೀತ ಮತ್ತು ನೃತ್ಯ ಸಂಗಮ: ಕಲಾವಿದರು: ಆಸ್ಥಾ ಮೊಹಪಾತ್ರ, ಬೈಸಾಲಿ ಮೊಹಾಂತಿ, ಶ್ರೀಮತಿ ರಕ್ಷಾ ಕಾರ್ತಿಕ್, ರಂಜನಿ ಮಿತ್ರ, ಆಯೋಜನೆ: ಸೆಂಟರ್ ಫಾರ್ ಪೀಸ್ ಆ್ಯಂಡ್ ಪರ್ಫಾರ್ಮಿಂಗ್ ಆರ್ಟ್ಸ್, ಸ್ಥಳ: ಜಾಗೃತಿ ಥಿಯೇಟರ್, ವರ್ತೂರು ಮುಖ್ಯರಸ್ತೆ, ರಾಮಗೊಂಡನಹಳ್ಳಿ, ವೈಟ್‌ಫೀಲ್ಡ್, ಸಂಜೆ 7.30

'ಜವ' ನಾಟಕ ಪ್ರದರ್ಶನ: ರಚನೆ ಮತ್ತು ನಿರ್ದೇಶನ: ಎಸ್.ಸುರೇಂದ್ರನಾಥ್, ಆಯೋಜನೆ ಮತ್ತು ಸ್ಥಳ: ರಂಗಶಂಕರ, ಸಂಜೆ 7.30


ಸಿದ್ಧಾರ್ಥ ಬೆಲ್ಮಣ್ಣು

ರಾಗಸಂಧಾನ- ಕನ್ನಡ ಸಂಗೀತ: ರಾಗ ಸಂಯೋಜನೆ: ರವೀಂದ್ರ ಗುರುರಾಜ್ ಕಟೋಟಿ, ನಿರ್ದೇಶನ: ಕೊರ್ಗಿ ಶಂಕರನಾರಾಯಣ ಉಪಾಧ್ಯಾಯ, ಕಲಾವಿದರು: ಸಿದ್ಧಾರ್ಥ ಬೆಲ್ಮಣ್ಣು, ದೀಪ್ತಿ ರಾಧಾಕೃಷ್ಣ, ದೀಪಿಕಾ ಭಟ್, ಆಯೋಜನೆ: ನುಮಾರ್ಕ್ ಆರ್ಟ್ ಸೀರಿಸ್, ಬಿಜಾಪುರ್ ಹಾರ್ಮೋನಿಯಂ ಫೌಂಡೇಷನ್, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ.ರಸ್ತೆ, ಸಂಜೆ 6.30

ಸಾಹಿತ್ಯಿಕ, ಸಾಂಸ್ಕೃತಿಕ ಸೇರಿದಂತೆ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ವಿವರಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ..
nagaradalli_indu@prajavani.co.in

ಸಂಕ್ಷಿಪ್ತ ಸುದ್ದಿ

ಚಿನ್ಮಯಿಗೆ 'ಯೋಗರತ್ನ' ಪ್ರಶಸ್ತಿ



ಉಜಿರೆ (ದಕ್ಷಿಣ ಕನ್ನಡ): ಬೆಂಗಳೂರಿನ ಕೆಂಗೇರಿಯ ವಿ.ಎಸ್.ಎಸ್. ಇಂಟರ್ ನ್ಯಾಷನಲ್ ಪಬ್ಲಿಕ್ ಸ್ಕೂಲ್‌ನ ಹತ್ತನೇ ತರಗತಿ ವಿದ್ಯಾರ್ಥಿನಿ ಚಿನ್ಮಯಿ ಪ್ರಸಕ್ತ ವರ್ಷದ 'ಯೋಗರತ್ನ' ಪ್ರಶಸ್ತಿಗೆ ಆಯ್ಕೆಯಾಗಿದ್ದಾಳೆ ಎಂದು ಶಾಂತಿವನ ಟ್ರಸ್ಟ್‌ನ ಯೋಗ ಮತ್ತು ನೈತಿಕ ಶಿಕ್ಷಣ ಯೋಜನೆಯ ನಿರ್ದೇಶಕ ಶಶಿಕಾಂತ ಜೈನ್ ತಿಳಿಸಿದ್ದಾರೆ. ಜೂನ್ 21ರಂದು ಧರ್ಮಸ್ಥಳದಲ್ಲಿ ನಡೆಯುವ ವಿಶ್ವ ಯೋಗ ದಿನಾಚರಣೆ ಸಂದರ್ಭ ಪ್ರಶಸ್ತಿ ಪ್ರದಾನ ಮಾಡಲಾಗುವುದು. ₹10 ಸಾವಿರ ನಗದು, ಪ್ರಮಾಣಪತ್ರ, ಸ್ಮರಣಿಕೆಯನ್ನು ಪ್ರಶಸ್ತಿ ಒಳಗೊಂಡಿದೆ. ಯೋಗ ಕ್ಷೇತ್ರದಲ್ಲಿ ರಾಷ್ಟ್ರ ಮಟ್ಟದಲ್ಲಿ ವಿಶೇಷ ಸಾಧನೆ ಮಾಡಿದವರಿಗೆ ಪ್ರತಿ ವರ್ಷ 'ಯೋಗರತ್ನ' ಪ್ರಶಸ್ತಿ ಪ್ರದಾನ ಮಾಡಲಾಗುತ್ತದೆ ಎಂದು ಅವರು ತಿಳಿಸಿದ್ದಾರೆ.

ಮಾನಸಿಕ ಅಸ್ವಸ್ಥೆ ರಕ್ಷಿಸಿ ಕುಟುಂಬಕ್ಕೆ ಹಸ್ತಾಂತರ

ಬೆಂಗಳೂರು: ಹೆಣ್ಣೂರು ಪೊಲೀಸ್ ಠಾಣಾ ವ್ಯಾಪ್ತಿಯ ಸಿಂಧನ್ ನಗರದಲ್ಲಿ ದಾರಿ ತಪ್ಪಿ ಅಲೆದಾಡುತ್ತಿದ್ದ ಮಾನಸಿಕ ಅಸ್ವಸ್ಥ ಮಹಿಳೆಯನ್ನು ಪೊಲೀಸರು ರಕ್ಷಿಸಿ ಕುಟುಂಬದವರಿಗೆ ಒಪ್ಪಿಸಿದ್ದಾರೆ.

ಜೂನ್ 3ರಂದು ರಾತ್ರಿ ಪೂಜಮ್ಮ ದೇವಸ್ಥಾನದ ಬಳಿ ಮಹಿಳೆಯೊಬ್ಬರು ದಿಕ್ಕು ತೋಚದೆ ಅಳುತ್ತಿರುವುದನ್ನು ಗಮನಿಸಿದ್ದ ನಾಗರಿಕರು ತುರ್ತು ಸಹಾಯವಾಣಿ 112ಕ್ಕೆ ಕರೆ ಮಾಡಿ ಮಾಹಿತಿ ನೀಡಿದ್ದರು. ಇದನ್ನು ಆಧರಿಸಿ ನಿಯಂತ್ರಣ ಕೊಠಡಿಯು ಹೆಣ್ಣೂರು ಠಾಣೆಯ ಹೊಯ್ಸಳ ಗಸ್ತು ವಾಹನದಲ್ಲಿದ್ದ ಎಎಸ್‌ಐ ರಾಯಪ್ಪ ಅವರಿಗೆ ಮಾಹಿತಿ ರವಾನಿಸಿತು. ಸ್ಥಳಕ್ಕೆ ತೆರಳಿದ ಸಿಬ್ಬಂದಿ, ಮಹಿಳೆಯಿಂದ ಗುರುತು ಮತ್ತು ವಿಳಾಸದ ಮಾಹಿತಿ ಪಡೆಯಲು ಯತ್ನಿಸಿದರು. ಮಾನಸಿಕ ಅಸ್ವಸ್ಥತೆಯ ಕಾರಣದಿಂದ ಮಾಹಿತಿ ದೊರೆಯಲಿಲ್ಲ.

ನಂತರ, ಸುತ್ತಮುತ್ತಲಿನ ಪ್ರದೇಶದಲ್ಲಿ ವಿಚಾರಣೆ ನಡೆಸಿದ ಪೊಲೀಸರು ಮಹಿಳೆಯ ಕುಟುಂಬವನ್ನು ಪತ್ತೆಹಚ್ಚಿದರು. ಮಹಿಳೆಯ ಆರೋಗ್ಯ ಮತ್ತು ಸುರಕ್ಷತೆಯ ದೃಷ್ಟಿಯಿಂದ ಸೂಕ್ತ ವೈದ್ಯಕೀಯ ಆರೈಕೆ ಹಾಗೂ ಮೇಲ್ವಿಚಾರಣೆ ಕೈಗೊಳ್ಳುವಂತೆ ಕುಟುಂಬದವರಿಗೆ ಸೂಚಿಸಿ ಮಹಿಳೆಯನ್ನು ಹಸ್ತಾಂತರಿಸಲಾಯಿತು.

ಸಿಬ್ಬಂದಿಯ ತ್ವರಿತ ಕ್ರಮದಿಂದ ಮಹಿಳೆಯನ್ನು ಕುಟುಂಬದೊಂದಿಗೆ ಒಂದುಗೂಡಿಸಲು ಸಾಧ್ಯವಾಗಿದೆ ಎಂದು ನಗರ ಪೊಲೀಸ್ ಕಮಿಷನರ್ ಸೀಮಾಂತ್‌ಕುಮಾರ್ ಸಿಂಗ್ ತಿಳಿಸಿದ್ದಾರೆ.

ಹೆಚ್ಚುವರಿ ಎಲ್‌ಇಡಿ: ನಿಲ್ಲದ ಹಾವಳಿ

ಮತ್ತೆ ವಿಶೇಷ ಕಾರ್ಯಾಚರಣೆಗೆ ನಗರ ಪೊಲೀಸರ ನಿರ್ಧಾರ

● ಆದಿತ್ಯ ಕೆ.ಎ.

ಬೆಂಗಳೂರು: ಪ್ರಖರ ಬೆಳಕು ಹೊರಹಾಕುವ ಹಾಗೂ ಕಣ್ಣು ಕುಕ್ಕುವ ಹೆಚ್ಚುವರಿ ಎಲ್‌ಇಡಿ ದೀಪಗಳನ್ನು ವಾಹನಗಳಿಗೆ ಅಳವಡಿಕೆ ಮಾಡದಂತೆ ಎರಡು ವರ್ಷಗಳ ಹಿಂದೆಯೇ ಪೊಲೀಸ್ ಇಲಾಖೆ ಆದೇಶ ಹೊರಡಿಸಿದ್ದರೂ ಚಾಲಕರು ಈಗಲೂ ಹೆಚ್ಚುವರಿ ಎಲ್‌ಇಡಿ ದೀಪಗಳ ಮೊರೆ ಹೋಗುತ್ತಿದ್ದಾರೆ.

ಮೋಟಾರು ವಾಹನ ಕಾಯ್ದೆ(ಐಎಂವಿ) ಮಾನದಂಡಗಳನ್ನು ಉಲ್ಲಂಘಿಸಿ, ಹೆಡ್‌ಲೈಟ್ ಅಳವಡಿಕೆ ಮಾಡುತ್ತಿರುವುದು ಬೇರೆಯವರ ಜೀವಕ್ಕೆ ಆಪತ್ತು ತರುತ್ತಿದೆ.

ಕಣ್ಣು ಕುಕ್ಕುವ ಹೆಚ್ಚುವರಿ ಎಲ್‌ಇಡಿ ದೀಪಗಳ ಅಳವಡಿಕೆಯಿಂದ ನಗರದ ಒಳಭಾಗದ ರಸ್ತೆಗಳು, ನಗರದಲ್ಲಿ ಹಾದು ಹೋಗಿರುವ ರಾಜ್ಯ– ರಾಷ್ಟ್ರೀಯ ಹೆದ್ದಾರಿಗಳು, ಮೇಲ್ಸೇತುವೆಗಳಲ್ಲಿ ಹೆಚ್ಚಿನ ಅಪಘಾತಗಳು ಸಂಭವಿಸುತ್ತಿವೆ. ಸಾವು–ನೋವಿಗೂ ಕಾರಣವಾಗುತ್ತಿವೆ.

ನಗರದಲ್ಲಿ ಸಂಭವಿಸುತ್ತಿರುವ ಅಪಘಾತಗಳಿಗೆ ಅತಿವೇಗದ ಚಾಲನೆ, ಮದ್ಯ ಸೇವನೆ, ವಾಹನ ಹಿಂದಿಕ್ಕಲು ಸ್ಪರ್ಧೆ, ಗುಂಡಿಬಿದ್ದ ರಸ್ತೆಗಳು ಹಾಗೂ ಅವೈಜ್ಞಾನಿಕ ತಿರುವು ಜತೆಗೆ ಪ್ರಖರ ದೀಪಗಳ ಅಳವಡಿಕೆಯೂ ಕಾರಣವಾಗಿದೆ ಎಂದು ಸಂಚಾರ ಪೊಲೀಸರು ಹೇಳುತ್ತಾರೆ.



ನಗರದಲ್ಲಿ ಸಂಭವಿಸಿದ್ದ ಅಪಘಾತವೊಂದರ ದೃಶ್ಯ

ಕಾರ್ಯಾಚರಣೆ ಮೂಲಕ ಬಿಸಿ: ಅಲೋಕ್ ಕುಮಾರ್ ಅವರು ಸಂಚಾರ ಮತ್ತು ರಸ್ತೆ ಸುರಕ್ಷತಾ ವಿಭಾಗದ ಎಡಿಜಿಪಿಯಾಗಿದ್ದ ಅವಧಿಯಲ್ಲಿ ಕಣ್ಣು ಕುಕ್ಕುವ ಎಲ್‌ಇಡಿ ದೀಪಗಳನ್ನು ಅಳವಡಿಸಿಕೊಂಡಿದ್ದ ವಾಹನ ಚಾಲಕರ ವಿರುದ್ಧ ವಿಶೇಷ ಕಾರ್ಯಾಚರಣೆ ನಡೆಸುವ ಮೂಲಕ ಬಿಸಿ ಮುಟ್ಟಿಸಿದ್ದರು.

ಬೆಂಗಳೂರಿನಲ್ಲೇ 10 ಸಾವಿರಕ್ಕೂ ಹೆಚ್ಚು ಪ್ರಕರಣ ದಾಖಲಿಸಿ, ತಲಾ ₹500 ದಂಡ ಹಾಕಲಾಗಿತ್ತು. ಮತ್ತೆ ಎಲ್‌ಇಡಿ ದೀಪಗಳ ಹಾವಳಿ ಹೆಚ್ಚಾಗಿದ್ದು, ಪದೇ ಪದೇ ಅಪಘಾತಗಳು ಸಂಭವಿಸುತ್ತಿವೆ. ಹೆಚ್ಚು ಗೋಚರತೆಗಾಗಿ ಅಳವಡಿಸಿಕೊಂಡಿರುವ ದೀಪಗಳು ಬೇರೆ ವಾಹನಗಳ ಚಾಲಕರ ಜೀವಕ್ಕೂ ಸಂಚಕಾರ ತರುತ್ತಿವೆ.

ಏಕಮುಖ ಸಂಚಾರ ಮಾರ್ಗದಲ್ಲಿ ವಿರುದ್ಧ ದಿಕ್ಕಿನಿಂದ ವಾಹನ ಚಾಲನೆ, ಪಾದಚಾರಿ ಮಾರ್ಗದಲ್ಲಿ ವಾಹನ ಚಾಲನೆ, ಹೆಲ್ಮೆಟ್ ಧರಿಸದೇ ವಾಹನ ಚಾಲನೆಯ ಜತೆಗೆ ಎಲ್‌ಇಡಿ ದೀಪಗಳನ್ನು ಅಳವಡಿಸಿಕೊಂಡಿರುವ ವಾಹನಗಳ ಚಾಲಕರ ವಿರುದ್ಧ ಮತ್ತೆ ವಿಶೇಷ ಕಾರ್ಯಾಚರಣೆ ನಡೆಸಲು ನಗರ ಪೊಲೀಸರು ಮುಂದಾಗಿದ್ದಾರೆ.

ನಗರದಲ್ಲಿ ಪ್ರತಿವರ್ಷ 5 ಸಾವಿರ ಅಪಘಾತಗಳು ಸಂಭವಿಸುತ್ತಿವೆ. ಆ ಪೈಕಿ, ಶೇ 10ರಷ್ಟು ಅಪಘಾತಗಳು ವಾಹನಗಳಲ್ಲಿ ಅವೈಜ್ಞಾನಿಕ ದೀಪಗಳ ಅಳವಡಿಕೆಯಿಂದಲೇ ಸಂಭವಿಸುತ್ತಿವೆ ಎಂದು ಸಂಚಾರ ಪೊಲೀಸರು ಅಂದಾಜಿಸಿದ್ದಾರೆ.

'ಹೆಚ್ಚಿನ ಗೋಚರತೆಗಾಗಿ ಕೊಡಗು, ಚಿಕ್ಕಮಗಳೂರು, ಹಾಸನ, ಸಕಲೇಶಪುರದ ನೋಂದಣಿ ಸಂಖ್ಯೆಯುಳ್ಳ ವಾಹನಗಳ ಮಾಲೀಕರು ಹೈಬೀಮ್ ಹೆಡ್‌ಲೈಟ್ ಅಳವಡಿಕೆ ಮಾಡಿಕೊಳ್ಳುತ್ತಾರೆ. ಅದೇ ವಾಹನಗಳು ಬೆಂಗಳೂರಿಗೆ ಬಂದಾಗ ರಸ್ತೆ ಕಾಣದೇ ಎದುರು ವಾಹನಗಳು ಅಪಘಾತಕ್ಕೀಡಾಗುತ್ತಿವೆ. ನಗರದ ಕೆಲವು ಯುವಕರು ನಿಯಮ ಮೀರಿ ಎಲ್‌ಇಡಿ ದೀಪ ಅಳವಡಿಸಿಕೊಂಡಿರುವುದು ಕಂಡುಬಂದಿದೆ' ಎಂದು ಸಂಚಾರ ಪೊಲೀಸರು ಹೇಳಿದರು.

ಎಲ್ಲೆಲ್ಲಿ ಹೆಚ್ಚು ಅಪಘಾತ?: ನಗರದಲ್ಲಿ ಹಾದು ಹೋಗಿರುವ ರಾಜ್ಯ ಹಾಗೂ ರಾಷ್ಟ್ರೀಯ ಹೆದ್ದಾರಿಗಳ ಪೈಕಿ ಬಳ್ಳಾರಿ ರಸ್ತೆ (ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ರಸ್ತೆ), ಮೈಸೂರು ರಸ್ತೆ, ತುಮಕೂರು–ಹಾಸನ ಮಾರ್ಗದಲ್ಲಿ ಹೆಚ್ಚಿನ ಅಪಘಾತಗಳು ಸಂಭವಿಸುತ್ತಿವೆ.

ನಿಯಮ ಉಲ್ಲಂಘಿಸಿದರೆ ದಂಡ ಖಚಿತ

ಕಂಪನಿ ನೀಡುವ ಹೆಡ್‌ಲೈಟ್‌ಗಳನ್ನು ವಾಹನಗಳ ಮಾಲೀಕರು ಬದಲಾಯಿಸಿ, ಎಲ್‌ಇಡಿ ದೀಪಗಳನ್ನು ಅಳವಡಿಕೆ ಮಾಡಿಕೊಳುತ್ತಿದ್ದಾರೆ. ಪ್ರಖರ ಬೆಳಕು ಹೊರಸೂಸುವ ದೀಪಗಳಿಂದ ವಾಹನ ಚಾಲಕರು ಹಾಗೂ ದ್ವಿಚಕ್ರ ವಾಹನ ಸವಾರರಿಗೆ ರಸ್ತೆಯೇ ಕಾಣದಂತಾಗಿ ತೊಂದರೆ ಆಗುತ್ತಿದೆ. ಮೋಟಾರು ವಾಹನ ಕಾಯ್ದೆಯಲ್ಲಿ ನಮೂದಿಸಿರುವ ಮಾನದಂಡಗಳಂತೆಯೇ ಕಂಪನಿಗಳು ಹೆಡ್‌ಲೈಟ್ ಅಳವಡಿಕೆ ಮಾಡಿರುತ್ತವೆ. ಆದರೆ, ತಿರುವುಗಳಲ್ಲಿ ರಸ್ತೆ ಸರಿಯಾಗಿ ಕಾಣಿಸುವುದಿಲ್ಲ ಎನ್ನುವ ಕಾರಣಕ್ಕೆ ಮಾಲೀಕರು ಹೆಡ್‌ಲೈಟ್ ಬದಲಾವಣೆ ಮಾಡಿಕೊಳ್ಳುತ್ತಿದ್ದಾರೆ. ಅಲ್ಲದೇ ಹೆಚ್ಚುವರಿಯಾಗಿ ಫಾಗ್‌ಲ್ಯಾಂಪ್ ಸಹ ಅಳವಡಿಸಿರುವುದು ಕಂಡುಬಂದಿದೆ. ಇದು ಮೋಟಾರು ವಾಹನ ಕಾಯ್ದೆ ಉಲ್ಲಂಘನೆ ಆಗಿದ್ದು, ಅಂಥವರ ವಿರುದ್ಧ ಪತ್ತೆ ಕಾರ್ಯಾಚರಣೆ ನಡೆಸಲು ತೀರ್ಮಾನಿಸಲಾಗಿದೆ ಎಂದು ಪೊಲೀಸ್ ಮೂಲಗಳು ಹೇಳಿವೆ.



ರಾತ್ರಿ ವೇಳೆ ಎದುರಿಗೆ ವಾಹನ ಬರುವಾಗ ಹೈಬೀಮ್ ಲೈಟ್ ಹಾಕಿ, ಇತರೆ ಚಾಲಕರ ಕಣ್ಣಿಗೆ ಹಾನಿ ಮಾಡಲಾಗುತ್ತಿದೆ. ಅಲ್ಲದೇ, ಹೈಬೀಮ್ ಲೈಟ್ ಹಾಕುವುದರಿಂದ ಅಪಘಾತಗಳೂ ಸಂಭವಿಸುತ್ತಿವೆ. ನಿಯಮ ಉಲ್ಲಂಘಿಸಿದವರ ವಿರುದ್ಧ ಕ್ರಮ ತೆಗೆದುಕೊಳ್ಳಲಾಗುವುದು

ಎಂ.ಎ.ಸಲೀಂ, ರಾಜ್ಯ ಪೊಲೀಸ್ ಮಹಾನಿರ್ದೇಶಕ



ಆನಂದಪುರ ವಾರ್ಡ್‌ನಲ್ಲಿ ಶಾಸಕ ಬೈರತಿ ಬಸವರಾಜ ಅವರು ಸಾರ್ವಜನಿಕರ ಸಮಸ್ಯೆ ಆಲಿಸಿದರು. ಪಿ.ಜೆ.ಅಂತೋಣಿಸ್ವಾಮಿ, ಅಧಿಕಾರಿಗಳು ಉಪಸ್ಥಿತರಿದ್ದರು

ಅನುದಾನ ನೀಡದ ಸರ್ಕಾರ ಬೈರತಿ ಬಸವರಾಜ ಬೇಸರ

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: 'ಮೂರು ವರ್ಷಗಳಿಂದ ಕಾಂಗ್ರೆಸ್ ನೇತೃತ್ವದ ಸರ್ಕಾರ ಅಭಿವೃದ್ಧಿ ಯೋಜನೆಗಳಿಗೆ ಸಮರ್ಪಕ ಅನುದಾನ ನೀಡದಿರುವುದರಿಂದ ಕ್ಷೇತ್ರದಲ್ಲಿ ಅಭಿವೃದ್ಧಿ ಕಾಮಗಾರಿ ಕೈಗೊಳ್ಳಲು ಸಾಧ್ಯವಾಗುತ್ತಿಲ್ಲ' ಎಂದು ಶಾಸಕ ಬೈರತಿ ಬಸವರಾಜ ದೂರಿದರು.

ಕ್ಷೇತ್ರದ ಆನಂದಪುರ ವಾರ್ಡ್ ವ್ಯಾಪ್ತಿಯಲ್ಲಿ ರಸ್ತೆ, ಚರಂಡಿಗಳ ಸ್ವಚ್ಛತೆ ಸೇರಿ ಸಾರ್ವಜನಿಕರ ಸಮಸ್ಯೆಗಳನ್ನು ಪರಿಶೀಲಿಸಿ ಮಾತನಾಡಿ, 'ಕ್ಷೇತ್ರ ವ್ಯಾಪ್ತಿಯಲ್ಲಿ ಅಭಿವೃದ್ಧಿ ಯೋಜನೆಗಳಿಗೆ ಅನುದಾನ ದೊರೆಯದೆ ಅಭಿವೃದ್ಧಿ ಕಾಮಗಾರಿಗಳು ನನೆಗುದಿಗೆ ಬಿದ್ದಿವೆ. ಒಂದು ವಾರ್ಡ್‌ಗೆ ಕೇವಲ ₹1.5 ಕೋಟಿ ಅನುದಾನ ಏನೇನೂ ಸಾಲದು' ಎಂದರು.

'ಕ್ಷೇತ್ರದ ಅಭಿವೃದ್ಧಿಗೆ ಸರ್ಕಾರ ಅನುದಾನ ಬಿಡುಗಡೆ ಮಾಡಬೇಕು. ಸಾರ್ವಜನಿಕರ ದೂರುಗಳು ಹಾಗೂ ಸಮಸ್ಯೆಗಳನ್ನು ಪರಿಹರಿಸದಿದ್ದರೆ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಲಾಗುವುದು' ಎಂದು ಎಚ್ಚರಿಕೆ ನೀಡಿದರು.

ಮುಖಂಡರಾದ ಆಂತೋಣಿ ಸ್ವಾಮಿ, ಯುವರಾಜ್, ಟಿ.ಸಿ.ಪಾಳ್ಯ ಪ್ರವೀಣ್, ಆಂತೋಣಿ, ಮಂಜು, ರವಿ, ಕೆ.ಪಿ.ಕೃಷ್ಣ, ಗಜೇಂದ್ರ ಇದ್ದರು.

'ಬಿಸಿಲಿನಲ್ಲಿ ಕಾರ್ಯನಿರ್ವಹಿಸುವ ಸಿಬ್ಬಂದಿ ಆರೋಗ್ಯ ಕಾಪಾಡುವ ಉದ್ದೇಶ'

ಸಂಚಾರ ಪೊಲೀಸರಿಗೆ 'ಕೂಲಿಂಗ್ ಕಿಟ್'

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಹೆಚ್ಚುತ್ತಿರುವ ಉಷ್ಣಾಂಶದಲ್ಲಿ ಸುರಕ್ಷಿತವಾಗಿ ಕಾರ್ಯನಿರ್ವಹಿಸಲು ಅನುವಾಗುವಂತೆ ಸಂಚಾರ ಪೊಲೀಸರಿಗೆ 'ಹೀಟ್–ಹೆಲ್ತ್ ಪ್ರೋಟೋಕಾಲ್' ಯೋಜನೆಯಡಿ ಕೂಲಿಂಗ್ ಕಿಟ್ ನೀಡಲಾಗಿದೆ.

ಬೆಂಗಳೂರು ಉತ್ತರ ನಗರ ಪಾಲಿಕೆಯ ಆಯುಕ್ತ ಪೊಮ್ಮಲ ಸುನೀಲ್ ಕುಮಾರ್ ನೇತೃತ್ವದಲ್ಲಿ ಗುರುವಾರ ನಡೆದ ಕಾರ್ಯಕ್ರಮದಲ್ಲಿ, ಸಂಚಾರ ಪೊಲೀಸ್ ಸಿಬ್ಬಂದಿಗೆ ಬಿಸಿಲಿನ ಪರಿಣಾಮಗಳು, ಆರೋಗ್ಯದ ಮೇಲೆ ಉಂಟಾಗುವ ತೊಂದರೆಗಳು ಹಾಗೂ ಅಗತ್ಯ ಮುನ್ನೆಚ್ಚರಿಕಾ ಕ್ರಮಗಳ ಕುರಿತು ಅರಿವು ಮೂಡಿಸಿ, ಆರೋಗ್ಯ ರಕ್ಷಣೆಗಾಗಿ 'ಎಸಿ ಹೆಲ್ಮೆಟ್'ಗಳನ್ನು ವಿತರಿಸಲಾಯಿತು.

ಸಿ40, ಸೆನ್ಸಿಂಗ್ ಲೋಕಲ್ ಹಾಗೂ ಹಸಿರು ದಳ ಸಂಸ್ಥೆಗಳ ಸಹಯೋಗದಲ್ಲಿ 'ಹೀಟ್–ಹೆಲ್ತ್ ಪ್ರೋಟೋಕಾಲ್' ಯೋಜನೆ ಆರಂಭಿಸಲಾಗಿದೆ. ಹವಾಮಾನ ಬದಲಾವಣೆ ಹಾಗೂ ಹೆಚ್ಚುತ್ತಿರುವ ಉಷ್ಣಾಂಶದ ಪರಿಣಾಮವಾಗಿ ಹೊರಾಂಗಣದಲ್ಲಿ ಕಾರ್ಯನಿರ್ವಹಿಸುವ ಸಿಬ್ಬಂದಿಯ ಆರೋಗ್ಯ ರಕ್ಷಣೆ ಅಗತ್ಯವಾಗಿದೆ ಎಂದು ಆಯುಕ್ತರು ಹೇಳಿದರು.



ಸಂಚಾರ ಪೊಲೀಸರಿಗೆ ನೀಡಲಾಗಿರುವ 'ಕೂಲಿಂಗ್ ಕಿಟ್'

ಉತ್ತರ ನಗರ ಪಾಲಿಕೆಯ ಪೌರಕಾರ್ಮಿಕರಿಗೆ ಇದೇ ಮಾದರಿಯ ಆರೋಗ್ಯ ರಕ್ಷಣಾ ಕಿಟ್‌ಗಳನ್ನು ವಿತರಿಸಲಾಗಿದೆ. ಇದೀಗ ಸಂಚಾರ ಪೊಲೀಸ್ ಸಿಬ್ಬಂದಿಗೂ ವಿತರಿಸಲಾಗುತ್ತಿದೆ. ಕಿಟ್‌ಗಳ ಬಳಕೆ ಮತ್ತು ಪರಿಣಾಮಕಾರಿತ್ವದ ಕುರಿತು ಅಭಿಪ್ರಾಯಗಳನ್ನು ಸಂಗ್ರಹಿಸಿ, ಮುಂದಿನ ದಿನಗಳಲ್ಲಿ ಹೆಚ್ಚಿನ ಸಂಖ್ಯೆಯ ಸಿಬ್ಬಂದಿಗೆ ಈ ಸೌಲಭ್ಯವನ್ನು ವಿಸ್ತರಿಸುವ ಕುರಿತು ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು.

ಬೆಂಗಳೂರು ನಗರದಲ್ಲಿ ಉಷ್ಣಾಂಶ ಏರಿಕೆಯಾಗುತ್ತಿರುವ ಹಿನ್ನೆಲೆಯಲ್ಲಿ ಬಿಸಿಲಿನಲ್ಲಿ ಕಾರ್ಯನಿರ್ವಹಿಸುವ ಸಿಬ್ಬಂದಿಯ ಆರೋಗ್ಯ ಕಾಪಾಡಲು ಈ ಕಿಟ್‌ಗಳು ಸಹಕಾರಿಯಾಗಲಿವೆ. ಅವುಗಳನ್ನು ಸಮರ್ಪಕವಾಗಿ ಬಳಸಿಕೊಂಡು ಆರೋಗ್ಯ ರಕ್ಷಿಸಿಕೊಳ್ಳುವಂತೆ ಸಲಹೆ ನೀಡಿದರು.

ಮುಂದಿನ ದಿನಗಳಲ್ಲಿ ಇಂದಿರಾ ಕ್ಯಾಂಟೀನ್‌ಗಳು ಹಾಗೂ ಕೆಲವು ಸರ್ಕಾರಿ ಕಚೇರಿಗಳಲ್ಲಿ ಶಾಖ ನಿಯಂತ್ರಣ ಮತ್ತು ತಂಪು ವಾತಾವರಣ ಕಲ್ಪಿಸುವ ವ್ಯವಸ್ಥೆಗಳನ್ನು ರೂಪಿಸುವ ಕುರಿತು ಯೋಜನೆಗಳನ್ನು ಪರಿಶೀಲಿಸಲಾಗುತ್ತಿದೆ ಎಂದು ಅವರು ತಿಳಿಸಿದರು.

ಕಾರ್ಯಕ್ರಮದಲ್ಲಿ ತಾಪಮಾನ ಹೆಚ್ಚಳದಿಂದ ಉಂಟಾಗುವ ಆರೋಗ್ಯ ಸಮಸ್ಯೆಗಳು, ತುರ್ತು ಮುನ್ನೆಚ್ಚರಿಕಾ ಕ್ರಮಗಳು ಹಾಗೂ ಸುರಕ್ಷತಾ ವಿಧಾನಗಳ ಕುರಿತು ಮಾರ್ಗದರ್ಶನ ನೀಡಲಾಯಿತು.

₹21 ಸಾವಿರ ವೆಚ್ಚ



'ಕೂಲಿಂಗ್ ಕಿಟ್‌ಗೆ ₹21 ಸಾವಿರ ವೆಚ್ಚವಾಗುತ್ತದೆ. ಎನ್‌ಜಿಒಗಳು ಇದನ್ನು ಭರಿಸುತ್ತಿವೆ. ಒಂದು ಕೂಲಿಂಗ್ ಕಿಟ್‌ನಲ್ಲಿ ಹೆಲ್ಮೆಟ್‌ನೊಂದಿಗೆ ಸೊಂಟಕ್ಕೆ ಕಟ್ಟಿಕೊಳ್ಳುವ ಪವರ್ ಬ್ಯಾಂಕ್ ಇರುತ್ತದೆ. ಒಂದು ಬಾರಿ ಎರಡು ಗಂಟೆ ಚಾರ್ಜ್ ಮಾಡಿದರೆ ಎಂಟು ಗಂಟೆ ಕಾರ್ಯನಿರ್ವಹಿಸುತ್ತದೆ. ಹೆಬ್ಬಾಳ ಮತ್ತು ಕೆ.ಜಿ. ಹಳ್ಳಿ ಸಂಚಾರ ಠಾಣೆಯ 20 ಪೊಲೀಸರಿಗೆ ಕಿಟ್ ವಿತರಿಸಲಾಗಿದೆ' ಎಂದು ಪೊಮ್ಮಲ ಸುನೀಲ್ ಕುಮಾರ್ ತಿಳಿಸಿದರು.

'ಹವಾಮಾನ ಬದಲಾವಣೆಯಿಂದ ಉಂಟಾಗಿರುವ ಉಷ್ಣಾಂಶದಲ್ಲಿನ ಏರಿಕೆಯಿಂದ ಸಾಕಷ್ಟು ಸಮಸ್ಯೆಗಳಾಗುತ್ತಿವೆ. ಅವುಗಳನ್ನು ನಿಯಂತ್ರಿಸಲು ಹಾಗೂ ಅತ್ಯಾಧುನಿಕ ವ್ಯವಸ್ಥೆಗಳನ್ನು ಕಲ್ಪಿಸಲು ಉತ್ತರ ನಗರ ಪಾಲಿಕೆ ಹಲವು ಯೋಜನೆಗಳನ್ನು ರೂಪಿಸಿದೆ' ಎಂದರು.

ಕಲಿಕಾ ಸಾಮಗ್ರಿ ವಿತರಣೆ



ಗಂಗಾ ನಗರದಲ್ಲಿರುವ ಬಿಬಿಎಂಪಿ ಪ್ರೌಢಶಾಲೆಯ ವಿದ್ಯಾರ್ಥಿಗಳಿಗೆ ಜೋಯಾಲುಕ್ಕಾಸ್ ಪ್ರತಿಷ್ಠಾನವು ನೋಟ್‌ಬುಕ್, ಊಟದ ಬಾಕ್ಸ್, ನೀರಿನ ಬಾಟಲಿ ಮತ್ತು ಛತ್ರಿ ಒಳಗೊಂಡ ಶಾಲಾ ಬ್ಯಾಗ್‌ಗಳನ್ನು ವಿತರಿಸಿತು. ಪ್ರೌಢಶಾಲೆಯ ಮುಖ್ಯಶಿಕ್ಷಕಿ ರಜನಿ, ಅಮೀನಾ, ಜೋಯಾಲುಕ್ಕಾಸ್‌ನ ಸಹಾಯಕ ನಿರ್ದೇಶಕ ಜಿ.ಕಿಶೋರ್, ಸಿಆರ್‌ಒ ಎಚ್. ತಿಮ್ಮೇಗೌಡ ಪಾಲ್ಗೊಂಡಿದ್ದರು

ಇಬ್ಬರ ಬಂಧನ, ರಾಜಾನುಕುಂಟೆ ಠಾಣೆಯಲ್ಲಿ ಪ್ರಕರಣ ದಾಖಲು

ಪ್ರಿಯಕರನೊಂದಿಗೆ ಸೇರಿ ಪತಿ ಕೊಲೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪತಿಯನ್ನು ಕೊಲೆ ಮಾಡಿದ್ದ ಪತ್ನಿ ಹಾಗೂ ಆಕೆಯ ಪ್ರಿಯಕರನನ್ನು ರಾಜಾನುಕುಂಟೆ ಠಾಣೆಯ ಪೊಲೀಸರು ಬಂಧಿಸಿದ್ದಾರೆ.

ಪಶ್ಚಿಮ ಬಂಗಾಳದ ಅವಿಜಿತ್ ಪಂಡಿತ್(25) ಕೊಲೆಯಾದವರು.

ಕೃತ್ಯ ಎಸಗಿದ ಅವಿಜಿತ್ ಅವರ ಪತ್ನಿ ಅರ್ಚನಾ(22) ಮತ್ತು ಅವರ ಪ್ರಿಯಕರ ಪ್ರೋಷನ್ ಪಾಲ್(26) ಎಂಬುವರನ್ನು ಬಂಧಿಸಲಾಗಿದೆ. ಮತ್ತೊಬ್ಬ ಆರೋಪಿ ಶುಭ ಶಂಕರ್ ತಲೆಮರೆಸಿಕೊಂಡಿದ್ದಾರೆ. ಬಂಧನಕ್ಕೆ ಶೋಧ ನಡೆಸಲಾಗುತ್ತಿದೆ ಎಂದು ಮೂಲಗಳು ಹೇಳಿವೆ.

ಪಶ್ಚಿಮ ಬಂಗಾಳದಿಂದ 2020ರಲ್ಲಿ ನಗರಕ್ಕೆ ಕೆಲಸ ಅರಸಿ, ಬಂದಿದ್ದ ಅವಿಜಿತ್ ಪಂಡಿತ್ ನಾಲ್ಕು ವರ್ಷಗಳಿಂದ ಯಲಹಂಕದ ಇಟಗಲ್ ಪುರದ ಕಾಲೇಜೊಂದರಲ್ಲಿ ಭದ್ರತಾ ಸಿಬ್ಬಂದಿಯಾಗಿ ಕೆಲಸ ಮಾಡಿಕೊಂಡಿದ್ದರು. ನಂತರ, ವಿಶ್ವನಾಥಪುರ ಬಳಿಯ ವಿಲ್ಲಾದಲ್ಲಿ ಆರು ತಿಂಗಳಿಂದ ಕೆಲಸ ಮಾಡುತ್ತಿದ್ದರು. ಅದೇ ವಿಲ್ಲಾದಲ್ಲಿ ಭದ್ರತಾ ಸಿಬ್ಬಂದಿಯಾಗಿ ಕೆಲಸ ಮಾಡಿಕೊಂಡಿದ್ದ ಉತ್ತರ ಪ್ರದೇಶದ ಅರ್ಚನಾ ಅವರನ್ನು ಪ್ರೀತಿಸಿ ಮದುವೆ ಆಗಿದ್ದರು ಎಂದು ಪೊಲೀಸರು ಮಾಹಿತಿ ನೀಡಿದರು.

ಈ ನಡುವೆ ಅರ್ಚನಾ ಅವರು ಪತಿಯೊಂದಿಗೆ ಕೆಲಸ ಮಾಡುತ್ತಿದ್ದ ಪ್ರೋಷನ್ ಪಾಲ್ ಅವರೊಂದಿಗೆ ಸ್ನೇಹ ಬೆಳೆಸಿದ್ದರು. ಈ ವಿಚಾರ ತಿಳಿದಿದ್ದ ಪತಿ ಅವಿಜಿತ್ ಪಂಡಿತ್, ಪ್ರೋಷನ್ ಪಾಲ್‌ಗೆ ಎಚ್ಚರಿಕೆ ನೀಡಿದ್ದರು. ಜತೆಗೆ, ಪತ್ನಿಗೂ ಬುದ್ಧಿಮಾತು ಹೇಳಿದ್ದರು. ಅದರಿಂದ ಕೋಪಗೊಂಡಿದ್ದ ಅರ್ಚನಾ ಹಾಗೂ ಪ್ರೋಷನ್ ಅವರು ಅವಿಜಿತ್ ಕೊಲೆಗೆ ಸಂಚು ರೂಪಿಸಿದ್ದರು ಎಂದು ಮೂಲಗಳು ಹೇಳಿವೆ.

ವೈಯರ್‌ನಿಂದ ಬಿಗಿದು ಕೊಲೆ: ಅವಿಜಿತ್ ಅವರು ಮನೆಯಲ್ಲಿ ಮಲಗಿದ್ದರು. ಆ ಸಂದರ್ಭದಲ್ಲಿ ಅರ್ಚನಾ ಹಾಗೂ ಪ್ರೋಷನ್ ಪಾಲ್ ಅವರು ಮನೆಗೆ ಬಂದು ಅವಿಜಿತ್ ಅವರ ಕುತ್ತಿಗೆಗೆ ವೈಯರ್‌ನಿಂದ ಬಿಗಿದು, ತಲೆಗೆ ಕಬ್ಬಿಣದ ರಾಡ್‌ನಿಂದ ಹೊಡೆದು ಕೊಲೆ ಮಾಡಿದ್ದರು. ಕೃತ್ಯ ಎಸಗಿದ ಬಳಿಕ ಮೃತದೇಹವನ್ನು ಚೀಲದಲ್ಲಿ ತುಂಬಿಕೊಂಡು ಮತ್ಕೂರು ಕೆರೆಯಲ್ಲಿ ಎಸೆದು ಪರಾರಿ ಆಗಿದ್ದರು ಎಂದು ಮೂಲಗಳು ಹೇಳಿವೆ.

ನಾಪತ್ತೆ ದೂರು ನೀಡಿದ್ದ ಪತ್ನಿ

ಕೃತ್ಯ ಎಸಗಿದ ಬಳಿಕ ಪತ್ನಿ ಅರ್ಚನಾ ಅವರು ರಾಜಾನುಕುಂಟೆ ಠಾಣೆಗೆ ತೆರಳಿ ಪತಿ ನಾಪತ್ತೆ ಆಗಿದ್ದಾರೆ ಎಂದು ದೂರು ನೀಡಿದ್ದರು. ಅಲ್ಲದೇ ಪತಿಯ ತಂದೆಗೂ ಕರೆ ಮಾಡಿ 'ನಿಮ್ಮ ಮಗ ಕಾಣೆ ಆಗಿದ್ದಾರೆ' ಎಂದು ಮಾಹಿತಿ ನೀಡಿದ್ದರು.

ಗಾಬರಿಗೊಂಡ ಅವಿಜಿತ್ ತಂದೆ ಅರುಣ್ ಚಂದ್ರ ಅವರು ಪಶ್ಚಿಮ ಬಂಗಾಳದಿಂದ ನಗರಕ್ಕೆ ಬಂದು ಸ್ಥಳೀಯರಿಂದ ಮಾಹಿತಿ ಪಡೆದುಕೊಂಡಿದ್ದರು. ಸೊಸೆ ಅರ್ಚನಾ ಮೇಲೆ ಅನುಮಾನಗೊಂಡು ದೂರು ನೀಡಿದ್ದರು. ದೂರು ಆಧರಿಸಿ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಿದ ಪೊಲೀಸರು, ಮೊದಲಿಗೆ ಅರ್ಚನಾ ಅವರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದಾಗ ಕೃತ್ಯ ಎಸಗಿರುವುದು ಬಯಲಾಯಿತು. ನಂತರ, ಪ್ರೋಷನ್ ಪಾಲ್‌ನನ್ನು ಬಂಧಿಸಲಾಗಿದೆ. 'ಇಬ್ಬರು ಕೃತ್ಯ ಎಸಗಿರುವುದಾಗಿ ತಪ್ಪೊಪ್ಪಿಕೊಂಡಿದ್ದಾರೆ. ಇಬ್ಬರನ್ನೂ ಜೈಲಿಗೆ ಕಳುಹಿಸಲಾಗಿದೆ' ಎಂದು ಪೊಲೀಸರು ಹೇಳಿದರು.

ಅಪರಾಧ ಸುದ್ದಿ

ಅಪಘಾತ: ಸ್ಥಳದಲ್ಲಿಯೇ ಟೆಕಿ ಸಾವು

ಎಚ್‌ಎಎಲ್ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಕಾರು ಹಾಗೂ ಬೈಕ್ ನಡುವೆ ಗುರುವಾರ ಮುಂಜಾನೆ ಸಂಭವಿಸಿದ ಅಪಘಾತದಲ್ಲಿ ಸಾಫ್ಟ್‌ವೇರ್ ಎಂಜಿನಿಯರ್, ಆಂಧ್ರಪ್ರದೇಶದ ಅನಂತಪುರದ ಕೃಷ್ಣಾಶ್ರೀ(26) ಸ್ಥಳದಲ್ಲೇ ಮೃತಪಟ್ಟಿದ್ದಾರೆ.

ಕೃಷ್ಣಾಶ್ರೀ ಅವರು ನಗರದ ಸಾಫ್ಟ್‌ವೇರ್ ಕಂಪನಿಯೊಂದರಲ್ಲಿ ಕೆಲಸ ಮಾಡುತ್ತಿದ್ದರು. ಪೇಯಿಂಗ್ ಗೆಸ್ಟ್ ಹಾಸ್ಟೆಲ್‌ನಲ್ಲಿ ನೆಲಸಿದ್ದರು. ಸಹೋದ್ಯೋಗಿ ಅವಿನಾಶ್ (26) ಎಂಬುವರ ಜೊತೆಗೆ ಕೃಷ್ಣಾಶ್ರೀ ಅವರು ಬೈಕ್‌ನಲ್ಲಿ ತೆರಳುತ್ತಿದ್ದರು. ಮಾರತ್‌ಹಳ್ಳಿಯ ಮುಖ್ಯರಸ್ತೆಯಲ್ಲಿ ಸಾಗುವಾಗ ವೇಗವಾಗಿ ಬಂದ ಕಾರು, ಬೈಕ್‌ಗೆ ಡಿಕ್ಕಿ ಹೊಡೆದ ಪರಿಣಾಮ ಕೃಷ್ಣಾಶ್ರೀ ಅವರು ಕೆಳಕ್ಕೆ ಬಿದ್ದಿದ್ದರು. ಬಿದ್ದ ರಭಸಕ್ಕೆ ಗಂಭೀರವಾಗಿ ಗಾಯಗೊಂಡು ಸ್ಥಳದಲ್ಲಿಯೇ ಮೃತಪಟ್ಟಿದ್ದಾರೆ. ಅವಿನಾಶ್ ಅವರಿಗೆ ಸಣ್ಣ ಪ್ರಮಾಣದ ಗಾಯವಾಗಿದ್ದು, ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದು ಮನೆಗೆ ತೆರಳಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಕಾರು ಚಾಲಕನ ವಿರುದ್ಧ ಎಚ್‌ಎಎಲ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಜೆ.ಜೆ.ನಗರ ಠಾಣೆ ವ್ಯಾಪ್ತಿಯಲ್ಲಿ ಘಟನೆ

ಮೆಕ್ಯಾನಿಕ್ ಕೊಲೆ: ಇಬ್ಬರ ವಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಸ್ತೆಯಲ್ಲಿ ಮೆಕ್ಯಾನಿಕ್‌ನನ್ನು ಅಡ್ಡಗಟ್ಟಿ ಕೊಲೆ ಮಾಡಿರುವ ಘಟನೆ ಜೆ.ಜೆ.ನಗರ ಪೊಲೀಸ್ ಠಾಣೆ ವ್ಯಾಪ್ತಿಯ ಟಿಪ್ಪು ಚೌಕ್ ಬಳಿ ಬುಧವಾರ ರಾತ್ರಿ ನಡೆದಿದೆ.

ದೇವರಾಜು ಅರಸು ನಗರದ ನಿವಾಸಿ ಅಕ್ರಂ ಪಾಷಾ(45) ಕೊಲೆಯಾದವರು.

'ಬುಧವಾರ ರಾತ್ರಿ 11.30ರ ಸುಮಾರಿಗೆ ಜೆ.ಜೆ.ನಗರದ ಟಿಪ್ಪು ಚೌಕ್ ಬಳಿ ಘಟನೆ ನಡೆದಿದೆ. ಕೃತ್ಯ ಎಸಗಿದ ಆರೋಪದ ಅಡಿ ಖಾಲೀದ್ ಮತ್ತು ಅವರ ಸ್ನೇಹಿತನನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಲಾಗುತ್ತಿದೆ' ಎಂದು ಪೊಲೀಸರು ಹೇಳಿದರು.

'ಕಾರು ಮೆಕ್ಯಾನಿಕ್ ಆಗಿ ಕೆಲಸ ಮಾಡುತ್ತಿದ್ದ ಅಕ್ರಂ ಪಾಷಾ ಅವರಿಗೆ ಮದುವೆಯಾಗಿ ಇಬ್ಬರು ಮಕ್ಕಳಿದ್ದಾರೆ. ಎರಡು ವರ್ಷಗಳ ಹಿಂದೆ ಅಕ್ರಂ ಅವರು ಹರ್ಬಲ್ ಲೈಫ್ ಕಂಪನಿಯೊಂದರಲ್ಲಿ ಕೆಲಸ ಮಾಡುತ್ತಿದ್ದರು. ಆಗ, ಆರೋಪಿ ಖಾಲೀದ್ ಅವರ ಪತ್ನಿ ಪರಿಚಯವಾಗಿದ್ದರು. ಇಬ್ಬರು ಒಟ್ಟಿಗೆ ಫೋಟೊ ತೆಗೆಸಿಕೊಂಡಿದ್ದರು. ಅದನ್ನು ಗಮನಿಸಿದ್ದ ಖಾಲೀದ್, ಪತ್ನಿಯೊಂದಿಗೆ ಪ್ರತಿನಿತ್ಯ ಗಲಾಟೆ ಮಾಡುತ್ತಿದ್ದರು. ಅಲ್ಲದೆ, ಅಕ್ರಂ ಪಾಷಾ ಅವರೊಂದಿಗೂ ಗಲಾಟೆ ಮಾಡಿಕೊಂಡಿದ್ದರು' ಎಂದು ಮೂಲಗಳು ಹೇಳಿವೆ.

'ಚಾಮರಾಜಪೇಟೆಯಲ್ಲಿ ಬುಧವಾರ ರಾತ್ರಿ ನಡೆದ ಕಾರ್ಯಕ್ರಮವೊಂದಕ್ಕೆ ಅಕ್ರಂ ಪಾಷಾ ಹೋಗಿದ್ದರು. ಬೈಕ್‌ನಲ್ಲಿ ವಾಪಸ್ ಬರುವಾಗ ಜೆ.ಜೆ.ನಗರದ ಟಿಪ್ಪು ಚೌಕ್ ಬಳಿ ಅಡ್ಡಗಟ್ಟಿದ ಆರೋಪಿಗಳು, ಚಾಕುವಿನಿಂದ ಅಕ್ರಂ ಪಾಷಾ ಅವರ ಬೆನ್ನು, ಎದೆ ಸೇರಿ ವಿವಿಧೆಡೆ ಇರಿದು ಪರಾರಿ ಆಗಿದ್ದರು. ಅಕ್ರಂ ಪಾಷಾ ಅವರನ್ನು ವಿಕ್ಟೋರಿಯಾ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಅಲ್ಲಿ ಅವರು ಮೃತಪಟ್ಟಿದ್ದಾರೆ' ಎಂದು ಪೊಲೀಸರು ಹೇಳಿದರು.

ಜೆ.ಜೆ.ನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಆದೇಶ ಉಲ್ಲಂಘನೆ: ಇಬ್ಬರು ರೌಡಿಗಳ ಸೆರೆ

ಬೆಂಗಳೂರು: ಗಡಿಪಾರು ಆದೇಶ ಉಲ್ಲಂಘಿಸಿದ್ದ ಡಿ.ಜೆ.ಹಳ್ಳಿ ಪೊಲೀಸ್ ಠಾಣೆಯ ರೌಡಿಶೀಟರ್ ಅಕ್ರಂ ಅಲಿಯಾಸ್ ಅಕ್ಕು(30) ಅವರನ್ನು ಗುರುವಾರ ಪೊಲೀಸರು ಬಂಧಿಸಿದ್ದಾರೆ.



'ಅಕ್ರಂ ವಿರುದ್ಧ ಡಿ.ಜೆ. ಹಳ್ಳಿ ಪೊಲೀಸ್ ಠಾಣೆಯಲ್ಲಿ ಎರಡು ಪ್ರಕರಣಗಳು ದಾಖಲಾಗಿದ್ದವು. ಅಕ್ರಂ ಪದೇ ಪದೇ ಗಲಾಟೆ ಸೇರಿದಂತೆ ಹಲವು ಕಾನೂನು ಬಾಹಿರ ಚಟುವಟಿಕೆಗಳಲ್ಲಿ ಭಾಗಿ ಆಗುತ್ತಿದ್ದರು. ಕೋಲಾರ ಜಿಲ್ಲೆಯ ಮಾಲೂರು ತಾಲ್ಲೂಕಿಗೆ ಅಕ್ರಂ ಅವರನ್ನು ಗಡಿಪಾರು ಮಾಡಿ ಪೂರ್ವ ವಿಭಾಗದ ಡಿಸಿಪಿ ಕಳೆದ ಮಾರ್ಚ್‌ನಲ್ಲಿ ಆದೇಶಿಸಿದ್ದರು. ಗಡಿಪಾರು ಆದೇಶವನ್ನು ಉಲ್ಲಂಘಿಸಿದ್ದ ಅಕ್ರಂ ಮತ್ತೆ ಬೆಂಗಳೂರಿಗೆ ಬಂದು ನೆಲಸಿದ್ದರು. ಬಾತ್ಮೀದಾರರು ನೀಡಿದ ಖಚಿತ ಮಾಹಿತಿ ಆಧರಿಸಿ, ಸಿಸಿಬಿಯ ಸಂಘಟಿತ ಅಪರಾಧ ದಳ (ಪೂರ್ವ) ಸಿಬ್ಬಂದಿ ಕಾರ್ಯಾಚರಣೆ ನಡೆಸಿ ಆರೋಪಿಯನ್ನು ಬಂಧಿಸಿದ್ದಾರೆ' ಎಂದು ಮೂಲಗಳು ತಿಳಿಸಿವೆ.

ವಿಚಾರಣೆಗೆ ಗೈರು: ನ್ಯಾಯಾಲಯದಲ್ಲಿ ವಿಚಾರಣೆಗೆ ಹಾಜರಾಗದೆ ತಲೆಮರೆಸಿಕೊಂಡಿದ್ದ ರೌಡಿ ಶಾಹೀದ್ ಪಾಷಾ (30) ಅವರನ್ನು ಕೆ.ಜಿ. ಹಳ್ಳಿ ಠಾಣೆಯ ಪೊಲೀಸರು ಗುರುವಾರ ಬಂಧಿಸಿದ್ದಾರೆ.

ಶಾಹೀದ್ ಅವರು ಕೆ.ಜಿ. ಹಳ್ಳಿ ಪೊಲೀಸ್ ಠಾಣೆಯ ರೌಡಿಶೀಟರ್ ಆಗಿದ್ದಾರೆ. ಪ್ರಕರಣವೊಂದರಲ್ಲಿ ಅವರನ್ನು ಬಂಧಿಸಲಾಗಿತ್ತು. ಜಾಮೀನು ಪಡೆದು ಹೊರಬಂದಿದ್ದ ಅವರು ನ್ಯಾಯಾಲಯದ ವಿಚಾರಣೆಗೆ ಹಾಜರಾಗದೇ ತಲೆಮರೆಸಿಕೊಂಡಿದ್ದರು. ಪೊಲೀಸ್ ಬಾತ್ಮೀದಾರರು ನೀಡಿದ ಖಚಿತ ಮಾಹಿತಿ ಆಧರಿಸಿ, ಆರೋಪಿಯನ್ನು ಸಿಸಿಬಿಯ ಸಂಘಟಿತ ಅಪರಾಧ ದಳ ವಿಭಾಗದ ಪೊಲೀಸರು ಬಂಧಿಸಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಐಪಿಎಲ್ ಬೆಟ್ಟಿಂಗ್‌ಗೆ ಸಾಲ: ವ್ಯಕ್ತಿ ಆತ್ಮಹತ್ಯೆ

ತುಮಕೂರು: ನಗರದ ವಿನೋಬನಗರದ ವಸತಿಗೃಹದಲ್ಲಿ ಭರತೇಶ್ (37) ಎಂಬುವರು ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಭರತೇಶ್ ಶಿವಮೊಗ್ಗ ಜಿಲ್ಲೆಯ ಭದ್ರಾವತಿಯವರು. ಅಲ್ಲಿನ ಉಕ್ಕಿನ ಕಾರ್ಖಾನೆಯಲ್ಲಿ ಕೆಲಸ ಮಾಡುತ್ತಿದ್ದರು. ಬುಧವಾರ ಮಧ್ಯಾಹ್ನ ನಗರಕ್ಕೆ ಬಂದು, ವಸತಿಗೃಹದಲ್ಲಿ ಕೊಠಡಿ ಪಡೆದುಕೊಂಡಿದ್ದರು. ರಾತ್ರಿ 8 ಗಂಟೆಯಾದರೂ ಹೊರಗೆ ಬಂದಿರಲಿಲ್ಲ. ವಸತಿಗೃಹ ಸಿಬ್ಬಂದಿ ಅನುಮಾನಗೊಂಡು ಕೊಠಡಿ ಬಳಿ ಹೋಗಿ ಮಾತನಾಡಿಸಿದ್ದು, ಬಾಗಿಲು ತೆಗೆದಿಲ್ಲ. ಸಿಬ್ಬಂದಿ ಪೊಲೀಸರಿಗೆ ಮಾಹಿತಿ ನೀಡಿದ್ದು, ಬಾಗಿಲು ಒಡೆದು ನೋಡಿದಾಗ ನೇಣು ಹಾಕಿಕೊಂಡ ಸ್ಥಿತಿಯಲ್ಲಿ ಮೃತದೇಹ ಕಾಣಿಸಿದೆ.

ಐಪಿಎಲ್ ಕ್ರಿಕೆಟ್ ಟೂರ್ನಿ ಸಮಯದಲ್ಲಿ ಬೆಟ್ಟಿಂಗ್ ಕಟ್ಟಲು ಸಾಲ ಮಾಡಿದ್ದರು. ಅದನ್ನು ತೀರಿಸಲು ಆಗದೆ ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂಬ ಅನುಮಾನ ವ್ಯಕ್ತವಾಗಿದೆ. ತಿಲಕ್‌ಪಾರ್ಕ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ವಿದ್ಯಾರ್ಥಿನಿ ಮೇಲೆ ಅತ್ಯಾಚಾರಕ್ಕೆ ಯತ್ನಿಸಿದ್ದ ಆರೋಪಿ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಟೀ ಕುಡಿದು ರಸ್ತೆಯಲ್ಲಿ ತೆರಳುತ್ತಿದ್ದ 23 ವರ್ಷದ ವಿದ್ಯಾರ್ಥಿನಿಯನ್ನು ನಿರ್ಜನ ಪ್ರದೇಶಕ್ಕೆ ಎಳೆದೊಯ್ದು ಅತ್ಯಾಚಾರಕ್ಕೆ ಯತ್ನಿಸಿದ್ದ ಆರೋಪಿಯನ್ನು ವೈಟ್‌ಫೀಲ್ಡ್ ಠಾಣೆ ಪೊಲೀಸರು ಗುರುವಾರ ಬಂಧಿಸಿದ್ದಾರೆ.

ಪಶ್ಚಿಮ ಬಂಗಾಳದ ಸೈಫಲ್ ಮಂಡಲ್ (27) ಬಂಧಿತ.



ಸೈಫಲ್ ಮಂಡಲ್

ಕೆಲವು ವರ್ಷಗಳ ಹಿಂದೆ ನಗರಕ್ಕೆ ಬಂದಿದ್ದ ಆರೋಪಿ, ಚಿಂದಿ ಆಯುವ ಕೆಲಸ ಮಾಡುತ್ತಿದ್ದ. ಆರೋಪಿಯನ್ನು ಬಂಧಿಸಿ, ವಿಚಾರಣೆ ನಡೆಸಿ ನ್ಯಾಯಾಲಯಕ್ಕೆ ಹಾಜರು ಪಡಿಸಲಾಗಿತ್ತು. ಆರೋಪಿಯನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿ ನ್ಯಾಯಾಧೀಶರು ಆದೇಶಿಸಿದ್ದಾರೆ. ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹಕ್ಕೆ ಆರೋಪಿಯನ್ನು ಕಳುಹಿಸಲಾಗಿದೆ ಎಂದು ಪೊಲೀಸರು ಹೇಳಿದರು.

'ಜೂನ್ 2ರ ನಸುಕಿನಲ್ಲಿ ವಿದ್ಯಾರ್ಥಿನಿ ಟೀ ಕುಡಿಯಲು ಪೇಯಿಂಗ್ ಗೆಸ್ಟ್ ಹಾಸ್ಟೆಲ್‌ನಿಂದ ಹೊರಗೆ ಬಂದಿದ್ದರು. ಟೀ ಕುಡಿದು ವಾಪಸ್ ತೆರಳುತ್ತಿದ್ದ ವೇಳೆ ವಿದ್ಯಾರ್ಥಿನಿಯನ್ನು ಆರೋಪಿ ಎಳೆದೊಯ್ದು ಅತ್ಯಾಚಾರಕ್ಕೆ ಯತ್ನಿಸಿದ್ದ. ವಿದ್ಯಾರ್ಥಿನಿ ಗಾಬರಿಯಿಂದ ಕಿರುಚಾಡಿದ್ದರು. ರಸ್ತೆಯಲ್ಲಿ ಸಾಗುತ್ತಿದ್ದ ವಾಹನ ಚಾಲಕರು ಹಾಗೂ ಅಕ್ಕಪಕ್ಕದ ನಿವಾಸಿಗಳು ಸ್ಥಳಕ್ಕೆ ಬಂದಿದ್ದರು. ಅಷ್ಟರಲ್ಲಿ ಆರೋಪಿ ಸ್ಥಳದಿಂದ ಪರಾರಿ ಆಗಿದ್ದ' ಎಂದು ಮೂಲಗಳು ಹೇಳಿವೆ.

ಸಿಸಿಟಿವಿ ಕ್ಯಾಮೆರಾ ಪರಿಶೀಲನೆ: ಘಟನೆಯ ಬಳಿಕ ವಿದ್ಯಾರ್ಥಿನಿ ವೈಟ್‌ಫೀಲ್ಡ್ ಪೊಲೀಸ್ ಠಾಣೆಗೆ ದೂರು ನೀಡಿದ್ದರು. ಪ್ರಕರಣ ದಾಖಲಿಸಿಕೊಂಡಿದ್ದ ಪೊಲೀಸರು, ಕೃತ್ಯ ನಡೆದ ಸ್ಥಳದ ಅಕ್ಕಪಕ್ಕದಲ್ಲಿ ಅಳವಡಿಸಿದ ಸಿ.ಸಿ.ಟಿ.ವಿ ಕ್ಯಾಮೆರಾಗಳಲ್ಲಿ ಸೆರೆಯಾದ ದೃಶ್ಯಾವಳಿ ಪರಿಶೀಲನೆ ನಡೆಸಿ ಆರೋಪಿಯ ಮುಖಚಹರೆ ಪತ್ತೆಹಚ್ಚಿದ್ದರು. ಬಳಿಕ ಕಾರ್ಯಾಚರಣೆ ನಡೆಸಿ ಆರೋಪಿಯನ್ನು ಬಂಧಿಸುವಲ್ಲಿ ಯಶಸ್ವಿ ಆಗಿದ್ದಾರೆ ಎಂದು ಮೂಲಗಳು ಹೇಳಿವೆ.

ಬಹುಮಹಡಿ ಕಾರು ಪಾರ್ಕಿಂಗ್ ಕಟ್ಟಡ ನಿರ್ಮಾಣಕ್ಕೆ ಕೆಐಎಡಿಬಿ ಕೈಗೊಂಡಿದ್ದ ಭೂಸ್ವಾಧೀನ ಪ್ರಕ್ರಿಯೆ ರದ್ದು

ಖಾಸಗಿ ಜಮೀನು ಕಬಳಿಕೆ ಸಲ್ಲ: ಹೈಕೋರ್ಟ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಖಾಸಗಿ ಸಂಸ್ಥೆಗಳ ವ್ಯವಹಾರ ವಿಸ್ತರಣೆಗಾಗಿ, ಬಡ ರೈತರ ಜಮೀನು ಕಿತ್ತುಕೊಂಡು ಲಾಭ ಗಳಿಸುವ ಘಟಕಗಳಿಗೆ ನೀಡುವುದು ಕರ್ನಾಟಕ ಕೈಗಾರಿಕಾ ಪ್ರದೇಶ ಅಭಿವೃದ್ಧಿ ಕಾಯ್ದೆಯ (ಕೆಐಎಡಿ) ಉದ್ದೇಶವಲ್ಲ' ಎಂದು ಹೈಕೋರ್ಟ್ ಕಿಡಿಕಾರಿದೆ.

ಭೂ ಸ್ವಾಧೀನ ಪ್ರಕ್ರಿಯೆಗೆ ಕೆಐಎಡಿಬಿ ಹೊರಡಿಸಿದ್ದ ಅಂತಿಮ ಅಧಿಸೂಚನೆಯನ್ನು ಎತ್ತಿಹಿಡಿದಿದ್ದ ಏಕಸದಸ್ಯ ನ್ಯಾಯಪೀಠದ ಆದೇಶವನ್ನು ಪ್ರಶ್ನಿಸಿ ಅಲ್ಲಾಳಸಂದ್ರದ ಮುಖೇಶ್ ಕುಮಾರ್ ಸೇರಿದಂತೆ 12 ಜನರು ಸಲ್ಲಿಸಿದ್ದ ರಿಟ್ ಮೇಲ್ಮನವಿಗಳ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಡಿ.ಕೆ. ಸಿಂಗ್ ನೇತೃತ್ವದ ವಿಭಾಗೀಯ ಪೀಠ ಈ ಕುರಿತಂತೆ ಆದೇಶಿಸಿದೆ.



ಬೆಂಗಳೂರು ಉತ್ತರ ತಾಲ್ಲೂಕಿನ ಮಾದನಾಯಕನ ಹಳ್ಳಿ ವ್ಯಾಪ್ತಿಯಲ್ಲಿರುವ ಬೆಂಗಳೂರು ಅಂತರರಾಷ್ಟ್ರೀಯ ಪ್ರದರ್ಶನ ಕೇಂದ್ರದ (ಬಿಐಇಸಿ) ಬಳಿ ಬಹುಮಹಡಿ ಕಾರು ಪಾರ್ಕಿಂಗ್ ಕಟ್ಟಡ ನಿರ್ಮಿಸಲು ಕೆಐಎಡಿಬಿ ಕೈಗೊಂಡಿದ್ದ ಭೂಸ್ವಾಧೀನ ಪ್ರಕ್ರಿಯೆಯನ್ನು ರದ್ದುಗೊಳಿಸಿರುವ ನ್ಯಾಯಪೀಠ, 'ಒಂದು ವೇಳೆ ಖಾಸಗಿ ಕಂಪನಿಗಳು ಜಮೀನು ಸ್ವಾಧೀನ ಪಡಿಸಿಕೊಂಡರೂ, ಅದನ್ನು ಸಾರ್ವಜನಿಕ ಉದ್ದೇಶಕ್ಕೆ ಎಂದು ಪರಿಗಣಿಸಲು ಆಗುವುದಿಲ್ಲ' ಎಂದು ಸ್ಪಷ್ಟಪಡಿಸಿದೆ.

'ಕರ್ನಾಟಕ ಪ್ರದೇಶ ಕೈಗಾರಿಕಾ ಪ್ರದೇಶ ಅಭಿವೃದ್ಧಿ ಕಾಯ್ದೆ–1966ರ ಮೂಲ ಉದ್ದೇಶ ರಾಜ್ಯದಲ್ಲಿ ಕೈಗಾರಿಕಾ ಪ್ರದೇಶಗಳನ್ನು ವ್ಯವಸ್ಥಿತವಾಗಿ ಅಭಿವೃದ್ಧಿಪಡಿಸುವುದಾಗಿದೆ. ಅದಕ್ಕಾಗಿ ಜಮೀನನ್ನು ಗುರುತಿಸುವುದು, ಸ್ವಾಧೀನ ಪಡಿಸಿಕೊಳ್ಳುವುದು ಮತ್ತು ಅದಕ್ಕೆ ಬೇಕಾದ ರೀತಿಯಲ್ಲಿ ಮೂಲ ಸೌಲಭ್ಯಗಳನ್ನು ಕಲ್ಪಿಸುವುದೇ ಆಗಿದೆ. ಆದರೆ, ಯಾವುದೇ ನಿರ್ದಿಷ್ಟ ಖಾಸಗಿ ಸಂಸ್ಥೆಗಳು, ಲಾಭದಾಯಕ ಕಂಪನಿಯ ವ್ಯವಹಾರ ವಿಸ್ತರಣೆಗಾಗಿ ಬಡ ರೈತರ ಜಮೀನನ್ನು ಕಿತ್ತುಕೊಳ್ಳಲು ಅವಕಾಶವನ್ನು ಇದರಲ್ಲಿ ಕಲ್ಪಿಸಲಾಗಿಲ್ಲ' ಎಂದು ಎಚ್ಚರಿಸಿದೆ.

'ಕೆಐಎಡಿ ಕಾಯ್ದೆಯ ಕಲಂ 26ರ ಪ್ರಕಾರ ಪರಿಹಾರ ಪಾವತಿ ಮಾಡಬೇಕಾಗುತ್ತಿದೆ. ಈ ಪ್ರಕರಣದಲ್ಲಿ ಅಂತಿಮ ಅಧಿಸೂಚನೆ ಹೊರಡಿಸಿ 14 ವರ್ಷಗಳು ಗತಿಸಿದ್ದರೂ, ಜಮೀನು ಮಾಲೀಕರಿಗೆ ಯಾವುದೇ ಪರಿಹಾರ ಘೋಷಣೆ ಮಾಡಿಲ್ಲ. ಪರಿಹಾರ ಹಣವನ್ನು ಠೇವಣಿ ಇರಿಸಿಯೂ ಇಲ್ಲ ಹಾಗೂ ಪಾವತಿಯನ್ನೂ ಮಾಡಿಲ್ಲ. ಯಾವುದೇ ತಡೆಯಾಜ್ಞೆ ಇಲ್ಲದಿದ್ದರೂ ಪರಿಹಾರ ಘೋಷಣೆ ಮಾಡದೇ ಇರುವುದು ಭೂ ಸ್ವಾಧೀನ ಪ್ರಕ್ರಿಯೆ ರದ್ದಾಗಲು ಕಾರಣವಾಗಿದೆ' ಎಂದು ತಿಳಿಸಿದೆ. ಮೇಲ್ಮನವಿದಾರರ ಪರ ಪದಾಂಕಿತ ಹಿರಿಯ ವಕೀಲರಾದ ಎಚ್.ಎನ್.ಶಶಿಧರ ಹಾಗೂ ಬಸವರಾಜ ವಿ.ಸಬರದ ವಾದ ಮಂಡಿಸಿದ್ದರು.


ಪ್ರಕರಣವೇನು?

'ಭಾರತೀಯ ಯಂತ್ರೋಪಕರಣ ತಯಾರಕರ ಸಂಘ'ದ (ಐಎಂಟಿಎಂಎ) ವತಿಯಿಂದ ಬಹುಮಹಡಿ ಕಾರು ಪಾರ್ಕಿಂಗ್ ಕಟ್ಟಡ ನಿರ್ಮಿಸಲು ಮಾದನಾಯಕನಹಳ್ಳಿಯ ವಿವಿಧ ಸರ್ವೆ ನಂಬರ್‌ಗಳಲ್ಲಿ ಒಟ್ಟು 23 ಎಕರೆ 38 ಗುಂಟೆ ಜಮೀನನ್ನು ಸ್ವಾಧೀನಪಡಿಸಿಕೊಳ್ಳಲು ಕೆಐಎಡಿಬಿ 2010ರಲ್ಲಿ ಪ್ರಾಥಮಿಕ ಅಧಿಸೂಚನೆ ಹೊರಡಿಸಿತ್ತು. 2012ರ ಮೇ 2 ರಂದು 17.38 ಎಕರೆಗೆ ಸೀಮಿತಗೊಳಿಸಿ ಅಂತಿಮ ಭೂ ಸ್ವಾಧೀನಕ್ಕೆ ಅಧಿಸೂಚನೆ ಹೊರಡಿಸಿತ್ತು.

ಇದನ್ನು ಪ್ರಶ್ನಿಸಿ ಟಿ.ಕೃಷ್ಣಪ್ಪ ಸೇರಿದಂತೆ ಹಲವು ಜಮೀನು ಮಾಲೀಕರು ಹೈಕೋರ್ಟ್ ಮೆಟ್ಟಿಲೇರಿದ್ದರು. ವಿಚಾರಣೆ ನಡೆಸಿದ್ದ ಏಕಸದಸ್ಯ ನ್ಯಾಯಪೀಠ ಒಟ್ಟು ಜಮೀನಿನ ಪೈಕಿ ಕೇವಲ 7 ಎಕರೆ ಭೂ ಸ್ವಾಧೀನವನ್ನು ಮಾತ್ರ ಎತ್ತಿಹಿಡಿದು ಉಳಿದ ಪ್ರಕ್ರಿಯೆಯನ್ನು ರದ್ದುಗೊಳಿಸಿತ್ತು. ಈ ಆದೇಶವನ್ನು ಪ್ರಶ್ನಿಸಿ ಭೂ ಮಾಲೀಕರು ಮತ್ತು ಇತರರು ವಿಭಾಗೀಯ ಪೀಠಕ್ಕೆ ಮೇಲ್ಮನವಿ ಸಲ್ಲಿಸಿದ್ದರು.

ಕೇರಳಂ ಖಜಾನೆ ಖಾಲಿ: ಸತೀಶನ್ ವಾಗ್ದಾಳಿ

ಆರ್ಥಿಕ ಸ್ಥಿತಿಯ ಬಗ್ಗೆ ಶ್ವೇತಪತ್ರ ಮಂಡನೆ: ಎಲ್‌ಡಿಎಫ್– ಯುಡಿಎಫ್ ವಾಕ್ಸಮರ



ವಿ.ಡಿ. ಸತೀಶನ್

ಮುಖ್ಯಾಂಶಗಳು

- ಸರ್ಕಾರಿ ನೌಕರರಿಗೆ, ಪಿಂಚಣಿದಾರರಿಗೆ ಸಾವಿರಾರು ಕೋಟಿ ತುಟ್ಟಿಭತ್ಯೆ ಬಾಕಿ
- ಸಪ್ಲೆಕೋಗೆ ₹2 ಸಾವಿರ ಕೋಟಿ ಬಾಕಿ

ತಿರುವನಂತಪುರ (ಪಿಟಿಐ): 'ಹಿಂದಿನ ಎಲ್‌ಡಿಎಫ್ ಸರ್ಕಾರ, ಖಜಾನೆಯಲ್ಲಿ ₹5.07 ಲಕ್ಷ ಕೋಟಿಯಷ್ಟು ಸಾಲ ಬಾಕಿ ಉಳಿಸಿಕೊಂಡಿದ್ದು, ರಾಜ್ಯದ ಆರ್ಥಿಕ ಸ್ಥಿತಿಯ ಬಗ್ಗೆ ಜನರ ದಾರಿ ತಪ್ಪಿಸಿದೆ' ಎಂದು ಕೇರಳಂ ಮುಖ್ಯಮಂತ್ರಿ ವಿ.ಡಿ ಸತೀಶನ್ ಆರೋಪಿಸಿದರು.

ಕೇರಳಂ ಆರ್ಥಿಕ ಸ್ಥಿತಿಯ ಕುರಿತು ಗುರುವಾರ ವಿಧಾನಸಭೆಯಲ್ಲಿ ಸತೀಶನ್ ಮಂಡಿಸಿದ ಶ್ವೇತಪತ್ರವು, ಯುಡಿಎಫ್–ಎಲ್‌ಡಿಎಫ್ ಸದಸ್ಯರ ನಡುವೆ ವಾಕ್ಸಮರಕ್ಕೆ ಕಾರಣವಾಯಿತು.

'ಕಾನೂನು ಉಲ್ಲಂಘಿಸಿ, ಸಂವಿಧಾನಬಾಹಿರವಾಗಿ ದಾಖಲೆಗಳನ್ನು ಸೃಷ್ಟಿಸಲಾಗಿದೆ' ಎಂದು ಎಲ್‌ಡಿಎಫ್ ಆರೋಪಿಸಿತು. 'ರಾಜ್ಯದ ಆರ್ಥಿಕ ಸ್ಥಿತಿಯ ಬಗ್ಗೆ ಹೊರಗಿನ ವ್ಯಕ್ತಿಗಳು, ದಾಖಲೆ ಒದಗಿಸಿರುವುದನ್ನು ಒಪ್ಪಲು ಸಾಧ್ಯವಿಲ್ಲ' ಎಂದು ಮಾಜಿ ಹಣಕಾಸು ಸಚಿವ ಕೆ.ಎನ್. ಬಾಲಗೋಪಾಲ್ ಆಕ್ಷೇಪಿಸಿದರು. ವಾಸ್ತವ ಅಂಶಗಳನ್ನು ಪರಿಶೀಲಿಸಲಾಗಿದೆಯೇ ಎಂದು ಮಾಜಿ ಮುಖ್ಯಮಂತ್ರಿ, ವಿರೋಧ ಪಕ್ಷದ ನಾಯಕ ಪಿಣರಾಯಿ ವಿಜಯನ್ ಪ್ರಶ್ನಿಸಿದರು.

'ಖಜಾನೆಯಲ್ಲಿ ಸುಮಾರು ₹6 ಸಾವಿರ ಕೋಟಿಯಷ್ಟು ಮೊತ್ತ ಬಾಕಿ ಇದೆ ಎಂದು ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿರುವ ಮಾಹಿತಿ, ಜನರನ್ನು ದಾರಿತಪ್ಪಿಸಲು ಎಲ್‌ಡಿಎಫ್ ಸೃಷ್ಟಿಸಿದ ಕಟ್ಟುಕಥೆ' ಎಂದು ಸತೀಶನ್ ಹೇಳಿದರು.

'ವಾಸ್ತವದಲ್ಲಿ ಕೇರಳಂ ಮೂಲಸೌಕರ್ಯ ಹೂಡಿಕೆ ನಿಧಿ ಮಂಡಳಿಯಿಂದ (ಕೆಐಐಎಫ್‌ಬಿ) ಪಡೆದ ಸಾಲ, ಕೇರಳಂನ ಆಹಾರ ಮತ್ತು ನಾಗರಿಕ ಸರಬರಾಜು ನಿಗಮದ (ಸಪ್ಲೆಕೋ) ₹2 ಸಾವಿರ ಕೋಟಿ ಸಾಲ ಬಾಕಿ ಸೇರಿ ಖಜಾನೆಯಲ್ಲಿ ಭಾರಿ ಪ್ರಮಾಣದಲ್ಲಿ ಸಾಲ ಬಾಕಿ ಇದೆ. ಸರ್ಕಾರಿ ನೌಕರರಿಗೆ ಮತ್ತು ಪಿಂಚಣಿದಾರರಿಗೆ ಸಾವಿರಾರು ಕೋಟಿಯಷ್ಟು ತುಟ್ಟಿಭತ್ಯೆ ಮತ್ತು ತುಟ್ಟಿಭತ್ಯೆ ಪರಿಹಾರ ಬಾಕಿಯನ್ನು ಉಳಿಸಿಕೊಳ್ಳಲಾಗಿದೆ' ಎಂದು ಅವರು ಎಲ್‌ಡಿಎಫ್ ವಿರುದ್ಧ ಹರಿಹಾಯ್ದರು.

'ಕೇರಳಂ ಮೂಲಸೌಕರ್ಯ ಹೂಡಿಕೆ ನಿಧಿ ಮಂಡಳಿಗೆ ಸುಮಾರು ₹56 ಸಾವಿರ ಕೋಟಿಯಷ್ಟು ಸಾಲ ಮರುಪಾವತಿ ಸಬೇಕಿದೆ. ಹಿಂದೆ ವಿರೋಧ ಪಕ್ಷದ ಮುಖಂಡನಿದ್ದಾಗ, ಕೆಐಐಎಫ್‌ಬಿಯಿಂದ ಸಾಲ ಪಡೆಯುವುದಕ್ಕೆ ಮಿತಿ ಇರಲಿ ಎಂದು ಹಲವು ಬಾರಿ ಎಚ್ಚರಿಕೆ ನೀಡಿದರೂ, ಎಲ್‌ಡಿಎಫ್ ಕಿವಿಗೆ ಹಾಕಿಕೊಳ್ಳದ ಕಾರಣ ಈಗ ರಾಜ್ಯದ ಆರ್ಥಿಕ ಸ್ಥಿತಿ ತೀವ್ರವಾಗಿ ಹದಗೆಟ್ಟಿದೆ' ಎಂದು ಅವರು ದೂರಿದರು.

ವಿಧಾನಸಭೆಯಲ್ಲಿ ರಾಜ್ಯಪಾಲರ ಭಾಷಣಕ್ಕೆ ವಂದನೆ ಸಲ್ಲಿಸುವ ನಿರ್ಣಯದ ಮೇಲಿನ ಚರ್ಚೆಯ ವೇಳೆ ಗುರುವಾರ, ಸತೀಶನ್ ರಾಜ್ಯದ ಆರ್ಥಿಕ ಚಿತ್ರಣ ತೆರೆದಿಟ್ಟರು.

'ಶ್ವೇತಪತ್ರ ಮಂಡಿಸುವಲ್ಲಿ ನಿಯಮಗಳ ಉಲ್ಲಂಘನೆ ಆಗಿಲ್ಲ. ಇದು ವಿಧಾನಸಭೆಯ ದಾಖಲೆಗಳ ಭಾಗವಾಗಿದೆ' ಎಂದು ಸ್ಪೀಕರ್ ತಿರುವಂಜೂರ್ ರಾಧಾಕೃಷ್ಣನ್ ಹೇಳಿದರು.

ಎಡಿಎಂ ಸಾವಿನ ಪ್ರಕರಣ ಸಿಬಿಐ ತನಿಖೆ

ಸಿಪಿಎಂ ನಾಯಕಿ ಭಾಗಿಯಾಗಿರುವ, ಕಣ್ಣೂರಿನ ಹಿರಿಯ ಕಂದಾಯ ಅಧಿಕಾರಿ (ಎಡಿಎಂ) ನವೀನ್ ಬಾಬು ಸಾವಿನ ಪ್ರಕರಣವನ್ನು ಸಿಬಿಐ ತನಿಖೆಗೆ ಒಪ್ಪಿಸಲು ವಿ.ಡಿ ಸತೀಶನ್ ನೇತೃತ್ವದ ಕೇರಳಂ ಸಚಿವ ಸಂಪುಟ ಗುರುವಾರ ಶಿಫಾರಸು ಮಾಡಿದೆ.

ಕಣ್ಣೂರು ಜಿಲ್ಲಾ ಪಂಚಾಯಿತಿ ಮಾಜಿ ಅಧ್ಯಕ್ಷೆ, ಸಿಪಿಎಂ ನಾಯಕಿ ಪಿ.ಪಿ ದಿವ್ಯಾ ವಿರುದ್ಧ ಸಿಬಿಐ ತನಿಖೆ ನಡೆಸಲಿದೆ. 2024ರಲ್ಲಿ ಘಟನೆ ನಡೆದಿತ್ತು. ನವೀನ್ ಬಾಬು ಅವರ ಬೀಳ್ಕೊಡುಗೆ ಸಮಾರಂಭದಲ್ಲಿ ಪಿ.ಪಿ ದಿವ್ಯಾ ಅವರು, ಅವರ ವಿರುದ್ಧ ಭ್ರಷ್ಟಾಚಾರದ ಆರೋಪ ಹೊರಿಸಿ, ಅವಮಾನಿಸಿದ್ದರು. ಮರುದಿನ ಬೆಳಿಗ್ಗೆ ಬಾಬು ಅವರ ಮೃತದೇಹ ಅವರ ಮನೆಯಲ್ಲಿ ನೇಣುಬಿಗಿದ ಸ್ಥಿತಿಯಲ್ಲಿ ಪತ್ತೆಯಾಗಿತ್ತು.

ನವೀನ್ ಬಾಬು ಅವರ ಪುತ್ರಿಗೆ ಅನುಕಂಪದ ಆಧಾರದಲ್ಲಿ ಕೆಲಸ ನೀಡಲು ಅಗತ್ಯ ಕ್ರಮ ವಹಿಸುವಂತೆ ಮುಖ್ಯಮಂತ್ರಿ ಕಂದಾಯ ಇಲಾಖೆಗೆ ಸೂಚನೆ ನೀಡಿದ್ದಾರೆ.

ಸುದ್ದಿ 2 ನಿಮಿಷ

ದೆಹಲಿ ಅವಘಡ: ಹೋಟೆಲ್ ವ್ಯವಸ್ಥಾಪಕನಿಗೆ ತೀವ್ರ ಶೋಧ

ನವದೆಹಲಿ (ಪಿಟಿಐ): ದಕ್ಷಿಣ ದೆಹಲಿಯ ಮಾಳವೀಯ ನಗರದ ಹೋಟೆಲ್‌ನಲ್ಲಿ ಸಂಭವಿಸಿದ ಅಗ್ನಿ ದುರಂತದಲ್ಲಿ 21 ಜನರು ಮೃತಪಟ್ಟ ಪ್ರಕರಣಕ್ಕೆ ಸಂಬಂಧಿಸಿದಂತೆ ಹೋಟೆಲ್ ವ್ಯವಸ್ಥಾಪಕ ಜೈ ಮಿಶ್ರಾ ಅವರ ಪತ್ತೆಗೆ ಪೊಲೀಸರು ಗುರುವಾರ ತೀವ್ರ ಶೋಧ ನಡೆಸಿದ್ದಾರೆ.

ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಈಗಾಗಲೇ ಪೊಲೀಸರು ಹೋಟೆಲ್ ಮಾಲೀಕ ಲವಕೇಶ್ ಬಜಾಜ್ ಅವರನ್ನು ಬಂಧಿಸಿ ವಿಚಾರಣೆಗೆ ಒಳಪಡಿಸಿದ್ದಾರೆ.

'2022ರಲ್ಲಿ ಈ ಕಟ್ಟಡವನ್ನು ಸ್ವಾಧೀನಕ್ಕೆ ಪಡೆದು, ಅಲ್ಲಿ ಹೋಟೆಲ್ ಮತ್ತು ವಸತಿ ಗೃಹವನ್ನು ಆರಂಭಿಸಿದ್ದೇನೆ. ಹೋಟೆಲ್‌ನ ಪೂರ್ಣ ನಿರ್ವಹಣೆಯ ಜವಾಬ್ದಾರಿಯನ್ನು ಮಿಶ್ರಾ ಅವರಿಗೆ ನೀಡಿದ್ದು, ಪರವಾನಗಿ ಸಹ ಮಿಶ್ರಾ ಹೆಸರಿನಲ್ಲಿಯೇ ಇದೆ' ಎಂದು ಲವಕೇಶ್ ವಿಚಾರಣೆ ವೇಳೆ ಪೊಲೀಸರಿಗೆ ತಿಳಿಸಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಮತ್ತೊಂದು ಮೂಲದ ಪ್ರಕಾರ, ಇಡೀ ಹೋಟೆಲ್‌ನ ಏಕೈಕ ಮಾಲೀಕ ಲವಕೇಶ್ ಬಜಾಜ್ ಆಗಿದ್ದು, ವ್ಯವಹಾರದಲ್ಲಿ ಪಾಲುದಾರರನ್ನು ಹೊಂದಿಲ್ಲ ಎನ್ನಲಾಗಿದೆ. ಹೋಟೆಲ್ ಮತ್ತು ವಸತಿ ಗೃಹ ತೆರೆಯಲು ಅಗತ್ಯವಿರುವ ಎಲ್ಲ ಬಗೆಯ ಅನುಮತಿ ಪಡೆಯಲಾಗಿದೆಯೇ ಎಂಬುದರ ಕುರಿತು ಪೊಲೀಸರು ಪರಿಶೀಲನೆ ನಡೆಸುತ್ತಿದ್ದಾರೆ ಎಂದು ಗೊತ್ತಾಗಿದೆ.

ನೆರವಿಗೆ ಬಾರದ ಮಾಲೀಕ: 'ಹೋಟೆಲ್‌ನಲ್ಲಿ ಅಗ್ನಿ ಅವಘಡ ಸಂಭವಿಸಿದ ಸಂದರ್ಭದಲ್ಲಿ ಮಾಲೀಕ ಲವಕೇಶ್ ಅವರು ಹೋಟೆಲ್ ಮುಂದೆಯೇ ಸಾಗಿದ್ದಾರೆ. ಆದರೆ, ಕಟ್ಟಡಕ್ಕೆ ಬೆಂಕಿ ತಗುಲಿದ್ದರಿಂದ ಆತಂಕಗೊಂಡಿದ್ದ ಅವರು ಅಲ್ಲಿಂದ ಪರಾರಿಯಾಗಿದ್ದಾರೆ. ಮನೆಗೂ ಹೋಗದೆ, ನಗರದ ವಿವಿಧ ಪ್ರದೇಶಗಳಲ್ಲಿ ಸಂಚರಿಸಿ, ಕೊನೆಗೆ ಪೊಲೀಸರಿಗೆ ಸೆರೆ ಸಿಕ್ಕಿದ್ದಾರೆ' ಎಂದು ಮೂಲಗಳು ಹೇಳಿವೆ.

ಪ್ರಾಥಮಿಕ ತನಿಖೆ ಪ್ರಕಾರ, 6 ಕೊಠಡಿಗಳಿಗೆ ಅನುಮತಿ ಪಡೆದು, 25 ಕೊಠಡಿಗಳನ್ನು ನಿರ್ಮಿಸಿ ಹೋಟೆಲ್ ನಡೆಸಲಾಗುತ್ತಿತ್ತು. ಇದರ ಕಾರ್ಯ ನಿರ್ವಹಣೆಯಲ್ಲಿ ಸುರಕ್ಷತಾ ಮಾನದಂಡಗಳನ್ನು ಎಲ್ಲೆಲ್ಲಿ ಉಲ್ಲಂಘಿಸಲಾಗಿದೆ ಎಂಬುದರ ತನಿಖೆ ನಡೆಸಲಾಗುತ್ತಿದೆ ಎಂದು ಮೂಲಗಳು ಹೇಳಿವೆ.

ಕೇರಳಂಗೆ ಮುಂಗಾರು ಪ್ರವೇಶ ಗುಡುಗು ಸಹಿತ ಭಾರಿ ಮಳೆ



ತಿರುವನಂತಪುರಂ (ಪಿಟಿಐ): ಅಂದಾಜಿಗಿಂತ ಮೂರು ದಿನಗಳ ತಡವಾಗಿ ಕೇರಳಂಗೆ ನೈಋತ್ಯ ಮುಂಗಾರು ಗುರುವಾರ ಪ್ರವೇಶಿಸಿದೆ.

ರಾಜ್ಯದ ವಿವಿಧ ಭಾಗಗಳಲ್ಲಿ ಬೆಳಿಗ್ಗೆಯಿಂದಲೇ 40 ಕಿ.ಮೀ ವೇಗದಲ್ಲಿ ಗಾಳಿ ಬೀಸಿದ್ದು, ಗುಡುಗು ಸಹಿತ ಭಾರಿ ಮಳೆಯಾಗಿದೆ ಎಂದು ಭಾರತೀಯ ಹವಾಮಾನ ಇಲಾಖೆಯು ತಿಳಿಸಿದೆ.

ತಿರುವನಂತಪುರ, ಕೊಲ್ಲಂ, ಇಡುಕ್ಕಿ, ಪತ್ತನಂತಿಟ್ಟ, ತ್ರಿಶ್ಶೂರ್ ಜಿಲ್ಲೆಗಳಲ್ಲಿ ಬೆಳಿಗ್ಗೆಯಿಂದಲೇ ನಿರಂತರ ಮಳೆಯಾಗಿದೆ. 11 ಸೆಂಟಿ ಮೀಟರ್‌ನಿಂದ 20 ಸೆ.ಮೀ ಮಳೆಯಾದರೆ 'ಆರೆಂಜ್ ಅಲರ್ಟ್' ಘೋಷಿಸಲಾಗುತ್ತದೆ.

ಆಲಪ್ಪುಳ, ಕೊಟ್ಟಾಯಂ ಹಾಗೂ ಎರ್ನಾಕುಲಂ ಜಿಲ್ಲೆಯಲ್ಲಿ ಮೂರು ಗಂಟೆಗಳ ಕಾಲ 'ಆರೆಂಜ್ ಅಲರ್ಟ್' ಘೋಷಿಸಲಾಗಿತ್ತು.

₹899 ಕೋಟಿ ವಂಚನೆ: ಆರೋಪಿ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭಾರತೀಯ ಸ್ಟೇಟ್ ಬ್ಯಾಂಕ್ ಮತ್ತು ಸಹವರ್ತಿ ಬ್ಯಾಂಕ್‌ಗಳಿಂದ ₹899.35 ಕೋಟಿ ಸಾಲ ಪಡೆದು, ದುರ್ಬಳಕೆ ಮಾಡಿಕೊಂಡ ಪ್ರಕರಣದಲ್ಲಿ ದೀಪಕ್ ಕೇಬಲ್ಸ್ (ಇಂಡಿಯಾ) ಲಿಮಿಟೆಡ್‌ನ ವ್ಯವಸ್ಥಾಪಕ ನಿರ್ದೇಶಕ ಕೆ.ವೆಂಕಟೇಶ್ವರ ರಾವ್ ಅವರನ್ನು ಜಾರಿ ನಿರ್ದೇಶನಾಲಯವು 10 ದಿನಗಳ ಕಸ್ಟಡಿಗೆ ಪಡೆದಿದೆ.

ಈ ಪ್ರಕರಣದ ತನಿಖೆಯ ಭಾಗವಾಗಿ ಇ.ಡಿ ಬೆಂಗಳೂರು ವಲಯ ಕಚೇರಿಯ ಅಧಿಕಾರಿಗಳು ಬೆಂಗಳೂರು, ಚೆನ್ನೈ, ಮುಂಬೈ ಸೇರಿ ದೇಶದ 17 ವಿವಿಧ ಸ್ಥಳಗಳಲ್ಲಿ ಇದೇ ಮೇ 21ರಂದು ದಾಳಿ ನಡೆಸಿದ್ದರು. ಮೇ 29ರವರೆಗೂ ಸತತವಾಗಿ ನಡೆದಿದ್ದ ದಾಖಲೆಗಳ ಪರಿಶೀಲನೆಯ ನಂತರ ₹19.27 ಕೋಟಿ ಮೌಲ್ಯದ ಚಿನ್ನಾಭರಣ, ನಗದು ಮತ್ತು ಬ್ಯಾಂಕ್ ಠೇವಣಿಗಳನ್ನು ಮುಟ್ಟುಗೋಲು ಹಾಕಿಕೊಂಡಿತ್ತು.

ಕೆ.ವೆಂಕಟೇಶ್ವರ ರಾವ್ ಅವರನ್ನು ಜೂನ್ 1ರ ಸೋಮವಾರ ವಶಕ್ಕೆ ಪಡೆದು ವಿಚಾರಣೆ ನಡೆಸಿತ್ತು. ಸೋಮವಾರ ರಾತ್ರಿಯೇ ಅವರನ್ನು ಆರ್ಥಿಕ ಅಪರಾಧಗಳ ವಿಶೇಷ ನ್ಯಾಯಾಲಯದ ನ್ಯಾಯಾಧೀಶರ ಎದುರು ಹಾಜರುಪಡಿಸಲಾಗಿತ್ತು. 10 ದಿನಗಳ ಕಸ್ಟಡಿಗೆ ಪಡೆದಿದೆ. ವೆಂಕಟೇಶ್ವರ ರಾವ್ ಅವರ ಅಣತಿಯಂತೆಯೇ ಅಕ್ರಮ ನಡೆದಿದೆ. ಅಕ್ರಮದಲ್ಲಿ ಯಾರೆಲ್ಲಾ ಭಾಗಿಯಾಗಿದ್ದಾರೆ ಎಂಬುದರ ತನಿಖೆ ನಡೆಸಲು ಅವರ ಕಸ್ಟಡಿ ಅನಿವಾರ್ಯ ಎಂದು ಇ.ಡಿ ಅಧಿಕಾರಿಗಳು ನ್ಯಾಯಾಲಯವನ್ನು ಕೋರಿದ್ದರು.

'ಬಾಹ್ಯ ಹಿತಾಸಕ್ತಿಗಳಿಗೆ ಪ್ರಧಾನಿ ಆದ್ಯತೆ'

ಉತ್ತರಾಖಂಡದ ಸಂಪನ್ಮೂಲ ಲೂಟಿ: ಕಾಂಗ್ರೆಸ್ ನಾಯಕ ರಾಹುಲ್ ಆರೋಪ



ರಾಹುಲ್ ಗಾಂಧಿ

ಡೆಹ್ರಾಡೂನ್ (ಪಿಟಿಐ): 'ಪ್ರಧಾನಿ ನರೇಂದ್ರ ಮೋದಿ ಅವರು ರಾಷ್ಟ್ರೀಯ ಹಿತಾಸಕ್ತಿಗಿಂತಲೂ ಬಾಹ್ಯ ಹಿತಾಸಕ್ತಿಗಳಿಗೆ ಹೆಚ್ಚಿನ ಆದ್ಯತೆ ನೀಡುತ್ತಿದ್ದಾರೆ' ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಗುರುವಾರ ಆರೋಪಿಸಿದ್ದಾರೆ.

ಉತ್ತರಾ ಖಂಡದ ಅಲ್ಮೋರಾದಲ್ಲಿ ಸಾರ್ವಜನಿಕ ಸಭೆಯನ್ನುದ್ದೇಶಿಸಿ ಮಾತನಾಡಿದ ಅವರು, 'ಕೇಂದ್ರ ಸರ್ಕಾರವು ರಾಜ್ಯದ ಸಂಪನ್ಮೂಲವನ್ನು ಲೂಟಿ ಮಾಡುತ್ತಿದೆ' ಎಂದು ಟೀಕಿಸಿದರು. ರಾಹುಲ್ ಅವರಿದ್ದ ಹೆಲಿಕಾಪ್ಟರ್ ಪ್ರತಿಕೂಲ ಹವಾಮಾನದಿಂದಾಗಿ ಅಲ್ಮೋರಾದಲ್ಲಿ ಇಳಿಯದೆ ಪಂತ್‌ನಗರ ವಿಮಾನ ನಿಲ್ದಾಣಕ್ಕೆ ವಾಪಸಾಯಿತು. ಇದರಿಂದ ಅವರು ದೂರವಾಣಿ ಮೂಲಕ ರ‍್ಯಾಲಿಯನ್ನುದ್ದೇಶಿಸಿ ಮಾತನಾಡಿದರು.

'ಸಾಮಾನ್ಯ ಜನರನ್ನು ಸಬಲೀಕರಣಗೊಳಿಸುವ ಗುರಿಯೊಂದಿಗೆ ಕಾಂಗ್ರೆಸ್ ಪಕ್ಷ ಸ್ಥಾಪಿಸಿದ್ದ ಅರ್ಥ ವ್ಯವಸ್ಥೆಯನ್ನು ಬಿಜೆಪಿ ಸರ್ಕಾರ ನಾಶಪಡಿಸಿದೆ. ತುರ್ತು ಸಂದರ್ಭಗಳಿಗಾಗಿ ನೀವು ಮನೆಯಲ್ಲಿ ಇಟ್ಟುಕೊಂಡಿದ್ದ ಹಣವನ್ನು ನೋಟುರದ್ದತಿ ಮೂಲಕ ಕಸಿದುಕೊಂಡಿದೆ. ಜಿಎಸ್‌ಟಿಯು ಸಣ್ಣ ಉದ್ಯಮಗಳಿಗೆ ಹಾನಿ ಮಾಡಿದೆ' ಎಂದರು.

'ಉತ್ತರಾಖಂಡ ರಾಜ್ಯ ಸ್ಥಾಪನೆಯ ಹಿಂದಿನ ಉದ್ದೇಶವನ್ನೇ ಕೇಂದ್ರ ಸರ್ಕಾರ ದುರ್ಬಲಗೊಳಿಸಿದೆ. ಈ ರಾಜ್ಯವನ್ನು ರಚಿಸಲು ನೀವು ದೊಡ್ಡ ತ್ಯಾಗ ಮಾಡಿದ್ದೀರಿ. ದುಃಖಕರ ವಿಷಯವೆಂದರೆ, ಇಂದು ಉತ್ತರಾಖಂಡ ರಾಜ್ಯವನ್ನು ತನ್ನದೇ ಜನರು ನಿರ್ವಹಿಸುತ್ತಿಲ್ಲ. ಅದನ್ನು ದೆಹಲಿಯಿಂದ ರಿಮೋಟ್ ಕಂಟ್ರೋಲ್ ಮೂಲಕ ನಿರ್ವಹಿಸಲಾಗುತ್ತಿದೆ' ಎಂದು ಆರೋಪಿಸಿದರು.

ಹೊರಗಿನವರು ಈ ರಾಜ್ಯದ ನೈಸರ್ಗಿಕ ಸಂಪನ್ಮೂಲಗಳನ್ನು ಲೂಟಿ ಹೊಡೆಯುತ್ತಿದ್ದಾರೆ. ಸ್ಥಳೀಯ ಜನರು ಇಲ್ಲಿನ ಸಂಪನ್ಮೂಲದ ಪ್ರಯೋಜನಗಳನ್ನು ಪಡೆಯುತ್ತಿಲ್ಲ ಎಂದು ದೂರಿದರು.

'ದೇಶದ ಇಂಧನ ಭದ್ರತೆಯು ಈಗ ಬಾಹ್ಯ ಭೌಗೋಳಿಕ– ರಾಜಕೀಯ ಒತ್ತಡಗಳಿಂದ ನಿರ್ಬಂಧಿಸಲ್ಪಟ್ಟಿದೆ. ನಾವು ಇಂದು ಅಮೆರಿಕವು ಅನುಮತಿ ನೀಡಿದ ದೇಶಗಳಿಂದ ಮಾತ್ರ ತೈಲ ಖರೀದಿಸಬಹುದಾಗಿದೆ. ದೇಶದ ವಿದೇಶಾಂಗ ನೀತಿಯು ಹಳಿ ತಪ್ಪಿದೆ' ಎಂದರು.

'ಶಿಕ್ಷಣ ವ್ಯವಸ್ಥೆ ನಾಶ'

ಪ್ರಧಾನಿ ನರೇಂದ್ರ ಮೋದಿ ಅವರು ಕಳೆದ 12 ವರ್ಷಗಳಿಂದ ದೇಶದ ಶಿಕ್ಷಣ ವ್ಯವಸ್ಥೆಯನ್ನು ಹಾಳುಗೆಡವಿದ್ದಕ್ಕೆ ಇಡೀ ಯುವಜನರು ಅದರ ಬೆಲೆ ತೆರುತ್ತಿದ್ದಾರೆ ಎಂದು ರಾಹುಲ್ ಆರೋಪಿಸಿದರು. 'ನೀಟ್–ಯುಜಿ' ಪರೀಕ್ಷಾ ಆಕಾಂಕ್ಷಿಯೊಬ್ಬರ ಆತ್ಮಹತ್ಯೆ ಪ್ರಕರಣದ ಬೆನ್ನಲ್ಲೇ ರಾಹುಲ್, ಕೇಂದ್ರ ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿದ್ದಾರೆ.

'ನೀಟ್–ಯುಜಿ' ಪರೀಕ್ಷೆಯಲ್ಲಿನ ಗೊಂದಲದ ಕಾರಣ ಮಧ್ಯ ಪ್ರದೇಶದ ಮೌಗಂಜ್ ಜಿಲ್ಲೆಯ ನೀಟ್ ಅಭ್ಯರ್ಥಿ ಆಕಾಂಕ್ಷಾ ಚತುರ್ವೇದಿ ಖಿನ್ನತೆಗೆ ಒಳಗಾಗಿ ನಾಗ್ಪುರದಲ್ಲಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ' ಎಂದು ಮಾಧ್ಯಮಗಳಲ್ಲಿ ವರದಿಯಾಗಿತ್ತು.

'ವೈದ್ಯೆಯಾಗಬೇಕೆಂಬ ಕನಸು ಕಂಡಿದ್ದ ಆಕಾಂಕ್ಷಾ ಅವರು ನೀಟ್–ಯುಜಿ' ಪರೀಕ್ಷೆಯ ಗೊಂದಲದಿಂದ ನಮ್ಮಿಂದ ಶಾಶ್ವತವಾಗಿ ದೂರವಾದರು. ಅಕಾಂಕ್ಷಾ ಅವರದ್ದು ಬರೀ ಆತ್ಮಹತ್ಯೆಯಲ್ಲ. ಪ್ರಧಾನಿ ನರೇಂದ್ರ ಮೋದಿ ಅವರ ಆಡಳಿತದಲ್ಲಿ ಶಿಕ್ಷಣ ವ್ಯವಸ್ಥೆಯು ನಾಶವಾಗಿರುವುದರ ಪರಿಣಾಮ ಇದು' ಎಂದು ರಾಹುಲ್ ಹೇಳಿದ್ದಾರೆ.

ಅಪಪ್ರಚಾರ: ಬಿಜೆಪಿ ತಿರುಗೇಟು

ಪ್ರಧಾನಿ ನರೇಂದ್ರ ಮೋದಿ ಒಂದು ವರ್ಷದ ನಂತರ ಅಧಿಕಾರದಲ್ಲಿ ಉಳಿಯುವುದಿಲ್ಲ ಎಂಬ ರಾಹುಲ್ ಗಾಂಧಿ ಹೇಳಿಕೆಗೆ ಬಿಜೆಪಿ ಗುರುವಾರ ತಿರುಗೇಟು ನೀಡಿದ್ದು, 'ಕಾಂಗ್ರೆಸ್ ನಾಯಕ ಅಪಪ್ರಚಾರ ಮಾಡುತ್ತಿದ್ದಾರೆ' ಎಂದು ಟೀಕಿಸಿದೆ.

'ಮೋದಿ ಅವರು ಇನ್ನೊಂದು ವರ್ಷದೊಳಗೆ ಅಧಿಕಾರ ಕಳೆದುಕೊಳ್ಳಲಿದ್ದಾರೆ. ಏಕೆಂದರೆ, ಅವರು ವ್ಯವಸ್ಥೆಯ ಮೇಲಿನ ನಿಯಂತ್ರಣ ಕಳೆದುಕೊಳ್ಳುತ್ತಿದ್ದಾರೆ. ಜನರ ಆಕ್ರೋಶವನ್ನು ತಡೆಯಲು ತುರ್ತು ಪರಿಸ್ಥಿತಿಯನ್ನು ಹೇರಲು ಮುಂದಾಗಬಹುದು' ಎಂದು ರಾಹುಲ್ ಬುಧವಾರ ಹೇಳಿದ್ದರು.

ಈ ಹೇಳಿಕೆಗೆ ತೀಕ್ಷ್ಣವಾಗಿ ಪ್ರತಿಕ್ರಿಯಿಸಿದ ಬಿಜೆಪಿ ರಾಷ್ಟ್ರೀಯ ವಕ್ತಾರ ಶೆಹಜಾದ್ ಪೂನಾವಾಲಾ, 'ರಾಹುಲ್ ಅವರ ಹೇಳಿಕೆಯು ಕಾಂಗ್ರೆಸ್ ಪಕ್ಷದ ಸ್ವಂತ ಇತಿಹಾಸ ಮತ್ತು ಮನಃಸ್ಥಿತಿಯನ್ನು ಪ್ರತಿಬಿಂಬಿಸುತ್ತದೆ' ಎಂದರು.

'ರಾಹುಲ್ ಅವರು ತುರ್ತು ಪರಿಸ್ಥಿತಿಯ ಇತಿಹಾಸ ಹೊಂದಿರುವ ಕುಟುಂಬದಿಂದ ಬಂದವರು. ಆ ಕಾರಣದಿಂದಲೇ ಎಲ್ಲರೂ ತುರ್ತು ಪರಿಸ್ಥಿತಿ ಹೇರಲು ಹೊರಟಿದ್ದಾರೆ ಎಂದು ಅವರು ಭಾವಿಸುವರು. ಭಾರತದಲ್ಲಿ ಸಂವಿಧಾನವನ್ನು ಒಮ್ಮೆ ಮಾತ್ರ ಹತ್ತಿಕ್ಕಲಾಯಿತು ಮತ್ತು ಆ ಕೆಲಸವನ್ನು ಇಂದಿರಾ ಗಾಂಧಿ ಮಾಡಿದ್ದರು' ಎಂದು ಹೇಳಿದರು.

ವಿವರಣೆಗೆ ಸೂಚನೆ

ಬೆಂಗಳೂರು: ಅರ್ಹತಾ ಮಾನದಂಡಗಳನ್ನು ಪರಿಗಣಿಸದೆ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಅಧ್ಯಕ್ಷ ಸ್ಥಾನಕ್ಕೆ ತರಾತುರಿಯಲ್ಲಿ ನೇಮಕ ಮಾಡಲಾಗಿದೆ ಎಂಬ ದೂರಿನ ಬಗ್ಗೆ ವಿವರಣೆ ನೀಡುವಂತೆ ರಾಜ್ಯಪಾಲರು ಸರ್ಕಾರಕ್ಕೆ ಸೂಚಿಸಿದ್ದಾರೆ.

ದೇವರಾಜೇಗೌಡ ಪ್ರಕರಣ: ದೋಷಾರೋಪ ಪಟ್ಟಿಗೆ ಸಮ್ಮತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಾಸನದ ವಕೀಲ ಜಿ.ದೇವರಾಜೇ ಗೌಡ ವಿರುದ್ಧದ ಅತ್ಯಾಚಾರ ಆಪಾದನೆಯ ಪ್ರಕರಣಕ್ಕೆ ಸಂಬಂಧಿಸಿದ ದೋಷಾರೋಪ ಪಟ್ಟಿಯನ್ನು (ಅಂತಿಮ ತನಿಖಾ ವರದಿ) ವಿಚಾರಣಾ ನ್ಯಾಯಾಲಯಕ್ಕೆ ಸಲ್ಲಿಸಲು ಹೈಕೋರ್ಟ್ ಅನುಮತಿ ನೀಡಿದೆ.

'ಪ್ರಕರಣಕ್ಕೆ ಸಂಬಂಧಿಸಿದಂತೆ ನನ್ನ ವಿರುದ್ಧದ ಎಫ್‌ಐಆರ್ ರದ್ದುಪಡಿಸಬೇಕು' ಎಂದು ಕೋರಿ ದೇವರಾಜೇಗೌಡ ಸಲ್ಲಿಸಿದ್ದ ಕ್ರಿಮಿನಲ್ ಅರ್ಜಿಯನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಗುರುವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಅರ್ಜಿದಾರರ ಪರ ಪದಾಂಕಿತ ಹಿರಿಯ ವಕೀಲ ಎಂ.ಅರುಣ್ ಶ್ಯಾಮ್, 'ಈ ಪ್ರಕರಣ ಕಾನೂನಿನ ದುರ್ಬಳಕೆಗೆ ಸ್ಪಷ್ಟ ಉದಾಹರಣೆ. ಮೊದಲಿಗೆ ಅತ್ಯಾಚಾರ ಪ್ರಕರಣ ದಾಖಲಿಸಿರಲಿಲ್ಲ. ದೂರುದಾರೆಯ ಪತಿ ಎನ್ನಲಾದ ವ್ಯಕ್ತಿ ಜಾತಿನಿಂದನೆ ಪ್ರಕರಣ ದಾಖಲಿಸಿದ್ದರು. ಅದರಲ್ಲಿ ಬಿ ರಿಪೋರ್ಟ್ ಸಲ್ಲಿಸಿದ ಕಾರಣಕ್ಕೆ ದೂರುದಾರೆ ಅತ್ಯಾಚಾರದ ಆರೋಪ ಹೊರಿಸಿದ್ದಾರೆ. ರಾಜಕೀಯ ಪ್ರೇರಿತವಾಗಿ ಈ ಆಪಾದನೆಯಡಿ ಪ್ರಕರಣ ದಾಖಲಿಸಲಾಗಿದೆ' ಎಂದರು.

ಇದಕ್ಕೆ ರಾಜ್ಯ ಹೆಚ್ಚುವರಿ ಪ್ರಾಸಿಕ್ಯೂಟರ್ ಬಿ.ಎನ್.ಜಗದೀಶ್, 'ನ್ಯಾಯಾಲಯದ ಅನುಮತಿ ಪಡೆಯದೆ ತನಿಖೆಯ ಅಂತಿಮ ವರದಿ ಸಲ್ಲಿಸುವಂತಿಲ್ಲ ಎಂದು ಹೈಕೋರ್ಟ್ ಮಧ್ಯಂತರ ಆದೇಶ ಮಾಡಿದೆ. ಆ ಆದೇಶ ತೆರವುಗೊಳಿಸುವಂತೆ ಸರ್ಕಾರ ಮಧ್ಯಂತರ ಅರ್ಜಿ ಸಲ್ಲಿಸಿದೆ. ಪ್ರಕರಣದ ತನಿಖೆ ಪೂರ್ಣಗೊಂಡಿದ್ದು ದೋಷಾರೋಪ ಪಟ್ಟಿ ಸಿದ್ಧವಿದೆ. ಅದನ್ನು ವಿಚಾರಣಾ ನ್ಯಾಯಾಲಯಕ್ಕೆ ಸಲ್ಲಿಸಲು ಅನುಮತಿ ನೀಡಬೇಕು' ಎಂದು ಕೋರಿದರು.

ಇದಕ್ಕೆ ಪ್ರತಿಕ್ರಿಯಿಸಿದ ನ್ಯಾಯಪೀಠ, 'ಪ್ರಕರಣದಲ್ಲಿನ ಆರೋಪಗಳು ಬಹಳ ಗಂಭೀರವಾಗಿವೆ. ಪೊಲೀಸರು ಸಂಬಂಧಿಸಿದ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಲಿ. ಬೇಕಿದ್ದರೆ ಆ ದೋಷಾರೋಪ ಪಟ್ಟಿಯನ್ನು ಪ್ರಶ್ನಿಸಿ' ಎಂದು ಅರ್ಜಿದಾರರಿಗೆ ಸ್ವಾತಂತ್ರ್ಯ ಕಲ್ಪಿಸಿ ಅರ್ಜಿ ವಿಲೇವಾರಿ ಮಾಡಿತು.

'ಹಸಿರು' ಮೆರವಣಿಗೆ...

ಪ್ರಜಾವಾಣಿ ಚಿತ್ರ: ತಾಜುದ್ದೀನ್ ಆಜಾದ್



ಕಲಬುರಗಿ ಜಿಲ್ಲೆಯ ಚಿತ್ತಾಪುರ ತಾಲ್ಲೂಕಿನ ಮಾಡಬೂಳ ದ ಅರಣ್ಯ ಇಲಾಖೆಯ ನರ್ಸರಿಯಲ್ಲಿ ಕಾರ್ಮಿಕ ಮಹಿಳೆಯರು ವಿಶ್ವ ಪರಿಸರ ದಿನದ ಮುನ್ನಾದಿನವಾದ ಗುರುವಾರ ವನಮಹೋತ್ಸವಕ್ಕೆ ಸಸಿಗಳನ್ನು ಬುಟ್ಟಿಯಲ್ಲಿ ತುಂಬಿ ಸಾಗಿದ ನೋಟ...

ಗಡಿಪಾರು: ತಿಮರೋಡಿ ಮೇಲ್ಮನವಿ ವಜಾ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದಕ್ಷಿಣ ಕನ್ನಡ ಜಿಲ್ಲೆಯಿಂದ ರಾಯಚೂರು ಜಿಲ್ಲೆಯ ಮಾನ್ವಿ ತಾಲ್ಲೂಕಿಗೆ ಮೂರನೇ ಬಾರಿಗೆ ಗಡಿಪಾರು ಮಾಡಿ ಹೊರಡಿಸಲಾಗಿದ್ದ ಆದೇಶವನ್ನು ಪ್ರಶ್ನಿಸಿ ಮಹೇಶ್ ಶೆಟ್ಟಿ ತಿಮರೋಡಿ ಸಲ್ಲಿಸಿದ್ದ ಮೇಲ್ಮನವಿಯನ್ನು ಹೈಕೋರ್ಟ್ ವಜಾಗೊಳಿಸಿದೆ.

ಈ ಮೇಲ್ಮನವಿಯನ್ನು ಮುಖ್ಯ ನ್ಯಾಯಮೂರ್ತಿ ವಿಭು ಬಖ್ರು ನೇತೃತ್ವದ ವಿಭಾಗೀಯ ನ್ಯಾಯಪೀಠ ಗುರುವಾರ ವಿಚಾರಣೆ ನಡೆಸಿ, 'ಏಕಸಸದಸ್ಯ ನ್ಯಾಯಪೀಠದ ಆದೇಶದಲ್ಲಿ ಮಧ್ಯ ಪ್ರವೇಶಿಸುವುದಿಲ್ಲ' ಎಂಬ ಅಭಿಪ್ರಾಯ ವ್ಯಕ್ತಪಡಿಸಿತು.

ಇದೇ ವೇಳೆ ಅರ್ಜಿದಾರರ ಪರ ವಕೀಲರು, 'ಗೃಹ ಕಾರ್ಯದರ್ಶಿಗೆ ಮೇಲ್ಮನವಿ ಸಲ್ಲಿಸುವವರೆಗೂ ಗಡಿಪಾರು ಆದೇಶ ಜಾರಿಗೊಳಿಸದಂತೆ ಏಕಸದಸ್ಯ ನ್ಯಾಯಪೀಠ ನೀಡಿರುವ ಮಧ್ಯಂತರ ಆದೇಶವನ್ನು ವಿಸ್ತರಿಸಬೇಕು' ಎಂದು ಕೋರಿದರು. ಆದರೆ, ವಿಭಾಗೀಯ ನ್ಯಾಯಪೀಠ ಈ ಕೋರಿಕೆಯನ್ನು ತಳ್ಳಿಹಾಕಿತು.

ತಿಮರೋಡಿ ಅವರನ್ನು ಗಡಿಪಾರು ಮಾಡಿ 2026ರ ಮಾರ್ಚ್ 13ರಂದು ಪುತ್ತೂರು ಉಪವಿಭಾಗಾಧಿಕಾರಿ ಮೂರನೇ ಬಾರಿಗೆ ಆದೇಶ ಹೊರಡಿಸಿದ್ದರು. ಇದನ್ನು ಪ್ರಶ್ನಿಸಿ ತಿಮರೋಡಿ ಹೈಕೋರ್ಟ್ ಮೆಟ್ಟಿಲೇರಿದ್ದರು. ಈ ಅರ್ಜಿ ವಜಾಗೊಳಿಸಿದ್ದ ಏಕಸದಸ್ಯ ನ್ಯಾಯಪೀಠ, 'ಗಡಿಪಾರು ಆದೇಶಕ್ಕೆ ಸಂಬಂಧಿಸಿದಂತೆ ಗೃಹ ಕಾರ್ಯದರ್ಶಿಗೆ ಮೇಲ್ಮನವಿ ಸಲ್ಲಿಸಬಹುದು' ಎಂದು 2026ರ ಏಪ್ರಿಲ್ 30ರ ಆದೇಶದಲ್ಲಿ ಸೂಚಿಸಿತ್ತು. ಆದರೆ, ತಿಮರೋಡಿ ನೇರವಾಗಿ ಹೈಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿದ್ದರು.

ಅಂತರ ನಿಗಮ ವರ್ಗ: ಆದೇಶ ಪ್ರಕಟ

ಬೆಂಗಳೂರು: ಕೆಎಸ್‌ಆರ್‌ಟಿಸಿ, ಬಿಎಂಟಿಸಿ, ಕೆಕೆಆರ್‌ಟಿಸಿ, ಎನ್‌ಡಬ್ಲ್ಯುಆರ್‌ಟಿಸಿಗಳ ನಡುವಿನ 2026ನೇ ಸಾಲಿನ ಅಂತರ ನಿಗಮ ವರ್ಗಾವಣೆಯ ಆದೇಶವನ್ನು ksrtc.karnataka.gov.in ವೆಬ್‌ಸೈಟ್‌ನಲ್ಲಿ ಗುರುವಾರ ಪ್ರಕಟಿಸಲಾಗಿದೆ. ಮೇಲ್ವಿಚಾರಕರು (ದರ್ಜೆ–3), ನೌಕರರು (ದರ್ಜೆ–4) ಸಾಮಾನ್ಯ ವರ್ಗಾವಣೆ, ಪತಿ–ಪತ್ನಿ, ಶೇ 40 ಕ್ಕಿಂತ ಹೆಚ್ಚಿನ ಅಂಗವೈಕಲ್ಯ ಹೊಂದಿರುವವರು, ತೀವ್ರ ತರಹದ ಅನಾರೋಗ್ಯ ಹೊಂದಿರುವ ನೌಕರರು ಅರ್ಜಿ ಸಲ್ಲಿಸಲು ಅವಕಾಶ ನೀಡಲಾಗಿತ್ತು. ಪರಸ್ಪರ ವರ್ಗಾವಣೆಗೂ ಅವಕಾಶ ಕಲ್ಪಿಸಲಾಗಿತ್ತು.

ಪರಸ್ಪರ ವರ್ಗಗೊಂಡ ನೌಕರರನ್ನು ವರ್ಗಾವಣೆಗೊಂಡ ವಿಭಾಗಕ್ಕೆ ಜೂನ್ 8ರಂದು ಬಿಡುಗಡೆಗೊಳಿಸಲಾಗಿದೆ. ಸಾಮಾನ್ಯ ವರ್ಗಾವಣೆಗೊಂಡ ನೌಕರರಿಗೆ ಕೌನ್ಸೆಲಿಂಗ್ ಮೂಲಕ ಕಚೇರಿ/ಘಟಕ ಹಂಚಿಕೆ ಮಾಡಲಾಗುವುದು. ಜೂನ್ 11ರಿಂದ 17ರ ವರೆಗೆ www.ksrtc.org/transfer ಮೂಲಕ ಆನ್‌ಲೈನ್‌ನಲ್ಲಿ ಕೌನ್ಸೆಲಿಂಗ್ ನಡಸಲಾಗುವುದು ಎಂದು ಕೆಎಸ್‌ಆರ್‌ಟಿಸಿ ವ್ಯವಸ್ಥಾಪಕ ನಿರ್ದೇಶಕ ಅಕ್ರಂ ಪಾಷ ತಿಳಿಸಿದಾರೆ.

'ಸುಪ್ರೀಂ' ಸಮಿತಿಗೆ ಸಾಕ್ಷ್ಯ ಒದಗಿಸಿದ ಪರಿಸರ ಸಂಘಟನೆ

ಕಾನೂನು ಉಲ್ಲಂಘನೆ: ಸಿಇಸಿಗೆ ದೂರು

ಪ್ರಜಾವಾಣಿ ವಾರ್ತೆ



ಕೇಂದ್ರ ಉನ್ನತಾಧಿಕಾರ ಸಮಿತಿ (ಸಿಇಸಿ) ಮುಖ್ಯಸ್ಥ ಸುನೀಲ ಲಿಮಯೆ ಅವರಿಗೆ ಶಿರಸಿಯಲ್ಲಿ ನದಿ ತಿರುವು ಯೋಜನೆಯ ಮಾರಕ ಪರಿಣಾಮಗಳ ವೈಜ್ಞಾನಿಕ ವರದಿಗಳನ್ನು ಪರಿಸರ ಕಾರ್ಯಕರ್ತರು ನೀಡಿದರು

ಶಿರಸಿ: 'ಪಶ್ಚಿಮಘಟ್ಟ ವ್ಯಾಪ್ತಿಯಲ್ಲಿ ಕರ್ನಾಟಕ ಪವರ್ ಕಾರ್ಪೊರೇಷನ್ (ಕೆಪಿಸಿಎಲ್) ಅರಣ್ಯ ಮತ್ತು ಪರಿಸರ ಕಾನೂನುಗಳನ್ನು ಸಂಪೂರ್ಣವಾಗಿ ಗಾಳಿಗೆ ತೂರಿದೆಯೆಂದು ಆರೋಪಿಸಿ ವೃಕ್ಷಲಕ್ಷ ಆಂದೋಲನದ ಕಾರ್ಯಕರ್ತರು ಗುರುವಾರ ಅರಣ್ಯ ಪರಿಸರ ಕುರಿತ ಕೇಂದ್ರ ಉನ್ನತಾಧಿಕಾರ ಸಮಿತಿಗೆ (ಸಿಇಸಿ) ದೂರು ನೀಡಿದರು.

ಸಿಇಸಿ ಮುಖ್ಯಸ್ಥ ಸುನೀಲ ಲಿಮಯೆ ನೇತೃತ್ವದ ಉನ್ನತಾಧಿಕಾರ ತಂಡವು ಜೂನ್ 1 ರಿಂದ 4ರವರೆಗೆ ರಾಜ್ಯದ ಚಿಕ್ಕಮಗಳೂರು, ಶಿವಮೊಗ್ಗ ಹಾಗೂ ಉತ್ತರ ಕನ್ನಡ ಜಿಲ್ಲೆಗಳಲ್ಲಿ ಪ್ರವಾಸ ಕೈಗೊಂಡು ಶರಾವತಿ ಮತ್ತು ಗೇರುಸೊಪ್ಪ ಕಣಿವೆಗಳನ್ನು ಪರಿಶೀಲಿಸಿತು. ಶಿರಸಿಯಲ್ಲಿ ಅರಣ್ಯ ಅಧಿಕಾರಿಗಳ ಸಮ್ಮುಖದಲ್ಲಿ ಬೇಡ್ತಿ ಅಘನಾಶಿನಿ ಕೊಳ್ಳ ಸಂರಕ್ಷಣಾ ಸಮಿತಿ ಹಾಗೂ ವೃಕ್ಷಲಕ್ಷ ಆಂದೋಲನದ ಪ್ರಮುಖರೊಂದಿಗೆ ಸಂವಾದ ನಡೆಸಿತು.

ಸಭೆಯಲ್ಲಿ ಪರಿಸರ ಹೋರಾಟಗಾರ ಅನಂತ ಹೆಗಡೆ ಅಶೀಸರ, ವಿಜ್ಞಾನಿ ಕೇಶವ ಕೊರ್ಸೆ ಮತ್ತು ಬಾಲಚಂದ್ರ ಸಾಯಿಮನೆ ಅವರು ಬೇಡ್ತಿ–ವರದಾ ನದಿ ಜೋಡಣೆ ಹಾಗೂ ಅಘನಾಶಿನಿ ನದಿ ತಿರುವು ಯೋಜನೆಯ ಮಾರಕ ಪರಿಣಾಮಗಳನ್ನು ವಿವರಿಸಿದರು.

ಅಹವಾಲು ಸ್ವೀಕರಿಸಿದ ಸುನೀಲ ಲಿಮಯೆ ಅವರು, 'ಬೇಡ್ತಿ-ಅಘನಾಶಿನಿ ಜನಾಂದೋಲನದ ನಿರಂತರ ಪ್ರಯತ್ನ ಹಾಗೂ ಶಾಲ್ಮಲಾ ವನ್ಯಜೀವಿ ಸಂರಕ್ಷಿತ ಪ್ರದೇಶದ ಘೋಷಣೆಯನ್ನು ಶ್ಲಾಘಿಸಿದರು. ಸಾರ್ವಜನಿಕರು ಪರಿಸರ ಹಾನಿಯ ವಿರುದ್ಧ ಸಮಿತಿಗೆ ನೇರವಾಗಿ ದೂರು ಸಲ್ಲಿಸಬಹುದು' ಎಂದರು.

‘ಬಡ್ಡಿ ಸಮೇತ ಟಿಕೆಟ್ ದರ ಮರಳಿಸಿ’

ದೋಷ ಪೂರಿತ ಟಿಕೆಟ್: ಈರಣ್ಣ ಕಡಾಡಿ ದೂರು • ಗ್ರಾಹಕರ ಆಯೋಗದ ಆದೇಶ

ಪ್ರಜಾವಾಣಿ ವಾರ್ತೆ

ಬೆಳಗಾವಿ: ದೋಷಪೂರಿತ ವಿಮಾನ ಟಿಕೆಟ್ ನೀಡಿದ ಸ್ಪೈಸ್ ಜೆಟ್ ವಿಮಾನ ಸಂಸ್ಥೆಯ ವಿರುದ್ಧ ರಾಜ್ಯಸಭೆ ಸದಸ್ಯ ಈರಣ್ಣ ಕಡಾಡಿ ಅವರು ಗ್ರಾಹಕರ ಆಯೋಗಕ್ಕೆ ದೂರು ನೀಡಿದ್ದರ ಪ್ರಕರಣದಲ್ಲಿ, ಗ್ರಾಹಕರ ವ್ಯಾಜ್ಯಗಳ ಆಯೋಗವು ಏರ್ ಟಿಕೆಟ್ ಮೊತ್ತ ₹10,927ಕ್ಕೆ ಶೇ 9ರಷ್ಟು ಬಡ್ಡಿ ಸಮೇತ ಮರು ಸಂದಾಯ ಮಾಡುವಂತೆ ಆದೇಶಿಸಿದೆ.


ಈರಣ್ಣ ಕಡಾಡಿ

ಈರಣ್ಣ ಕಡಾಡಿ ಅವರು 2020ರ ಅಕ್ಟೋಬರ್ 9ರಂದು ದೆಹಲಿಯಿಂದ– ಬೆಂಗಳೂರಿಗೆ ಮತ್ತು ಅದೇ ನವೆಂಬರ್ 9ರಂದು ಬೆಂಗಳೂರಿನಿಂದ ದೆಹಲಿಗೆ ಕ್ರಮವಾಗಿ ₹5,004 ಮತ್ತು ₹5,923 ಮೊತ್ತದ ವಿಮಾನಯಾನದ ಟಿಕೆಟ್ ಖರೀದಿಸಿ ಪ್ರಯಾಣಿಸಿದ್ದರು. ನಂತರ ಮೊತ್ತವನ್ನು ಮರು ಸಂದಾಯ ಮಾಡಲು ಕೋರಿ ಸಕ್ಷಮ ಪ್ರಾಧಿಕಾರಕ್ಕೆ ಟಿಕೆಟ್ ಸಲ್ಲಿಸಿದ್ದರು.

ಸಕ್ಷಮ ಪ್ರಾಧಿಕಾರವು ಅವರ ಮನವಿಯನ್ನು ತಿರಸ್ಕರಿಸಿ ‘ಕೂಪನ್ ಟಿಕೆಟ್’ ಮೂಲಕ ಪ್ರಯಾಣಿಸಿದ್ದರಿಂದ ಮರು ಸಂದಾಯ ಮಾಡಲಾಗುವುದಿಲ್ಲ ಎಂದು ತಿಳಿಸಿತ್ತು.

ಈ ಕಾರಣದಿಂದ ಈರಣ್ಣ ಕಡಾಡಿ ಅವರು ವಿಮಾನ ಸಂಸ್ಥೆಯ ನಿಷ್ಕಾಳಜಿ ಮತ್ತು ಸೇವಾ ನ್ಯೂನತೆಯಿಂದ ತಾವು ಮುಜುಗರಕ್ಕೆ ಒಳಗಾಗಬೇಕಾಯಿತು ಮತ್ತು ತಮಗಾದ ತೊಂದರೆಗಳಿಗೆ ಪರಿಹಾರ ನೀಡಲು ಆದೇಶ ನೀಡಬೇಕು ಎಂದು ಕೋರಿ ಬೆಳಗಾವಿಯ ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗಕ್ಕೆ ದೂರು ಸಲ್ಲಿಸಿದ್ದರು.

ಮುಖ್ಯಾಂಶಗಳು

- ಸಂಸದರ ಪರ ಗ್ರಾಹಕರ ವ್ಯಾಜ್ಯಗಳ ಆಯೋಗ ಆದೇಶ
- ಮಾನಸಿಕ ನೋವಿಗೆ ₹10 ಸಾವಿರ ದಂಡ
- ಪ್ರಕರಣದ ವೆಚ್ಚ ₹5 ಸಾವಿರ ಭರಿಸುವುದು ಅನಿವಾರ್ಯ

ಆಯೋಗವು ಸ್ಪೈಸ್ ಜೆಟ್ ಮತ್ತು ‘ಈಸ್ ಮೈಟ್ರಿಪ್’ ಸೇವಾ ಸಂಸ್ಥೆಗಳಿಗೆ ನೋಟಿಸ್ ಜಾರಿ ಮಾಡಿತು. 1ನೇ ಎದುರುದಾರ ವಿಮಾನಯಾನ ಸಂಸ್ಥೆ ಹಾಜರಾಗದೇ ಇರುವುದರಿಂದ ಸಂಸ್ಥೆಯ ವಿರುದ್ಧ ‘ಏಕಪಕ್ಷೀಯ’ ಆದೇಶ ನೀಡಿತು.

2ನೇ ಪ್ರತಿವಾದಿ ‘ಈಸ್ ಮೈಟ್ರಿಪ್’ ಸಂಸ್ಥೆ ವಕೀಲರ ಮುಖಾಂತರ ಹಾಜರಾಗಿ ದೂರಿಗೆ ಪ್ರತಿವಾದ ಸಲ್ಲಿಸಿತ್ತು. ‘ಸಂಸ್ಥೆ ಕೇವಲ ಟಿಕೆಟ್ ಬುಕಿಂಗ್‌ನ ಮಧ್ಯವರ್ತಿ ಸಂಸ್ಥೆಯಾಗಿ ಮಾತ್ರ ಸೇವೆ ನೀಡಿದ್ದು, ಈ ಪ್ರಕರಣದಲ್ಲಿ ತನ್ನಿಂದ ಯಾವುದೇ ಸೇವಾ ನ್ಯೂನತೆ ಆಗಿಲ್ಲ’ ಎಂದು ವಾದ ಮಂಡಿಸಿತ್ತು.

ಪ್ರಕರಣ ಪರಿಶೀಲಿಸಿದ ಗ್ರಾಹಕರ ವ್ಯಾಜ್ಯಗಳ ಆಯೋಗದ ಅಧ್ಯಕ್ಷ ಮಹಾಂತೇಶ ಶಿಗ್ಲಿ ಹಾಗೂ ಗಿರೀಶಗೌಡ ಪಾಟೀಲ ಅವರನ್ನು ಒಳಗೊಂಡ ಜಿಲ್ಲಾ ಆಯೋಗವು, ವಿಮಾನ ಸೇವಾ ಸಂಸ್ಥೆಯು ದೋಷಯುಕ್ತ ಹಾಗೂ ತಪ್ಪಿನಿಂದ ಕೂಡಿದ ಟಿಕೆಟ್ ನೀಡಿ ಗ್ರಾಹಕರಿಗೆ ಸೇವಾ ನ್ಯೂನತೆ ಉಂಟು ಮಾಡಿದೆ ಎಂದು ಪರಿಗಣಿಸಿ, ಟಿಕೆಟ್ ಮೊತ್ತಕ್ಕೆ ಬಡ್ಡಿ ಸಮೇತ ಮರಳಿ ನೀಡಬೇಕು. ಅಲ್ಲದೇ, ದೂರುದಾರರಿಗೆ ಆದ ಮಾನಸಿಕ ನೋವಿಗೆ ₹10 ಸಾವಿರ ದಂಡ ಮತ್ತು ಪ್ರಕರಣದ ವೆಚ್ಚ ₹5 ಸಾವಿರ ಭರಿಸುವಂತೆ ಆದೇಶಿಸಿದೆ.

ಅನರ್ಹರ ‘ಗ್ಯಾರಂಟಿ’ ಸೌಲಭ್ಯಕ್ಕೆ ಕತ್ತರಿ?

ಒಂದನೇ ಪುಟದಿಂದ...

ತಮ್ಮ ಸರ್ಕಾರದ ದಿಕ್ಸೂಚಿಯನ್ನು ಮುಂದಿಟ್ಟ ಅವರು, ಭ್ರಷ್ಟಾಚಾರ ಮುಕ್ತ, ಪಾರದರ್ಶಕ ಆಡಳಿತ ನೀಡಲು ತಾವು ಬದ್ಧರಾಗಿದ್ದು, ಅದಕ್ಕೆ ಪೂರಕವಾಗಿ ಕಾರ್ಯ ನಿರ್ವಹಿಸಬೇಕು ಎಂಬ ಕಟ್ಟುನಿಟ್ಟಿನ ನಿರ್ದೇಶನವನ್ನೂ ನೀಡಿದರು.

ಸಭೆಯ ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಗ್ಯಾರಂಟಿ ಯೋಜನೆ ಪರಿಷ್ಕರಣೆ ಮಾಡುವುದಿಲ್ಲ. ಕೇವಲ ಫಲಾನುಭವಿಗಳ ಮಾಹಿತಿ ಸಂಗ್ರಹಿಸಲು ತೀರ್ಮಾನಿಸಲಾಗಿದೆ’ ಎಂದು ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯಿಸಿದರು.

‘ಗ್ಯಾರಂಟಿ ಯೋಜನೆಗಳ ಫಲಾನುಭವಿಗಳ ಮೊಬೈಲ್ ಸಂಖ್ಯೆ ಮತ್ತು ವಿವರಗಳಲ್ಲಿ ವ್ಯತ್ಯಾಸವಿದೆ. ಉದಾಹರಣೆಗೆ ‘ಗೃಹ ಜ್ಯೋತಿ’ ಯೋಜನೆಯಲ್ಲಿ 200 ಯೂನಿಟ್ ವಿದ್ಯುತ್ ಉಚಿತವಾಗಿ ಪಡೆದು ಅದನ್ನು ವಾಣಿಜ್ಯ ಉದ್ದೇಶಕ್ಕೆ ಬಳಸಲಾಗುತ್ತಿದೆ. ಈ ಯೋಜನೆಯಡಿ 1.64 ಕೋಟಿ ಫಲಾನುಭವಿಗಳಿದ್ದು, ಯಾರು ಅರ್ಹರಿದ್ದಾರೊ ಅವರು ಉಚಿತ ಪಡೆದರೆ ನಮ್ಮ ಅಭ್ಯಂತರವಿಲ್ಲ. ಯಾರೆಲ್ಲ ಯೋಜನೆ ಲಾಭ ಪಡೆಯುತ್ತಿದ್ದಾರೆ ಎಂಬ ಮಾಹಿತಿ ನಮ್ಮ ಬಳಿ ಇರಬೇಕಲ್ಲವೇ? ಒಬ್ಬರ ಹೆಸರಲ್ಲೇ ಐದಾರು ಮೀಟರ್‌ಗಳಿದ್ದು, ಇವರಲ್ಲಿ ನಮ್ಮ ರಾಜ್ಯದವರು ಇದ್ದಾರೋ, ಬೇರೆ ರಾಜ್ಯದವರು ಇದ್ದಾರೋ ಎಂಬ ಮಾಹಿತಿಯೂ ಅಗತ್ಯ ಇರಬೇಕಲ್ಲವೇ? ಆ ಕಾರಣಕ್ಕೆ ವಿವರ ಸಂಗ್ರಹಿಸಲು ಸೂಚನೆ ನೀಡಿದ್ದೇನೆ’ ಎಂದು ಶಿವಕುಮಾರ್ ಹೇಳಿದರು.

‘ಮೃತರ ಹೆಸರಿನಲ್ಲೂ ‘ಗೃಹಲಕ್ಷ್ಮಿ’ ಯೋಜನೆಯ ಹಣ ಪಡೆಯಲಾಗುತ್ತಿದೆ. ಹಣ ದುರುಪಯೋಗ ಆಗಬಾರದು ಎಂಬ ಕಾರಣಕ್ಕೆ ದೂರವಾಣಿ ಸಂಖ್ಯೆ ಸಹಿತ ಮಾಹಿತಿ ಪಡೆಯುತ್ತಿದ್ದೇವೆ. ಸತ್ತವರ ಹೆಸರಲ್ಲಿ ಯಾರೋ ಹಣ ತೆಗೆದುಕೊಂಡರೆ ಪರಿಶೀಲನೆ ಮಾಡಬಾರದೇ’ ಎಂದು ಅವರು ಪ್ರಶ್ನಿಸಿದರು.

ಭ್ರಷ್ಟಾಚಾರರಹಿತ ಆಡಳಿತ: ‘ಪಾರದರ್ಶಕ, ಮುಕ್ತ ಹಾಗೂ ಭ್ರಷ್ಟಾಚಾರರಹಿತ ಆಡಳಿತ ನೀಡುತ್ತೇವೆ. ಇದಕ್ಕಾಗಿ ಪಾರದರ್ಶಕತೆ ಗಮನದಲ್ಲಿಟ್ಟುಕೊಂಡು ಕೆಲಸ ಮಾಡಿ. ಜನರ ಭಾವನೆಗೆ ತಕ್ಕಂತೆ, ಜನರ ಸಮಸ್ಯೆಗಳನ್ನು ಬಗೆಹರಿಸಬೇಕು ಎಂದು ಅಧಿಕಾರಿಗಳಿಗೆ ನಿರ್ದೇಶನ ನೀಡಿದ್ದೇನೆ. 15 ದಿನಗಳಲ್ಲಿ ಎಲ್ಲಾ ಇಲಾಖೆಗಳಲ್ಲಿನ ಕಾರ್ಯ ಯೋಜನೆ ಸಿದ್ಧಪಡಿಸಬೇಕು ಎಂದು ಸೂಚಿಸಿದ್ದೇನೆ’ ಎಂದು ತಿಳಿಸಿದರು.

‘ಅಧಿಕಾರಿಗಳನ್ನು ಕರೆಸಿ ಚರ್ಚೆ ಮಾಡಿ, ಹೊಸ ಸರ್ಕಾರ ಯಾವ ದಿಕ್ಕಿನಲ್ಲಿ ಆಲೋಚನೆ ಮಾಡುತ್ತಿದೆ ಎಂಬ ಸಂದೇಶ ನೀಡಿದ್ದೇನೆ. ನಾವು ಅಧಿಕಾರಿಗಳಿಂದ ಏನು ನಿರೀಕ್ಷೆ ಮಾಡಿದ್ದೇವೆ. ನಮ್ಮ ಅಪೇಕ್ಷೆಗಳೇನು ಎಂಬುದನ್ನು ಚರ್ಚಿಸಿದ್ದೇವೆ’ ಎಂದರು.

ಬಾಕಿ ಕೆಲಸಗಳ ಪಟ್ಟಿ ನೀಡಬೇಕು: ‘ಎಲ್ಲ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ತಮ್ಮ ಇಲಾಖೆಗೆ ಸಂಬಂಧಿಸಿದಂತೆ ಬಾಕಿ ಇರುವ ಕೆಲಸಗಳ ಪಟ್ಟಿ ನೀಡಬೇಕು. 25 ದಿನಗಳಲ್ಲಿ ಆಯಾ ಜಿಲ್ಲೆಯಲ್ಲಿ ಯಾವ ಹೊಸ ಕೆಲಸ ಮಾಡಬಹುದು ಎಂಬುದನ್ನು ಗುರುತಿಸಬೇಕು. ಆರ್ಥಿಕ ಚೌಕಟ್ಟಿನ ಇತಿಮಿತಿಯಲ್ಲಿ ನಾವು ಏನು ಮಾಡಬಹುದು ಎಂದು ಪಟ್ಟಿ ಮಾಡಿ, ಸಂಪೂರ್ಣ ಮಾಹಿತಿ ನೀಡಬೇಕು ಎಂದು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳಿಗೆ ಸೂಚಿಸಿದ್ದೇನೆ’ ಎಂದರು.

ಸಚಿವರಾದ ಜಿ. ಪರಮೇಶ್ವರ, ರಾಮಲಿಂಗಾರೆಡ್ಡಿ, ಯು.ಟಿ. ಖಾದರ್, ಈಶ್ವರಖಂಡ್ರೆ ಹಾಗೂ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್, ಮುಖ್ಯಮಂತ್ರಿಯವರ ಹೆಚ್ಚುವರಿ ಮುಖ್ಯಕಾರ್ಯದರ್ಶಿ ತುಷಾರ್ ಗಿರಿನಾಥ್ ಸೇರಿ ಹಿರಿಯ ಅಧಿಕಾರಿಗಳು ಸಭೆಯಲ್ಲಿ ಉಪಸ್ಥಿತರಿದ್ದರು.

ರೌಡಿಗಳ ನಿಯಂತ್ರಣಕ್ಕೆ ಪ್ರತ್ಯೇಕ ಪಡೆ

‘ರಾಜ್ಯದಲ್ಲಿ ಪ್ರತಿ ತಾಲ್ಲೂಕಿನಲ್ಲೂ ರೌಡಿಗಳ ನಿಗ್ರಹಕ್ಕೆ ಪ್ರತ್ಯೇಕ ಪಡೆ ರಚಿಸಲಾಗುವುದು’ ಎಂದು ಶಿವಕುಮಾರ್ ತಿಳಿಸಿದರು.

‘ಪೊಲೀಸರು ಪ್ರತಿ ತಾಲ್ಲೂಕಿನಲ್ಲಿ ರೌಡಿ ನಿಗ್ರಹಕ್ಕೆ ಪ್ರತ್ಯೇಕ ಪಡೆ ರಚಿಸಬೇಕು. ಯಾರೂ ಕ್ರಿಮಿನಲ್ ಚಟುವಟಿಕೆಯಲ್ಲಿ ಭಾಗಿಯಾದಂತೆ ನೋಡಿಕೊಳ್ಳಬೇಕು. ಹಳೇ ರೌಡಿಗಳು ಮತ್ತು ಹೊಸದಾಗಿ ಹುಟ್ಟಿಕೊಳ್ಳುವ ರೌಡಿಗಳ ಮೇಲೆ ನಿಗಾ ಇಡಬೇಕು ಎಂದು ಸೂಚಿಸಿದ್ದೇನೆ’ ಎಂದರು.

ಗದಗ, ಉತ್ತರ ಕನ್ನಡ ಜಿಲ್ಲೆಗಳಲ್ಲಿ ಭಾರಿ ಮಳೆ

ಹುಬ್ಬಳ್ಳಿ: ಉತ್ತರ ಕನ್ನಡ ಮತ್ತು ಗದಗ ಜಿಲ್ಲೆಯ ಕೆಲವೆಡೆ ಗುರುವಾರ ಭಾರಿ ಮಳೆಯಾಯಿತು. ಬಹುತೇಕ ಕಡೆ ರಸ್ತೆಗಳಲ್ಲಿ ನೀರು ಹರಿದು, ವಾಹನಗಳ ಸುಗಮ ಸಂಚಾರಕ್ಕೆ ತೊಂದರೆಯಾಯಿತು.

ಉತ್ತರ ಕನ್ನಡ ಜಿಲ್ಲೆಯ ಕರಾವಳಿ ಭಾಗದ ತಾಲ್ಲೂಕುಗಳಲ್ಲಿ ಗಾಳಿ ಸಹಿತ ರಭಸದ ಮಳೆ ಸುರಿಯಿತು.ಜೂನ್ 10ರವರೆಗೆ ಕರಾವಳಿ, ಮಲೆನಾಡು ಪ್ರದೇಶಗಳಲ್ಲಿ ವ್ಯಾಪಕ ಮಳೆಯಾಗುವ ಬಗ್ಗೆ ಹವಾಮಾನ ಇಲಾಖೆ ಮುನ್ನೆಚ್ಚರಿಕೆ ನೀಡಿದೆ. ಜಿಲ್ಲೆಯಲ್ಲಿ ಆರೆಂಜ್ ಅಲರ್ಟ್ ಘೋಷಿಸಲಾಗಿದೆ. ಗದಗ ನಗರದಲ್ಲಿ ಸುರಿದ ಧಾರಾಕಾರ ಮಳೆಯಿಂದ ಜನರಿಗೆ ತೊಂದರೆಯಾಯಿತು. ರಸ್ತೆಗಳಲ್ಲಿನ ಗುಂಡಿಗಳಲ್ಲಿ ಮತ್ತು ತಗ್ಗು ಪ್ರದೇಶಗಳಲ್ಲಿ ನೀರು ನಿಂತಿತ್ತು.

ಬಳ್ಳಾರಿಯಲ್ಲಿ ಹಾನಿ: ಬಳ್ಳಾರಿ ನಗರ ಸೇರಿ ಜಿಲ್ಲೆಯಾದ್ಯಂತ ಮೂರು ದಿನಗಳಿಂದ ಬಿರುಗಾಳಿ, ಗುಡುಗು ಸಹಿತ ಮಳೆಗೆ ಅಪಾರ ಹಾನಿ ಸಂಭವಿಸಿದೆ. ಮಳೆಯಿಂದ ಜಿಲ್ಲೆಯಲ್ಲಿ 104 ವಿದ್ಯುತ್ ಕಂಬಗಳು, 16 ವಿದ್ಯುತ್ ಪರಿವರ್ತಕಗಳು, 3.5 ಕಿ.ಮೀ ಉದ್ದ ವಿದ್ಯುತ್ ತಂತಿಗಳು, 77 ಮರಗಳು ಮತ್ತು 2.3 ಹೆಕ್ಟೇರ್ ಬೆಳೆ ಹಾನಿಯಾಗಿದೆ ಎಂದು ರಾಜ್ಯ ವಿಪತ್ತು ನಿರ್ವಹಣಾ ಪ್ರಾಧಿಕಾರದ ಜಿಲ್ಲಾ ಘಟಕ ತಿಳಿಸಿದೆ. ಮೂರು ದಿನಗಳಿಂದ ವಿದ್ಯುತ್ ಪೂರೈಕೆಯಲ್ಲಿ ಸಮಸ್ಯೆ ತಲೆದೋರಿದ್ದು, ಜನರು ಸಂಕಷ್ಟ ಎದುರಿಸಿದರು.

ಸಿನಿಮಾ ರಂಜನೆ

ಗ್ಲಾಮರಸ್ ನಾಯಕಿ, ಆ್ಯಕ್ಷನ್ ಸ್ಟಾರ್, ವಿವಾದಗಳ ಕೇಂದ್ರಬಿಂದು– ಹೀಗೆ ಹಲವು ಹಂತಗಳನ್ನು ದಾಟಿ ಬಂದಿರುವ ರಾಗಿಣಿ ದ್ವಿವೇದಿ ಈಗ ನಟಿಯ ಜತೆಗೆ ನಿರ್ಮಾಪಕಿಯಾಗಿಯೂ ಹೊಸ ಅಧ್ಯಾಯ ಆರಂಭಿಸಿದ್ದಾರೆ. ಇತ್ತೀಚೆಗೆ ಸಹ ನಿರ್ಮಾಣದಲ್ಲಿ 'ರಾಗಿಣಿ ಐಪಿಎಸ್–2' ಚಿತ್ರ ಘೋಷಿಸಿರುವ ಅವರು, ಒಂದೂವರೆ ದಶಕದ ಸಿನಿಪಯಣ, ಬದಲಾಗುತ್ತಿರುವ ಚಿತ್ರರಂಗ ಮತ್ತು ವೃತ್ತಿ ಬದುಕಿನ ಏಳುಬೀಳುಗಳ ಕುರಿತು ಮಾತನಾಡಿದ್ದಾರೆ.

'ಸ್ಟಾರ್‌ಗಿರಿಗಿಂತ ಕಂಟೆಂಟ್ ಮುಖ್ಯ'


ರಾಗಿಣಿ

• ವಿನಾಯಕ ಕೆ.ಎಸ್.

• ಸದ್ಯ ನಿಮ್ಮ ಕೈಯಲ್ಲಿ ಯಾವೆಲ್ಲ ಸಿನಿಮಾಗಳಿವೆ?

ಕನ್ನಡದಲ್ಲಿ ಎರಡು ಸಿನಿಮಾಗಳು ಬಿಡುಗಡೆಗೆ ಸಿದ್ಧವಾಗಿವೆ. ಒಂದು 'ಸರ್ಕಾರಿ ನ್ಯಾಯಬೆಲೆ ಅಂಗಡಿ'. ಇದರಲ್ಲಿ ಕುಮಾರ್ ಬಂಗಾರಪ್ಪ ಅವರ ಜತೆ ನಟಿಸಿದ್ದೇನೆ. ಇನ್ನೊಂದು 'ಮದನಿಕ'. ಈ ಚಿತ್ರದ ಪ್ರಚಾರ ಕಾರ್ಯಗಳು ಆರಂಭಗೊಂಡಿದ್ದು, ಶೀಘ್ರದಲ್ಲೇ ತೆರೆಗೆ ಬರಲಿದೆ. ಕನ್ನಡ ಮತ್ತು ತೆಲುಗು ಭಾಷೆಗಳಲ್ಲಿ ಸಿದ್ಧಗೊಂಡಿರುವ ಈ ಚಿತ್ರದಲ್ಲಿ ಈಗಿನ ಹಾಗೂ ಹಿಂದಿನ ಕಾಲಘಟ್ಟಗಳ ಕಥೆಯಿದೆ. ಇದು ಸಸ್ಪೆನ್ಸ್ ಥ್ರಿಲ್ಲರ್ ಜಾನರ್‌ನ, ದ್ವೇಷ ತೀರಿಸಿಕೊಳ್ಳುವ ಕಥಾಹಂದರ ಹೊಂದಿರುವ ಸಿನಿಮಾ.

'ಸಿಂಧೂರಿ' ಎಂಬ ಆ್ಯಕ್ಷನ್ ಸಿನಿಮಾದಲ್ಲೂ ನಟಿಸುತ್ತಿದ್ದೇನೆ. ಇತ್ತೀಚೆಗೆ 'ರಾಗಿಣಿ ಐಪಿಎಸ್–2' ಚಿತ್ರವನ್ನು ಘೋಷಿಸಿದ್ದೇವೆ. ಜತೆಗೆ ಒಂದು ತಮಿಳು ಮತ್ತು ಒಂದು ಹಿಂದಿ ಸಿನಿಮಾದಲ್ಲೂ ಅಭಿನಯಿಸುತ್ತಿದ್ದೇನೆ. ಈ ವರ್ಷ ಕನ್ನಡದಲ್ಲೇ ಹೆಚ್ಚು ಸಿನಿಮಾಗಳಿವೆ.

• ಗ್ಲಾಮರ್ ಮತ್ತು ಆ್ಯಕ್ಷನ್ ಸಿನಿಮಾಗಳ ಮೂಲಕ ಗುರುತಿಸಿಕೊಂಡ ನೀವು, 'ಸರ್ಕಾರಿ ನ್ಯಾಯಬೆಲೆ ಅಂಗಡಿ'ಯಂಥ ಭಿನ್ನ ಕಥೆಯನ್ನು ಆಯ್ಕೆ ಮಾಡಿಕೊಂಡಿದ್ದು ಏಕೆ?

ಈಗ ನಾನು ವಿಭಿನ್ನ ಜಾನರ್‌ನ ಸಿನಿಮಾಗಳನ್ನು ಆಯ್ಕೆ ಮಾಡಿಕೊಳ್ಳುತ್ತಿದ್ದೇನೆ. 'ಸರ್ಕಾರಿ ನ್ಯಾಯಬೆಲೆ ಅಂಗಡಿ'ಯಲ್ಲಿ ಸಣ್ಣ ಪಟ್ಟಣದ ಸಾಮಾನ್ಯ ಮಹಿಳೆಯಾಗಿ ಕಾಣಿಸಿಕೊಂಡಿದ್ದೇನೆ. ಪಡಿತರ ಚೀಟಿ ಗ್ರಾಮೀಣ ಭಾಗದ ಅನೇಕ ಕುಟುಂಬಗಳ ಬದುಕಿನ ಭಾಗವಾಗಿದೆ. ಅದಕ್ಕೆ ಸಂಬಂಧಿಸಿದ ಕಥೆಯನ್ನು ಈ ಸಿನಿಮಾ ಹೊಂದಿದೆ. ನ್ಯಾಯಬೆಲೆ ಅಂಗಡಿಯಲ್ಲಿ ನಡೆಯುವ ಅನ್ಯಾಯದ ವಿರುದ್ಧ ಹೋರಾಡುವ ಗೃಹಿಣಿಯ ಪಾತ್ರದಲ್ಲಿ ನಟಿಸಿದ್ದೇನೆ.

ವಯಸ್ಸು ಮತ್ತು ಅನುಭವಕ್ಕೆ ತಕ್ಕ ಪಾತ್ರಗಳನ್ನು ಆಯ್ಕೆ ಮಾಡಿಕೊಳ್ಳಬೇಕೆಂಬ ಅರಿವು ನಟರಿಗೆ ಇರಬೇಕು. ಕೇವಲ ನಾಯಕಿ ಪಾತ್ರಗಳು ಅಥವಾ ಹಾಡುಗಳಿಗೆ ಸೀಮಿತವಾಗಿರುವ ಕಾಲ ಈಗ ಇಲ್ಲ. ಒಂದು ಹಂತದ ನಂತರ ವಿಭಿನ್ನ ಪಾತ್ರಗಳನ್ನು ಒಪ್ಪಿಕೊಳ್ಳಲೇಬೇಕು. ನನ್ನ ವೃತ್ತಿಜೀವನದ ಆರಂಭದಲ್ಲೇ ಆ್ಯಕ್ಷನ್ ಸ್ಟಾರ್ ಎಂಬ ಗುರುತು ಸಿಕ್ಕಿತ್ತು. ಕೆಲವು ಸಿನಿಮಾಗಳಲ್ಲಿ ಇಡೀ ಕಥೆಯನ್ನು ಮುನ್ನಡೆಸುವ ಪಾತ್ರಗಳನ್ನು ನಿರ್ವಹಿಸಿದ್ದೇನೆ.

ಈಗ ಮಾರುಕಟ್ಟೆ ಬದಲಾಗಿದೆ. ಕಲಾವಿದರು ಹೊಸ ಬದಲಾವಣೆಗಳಿಗೆ ತೆರೆದುಕೊಳ್ಳಬೇಕು. ಸ್ಟಾರ್‌ಗಿರಿಗಿಂತ ಕಂಟೆಂಟ್‌ಗೆ ಹೆಚ್ಚು ಬೆಲೆ ಇದೆ. ಒಟಿಟಿ ವೇದಿಕೆಗಳಿಂದಲೂ ದೊಡ್ಡ ಪೈಪೋಟಿ ಎದುರಾಗಿದೆ. ಜನರನ್ನು ಚಿತ್ರಮಂದಿರಕ್ಕೆ ಕರೆತರಬೇಕಾದರೆ ವಿಭಿನ್ನ ಕಥೆಗಳು ಬೇಕು. ಹೀಗಾಗಿ ಉತ್ತಮ ಕಥೆ ಮತ್ತು ಗಟ್ಟಿಯಾದ ಹಿನ್ನೆಲೆ ಹೊಂದಿರುವ ಪಾತ್ರಗಳನ್ನು ಮಾತ್ರ ಆಯ್ಕೆ ಮಾಡಿಕೊಳ್ಳುತ್ತಿದ್ದೇನೆ. ಕೇವಲ ಗ್ಲಾಮರ್‌ಗೆ ಆದ್ಯತೆ ನೀಡದೆ ಉತ್ತಮ ಸಿನಿಮಾಗಳನ್ನು ಮಾಡಬೇಕೆಂದು ನಿರ್ಧರಿಸಿದ್ದೇನೆ.

• 'ರಾಗಿಣಿ ಐಪಿಎಸ್–2' ಚಿತ್ರದೊಂದಿಗೆ ನಿರ್ಮಾಣ ಕ್ಷೇತ್ರಕ್ಕೂ ಕಾಲಿಟ್ಟಿದ್ದೀರಿ. ಮುಂದಿನ ಯೋಚನೆಗಳೇನು?

'ರಾಗಿಣಿ ಐಪಿಎಸ್–2' ಸಹನಿರ್ಮಾಣದ ಯೋಜನೆಯಾಗಿದೆ. ನಾನು ಮತ್ತು ಕೆ. ಮಂಜು ಒಟ್ಟಿಗೆ ಚಿತ್ರ ನಿರ್ಮಿಸುತ್ತಿದ್ದೇವೆ. ಜಗ್ಗೇಶ್ ಅವರ ಪುತ್ರರಾದ ಗುರುರಾಜ್ ಮತ್ತು ಯತಿರಾಜ್ ನಿರ್ದೇಶನ ಮಾಡುತ್ತಿದ್ದಾರೆ.

ಇತ್ತೀಚಿನ ದಿನಗಳಲ್ಲಿ ಸಹನಿರ್ಮಾಣದ ಮಾದರಿ ಹೆಚ್ಚಾಗುತ್ತಿದೆ. ಚಿತ್ರದ ಚಿತ್ರೀಕರಣ ಆಗಸ್ಟ್‌ನಲ್ಲಿ ಆರಂಭವಾಗಲಿದೆ. ಎರಡು ಭಾಷೆಗಳಲ್ಲಿ ಸಿನಿಮಾ ನಿರ್ಮಾಣವಾಗುತ್ತಿದ್ದು, ಮೂರು ದೇಶಗಳಲ್ಲಿ ಚಿತ್ರೀಕರಣ ನಡೆಸುವ ಯೋಜನೆಯಿದೆ. ಇದು ಅತ್ಯುತ್ತಮ ಕಂಟೆಂಟ್ ಹೊಂದಿರುವ ಸಿನಿಮಾ ಎಂದು ನಂಬಿದ್ದೇವೆ.

ನಮ್ಮ ನಿರ್ಮಾಣ ಸಂಸ್ಥೆಯ ಮೂಲಕ ಹೊಸ ಪ್ರತಿಭೆಗಳಿಗೆ ಅವಕಾಶ ಕಲ್ಪಿಸುವ ಉದ್ದೇಶವೂ ಇದೆ. ಕೇವಲ ನನ್ನ ಸಿನಿಮಾಗಳಿಗೆ ಸೀಮಿತವಾಗದೆ, ಹೊಸಬರಿಗೆ ವೇದಿಕೆ ಒದಗಿಸಬೇಕೆಂಬ ಕನಸು ಹೊಂದಿದ್ದೇನೆ.

• ಈತನಕದ ನಿಮ್ಮ ಸಿನಿಪಯಣವನ್ನು ಹೇಗೆ ನೋಡುತ್ತೀರಿ?

ಹೊರಗಡೆಯಿಂದ ಬಂದು ಕನ್ನಡ ಚಿತ್ರರಂಗದಲ್ಲಿ ನೆಲೆ ನಿಂತಿದ್ದೇನೆ. ಕನ್ನಡ ನನಗೆ ಎಲ್ಲವನ್ನೂ ನೀಡಿದೆ. ಕನ್ನಡಿಗರ ಪ್ರೀತಿ ಮತ್ತು ಬೆಂಬಲದಿಂದಲೇ ಇಂದು ಈ ಸ್ಥಾನದಲ್ಲಿದ್ದೇನೆ.

ಸಿನಿಮಾಗಳ ಯಶಸ್ಸು ಮತ್ತು ಸೋಲು ಎರಡನ್ನೂ ಕಂಡಿದ್ದೇನೆ. ಈ ಕ್ಷೇತ್ರದಲ್ಲಿ ಸ್ಥಿರತೆ ಕಾಯ್ದುಕೊಳ್ಳುವುದು ಬಹಳ ಮುಖ್ಯ. ಗೆಲುವು ಸ್ಫೂರ್ತಿ ನೀಡಿದರೆ, ಸೋಲು ಪಾಠ ಕಲಿಸುತ್ತದೆ. ಮಾರುಕಟ್ಟೆಯಲ್ಲಿ ನಟರ ಸ್ಥಾನಮಾನ ಮತ್ತು ಬೇಡಿಕೆಗಳು ಕಾಲಕಾಲಕ್ಕೆ ಬದಲಾಗುತ್ತಿರುತ್ತವೆ. ಒಂದು ಶುಕ್ರವಾರ ನಟನ ಹಣೆಬರಹವನ್ನೇ ಬದಲಿಸಬಹುದು. ಆದರೆ ಅದರ ಮೇಲೆ ಮಾತ್ರ ಅವಲಂಬಿತರಾಗಲು ಸಾಧ್ಯವಿಲ್ಲ. ನಿರಂತರ ಶ್ರಮ ಅಗತ್ಯ. ಯಾರಾದರೂ ಸೂಪರ್‌ಸ್ಟಾರ್ ಆಗಿದ್ದರೆ, ಅದರ ಹಿಂದೆ ದೀರ್ಘ ಪಯಣ ಇರುತ್ತದೆ. ದೀರ್ಘಕಾಲ ಉಳಿಯುವ ಯಶಸ್ಸಿನ ಹಿಂದಿರುವುದು ಪ್ರತಿಭೆಯಷ್ಟೇ ಅಲ್ಲ, ನಿರಂತರತೆ ಮತ್ತು ಸ್ಥಿರತೆ.

• ಸಾಕಷ್ಟು ವಿವಾದಗಳನ್ನು ದಾಟಿ ಬಂದಿದ್ದೀರಿ. ಅವು ನಿಮ್ಮ ವೃತ್ತಿಜೀವನದ ಮೇಲೆ ಪರಿಣಾಮ ಬೀರಿದವೇ?

ವಿವಾದಗಳು ವೈಯಕ್ತಿಕ ಜೀವನದ ಮೇಲೆ ಪರಿಣಾಮ ಬೀರುತ್ತವೆ. ಮಾನಸಿಕ ಮತ್ತು ದೈಹಿಕ ಆರೋಗ್ಯಕ್ಕೂ ಹೊಡೆತ ನೀಡುತ್ತವೆ. ಆದರೆ ಯಾವುದೇ ಪರಿಸ್ಥಿತಿಯೂ ಶಾಶ್ವತವಲ್ಲ. ಎಲ್ಲರ ಜೀವನದಲ್ಲೂ ಒಳ್ಳೆಯ ದಿನಗಳು ಮತ್ತು ಕಠಿಣ ದಿನಗಳು ಬರುತ್ತವೆ. ಕಲಾವಿದರ ಜೀವನದಲ್ಲಿ ನಡೆದಾಗ ಅದು ಹೆಚ್ಚು ಎದ್ದು ಕಾಣುತ್ತದೆ ಅಷ್ಟೇ. ಆ ಘಟನೆಗಳಲ್ಲೇ ಸಿಲುಕಿ ಕುಳಿತರೆ ಮುಂದೆ ಸಾಗಲು ಸಾಧ್ಯವಿಲ್ಲ.

• ಚಿತ್ರರಂಗಕ್ಕೆ ಬಾರದಿದ್ದರೆ ಏನಾಗಿರುತ್ತಿದ್ದಿರಿ?

ಬಹುಶಃ ಐಎಫ್‌ಎಸ್ ಅಧಿಕಾರಿ ಆಗಿರುತ್ತಿದ್ದೆ. ಕ್ರೀಡೆ, ಆರೋಗ್ಯ ಮತ್ತು ಫಿಟ್‌ನೆಸ್‌ನಲ್ಲಿ ನನಗೆ ಹೆಚ್ಚು ಆಸಕ್ತಿ ಇತ್ತು. ಯಾವುದೇ ವಿಶೇಷ ಸಿದ್ಧತೆ ಇಲ್ಲದೆ ಸಿನಿಮಾರಂಗಕ್ಕೆ ಬಂದೆ. ಇಲ್ಲಿಗೆ ಬಂದ ನಂತರ ಪ್ರತಿದಿನ ಹೊಸದನ್ನು ಕಲಿಯುತ್ತಲೇ ಇದ್ದೇನೆ.

• ಮುಂದಿನ ಕನಸುಗಳೇನು?

ಇದುವರೆಗೆ ದ್ವಿಪಾತ್ರ ಅಥವಾ ಖಳನಾಯಕಿ ಪಾತ್ರ ಮಾಡಿಲ್ಲ. ಮುಂದಿನ ದಿನಗಳಲ್ಲಿ ಆ ಎರಡೂ ಬಗೆಯ ಪಾತ್ರಗಳಲ್ಲಿ ಕಾಣಿಸಿಕೊಳ್ಳುವ ಆಸೆಯಿದೆ.

ಮದ್ದಾನೆ ಟ್ರೇಲರ್ ಬಿಡುಗಡೆ


ಆರ್ಯ

ಕೆ.ರಾಜ್ ಶರಣ್ ನಿರ್ದೇಶನದ 'ಮದ್ದಾನೆ' ಚಿತ್ರದ ಟ್ರೇಲರ್ ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. ಎಲ್.ಎಂ.ಫಿಲ್ಮ್ಸ್ ಮೂಲಕ ಲತಾಮೂರ್ತಿ ಬಂಡವಾಳ ಹೂಡಿರುವ ಚಿತ್ರದಲ್ಲಿ ಆರ್ಯ ನಾಯಕನಾಗಿ ನಟಿಸಿದ್ದಾರೆ.

'ಮದ್ದಾನೆ' ಎಂದರೆ ಕೋಪಗೊಂಡ ಆನೆ. ಅದರ ಬಳಿ ಯಾರೂ ಹೋಗಲು ಸಾಧ್ಯವಿಲ್ಲ. ಆನೆ ರೀತಿಯ ವ್ಯಕ್ತಿ ಹೇಗೆ ಮದ್ದಾನೆಯಾಗಿ ಪರಿವರ್ತನೆಯಾಗುತ್ತಾನೆ ಎಂಬುದನ್ನು ಈ ಚಿತ್ರದಲ್ಲಿ ಹೇಳಿದ್ದೇವೆ. ನಾಯಕನಿಗೆ ಎರಡು ಶೇಡ್‌ಗಳಿವೆ. ಮೈಸೂರು, ಮಂಡ್ಯ, ಬೆಂಗಳೂರು, ಚಿತ್ರದುರ್ಗ ಹಾಗೂ ಉತ್ತರ ಕರ್ನಾಟಕದ ಸುತ್ತಮುತ್ತ ಚಿತ್ರೀಕರಣ ನಡೆಸಿದ್ದೇವೆ' ಎಂದರು ನಿರ್ದೇಶಕ.


ಚಿತ್ರದ ಸೆನ್ಸಾರ್ ಮುಗಿದಿದ್ದು, ಯು/ಎ ಪ್ರಮಾಣ ಪತ್ರ ಸಿಕ್ಕಿದೆ. ಜೂ.12ರಂದು ಚಿತ್ರ ತೆರೆಗೆ ಬರಲಿದೆ. ಪ್ರಸನ್ನ ಭೋಜಶೆಟ್ಟರ್ ಸಂಗೀತ, ನಾಗಭೂಷಣ್ ಪೂಜಾರ್ ಛಾಯಾಚಿತ್ರಗ್ರಹಣವಿದೆ. ರಾಣಿ, ಶ್ರೀನಿವಾಸ ಮೂರ್ತಿ, ಲತಾಮೂರ್ತಿ ಮುಂತಾದವರು ಚಿತ್ರದಲ್ಲಿದ್ದಾರೆ.

ಈ ವಾರ ಎರಡು ಚಿತ್ರಗಳು ತೆರೆಗೆ

ಮ್ಯಾಂಗೋ ಪಚ್ಚ

ಸುದೀಪ್ ಅಕ್ಕನ ಮಗ ಸಂಚಿತ್ ನಟನೆಯ ಚೊಚ್ಚಲ ಸಿನಿಮಾವಿದು. ಎರಡು–ಮೂರು ಸಲ ಬಿಡುಗಡೆ ದಿನಾಂಕ ಘೋಷಣೆಯಾಗಿ ಚಿತ್ರ ಮುಂದಕ್ಕೆ ಹೋಗಿತ್ತು. ಗಾಂಜಾ ಕುರಿತಾದ ಕಥೆಯನ್ನು ಹೊಂದಿರುವ ಚಿತ್ರಕ್ಕೆ ವಿವೇಕ ನಿರ್ದೇಶನವಿದೆ.

'ಮೈಸೂರು ಮೂಲದ ಕ್ರೈಂ ಥ್ರಿಲ್ಲರ್ ಸಿನಿಮಾ ಇದಾಗಿದ್ದು, 2001ರಿಂದ 2011ರ ಅವಧಿಯಲ್ಲಿ ಮೈಸೂರಿನಲ್ಲಿ ನಡೆದ ಪ್ರಮುಖ ಘಟನೆಗಳು ಸಿನಿಮಾದಲ್ಲಿವೆ. ಮೈಸೂರು ಹಾಗೂ ರಾಜ್ಯದ ವಿವಿಧ ಪ್ರದೇಶಗಳಲ್ಲಿ ಚಿತ್ರದ ಚಿತ್ರೀಕರಣ ನಡೆದಿದೆ' ಎಂದಿದೆ ಚಿತ್ರತಂಡ.



ಚಿತ್ರವನ್ನು ಕೆಆರ್‌ಜಿ ಮತ್ತು ಸುದೀಪ್ ಅವರ ಸುಪ್ರಿಯಾನ್ವಿ ಪ್ರೊಡಕ್ಷನ್ಸ್ ಜಂಟಿಯಾಗಿ ನಿರ್ಮಾಣ ಮಾಡಿದೆ. ಸಂಚಿತ್‌ಗೆ ಜೋಡಿಯಾಗಿ ಕಾಜಲ್ ಕುಂದರ್ ಬಣ್ಣಹಚ್ಚಿದ್ದು, ಮಯೂರ್ ಪಟೇಲ್, ಭಾವನಾ, ಹರಿಣಿ ಶ್ರೀಕಾಂತ್, ಜೈ ಗೋಪಿನಾಥ್ ಸೇರಿದಂತೆ ಅನೇಕರು ತಾರಾಬಳಗದಲ್ಲಿದ್ದಾರೆ. ಶೇಖರ್ ಚಂದ್ರ ಛಾಯಾಚಿತ್ರಗ್ರಹಣ, ಚರಣ್ ರಾಜ್ ಸಂಗೀತ ನಿರ್ದೇಶನ ಚಿತ್ರಕ್ಕಿದೆ.

ಗಜೇಂದ್ರ ಕೇರಾಫ್ ದೊಡ್ಡರಸಿನಕೆರೆ

ಅಂಬರೀಶ್ ಹುಟ್ಟೂರಾದ ದೊಡ್ಡರಸಿನಕೆರೆಯನ್ನೇ ಶೀರ್ಷಿಕೆಯಾಗಿಸಿಕೊಂಡ ಸಿನಿಮಾವಿದು. ಅಂಬರೀಶ್ ಅಭಿಮಾನಿಯಾಗಿರುವ ಸುಬ್ರಮಣ್ಯ ನಿರ್ದೇಶಿಸಿ, ನಿರ್ಮಾಣ ಮಾಡಿದ್ದಾರೆ.

'ಇದು ಹಳ್ಳಿಯೊಂದರಲ್ಲಿ ನಡೆಯುವ ಕಥೆ. ದೊಡ್ಡರಸಿನಕೆರೆಯಲ್ಲಿಯೇ ಪೂರ್ತಿ ಚಿತ್ರೀಕರಣ ಮಾಡಿದ್ದೇವೆ. ಊರ ಗೌಡನೊಬ್ಬ ಹಳ್ಳಿಯ ಮುಗ್ಧ ಜನರಿಗೆ ಬಡ್ಡಿಗೆ ಸಾಲಕೊಟ್ಟು, ಹಿಂದಿರುಗಿಸದಿದ್ದಾಗ ಅವರ ಆಸ್ತಿಯನ್ನು ತನ್ನ ವಶಪಡಿಸಿಕೊಳ್ಳುತ್ತಿರುತ್ತಾನೆ. ಆತನಿಂದ ನಾಯಕ ಊರನ್ನು ಹೇಗೆ ರಕ್ಷಿಸುತ್ತಾನೆ ಎಂಬುದೇ ಕಥೆ' ಎಂದಿದ್ದಾರೆ ನಿರ್ದೇಶಕ.

ಅಭಿಷೇಕ್ ಸುಬ್ಬಣ್ಣ ನಾಯಕ. ವೇದ ಹಾಗೂ ನಿರೀಕ್ಷಾ ನಾಯಕಿಯರು. ಮನುರಾವ್ ಸಂಗೀತ ಸಂಯೋಜನೆ, ರಾವುಲ್ ಶೇಖರ್ ಛಾಯಾಚಿತ್ರಗ್ರಹಣವಿದೆ. ವಿನಯ್ ಸುಬ್ಬಣ್ಣ, ತಿಮ್ಮರಾಜು ಮುಂತಾದವರು ಚಿತ್ರದಲ್ಲಿದ್ದಾರೆ.

ಜೂನ್ 26ಕ್ಕೆ 'ಬಲರಾಮನ ದಿನಗಳು'



ವಿನೋದ್ ಪ್ರಭಾಕರ್ ನಟಿಸಿ, ಕೆ.ಎಂ.ಚೈತನ್ಯ ನಿರ್ದೇಶಿಸಿರುವ 'ಬಲರಾಮನ ದಿನಗಳು' ಚಿತ್ರ ಜೂನ್ 26ರಂದು ತೆರೆಕಾಣಲಿದೆ.

'80ರ ದಶಕದ ಭೂಗತ ಲೋಕದ ಕಥೆ ಹೊಂದಿರುವ ಚಿತ್ರ. ಈಗಾಗಲೇ ಚಿತ್ರದ ಹಾಡುಗಳು ಮತ್ತು ಟೀಸರ್‌ಗೆ ಪ್ರೇಕ್ಷಕರಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ. ಶೀಘ್ರದಲ್ಲಿಯೇ ಚಿತ್ರದ ಟ್ರೇಲರ್ ಕೂಡ ಬಿಡುಗಡೆಯಾಗಲಿದೆ' ಎಂದು ನಿರ್ದೇಶಕರು ತಿಳಿಸಿದ್ದಾರೆ.

ಪದ್ಮಾವತಿ ಫಿಲ್ಮ್ಸ್ ಬ್ಯಾನರ್‌ನಡಿಯಲ್ಲಿ ಪದ್ಮಾವತಿ ಜಯರಾಂ ಹಾಗೂ ಶ್ರೇಯಸ್ ಚಿತ್ರಕ್ಕೆ ಬಂಡವಾಳ ಹೂಡಿದ್ದಾರೆ. ರೆಟ್ರೊ ಶೈಲಿಯ ಆಕ್ಷನ್, ಮಾಸ್ ಕಥೆ ಚಿತ್ರದಲ್ಲಿದೆ. ವಿನೋದ್ ಪ್ರಭಾಕರ್ ಬಲರಾಮನಾಗಿ ಕಾಣಿಸಿಕೊಂಡಿದ್ದು, ಪ್ರಿಯಾ ಆನಂದ್ ಅವರಿಗೆ ಜೋಡಿಯಾಗಿದ್ದಾರೆ. 'ಆ ದಿನಗಳು' ಚಿತ್ರದ ಪಾತ್ರಗಳು ಇಲ್ಲೂ ಮುಂದುವರೆದಿದ್ದು, ಅತುಲ್ ಕುಲಕರ್ಣಿ, ಶರತ್ ಲೋಹಿತಾಶ್ವ, ಆಶೀಶ್ ವಿದ್ಯಾರ್ಥಿ ಹಾಗೂ ಬಿಗ್‌ಬಾಸ್ ಖ್ಯಾತಿಯ ವಿನಯ್ ಗೌಡ ಸೇರಿ ಹಲವು ಕಲಾವಿದರು ಚಿತ್ರದಲ್ಲಿದ್ದಾರೆ.

ಚಿತ್ರಕ್ಕೆ ವೇಣು ಛಾಯಾಚಿತ್ರಗ್ರಹಣ, ದಕ್ಷಿಣ ಭಾರತದ ಖ್ಯಾತ ಸಂಗೀತ ನಿರ್ದೇಶಕ ಸಂತೋಷ್ ನಾರಾಯಣ್ ಸಂಗೀತ, ಹರಿದಾಸ್ ಕೆ.ಜಿ.ಎಫ್ ಸಂಕಲನವಿದೆ.

ಅತ್ಯುತ್ತಮ ಚೊಚ್ಚಲ ನಿರ್ದೇಶನ



4ನೇ ಆವೃತ್ತಿ ಜೂನ್ 19ಕ್ಕೆ

'ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ'ದ ನಾಲ್ಕನೇ ಆವೃತ್ತಿ ಜೂನ್ 19ರಂದು ನಡೆಯಲಿದೆ. ಈಗಾಗಲೇ 19 ವಿಭಾಗಗಳಲ್ಲಿ ಪ್ರಶಸ್ತಿಗೆ ನಾಮನಿರ್ದೇಶನಗೊಂಡವರ ಹೆಸರುಗಳನ್ನು, ನಾಮನಿರ್ದೇಶನಗೊಂಡ ಸಿನಿಮಾಗಳ ಪಟ್ಟಿಯನ್ನು ಪ್ರಕಟಿಸಲಾಗಿದೆ. ನಾಮನಿರ್ದೇಶಿತರಾದವರಲ್ಲಿ ಒಬ್ಬರನ್ನು ಚಿತ್ರರಂಗದ ವಿವಿಧ ಸಂಘ–ಸಂಸ್ಥೆಗಳ ಒಂದು ಸಾವಿರಕ್ಕೂ ಅಧಿಕ ಸದಸ್ಯರು ವೋಟ್ ಮಾಡುವ ಮುಖಾಂತರ ಆಯ್ಕೆ ಮಾಡಲಿದ್ದಾರೆ. ಜನಮೆಚ್ಚಿದ ನಟ, ನಟಿ, ಸಿನಿಮಾ ಹಾಗೂ ಹಾಡು ವಿಭಾಗದಲ್ಲಿ ಜನರು ಹಾಕುವ ವೋಟ್ ವಿಜೇತರನ್ನು ತೀರ್ಮಾನಿಸಲಿದೆ. ಇದೀಗ 'ಅತ್ಯುತ್ತಮ ಚೊಚ್ಚಲ ನಿರ್ದೇಶನ' ವಿಭಾಗದಲ್ಲಿ ನಾಮನಿರ್ದೇಶಿತಗೊಂಡ ನಿರ್ದೇಶಕರನ್ನು ಪರಿಚಯಿಸುವ ಸಮಯ.

ಹಯವದನ



'ಎಲ್ಲೋ ಜೋಗಪ್ಪ ನಿನ್ನರಮನೆ' ಚಿತ್ರದ ನಿರ್ದೇಶನಕ್ಕಾಗಿ ನಾಮನಿರ್ದೇಶನಗೊಂಡಿರುವ ಹಯವದನ ಮೂಲತಃ ಬಾಗಲಕೋಟೆಯವರು. 'ಶುಭಮಂಗಳ', 'ಅಗ್ನಿಸಾಕ್ಷಿ', 'ನಾಗಿಣಿ' ಸೇರಿದಂತೆ ಹಲವು ಜನಪ್ರಿಯ ಧಾರಾವಾಹಿಗಳ ನಿರ್ದೇಶನದ ಮೂಲಕ ಕಿರುತೆರೆಯಲ್ಲಿ ತಮ್ಮದೇ ಛಾಪು ಮೂಡಿಸಿದ್ದಾರೆ.

ಪ್ರಸಿದ್ಧ 'ಮೂಡಲಮನೆ' ಧಾರಾವಾಹಿಯಲ್ಲಿ ಸಹಾಯಕ ನಿರ್ದೇಶಕರಾಗಿ ತಮ್ಮ ವೃತ್ತಿಜೀವನ ಆರಂಭಿಸಿದ ಅವರು, 'ಮುಕ್ತ', 'ಮಳೆಬಿಲ್ಲು', 'ಮಿಂಚು' ಧಾರಾವಾಹಿಗಳು ಹಾಗೂ 'ಮೀರಾ ಮಾಧವ ರಾಘವ' ಚಿತ್ರದಲ್ಲಿ ಸಹ ನಿರ್ದೇಶಕರಾಗಿ ಕಾರ್ಯನಿರ್ವಹಿಸಿದರು. ನಂತರ ನಿರ್ಮಾಪಕರಾಗಿಯೂ ಗುರುತಿಸಿಕೊಂಡ ಅವರು, ತಮ್ಮದೇ 'ಕೃಷ್ಣಛಾಯಾ' ಸಂಸ್ಥೆಯಡಿ 'ಮಧುಬಾಲ', 'ನಾಗಿಣಿ', 'ಕಮಲಿ' ಮತ್ತು 'ಆಕಾಶದೀಪ' ಧಾರಾವಾಹಿಗಳನ್ನು ನಿರ್ಮಿಸಿ ನಿರ್ದೇಶಿಸಿದ್ದಾರೆ.

ಸಾಗರ್ ಕುಮಾರ್



'ಅನಾಮಧೇಯ ಅಶೋಕ್ ಕುಮಾರ್' ಚಿತ್ರದ ನಿರ್ದೇಶನಕ್ಕಾಗಿ ನಾಮನಿರ್ದೇಶನಗೊಂಡಿರುವ ಸಾಗರ್ ಕುಮಾರ್ ಮೂಲತಃ ಶಿವಮೊಗ್ಗದವರು. ವೃತ್ತಿಯಲ್ಲಿ ಸಾಫ್ಟ್‌ವೇರ್ ಎಂಜಿನಿಯರ್ ಆಗಿರುವ ಅವರು, ಐಒಎಸ್ ಡೆವಲಪರ್ ಆಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಸಿನಿಮಾ ಮೇಲಿನ ಆಸಕ್ತಿಯಿಂದ ಕಿರುಚಿತ್ರಗಳನ್ನು ನಿರ್ದೇಶಿಸುತ್ತಲೇ ಚಿತ್ರರಂಗದ ಪಾಠ ಕಲಿತರು.

ಅವರು ನಿರ್ದೇಶಿಸಿದ್ದ 'ವರದಿ' ಕಿರುಚಿತ್ರ ಹಲವು ಪ್ರಶಸ್ತಿಗಳನ್ನು ಪಡೆದಿತ್ತು. ಸಿನಿಮಾ ಕ್ಷೇತ್ರದಲ್ಲಿ ಇನ್ನೂ ಹೆಚ್ಚಿನ ಪರಿಚಯಗಳಿಲ್ಲವೆಂದು ಹೇಳುವ ಸಾಗರ್, ಸಾಫ್ಟ್‌ವೇರ್ ವಲಯದ ಸ್ನೇಹಿತರು ಮತ್ತು ಸಹೋದ್ಯೋಗಿಗಳನ್ನೇ ತಂಡವಾಗಿ ರೂಪಿಸಿಕೊಂಡು 'ಅನಾಮಧೇಯ ಅಶೋಕ್ ಕುಮಾರ್' ಚಿತ್ರವನ್ನು ತೆರೆಗೆ ತಂದಿದ್ದಾರೆ.

ರಕ್ಷಿತ್ ಕುಮಾರ್



'ಜಂಗಲ್ ಮಂಗಲ್' ಚಿತ್ರದ ನಿರ್ದೇಶನಕ್ಕಾಗಿ ನಾಮನಿರ್ದೇಶನಗೊಂಡಿರುವ ರಕ್ಷಿತ್ ಕುಮಾರ್ ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರಿನವರು. ಅಲ್ಲಿಯೇ ಬಿಬಿಎಂ ಪದವಿ ಪೂರ್ಣಗೊಳಿಸಿದ ಅವರು, ಬಳಿಕ ಚಿತ್ರರಂಗದತ್ತ ಮುಖ ಮಾಡಿದರು.

ಆರನೇ ವಯಸ್ಸಿನಿಂದಲೇ ಯಕ್ಷಗಾನ ಕಲಾವಿದರಾಗಿ ವೇದಿಕೆ ಹತ್ತಿದ್ದ ರಕ್ಷಿತ್ ಅವರಿಗೆ ಕಲಾಜಗತ್ತಿನೊಂದಿಗೆ ದೀರ್ಘ ನಂಟಿದೆ. 2012ರಲ್ಲಿ ಬೆಂಗಳೂರಿನ 'ಜಂಗಮ ರಂಗ' ತಂಡದ ಮೂಲಕ ರಂಗಭೂಮಿಗೆ ಪ್ರವೇಶಿಸಿದ ಅವರು, ನಂತರ ನಿರ್ದೇಶನ ಕ್ಷೇತ್ರದತ್ತ ಹೆಜ್ಜೆ ಇಟ್ಟರು. 'ಚುಕ್ಕಿ' ಧಾರಾವಾಹಿಯ ಮೂಲಕ ಸಹಾಯಕ ನಿರ್ದೇಶಕರಾಗಿ ದೃಶ್ಯಮಾಧ್ಯಮಕ್ಕೆ ಕಾಲಿಟ್ಟ ಅವರು, ಅನೇಕ ಕನ್ನಡ ಹಾಗೂ ತುಳು ಚಿತ್ರಗಳಲ್ಲಿ ಸಹ ನಿರ್ದೇಶಕರಾಗಿಯೂ ಕೆಲಸ ಮಾಡಿದ ಅನುಭವ ಹೊಂದಿದ್ದಾರೆ.

ಅಭಿಷೇಕ್ ಎಂ.



'ಬ್ಯಾಂಕ್ ಆಫ್ ಭಾಗ್ಯಲಕ್ಷ್ಮಿ' ಚಿತ್ರದ ನಿರ್ದೇಶನಕ್ಕಾಗಿ ನಾಮನಿರ್ದೇಶನಗೊಂಡಿರುವ ಅಭಿಷೇಕ್ ಎಂ. ಮೂಲತಃ ತುಮಕೂರಿನವರು. ಕನ್ನಡ ಚಿತ್ರರಂಗದ ಪ್ರಮುಖ ವಿಎಫ್‌ಎಕ್ಸ್ ತಜ್ಞರಲ್ಲೊಬ್ಬರಾಗಿರುವ ಅವರು, ತಮ್ಮ 'ಪಿನಾಕ ಸ್ಟುಡಿಯೋ' ಮೂಲಕ '777 ಚಾರ್ಲಿ', 'ಅವನೇ ಶ್ರೀಮನ್ನಾರಾಯಣ' ಸೇರಿದಂತೆ 40ಕ್ಕೂ ಹೆಚ್ಚು ಚಿತ್ರಗಳಿಗೆ ವಿಎಫ್‌ಎಕ್ಸ್ ಕೆಲಸ ಮಾಡಿದ್ದಾರೆ.

ನಿರ್ದೇಶಕ ಸಿಂಪಲ್ ಸುನಿ ಅವರ ತಂಡದಲ್ಲಿ ಕಾರ್ಯನಿರ್ವಹಿಸಿದ ಅಭಿಷೇಕ್, 'ಸಿಂಪಲ್ಲಾಗ್ ಒಂದ್ ಲವ್ ಸ್ಟೋರಿ', 'ಬಹುಪರಾಕ್' ಹಾಗೂ 'ಆಪರೇಷನ್ ಅಲಮೇಲಮ್ಮ' ಚಿತ್ರಗಳ ನಿರ್ದೇಶನ ವಿಭಾಗದಲ್ಲಿ ಕೆಲಸ ಮಾಡಿದ್ದಾರೆ. ಕಿರುಚಿತ್ರಗಳ ನಿರ್ದೇಶನದ ಮೂಲಕ ಅನುಭವ ಗಳಿಸಿದ ಅವರು, ಬಳಿಕ ಸ್ವತಂತ್ರ ನಿರ್ದೇಶಕರಾಗಿ ಗುರುತಿಸಿಕೊಂಡರು.

ಜೆ.ಪಿ.ತೂಮಿನಾಡು




'ಸು ಫ್ರಮ್ ಸೋ' ಸಿನಿಮಾ ನಿರ್ದೇಶನಕ್ಕಾಗಿ ನಾಮನಿರ್ದೇಶನಗೊಂಡಿದ್ದಾರೆ. ಕರ್ನಾಟಕ–ಕೇರಳ ಗಡಿಭಾಗವಾದ ಮಂಗಳೂರು ಸಮೀಪದ ತೂಮಿನಾಡಿನವರಾದ ಇವರು ಮನೆಗಳಿಗೆ ಬಣ್ಣಬಳಿಯುವ ಪೈಂಟರ್ ಆಗಿದ್ದರು. ವೃತ್ತಿ ಜೊತೆ ಪ್ರವೃತ್ತಿಯಾಗಿ 'ಶಾರದಾ ಆರ್ಟ್ಸ್ ಮಂಜೇಶ್ವರ' ತಂಡ ಸೇರಿದರು. ಇಲ್ಲಿಂದ ನಾಟಕಗಳ ಬರವಣಿಗೆ, ನಟನೆ, ನಿರ್ದೇಶನದತ್ತ ವಾಲಿದರು. 'ಒಂದು ಮೊಟ್ಟೆಯ ಕಥೆ' ಸಿನಿಮಾದಲ್ಲಿ ಸಣ್ಣದೊಂದು ಪಾತ್ರ ಮಾಡುವ ಮೂಲಕ ಕನ್ನಡ ಚಿತ್ರರಂಗಕ್ಕೆ ಹೆಜ್ಜೆ ಇಟ್ಟರು. ಬಳಿಕ 'ಗರುಡ ಗಮನ ವೃಷಭ ವಾಹನ', 'ಕಥಾಸಂಗಮ', 'ಸ್ವಾತಿ ಮುತ್ತಿನ ಮಳೆಹನಿಯೇ' ಹಾಗೂ 'ಸಪ್ತ ಸಾಗರದಾಚೆ ಎಲ್ಲೋ' ಸಿನಿಮಾಗಳಲ್ಲಿ ನಟಿಸಿದರು. ಸಿನಿಮಾ ನಿರ್ದೇಶನದತ್ತ ಇದ್ದ ಆಸಕ್ತಿಯೇ 'ಸು ಫ್ರಮ್ ಸೋ'ಗೆ ನಾಂದಿಯಾಯಿತು.

ಸುಮಂತ್ ಭಟ್



'ಮಿಥ್ಯ' ಸಿನಿಮಾ ನಿರ್ದೇಶನಕ್ಕಾಗಿ ನಾಮನಿರ್ದೇಶನಗೊಂಡಿದ್ದಾರೆ. ಉಡುಪಿಯ ಇವರು ಎಂಜಿನಿಯರಿಂಗ್ ಪದವೀಧರ. ಸಾಫ್ಟ್‌ವೇರ್ ಕ್ಷೇತ್ರದಲ್ಲಿ ದುಡಿದು ಸಿನಿಮಾ ಕ್ಷೇತ್ರಕ್ಕೆ ಧುಮುಕಿದವರು. ಈ ಸಂದರ್ಭದಲ್ಲೇ ರಕ್ಷಿತ್ ಶೆಟ್ಟಿ ಅವರೊಂದಿಗೆ ಸೇರಿ ಕಿರುಚಿತ್ರಗಳನ್ನು ಮಾಡುತ್ತಾ ನಿರ್ದೇಶನದತ್ತ ಮುಖ ಮಾಡಿದರು. ಸಹಾಯಕ, ಸಹ ನಿರ್ದೇಶಕರಾಗಿ ಯಾವುದೇ ಅನುಭವ ಹೊಂದಿರದಿದ್ದರೂ ಕಿರುಚಿತ್ರಗಳೇ ಅವರಿಗೆ ಸಿನಿಮಾದ ಕಲಿಕೆಗೆ ನೆರವಾಯಿತು. 2017ರಲ್ಲಿ ಪರಂವಃ ಸೇರಿಕೊಂಡು ಬರವಣಿಗೆ ಮತ್ತು ಕಿರುಚಿತ್ರಗಳ ಕೆಲಸ ಮುಂದುವರಿಸಿದರು. ಬಳಿಕ 'ಏಕಂ' ಎಂಬ ವೆಬ್‌ಸರಣಿ ಹಾಗೂ 'ಮಿಥ್ಯ' ಎಂಬ ಸಿನಿಮಾ ನಿರ್ದೇಶಿಸಿದರು. ಸದ್ಯ ಶೈನ್ ಶೆಟ್ಟಿ ನಾಯಕರಾಗಿ ನಟಿಸುತ್ತಿರುವ 'ಶಂಕರಾಭರಣ' ಸಿನಿಮಾವನ್ನು ಇವರು ನಿರ್ದೇಶಿಸುತ್ತಿದ್ದು, ಇದೇ ವರ್ಷಾಂತ್ಯದೊಳಗೆ ಸಿನಿಮಾ ತೆರೆಗೆ ಬರಲಿದೆ.

ಅನೀಶ್ ಪೂಜಾರಿ ವೇಣೂರು



'ದಸ್ಕತ್' ಸಿನಿಮಾ ನಿರ್ದೇಶನಕ್ಕಾಗಿ ನಾಮನಿರ್ದೇಶನಗೊಂಡಿದ್ದಾರೆ. ಕನ್ನಡ ಸ್ನಾತಕೋತ್ತರ ಪದವೀಧರರಾದ ಇವರು ಆರಂಭದಲ್ಲಿ ವೇಣೂರಿನ ಶಾಲೆಯಲ್ಲಿ ಶಿಕ್ಷಕರಾಗಿದ್ದರು. ಬಳಿಕ ಜೀ ಕನ್ನಡದ ಕಾಮಿಡಿ ಕಿಲಾಡಿಗಳು ಮೊದಲನೇ ಆವೃತ್ತಿಯ ಸ್ಪರ್ಧಿಯಾಗಿ ಗುರುತಿಸಿಕೊಂಡರು. ಹಾಸ್ಯನಟನಾಗಿ ಇವರು ಪರಿಚಿತರು. 'ಕನಸು ಮಾರಾಟಕ್ಕಿದೆ' ಸಿನಿಮಾದ ಸಹ ನಿರ್ದೇಶಕರಾಗಿ ಬೆಳ್ಳಿತೆರೆಯ ಪಯಣ ಆರಂಭಿಸಿದ ಇವರು 'ಐ ಲವ್ ಯು', 'ಮಹಾನವ್ಯ', 'ಕಾನೂರಾಯಣ' ಸೇರಿದಂತೆ ಹಲವು ಸಿನಿಮಾಗಳಲ್ಲಿ ನಟಿಸಿದ್ದಾರೆ. 'ಮಾಯೆ', 'ವನಜ' ಎಂಬ ವೆಬ್‌ಸರಣಿಯನ್ನು ನಿರ್ದೇಶಿಸಿದ್ದಾರೆ. ಇವರು ಸದ್ಯ ಎರಡು ಸಿನಿಮಾಗಳನ್ನು ನಿರ್ದೇಶಿಸಲು ಸಜ್ಜಾಗಿದ್ದಾರೆ. ಇದರಲ್ಲಿ ಒಂದು ತುಳು ಸಿನಿಮಾವೂ ಕೂಡಿದೆ.

ಹಣಕಾಸು ಸಂಸ್ಥೆ ಮೇಲೆ ದಾಳಿ

ಪ್ರಜಾವಾಣಿ ವಾರ್ತೆ

ಬೆಳಗಾವಿ: ಇಲ್ಲಿನ ಭಾಗ್ಯನಗರದಲ್ಲಿ ಇರುವ ಆದಿತ್ಯರಾಜ ಕ್ಯಾಪಿಟಲ್ ಪ್ರೈವೆಟ್ ಲಿಮಿಟೆಡ್ ಎಂಬ ಹಣಕಾಸು ಸಂಸ್ಥೆಯು ಅನಧಿಕೃತವಾಗಿ ಠೇವಣಿ ಸಂಗ್ರಹಿಸಿದೆ ಮತ್ತು ಅದನ್ನು ವಾಮಮಾರ್ಗದಲ್ಲಿ ಬೇರೆಡೆ ಹೂಡಿಕೆ ಮಾಡಿದೆ ಎಂಬ ದೂರುಗಳ ಬಂದ ಕಾರಣ ಉಪವಿಭಾಗಾಧಿಕಾರಿ ಶ್ರವಣ ನಾಯಕ ನೇತೃತ್ವದ ಅಧಿಕಾರಿಗಳ ತಂಡ ಗುರುವಾರ ದಾಳಿ ನಡೆಸಿ, ಪರಿಶೀಲಿಸಿತು.

‘ಕೆಪಿಐಡಿ– ಬಡ್ಸ್ ಆ್ಯಕ್ಟ್’ನಡಿ ಜಿಲ್ಲಾಧಿಕಾರಿ ಕಚೇರಿಯಲ್ಲಿ ತನಿಖಾ ಶಾಖೆ ತೆರೆಯಲಾಗಿದೆ. ದೂರುಗಳು ಆಧರಿಸಿ ಒಂದು ತಿಂಗಳಿನಿಂದ ಮಾಹಿತಿ ಸಂಗ್ರಹಿಸಿದೆವು. ಎಲ್ಲವೂ ದೃಢಪಟ್ಟ ಬಳಿಕ ಗುರುವಾರ ದಾಳಿ ನಡೆಸಿದೆವು’ ಎಂದು ಅಧಿಕಾರಿಯೊಬ್ಬರು ತಿಳಿಸಿದರು.

‘ಅಧಿಕ ಬಡ್ಡಿ ದರದ ಆಮಿಷವೊಡ್ಡಿ ಅಪಾರ ಸಂಖ್ಯೆಯ ಜನರಿಂದ ಹೂಡಿಕೆ ಮಾಡಿಸಿಕೊಳ್ಳಲಾಗಿದೆ. ಅದಕ್ಕೆ ಸಮರ್ಪಕ ಭದ್ರತೆ ನೀಡಿಲ್ಲ. ಹಣವನ್ನು ಬೇರೆಡೆ ಹೂಡಿಕೆ ಕೂಡ ಮಾಡಲಾಗಿದೆ. ಸದ್ಯಕ್ಕೆ ದಾಖಲೆಗಳ ಪರಿಶೀಲನೆ ನಡೆದಿದೆ. ಎಷ್ಟು ಪ್ರಮಾಣದ ವ್ಯವಹಾರ ನಡೆದಿದೆ ಎಂಬುದು ಇನ್ನೂ ಖಚಿತವಾಗಿಲ್ಲ. ಆದರೆ, ಆರ್‌ಬಿಐ ಹಾಗೂ ಸಹಕಾರ ಕಾಯ್ದೆಯ ನಿಯಮಗಳನ್ನು ಪಾಲಿಸಿಲ್ಲ ಎಂಬುದು ಖಾತ್ರಿಯಾಗಿದೆ’ ಎಂದರು. ಪರಿಶೀಲನೆ ವೇಳೆ ಟಿಳಕವಾಡಿ ಠಾಣೆ ಪೊಲೀಸರು ಭದ್ರತೆ ಒದಗಿಸಿದರು.



ಬೆಳಗಾವಿಯ ಭಾಗ್ಯನಗರದಲ್ಲಿರುವ ಆದಿತ್ಯರಾಜ ಕ್ಯಾಪಿಟಲ್ ಪ್ರೈವೆಟ್ ಲಿಮಿಟೆಡ್ ಹಣಕಾಸು ಸಂಸ್ಥೆ ಮೇಲೆ ಅಧಿಕಾರಿಗಳು ಗುರುವಾರ ದಾಳಿ ನಡೆಸಿದಾಗ, ಪೊಲೀಸರು ಭದ್ರತೆ ಒದಗಿಸಿದರು —ಪ್ರಜಾವಾಣಿ ಚಿತ್ರ

ಕೆ.ಪಿ.ರಾವ್ ಸೇರಿ ಐವರಿಗೆ ಪ್ರಶಸ್ತಿ

ಪ್ರಜಾವಾಣಿ ವಾರ್ತೆ


ಕೆ.ಪಿ. ರಾವ್


ಅನಂತ ಕುಣಿಗಲ್


ಎಂ.ಎಸ್. ಆಶಾದೇವಿ


ಸಿ.ಆರ್. ಜನಾರ್ದನ್


ಎಚ್.ಕೆ. ಲಕ್ಷ್ಮೀನಾರಾಯಣ ಅಡಿಗ

ಬೆಂಗಳೂರು: ಕರ್ನಾಟಕ ಕನ್ನಡ ಬರಹಗಾರರ ಮತ್ತು ಪ್ರಕಾಶಕರ ಸಂಘವು 2025ನೇ ಸಾಲಿನ ವಾರ್ಷಿಕ ಪ್ರಶಸ್ತಿಗಳನ್ನು ಪ್ರಕಟಿಸಿದೆ.

‘ಸಾಹಿತ್ಯ ರತ್ನ’ ಪ್ರಶಸ್ತಿಗೆ ಎಂ.ಎಸ್. ಆಶಾದೇವಿ ಅವರ ‘ಮೀಮಾಂಸೆ’ ಕೃತಿ, ‘ಯುವ ಸಾಹಿತ್ಯ ರತ್ನ’ ಪ್ರಶಸ್ತಿಗೆ ಅನಂತ ಕುಣಿಗಲ್ ಅವರ ‘ಆಕ್ರಮಣ’ ಕೃತಿ ಹಾಗೂ ‘ಪುಸ್ತಕ ರತ್ನ’ ಪ್ರಶಸ್ತಿಗೆ ಎಚ್.ಕೆ. ಲಕ್ಷ್ಮೀನಾರಾಯಣ ಅಡಿಗ ಅವರ ಐಬಿಎಚ್ ಪ್ರಕಾಶನ ಆಯ್ಕೆಯಾಗಿದೆ.

ಕರ್ನಾಟಕದಲ್ಲಿ ಮುದ್ರಣೋದ್ಯಮಕ್ಕೆ ದ್ವಿಶತಮಾನೋತ್ಸವ ಸಂಭ್ರಮಾಚರಣೆ ಪ್ರಯುಕ್ತ, ಇಬ್ಬರಿಗೆ ‘ಮುದ್ರಣ ರತ್ನ’ ಪ್ರಶಸ್ತಿ ನೀಡಲಾಗುತ್ತಿದೆ. ‘ಭಾರತೀಯ ಭಾಷಾಗಣಕ ಪಿತಾಮಹ’ ಎಂದು ಪ್ರಸಿದ್ಧರಾಗಿರುವ ಉಡುಪಿಯ ಕೆ.ಪಿ.ರಾವ್ ಮತ್ತು ಬೆಂಗಳೂರಿನ ಶ್ರೀ ವೆಂಕಟೇಶ್ವರ ಪ್ರಿಂಟಿಂಗ್ ಪ್ರೆಸ್‌ನ ಸಿ.ಆರ್. ಜನಾರ್ದನ್ ಅವರು ಈ ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ.

ಈ ಪ್ರಶಸ್ತಿಗಳು ತಲಾ ₹10 ಸಾವಿರ ನಗದು ಒಳಗೊಂಡಿದ್ದು, ಜೂನ್ ಕೊನೆಯ ವಾರದಲ್ಲಿ ಬೆಂಗಳೂರಿನಲ್ಲಿ ಪ್ರಶಸ್ತಿ ಪ್ರದಾನ ಸಮಾರಂಭ ನಡೆಸಲಾಗುವುದು ಎಂದು ಸಂಘದ ಅಧ್ಯಕ್ಷ ನಿಡಸಾಲೆ ಪುಟ್ಟಸ್ವಾಮಯ್ಯ ಹೇಳಿದ್ದಾರೆ.

ಕೊಲೆ ಪ್ರಕರಣ: ಬಂಧಿತರ ಸಂಖ್ಯೆ 18ಕ್ಕೆ ಏರಿಕೆ

ಪ್ರಜಾವಾಣಿ ವಾರ್ತೆ

ವಿಜಯಪುರ: ಚಡಚಣ ತಾಲ್ಲೂಕಿನ ಗೋವಿಂದಪುರದಲ್ಲಿ ಆಸ್ತಿ ವಿವಾದಕ್ಕೆ ಸಂಬಂಧಿಸಿದಂತೆ ಈಚೆಗೆ ನಡೆದ ಆರು ಜನರ ಕೊಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ಗುರುವಾರ ಮತ್ತೆ ಆರು ಮಂದಿ ಆರೋಪಿಗಳ ಬಂಧನವಾಗಿದೆ.

‘ಅಪ್ಪುಗೌಡ ಪಾಟೀಲ, ಶಂಕ್ರೆಪ್ಪ ಅರಕೇರಿ, ಅಪ್ಪಾಸಾಬ ಅಲಿಯಾಸ್ ಕಿಶನ್ ಭೋವಿ, ಸತ್ಯೆಪ್ಪ ಬಿರಾದಾರ, ಸುಲ್ತಾನ ಬಿರಾದಾರ ಮತ್ತು ಮಹೇಶ ಬಿರಾದಾರ ಬಂಧಿತರು. ಈ ಹಿಂದೆ 12 ಜನರನ್ನು ಬಂಧಿಸಲಾಗಿತ್ತು. ಈವರೆಗೆ ಬಂಧಿತರ ಸಂಖ್ಯೆ 18ಕ್ಕೆ ಏರಿಕೆಯಾಗಿದೆ’ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಲಕ್ಷ್ಮಣ ನಿಂಬರಗಿ ತಿಳಿಸಿದ್ದಾರೆ.

‘ಎನ್‌ಎಂಡಿಸಿ ಗಣಿ: ಇಸಿ ರದ್ದುಪಡಿಸಿ’

ಪ್ರಜಾವಾಣಿ ವಾರ್ತೆ


ಎಸ್.ಆರ್ ಹಿರೇಮಠ

ಬಳ್ಳಾರಿ: ‘ಕೇಂದ್ರ ಉಕ್ಕು ಸಚಿವಾಲಯದ ಒಡೆತನದ ರಾಷ್ಟ್ರೀಯ ಖನಿಜ ಅಭಿವೃದ್ಧಿ ನಿಗಮದ (ಎನ್‌ಎಂಡಿಸಿ) ‘ಕುಮಾರಸ್ವಾಮಿ ಐರನ್ ಓರ್ ಮೈನ್ಸ್’ ಗಣಿ ಗುತ್ತಿಗೆಯಲ್ಲಿ ಗಂಭೀರ ಶಾಸನಾತ್ಮಕ ಉಲ್ಲಂಘನೆಗಳು ಆಗಿವೆ. ಅದರ ಪರಿಸರ ಅನುಮೋದನೆ (ಇ.ಸಿ) ಕೂಡಲೇ ರದ್ದು ಪಡಿಸಬೇಕು’ ಎಂದು ಸಮಾಜ ಪರಿವರ್ತನ ಸಮುದಾಯದ (ಎಸ್‌ಪಿಎಸ್) ಮುಖ್ಯಸ್ಥ ಎಸ್.ಆರ್ ಹಿರೇಮಠ ಒತ್ತಾಯಿಸಿದರು.

‘ಎನ್‌ಎಂಡಿಸಿ ಸಂಸ್ಥೆಯು ಅದಿರು ಸಾಗಣೆಗೆ ಕನ್‌ವೇಯರ್ ಬೆಲ್ಟ್ ಬಳಸುತ್ತಿಲ್ಲ. ಲಾರಿಗಳಲ್ಲಿ ನಿಯಮಬಾಹಿರವಾಗಿ ಸಾಗಣೆ ಮಾಡುತ್ತಿರುವ ಕಾರಣ ರಣಜಿತ್ ಪುರ ಸೇರಿ ಸುತ್ತಮುತ್ತಲಿನ ಗ್ರಾಮಗಳಲ್ಲಿ ಮಾಲಿನ್ಯ ಪ್ರಮಾಣ ಹೆಚ್ಚಾಗಿದೆ. ಜನರ ಆರೋಗ್ಯ ಹದಗೆಟ್ಟಿದೆ’ ಎಂದು ಅವರು ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಆರೋಪಿಸಿದರು.

‘ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವಾಲಯದ ಬೆಂಗಳೂರು ಪ್ರಾದೇಶಿಕ ಕಚೇರಿಯ ವಿಜ್ಞಾನಿಗಳು ನೀಡಿರುವ ಕ್ಷೇತ್ರ ಪರಿಶೀಲನಾ ವರದಿಗಳೂ ಇದನ್ನು ದೃಢಪಡಿಸಿವೆ. ಹೀಗಾಗಿ ಸಂಸ್ಥೆಗೆ ಭಾರಿ ದಂಡ ವಿಧಿಸಿ, ಗ್ರಾಮೀಣ ರಸ್ತೆಗಳಲ್ಲಿ ಅದಿರು ಸಾಗಣೆಯನ್ನು ತಕ್ಷಣವೇ ನಿಲ್ಲಿಸಬೇಕು’ ಎಂದು ಅವರು ಆಗ್ರಹಿಸಿದರು.

‘ಸಮಸ್ಯೆ ಮತ್ತು ಸಂಕಷ್ಟಗಳನ್ನು ಪರಿಹರಿಸುವಂತೆ ಒತ್ತಾಯಿಸಿ ಶುಕ್ರವಾರ ಬಳ್ಳಾರಿ ಹೊರವಲಯದ ವೇಣಿವೀರಾಪುರದಲ್ಲಿ ಗಣಿಬಾಧಿತ ಪ್ರದೇಶದ ಜನರು ಸೇರಿ ವಿವಿಧ ಸಂಘಟನೆಯವರು ಪ್ರತಿಭಟನೆ ನಡೆಸುವರು’ ಎಂದರು.

ಅನುವಾದ ಸಾಹಿತ್ಯಕ್ಕೆ ಪ್ರಶಸ್ತಿ ಸ್ಥಾಪನೆ

ಬೆಂಗಳೂರು: ಅನುವಾದ ಸಾಹಿತ್ಯವನ್ನು ಪ್ರೋತ್ಸಾಹಿಸಲು ಬುಕ್ ಬ್ರಹ್ಮ ಫೌಂಡೇಷನ್ ಮತ್ತು ಬುಕ್‌ವರ್ಮ್ ಪುಸ್ತಕ ಮಳಿಗೆ ಜಂಟಿಯಾಗಿ ‘ಇಂಗ್ಲಿಷ್ ಫಿಕ್ಷನ್ ಆಫ್ ದಿ ಇಯರ್’ ಪ್ರಶಸ್ತಿ ಸ್ಥಾಪಿಸಿವೆ.

ದಕ್ಷಿಣ ಭಾರತೀಯ ಭಾಷೆಗಳಿಂದ ಇಂಗ್ಲಿಷ್‌ಗೆ ಅನುವಾದಗೊಂಡ, ಅತ್ಯುತ್ತಮ ಸೃಜನಶೀಲ ಸಾಹಿತ್ಯ ಕೃತಿಯನ್ನು ಗೌರವಿಸಲು ಈ ಪ್ರಶಸ್ತಿ ಸ್ಥಾಪಿಸಲಾಗಿದೆ. ಭಾರತ ಅಥವಾ ವಿದೇಶದಲ್ಲಿ 2023ರಿಂದ 2025ರ ಅವಧಿಯಲ್ಲಿ ಪ್ರಕಟವಾದ ಕೃತಿಗಳನ್ನು ಪ್ರಶಸ್ತಿಗೆ ಪರಿಗಣಿಸಲಾಗುತ್ತದೆ.

ಪ್ರಶಸ್ತಿಯು ₹1 ಲಕ್ಷ ನಗದು, ಸ್ಮರಣಿಕೆ ಹಾಗೂ ಆಯ್ದ ಪುಸ್ತಕಗಳ ಗುಚ್ಛವನ್ನು ಒಳಗೊಂಡಿದೆ. ನಗದು ಬಹುಮಾನವನ್ನು ಮೂಲ ಲೇಖಕ ಮತ್ತು ಇಂಗ್ಲಿಷ್ ಅನುವಾದಕರ ನಡುವೆ ಸಮಾನವಾಗಿ ಹಂಚಲಾಗುತ್ತದೆ. ಅರ್ಹ ಕೃತಿಗಳ ಮೂರು ಪ್ರತಿಗಳನ್ನು ಪ್ರಕಾಶಕರು, ಲೇಖಕರು ಮತ್ತು ಅನುವಾದಕರು ಇದೇ 30ರೊಳಗೆ ಬುಕ್ ಬ್ರಹ್ಮ ಫೌಂಡೇಷನ್, 3ನೇ ಮಹಡಿ, ಆರ್‌ಕೆ ಕಾಂಪ್ಲೆಕ್ಸ್, ಕೆಎಸ್‌ಎಸ್‌ಐಡಿಸಿ ಕಾಂಪೌಂಡ್, ಎಲೆಕ್ಟ್ರಾನಿಕ್ ಸಿಟಿ ಮೊದಲ ಹಂತ, ಬೆಂಗಳೂರು–560100 ಈ ವಿಳಾಸಕ್ಕೆ ಕಳುಹಿಸಬೇಕು ಎಂದು ಪ್ರಕಟಣೆ ತಿಳಿಸಿದೆ. ಸಂಪರ್ಕಕ್ಕೆ: 94480 63150

ಕನ್ನಡ ಕೃಷಿ ಪುಸ್ತಕ ಪ್ರಶಸ್ತಿಗೆ ಆಹ್ವಾನ

ಬೆಂಗಳೂರು: ಕನ್ನಡದಲ್ಲಿ ಕೃಷಿ ಬರವಣಿಗೆಯನ್ನು ಉತ್ತೇಜಿಸಲು ಬೆಂಗಳೂರು ಕೃಷಿ ವಿಶ್ವವಿದ್ಯಾಲಯವು ನೀಡುವ 2025ನೇ ಸಾಲಿನ ‘ಕನ್ನಡ ಕೃಷಿ ಪುಸ್ತಕ ಪ್ರಶಸ್ತಿ’ಗೆ ಲೇಖಕರಿಂದ ಅರ್ಜಿ ಆಹ್ವಾನಿಸಿದೆ.

2025ರಲ್ಲಿ ಮೊದಲ ಮುದ್ರಣವಾಗಿ ಪ್ರಕಟವಾಗಿರುವ ಕೃತಿಗಳನ್ನು ಪರಿಗಣಿಸಲಾಗುವುದು. ಪ್ರಶಸ್ತಿಯು ₹10 ಸಾವಿರ ನಗದು ಪುರಸ್ಕಾರ ಹಾಗೂ ಪ್ರಶಸ್ತಿ ಫಲಕವನ್ನು ಒಳಗೊಂಡಿದೆ.

ಆಸಕ್ತ ಲೇಖಕರು ನಿಗದಿತ ನಮೂನೆಯಲ್ಲಿ ಸ್ವ-ವಿವರಗಳೊಂದಿಗೆ ಪುಸ್ತಕದ 3 ಪ್ರತಿಗಳನ್ನು ಜುಲೈ 30 ರೊಳಗೆ ಮುಖ್ಯಸ್ಥರು, ಕನ್ನಡ ಅಧ್ಯಯನ ವಿಭಾಗ, ಕೃಷಿ ವಿ.ವಿ. ಗಾಂಧಿ ಕೃಷಿ ವಿಜ್ಞಾನ ಕೇಂದ್ರ ಬೆಂಗಳೂರು - 560065 ಈ ವಿಳಾಸಕ್ಕೆ ಕಳಿಸಬೇಕು. ಸಂಪರ್ಕಕ್ಕೆ: ಜಾಲತಾಣ– http://uasbangalore.edu.in ಮಿಂಚಂಚೆ:kannada.uas@gmail.com, ದೂರವಾಣಿ; 080-23330153 ಅಥವಾ ವಿಸ್ತರಣಾ ನಿರ್ದೇಶನಾಲಯವನ್ನು ಸಂಪರ್ಕಿಸಬಹುದು.

ಗ್ರಾಮ ಆಡಳಿತ ಅಧಿಕಾರಿ ಆತ್ಮಹತ್ಯೆ

ಬಸವಕಲ್ಯಾಣ (ಬೀದರ್): ತಾಲ್ಲೂಕಿನ ಉಮಾಪುರ–ಹಳ್ಳಿ ಗ್ರಾಮದಲ್ಲಿ ಕೆಲಸ ನಿರ್ವಹಿಸುತ್ತಿದ್ದ ಗ್ರಾಮ ಆಡಳಿತ ಅಧಿಕಾರಿ ಮಹಾದೇವ ಪಿಲ್ಲಂಗೋಲೆ (27) ಸ್ವಂತ ಊರಾದ ಕಾಂಬಳೆವಾಡಿಯ ಮನೆಯಲ್ಲಿ ಬುಧವಾರ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.


ಮಹಾದೇವ ಪಿಲ್ಲಂಗೋಲೆ

‘ಮಹಾದೇವ ಕೆಲಸ ನಿರ್ವಹಿಸಿ ಮಧ್ಯಾಹ್ನ ಮನೆಗೆ ಬಂದಿದ್ದ. ನಿದ್ದೆ ಬರುತ್ತಿದೆ ಮಲಗಿಕೊಳ್ಳುತ್ತೇನೆ ಎಂದು ಕೊಠಡಿಗೆ ಹೋಗಿ ಬಳಿಕ ನೇಣು ಹಾಕಿಕೊಂಡಿದ್ದಾನೆ. ಮೇಲಧಿಕಾರಿಗಳು ನೀಡಿದ ಕಿರುಕುಳ ಮತ್ತು ವಿವಿಧ ಬಗೆಯ ಒತ್ತಡವೇ ಆತ್ಮಹತ್ಯೆಗೆ ಕಾರಣವಾಗಿದೆ. ಅಧಿಕಾರಿಗಳು ಕಿರುಕುಳ ನೀಡುತ್ತಿದ್ದ ಬಗ್ಗೆ ಮಗ ಆಗಾಗ ಹೇಳಿಕೊಳ್ಳುತ್ತಿದ್ದ’ ಎಂದು ಮಹಾದೇವ ಅವರ ತಾಯಿ ಜಾನಕಾಬಾಯಿ ಅವರು ಮಂಠಾಳ ಪೊಲೀಸ್ ಠಾಣೆಗೆ ನೀಡಿದ ದೂರಿನಲ್ಲಿ ತಿಳಿಸಿದ್ದಾರೆ.

ತಪ್ಪಿತಸ್ಥರ ಮೇಲೆ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿ ಕುಟುಂಬಸ್ಥರು ಹಾಗೂ ಗ್ರಾಮಸ್ಥರು ಗುರುವಾರ ಮಧ್ಯಾಹ್ನದವರೆಗೂ ಅಂತ್ಯಕ್ರಿಯೆ ನಡೆಸಿರಲಿಲ್ಲ. ಶಾಸಕ ಶರಣು ಸಲಗರ ಅವರು ಭೇಟಿ ನೀಡಿ ಕುಟುಂಬದವರಿಗೆ ಸಾಂತ್ವನ ಹೇಳಿದ್ದಾರೆ.

ಪ್ರತ್ಯೇಕ ಅಪಘಾತ: ಮೂವರು ಸಾವು

ಸಿರುಗುಪ್ಪ (ಬಳ್ಳಾರಿ ಜಿಲ್ಲೆ): ತಾಲ್ಲೂಕಿನ ಚಾಣಕನೂರು ಕ್ರಾಸ್ ಬಳಿ ಬುಧವಾರ ರಾತ್ರಿ ಬೈಕ್‌ನಲ್ಲಿ ತೆರಳುತ್ತಿದ್ದ ದಂಪತಿ ರಾಜ್ಯ ಹೆದ್ದಾರಿ 63ರ ಕಾಮಗಾರಿಗೆ ತೆಗೆದ ಗುಂಡಿಯಲ್ಲಿ ಬಿದ್ದು, ಪತ್ನಿ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಪತಿಗೆ ತೀವ್ರಗಾಯಗಳಾಗಿವೆ.


ಮಂಜುಳ

‘ತಾಲ್ಲೂಕಿನ ರಾವಿಹಾಳು ಗ್ರಾಮದ ಸರ್ಕಾರಿ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ನರ್ಸ್ ಆಗಿದ್ದ ಮಂಜುಳಾ (36) ಮೃತರು. ಗಾಯಗೊಂಡ ಪತಿ ಚಂದ್ರಶೇಖರ (46) ಅವರನ್ನು ‘ಬಳ್ಳಾರಿ ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಕೇಂದ್ರಕ್ಕೆ (ಬಿಎಂಸಿಆರ್‌ಸಿ) ದಾಖಲಿಸಲಾಗಿದೆ ಎಂದು ಸಿರುಗುಪ್ಪ ಠಾಣೆ ಪೊಲೀಸರು ತಿಳಿಸಿದ್ದಾರೆ.

ತಂದೆ-ಮಗ ಸಾವು (ಸಂಡೂರು ವರದಿ): ಸಂಡೂರಿನ ಕುಮಾರಸ್ವಾಮಿ ದೇವಾಲಯಕ್ಕೆ ತೆರಳುವಾಗ ಗುರುವಾರ ಲಾರಿ ಮತ್ತು ಬೈಕ್ ನಡುವೆ ಡಿಕ್ಕಿ ಸಂಭವಿಸಿ ತಂದೆ, ಮಗ ಸ್ಥಳದಲ್ಲೇ ಮೃತಪಟ್ಟಿದ್ದಾರೆ.

ಕಮ್ಮತ್ತೂರಿನ ಬೆಳ್ಳಿ ನಾಗರಾಜ್ (45), ಪುತ್ರ ದುರುಗೇಶ್ (22) ಮೃತರು. ಇಬ್ಬರು ಸಂಡೂರು ಪಟ್ಟಣದಲ್ಲಿ ಕೆಲಸ ಮುಗಿಸಿಕೊಂಡು ಸುಬ್ಬರಾಯನಹಳ್ಳಿಗೆ ತೆರಳುವ ವೇಳೆ ಡಿಕ್ಕಿ ಸಂಭವಿಸಿದೆ ಎಂದು ಸಂಡೂರು ಠಾಣೆ ಪೊಲೀಸರು ತಿಳಿಸಿದ್ದಾರೆ.

ಕರ್ನಾಟಕ ಸರ್ಕಾರ
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ
ಕರ್ನಾಟಕ ರಾಜ್ಯ ಏಡ್ಸ್ ಪ್ರಿವೆನ್ಷನ್ ಸೊಸೈಟಿ
ಆರೋಗ್ಯ ಸೌಧ, 4ನೇ ಮಹಡಿ, 1ನೇ ಅಡ್ಡರಸ್ತೆ, ಮಾಗಡಿ ರಸ್ತೆ, ಬೆಂಗಳೂರು–560 023
ದೂ ಸಂ: 080–29557021, e-mail : pdksaps@gmail.com

ನಂ. ಕೆಎಸ್‌ಎಪಿಎಸ್/ಎಸ್‌ಟಿಐ/ಆರ್‌ಪಿಕೆಟಿ/01/2026–ಎಸ್‌ಟಿಐ ದಿನಾಂಕ : 03.06.2026

ಇ–ಸಂಗ್ರಹಣ ವೇದಿಕೆ ಮೂಲಕ ಟೆಂಡರ್ (ದ್ವಿ ಲಕೋಟೆ) ಆಹ್ವಾನ ಪ್ರಕಟಣೆ

RPR Test kits for Syphilis testing ಸಂಬಂಧ ಕಿಟ್‌ಗಳನ್ನು ಸರಬರಾಜು ಮಾಡುವ ಸಂಬಂಧ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ (ದ್ವಿ ಲಕೋಟೆ) ಕರೆಯಲಾಗಿದೆ. ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ : 25/06/2026. ಸಂಜೆ 5.30 ಗಂಟೆ. ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ ವೆಬ್‌ಸೈಟ್ : https://kppp.karnataka.gov.in.

ಸಹಿ/– ಯೋಜನಾ ನಿರ್ದೇಶಕರು,
ಕರ್ನಾಟಕ ರಾಜ್ಯ ಏಡ್ಸ್ ಪ್ರಿವೆನ್ಷನ್ ಸೊಸೈಟಿ, ಬೆಂಗಳೂರು
DIPR/CP/973/NR/2026-27

ಕರ್ನಾಟಕ ಸರ್ಕಾರ
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ
ಕರ್ನಾಟಕ ರಾಜ್ಯ ಏಡ್ಸ್ ಪ್ರಿವೆನ್ಷನ್ ಸೊಸೈಟಿ
ಆರೋಗ್ಯ ಸೌಧ, 4ನೇ ಮಹಡಿ, 1ನೇ ಅಡ್ಡರಸ್ತೆ, ಮಾಗಡಿ ರಸ್ತೆ, ಬೆಂಗಳೂರು–560 023
ದೂ ಸಂ: 080–29557021, e-mail : pdksaps@gmail.com

ನಂ. ಕೆಎಸ್‌ಎಪಿಎಸ್/ಎಡಿ (ಎಫ್)/ಎಸ್‌ಎ/10/2021–22 ದಿನಾಂಕ : 04.06.2026

ಎಕ್ಸ್‌ಪ್ರೆಸನ್ ಆಫ್ ಇಂಟರೆಸ್ಟ್

ಕೆಎಸ್‌ಎಪಿಎಸ್‌ನ 2025–26 ನೇ ಸಾಲಿನ ಲೆಕ್ಕ ಪತ್ರಗಳನ್ನು ಆಡಿಟ್ ಮಾಡುವ ಸಂಬಂಧ ಅರ್ಹ ಲೆಕ್ಕ ಪರಿಶೋಧಕರಿಂದ ಎಕ್ಸ್‌ಪ್ರೆಸನ್ ಆಫ್ ಇಂಟರೆಸ್ಟ್ (ಕಾಲ್–2) ನ್ನು ಅಹ್ವಾನಿಸಲಾಗಿದೆ. ಅಸಕ್ತಿ ಇರುವ ಸಂಸ್ಥೆಯವರು ಹೆಚ್ಚಿನ ಮಾಹಿತಿಗಾಗಿ ಕೆಎಸ್‌ಎಪಿಎಸ್‌ನ ವೆಬ್‌ಸೈಟ್ https://ksaps.karnataka.gov.in. ನಲ್ಲಿ ಪಡೆಯಬಹುದಾಗಿದೆ. ಇಓಐ ಗಳನ್ನು ಮೊಹರು ಮಾಡಿದ ಲಕೋಟೆಯಲ್ಲಿ ಈ ಕಛೇರಿಗೆ ಸಲ್ಲಿಸಲು ಕೊನೆಯ ದಿನಾಂಕ : 20/06/2026 ಸಂಜೆ 5.30.

ಸಹಿ/– ಯೋಜನಾ ನಿರ್ದೇಶಕರು,
ಕರ್ನಾಟಕ ರಾಜ್ಯ ಏಡ್ಸ್ ಪ್ರಿವೆನ್ಷನ್ ಸೊಸೈಟಿ, ಬೆಂಗಳೂರು
DIPR/CP/990/NR/2026-27

ಶಾಲಾ ಶಿಕ್ಷಣ ಇಲಾಖೆ
ಕರ್ನಾಟಕ ಪಠ್ಯಪುಸ್ತಕ ಸಂಘ (ರಿ)
6ನೇ ಅಡ್ಡ ರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560 003
E-mail:mdktbs.tender@gmail.com Website:https://textbooks.karnataka.gov.in
ಸಂಖ್ಯೆ: A7/E104450/KTBS/ADM/PUTN/2/2026/KTBS/26-27/IND0020 ದಿನಾಂಕ: 04.06.2026

ಅಲ್ಪಾವಧಿ ಟೆಂಡರ್ ಅಧಿಸೂಚನೆ (ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ)

2026–27ನೇ ಸಾಲಿಗೆ ಮಾರಾಟ ಪಿ.ಯು.ಸಿ ಪಠ್ಯಪುಸ್ತಕಗಳನ್ನು ಮುದ್ರಿಸಿ ಸರಬರಾಜು ಮಾಡಲು ಟೆಂಡರ್‌ನಲ್ಲಿ ನಿಗದಿಪಡಿಸಿರುವಂತೆ ಮೂಲಭೂತ ಸೌಲಭ್ಯವುಳ್ಳ ಅರ್ಹ ಮುದ್ರಕರುಗಳಿಂದ 2 ಬಿಡ್ ಪದ್ಧತಿಯಲ್ಲಿ ಇ–ಪ್ರೊಕ್ಯೂರ್‌ಮೆಂಟ್ ಮೂಲಕ 07 ದಿನಗಳ ಅಲ್ಪಾವಧಿ ಟೆಂಡರ್ ಆಹ್ವಾನಿಸಲಾಗಿದೆ. ಪ್ಯಾಕೇಜುವಾರು ಪಾವತಿ ಮಾಡಬೇಕಾಗಿರುವ ಇ.ಎಂ.ಡಿ. ಮೊತ್ತವನ್ನು ಟೆಂಡರ್ ದಸ್ತಾವೇಜಿನ Section-10 ರಂತೆ ಪಾವತಿ ಮಾಡುವುದು ಹಾಗೂ ಪೂರ್ಣ ವಿವರಗಳನ್ನು ಇ–ಪೋರ್ಟಲ್ ಹಾಗೂ ಇಲಾಖೆಯ ವೆಬ್‌ಸೈಟ್‌ನಲ್ಲಿ ಲಭ್ಯವಿರುವ ಟೆಂಡರ್ ದಸ್ತಾವೇಜಿನಲ್ಲಿ ಪರಿಶೀಲಿಸಬಹುದು. ಬಿಡ್‌ಗಳನ್ನು ದಿನಾಂಕ:11.06.2026ರಂದು ಸಂಜೆ 5:30 ರವರೆಗೂ ಸಲ್ಲಿಸಬಹುದಾಗಿರುತ್ತದೆ.
ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಪೂರ್ಣ ವಿಳಾಸ: https://kppp.karnataka.gov.in
ಸಹಾಯವಾಣಿ: 91–9240214000 / +91–9240214001
ಇಲಾಖೆ ವೆಬ್‌ಸೈಟ್:https://textbooks.karnataka.gov.in

ಸಹಿ/– ವ್ಯವಸ್ಥಾಪಕ ನಿರ್ದೇಶಕರು,
ಕರ್ನಾಟಕ ಪಠ್ಯಪುಸ್ತಕ ಸಂಘ (ರಿ), ಬೆಂಗಳೂರು

ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ
ಕೇಂದ್ರ ಕಛೇರಿ, ಗೋಕುಲ ರಸ್ತೆ, ಹುಬ್ಬಳ್ಳಿ – 580 030.
ದೂರವಾಣಿ : 0836–2333058 ವೆಬ್‌ಸೈಟ್ : www.nwkrtc.in

ಸಂಖ್ಯೆ : ವಾ.ಕ.ರ.ಸಾ./ಕೇ.ಕ./ಹು./ಯಾಂತ್ರಿಕ/916/2026–27
ದಿನಾಂಕ : 04–06–2026

ಟೆಂಡರ್ ಪ್ರಕಟಣೆ
ಪ್ರಕಟಣೆ ಸಂಖ್ಯೆ : 06/ಎಂ.ಇ./2026–27 ದಿನಾಂಕ : 04–06–2026

ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ವೇದಿಕೆ (ಕೆಪಿಪಿಪಿ) ಯ ಮೂಲಕ ಆಸಕ್ತ ಬಿಡ್ದಾರರಿಂದ (ಎರಡು ಹಂತದ ಟೆಂಡರ್ ಪದ್ಧತಿ ಮೂಲಕ) ಪೂರ್ವಾರ್ಹತಾ ಹಾಗೂ ಆರ್ಥಿಕ ಬಿಡ್‌ಗಳನ್ನು ಸಲ್ಲಿಸುವ ಕುರಿತು ಇ–ಟೆಂಡರ್‌ಗಳನ್ನು ಅಹ್ವಾನಿಸಲಾಗಿದೆ.

ಕ್ರ.ಸಂ.	ಟೆಂಡರ್ ಸಂಖ್ಯೆ	ಟೆಂಡರ್ ವಿವರಣೆ ಹಾಗೂ ಅಂದಾಜು ಮೌಲ್ಯ
01	T-43 NWKRTC/ 2026-27/IND0215 Date : 01-06-2026	ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ (ವಾ.ಕ.ರ.ಸಾ. ಸಂಸ್ಥೆ) ಗೆ ಅವಶ್ಯವಿರುವ 5334 ಮಿ.ಮೀ. ರಿಂದ 5340 ಮಿ.ಮೀ. ವ್ಹೀಲ್‌ಬೇಸ್ ಚಾಸಿಸ್‌ಗಳ ಮೇಲೆ ನಿರ್ಮಿಸಲಾಗುವ 220 ನೂತನ BS-VI ಪೂರ್ಣ ನಿರ್ಮಿತ ಗ್ರಾಮಾಂತರ (ಮೊಫಸ್ಸಿಲ್) ಬಸ್‌ಗಳ (3X2 ಆಸನ ವಿನ್ಯಾಸದ 200 ಬಸ್‌ಗಳು ಹಾಗೂ 2X2 ಆಸನ ವಿನ್ಯಾಸದ 20 ಬಸ್‌ಗಳು ಒಳಗೊಂಡಂತೆ) ಸರಬರಾಜಿಗಾಗಿ (ಅಂದಾಜು ಮೌಲ್ಯ ರೂ. 88.80 ಕೋಟಿ).

ಇ–ಪೋರ್ಟಲ್ ಮುಖಾಂತರ ಟೆಂಡರ್ ಸಲ್ಲಿಸಲು ಅಂತಿಮ ದಿನಾಂಕ : 04–07–2026, 17.30 ಗಂಟೆಯವರೆಗೆ.
ಹೆಚ್ಚಿನ ವಿವರಗಳಿಗಾಗಿ ವೆಬ್‌ಸೈಟ್ : http://kppp.karnataka.gov.in ಮೊಬೈಲ್ ಫೋನ್ ಸಂಖ್ಯೆ : 77609 93225 / 702200 9931 ಸಂಪರ್ಕಿಸಬಹುದಾಗಿದೆ.

ಸಹಿ/– ಮುಖ್ಯ ಯಾಂತ್ರಿಕ ಅಭಿಯಂತರರು,
(ಟೆಂಡರ್ ಕರೆಯುವ ಪ್ರಾಧಿಕಾರ).
ಡಿಐಪಿಆರ್/ಧಾರವಾಡ/260/ಮಣಿಪಾಲ್/2026–27

ವಿದ್ಯುನ್ಮಾನ ನಾಗರಿಕ ಸೇವಾ ವಿತರಣಾ ನಿರ್ದೇಶನಾಲಯ (EDCS)
ಸುವರ್ಣ ಭವನ, 3ನೇ ಮಹಡಿ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560055.
ದೂರವಾಣಿ:080–22230281/0282, ಇ–ಮೇಲ್:dir-edcs@karnataka.gov.in

ಸಂಖ್ಯೆ:EDCS/14/ADM/2020-K1-EDCS (322126) ದಿನಾಂಕ:04.06.2026

ಟೆಂಡರ್ ಆಹ್ವಾನ

ಅರ್ಹ ಬಿಡ್‌ದಾರರಿಂದ, ಕೆಳಕಂಡ ಟೆಂಡರ್‌ಗಳಿಗೆ ಅರ್ಜಿ ಸಲ್ಲಿಸಲು ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ವೇದಿಕೆಯಲ್ಲಿ ಅವಕಾಶ ಕಲ್ಪಿಸಲಾಗಿದೆ.
ವೆಬ್‌ಸೈಟ್: https://kppp.karnataka.gov.in
1) ಟೆಂಡರ್ ಸಂಖ್ಯೆ – DPAREGOV/2025-26/SE0036/CALL-2 (Request for proposal (RFP) for selection of Banking partner for Bangalore one & Karnataka one Project of Directorate of Electronic Delivery of Citizen Services) ಅರ್ಹ ಬಿಡ್‌ದಾರ ಸಂಸ್ಥೆಗಳು ಪಾಲ್ಗೊಳ್ಳಲು ಕೊನೆಯ ದಿ:20.06.2026, 4:30 PM.

ಸಹಿ/– ನಿರ್ದೇಶಕರು
ಇಡಿಸಿಎಸ್ ನಿರ್ದೇಶನಾಲಯ
ಡಿಐಪಿಆರ್/ಸಿಪಿ/987/ಸಿಸಿಎಲ್/2026–27

ಹಾಸನ ಮಂಗಳೂರು ರೈಲು ಅಭಿವೃದ್ಧಿ ಕಂಪನಿ ನಿಯಮಿತ
(ರೈಲ್ವೆ ಸಚಿವಾಲಯ ಮತ್ತು ಕರ್ನಾಟಕ ಸರ್ಕಾರ ಜಂಟಿ ಉದ್ಯಮ)
ನೋಂದಾಯಿತ ಕಚೇರಿ: ಎಂಎಸ್‌ಐಎಲ್ ಹೌಸ್, 7ನೇ ಮಹಡಿ, #36, ಕನ್ನಿಂಗ್‌ಹ್ಯಾಂ ರಸ್ತೆ, ಬೆಂಗಳೂರು–560001. ದೂರವಾಣಿ ಸಂಖ್ಯೆ: 080–23120582, +91 9945152469
ಇ–ಮೇಲ್: ceohmrdc@gmail.com CIN: U45203KA2003SGC032183
ಸಂಖ್ಯೆ: ಹೆಚ್‌ಎಂಆರ್‌ಡಿಸಿ/ಅಕೌಂಟ್ಸ್/14/ಇನ್ಸ್‌ಶೂರೆನ್ಸ್ ಪಾಲಿಸಿ/2026–27 ದಿನಾಂಕ: 05.06.2026

ಇ–ಟೆಂಡರ್ ಸೂಚನೆ

ಕಾಮಗಾರಿಯ ಹೆಸರು: ಹೆಚ್‌ಎಂಆರ್‌ಡಿಸಿ 2026–27 ವರ್ಷಕ್ಕೆ ಈ ಕೆಳಗಿನ ವಿಮಾ ಪಾಲಿಸಿಗಳನ್ನು ನೀಡಲು ಹೆಸರಾಂತ ಮತ್ತು ಅನುಭವಿ ವಿಮಾ ಕಂಪನಿಗಳಿಂದ ಮೊಹರಾದ ಟೆಂಡರ್‌ಗಳನ್ನು ಆಹ್ವಾನಿಸುತ್ತದೆ.
1. ಸ್ಟ್ಯಾಂಡರ್ಡ್ ಫೈರ್ ಮತ್ತು ಸ್ಪೆಷಲ್ ಪೆರಿಲ್ಸ್ ಪಾಲಿಸಿ. 2. ಬೆಂಕಿ ಮತ್ತು ಲಾಭದ ನಷ್ಟ (FLOP). 3. ಮೆಷಿನರಿ ಬ್ರೇಕ್–ಡೌನ್ ಪಾಲಿಸಿ. 4. ಸಾರ್ವಜನಿಕ ಹೊಣೆಗಾರಿಕೆ ಪಾಲಿಸಿ.
ಟೆಂಡರ್ ಸ್ವೀಕರಿಸಲು ಕೊನೆಯ ದಿನಾಂಕ: 25.06.2026 ರಂದು 03.30 ಗಂಟೆಗೆ.
ವಿವರಗಳಿಗಾಗಿ https://kppp.karnataka.gov.in ಮತ್ತು www.hmrdc.com ಗೆ ಭೇಟಿ ನೀಡಿ.
DIPR/CP/SPAN/988/2026-27 ಸಹಿ/– ಸಿಎಫ್‌ಓ/ಹೆಚ್‌ಎಂಆರ್‌ಡಿಸಿ

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಅಭಿಯಂತರರು,
ಪಂಚಾಯತ್ ರಾಜ್ ಇಂಜಿನೀರಿಂಗ್ ವಿಭಾಗ, ಬೆಳಗಾವಿ
ಕ್ರ.ಸಂ.:ಪಂರಾಇಂ/ವಿಬೆ/ಪಿಬಿ–2/ಟೆಂಡರ–11/2026–27/1183 ದಿನಾಂಕ:04–06–2026

ಗುತ್ತಿಗೆ ಆಹ್ವಾನ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್)

ಕಾರ್ಯನಿರ್ವಾಹಕ ಅಭಿಯಂತರರು, ಪಂಚಾಯತ್‌ರಾಜ್ ಇಂಜಿನೀಯರಿಂಗ್ ವಿಭಾಗ, ಬೆಳಗಾವಿ ಅಡಿಯಲ್ಲಿ ಐಟಂವಾರು ಗುತ್ತಿಗೆಗಳನ್ನು ಇ–ಪ್ರೊಕ್ಯೂರ್‌ಮೆಂಟ್ ವೇದಿಕೆ ಮೂಲಕ ಪಂಚಾಯತ್ ರಾಜ್ ಇಂಜಿನೀಯರಿಂಗ್ ಇಲಾಖೆಯ ಚಾಲ್ತಿ ನೋಂದಾಯಿತ ಗುತ್ತಿಗೆದಾರರಿಗಾಗಿ ಸ್ಟ್ಯಾಂಡರ್ಡ ಟೆಂಡರ ಡಾಕ್ಯೂಮೆಂಟ್ ಕೆ.ಡಬ್ಲ್ಯೂ–4 ರಲ್ಲಿ ಒಟ್ಟು 1 (Improvement of roads in Balekundri BK village of Belgaum taluk RDPR/2025-26/BD/WORK_INDENT 25379/ CALL-2) ಕಾಮಗಾರಿಯ ಟೆಂಡರ್ ಗುತ್ತಿಗೆಯನ್ನು ಕರೆಯಲಾಗಿದ್ದು ಅಂದಾಜು ಮೊತ್ತ ರೂ. 150.00 ಹಾಗೂ ಮುಂಗಡ ಠೇವಣಿ ಮೊತ್ತ ರೂ. 1,50,000/– ಇರುತ್ತದೆ. ಆಕ್ಷೇಪಣೆಗಳಿದ್ದಲ್ಲಿ ಖುದ್ದಾಗಿ ಕಚೇರಿಗೆ ಹಾಜರಾಗಿ ಸಲ್ಲಿಸುವ ಕೊನೆಯ ದಿನಾಂಕ: 12–06–2026 ಸಂಜೆ 17:28 ರೊಳಗಾಗಿ, ಗುತ್ತಿಗೆದಾರರಿಂದ ಅರ್ಜಿಗಳನ್ನು ಆನ್‌ಲೈನ್ ಮೂಲಕ ಮನವಿ ಮಾಡಿಕೊಳ್ಳುವ ಕೊನೆಯ ದಿನಾಂಕ: 12–06–2026 ಸಂಜೆ 17.30 ಗಂಟೆಯವರೆಗೆ, ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ: 15–06–2026. ಮುಂಜಾನೆ 11:00 ಗಂಟೆಯ ನಂತರ ಹಾಗೂ ಆರ್ಥಿಕ ಬಿಡ್ ತೆರೆಯುವ ದಿನಾಂಕ: 15–06–2026 ರಂದು ಮುಂಜಾನೆ 11.30 ಗಂಟೆಗೆ ಇರುತ್ತದೆ. ಪರಿಷ್ಕೃತ ವೇಳಾ ಪಟ್ಟಿ/ತಿದ್ದುಪಡಿಗಳು/ ಹೆಚ್ಚಿನ ಮಾಹಿತಿ ಬೇಕಾದಲ್ಲಿ ಗುತ್ತಿಗೆದಾರರು ಈ ಕೆಳಗೆ ಸಹಿ ಮಾಡಿದವರ ಕಚೇರಿಯಲ್ಲಿ ಹಾಗೂ ಅಂತರ್‌ಜಾಲದ ಮೂಲಕ ವೆಬ್‌ಸೈಟ್ ವಿಳಾಸ www.kppp.karnataka.gov.in ರಲ್ಲಿ ಪಡೆಯಬಹುದು.

ಸಹಿ/–ಕಾರ್ಯನಿರ್ವಾಹಕ ಅಭಿಯಂತರು,
ಪಂ. ರಾ. ಇಂ. ವಿಭಾಗ, ಬೆಳಗಾವಿ.
DIPR/BGM/RO-NO-370/KSMCA/2026-27

ಮಾಲೂರು ನಗರ ಯೋಜನಾ ಪ್ರಾಧಿಕಾರ, ಮಾಲೂರು
ಮಾರುತಿ ಬಡಾವಣೆ 2ನೇ ಹಂತ, ಮಾಡ್ರನ್ ಶಾಲೆ ಹತ್ತಿರ, ತಿರುಮಲ ಕಲ್ಯಾಣ ಮಂಟಪ ರಸ್ತೆ, ಮಾಲೂರು–563 130, ಕೋಲಾರ ಜಿಲ್ಲೆ,
ಕಛೇರಿ ದೂರವಾಣಿ ಸಂಖ್ಯೆ: 08151–299920, Web Site:www.malur.tpa.gov.in, Email:ms.malur.planning.authority@gmail.com
ಸಂಖ್ಯೆ: ಮಾಯೋಪ್ರಾ/ಭೂ.ಬ/2026–27/336 ದಿನಾಂಕ: 30.05.2026

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಸೆಕ್ಷನ್ 14(ಎ) ಪ್ರಕಾರ ಅರ್ಜಿದಾರರು ಭೂ ಉಪಯೋಗ ಬದಲಾವಣೆಗೆ ಅರ್ಜಿ ಸಲ್ಲಿಸಿರುತ್ತಾರೆ. ಅರ್ಜಿಯನ್ನು ಪರಿಶೀಲಿಸಲಾಗಿ, ಅಡಕದಲ್ಲಿನ ಮಾಹಿತಿಯನ್ನು ಆಧರಿಸಿ ಕೆಳಕಂಡಂತೆ ವಿವರಗಳನ್ನು ಕೋಷ್ಟಕದಲ್ಲಿ ಅಳವಡಿಸಿದೆ. ಕಾಯ್ದೆಯಲ್ಲಿನ ಅಂಶಗಳನ್ವಯ ಪ್ರಸ್ತುತ ಪ್ರಕರಣಕ್ಕೆ ಸಂಬಂಧಿಸಿದಂತೆ, ಭೂ ಉಪಯೋಗ ಬದಲಾವಣೆಗೆ ಯಾರಿಂದಲಾದರು ಆಕ್ಷೇಪಣೆಗಳಿದ್ದರೆ ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ಸದಸ್ಯ ಕಾರ್ಯದರ್ಶಿಗಳು, ಮಾಲೂರು ಯೋಜನಾ ಪ್ರಾಧಿಕಾರ, ಮಾಲೂರು ಕಛೇರಿಗೆ ಸಲ್ಲಿಸಲು ಕೋರಲಾಗಿದೆ. ನಿಗಧಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ ಸಂ.	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮ	ಸ.ನಂ	ವಿಸ್ತೀರ್ಣ ಎ/ಗು	ಅನುಮೋದಿತ ಮಹಾ ಯೋಜನೆ ಪ್ರಕಾರ ಭೂ ಉಪಯೋಗ	ಬದಲಾವಣೆ ಕೋರಿರುವ ಭೂ ಉಪ ಯೋಗ	ಷರಾ
1.	ಪಿ.ವೆಂಕಟೇಶಪ್ಪ ಮತ್ತು ಪ್ರಕಾಶ್ ಕುಮಾರ್	ಮಾಲೂರು	ಕಸಬಾ	ಮಾಲೂರು	272/2	1–35	ಕೈಗಾರಿಕೆ	ವಸತಿ	–

ಷರಾ: ಈ ಜಮೀನುಗಳಲ್ಲಿ ವಿನ್ಯಾಸದ ಅಭಿವೃದ್ಧಿಪಡಿಸುವುದರಿಂದ ಸಾರ್ವಜನಿಕರಿಗೆ ಯೋಗ್ಯ ಬೆಲೆಯಲ್ಲಿ ನಿವೇಶನಗಳು ಲಭ್ಯವಾಗುತ್ತದೆ. ವಿನ್ಯಾಸ ಅಭಿವೃದ್ಧಿ ಕಾಮಗಾರಿಗಳು ನಡೆಯುವಾಗ ಸ್ಥಳೀಯ ಕೂಲಿ ಕಾರ್ಮಿಕರಿಗೆ ಉದ್ಯೋಗ ದೊರಕುತ್ತದೆ. ಈ ವಿನ್ಯಾಸದ ಅಭಿವೃದ್ಧಿಯಿಂದ ಸುತ್ತಮುತ್ತಲಿನ ಪ್ರದೇಶ ಅಭಿವೃದ್ಧಿಗೆ ಸಹಕಾರಿಯಾಗಲಿದೆ. ಯೋಜನಾ ಬದ್ಧವಾದ ವಿನ್ಯಾಸ ರಚನೆಯಿಂದ ಉತ್ತಮ ರಸ್ತೆಗಳು, ನಾಗರೀಕ ಸೌಲಭ್ಯ ಜಾಗಗಳು, ಉದ್ಯಾನವನಗಳು ಸಾರ್ವಜನಿಕರ ಉಪಯೋಗಕ್ಕೆ ಲಭ್ಯವಾಗುತ್ತದೆ ಎಂದು ಅರ್ಜಿದಾರರು ತಿಳಿಸುತ್ತಾ. ಸದರಿ ಪ್ರದೇಶವನ್ನು ವ್ಯವಸಾಯ ವಲಯದಿಂದ ವಸತಿ ಉಪಯೋಗಕ್ಕೆ ಭೂ ಉಪಯೋಗ ಬದಲಾವಣೆ ಮಾಡಲು ಕೋರಿರುತ್ತಾರೆ.

ವಾಸಾಸಂಇ/ಕೋಲಾರ/ಆರ್.ಓ.ಸಂಖ್ಯೆ:99/ಕೆಎಸ್‌ಎಂಸಿಎ/2026–27 ಸಹಿ/– ಸದಸ್ಯ ಕಾರ್ಯದರ್ಶಿ, ಮಾಲೂರು ಯೋಜನಾ ಪ್ರಾಧಿಕಾರ, ಮಾಲೂರು

ಜಿಲ್ಲಾಧಿಕಾರಿಗಳ ಕಾರ್ಯಾಲಯ, ಚಿಕ್ಕಮಗಳೂರು ಜಿಲ್ಲೆ, ಚಿಕ್ಕಮಗಳೂರು
ಜಿಲ್ಲಾ ನಗರಾಭಿವೃದ್ಧಿ ಕೋಶ, ಚಿಕ್ಕಮಗಳೂರು
E-Mail:- ka.chikkamagaluru.dudc@gmail.com Mob: 08262-239010
1115470:File No.-DUDCCK-ENGGOMISC/4/2026-ENG ದಿನಾಂಕ:03.06.2026

: ಇ–ಪ್ರೊಕ್ಯೂರ್‌ಮೆಂಟ್ ಮರುಟೆಂಡರ್ ಪ್ರಕಟಣೆ :

ಮುಖ್ಯಮಂತ್ರಿಯವರ ಮೂಲಸೌಕರ್ಯ ಅಭಿವೃದ್ಧಿ ಯೋಜನೆ 2025–26ರ ಯೋಜನೆಯಡಿ ಈ ಕೆಳಕಂಡ ಕಾಮಗಾರಿಗಳನ್ನು ನಿರ್ವಹಿಸಲು ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಅರ್ಹ ದರ್ಜೆಯ ಗುತ್ತಿಗೆದಾರರಿಂದ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್ ಮೆಂಟ್ ಪೋರ್ಟಲ್ ಮುಖಾಂತರ ಷರತ್ತುಗಳಿಗೊಳಪಡಿಸಿ ಟೆಂಡರ್ ಆಹ್ವಾನಿಸಲಾಗಿದೆ. ಆಸಕ್ತ ಗುತ್ತಿಗೆದಾರರು ಷರತ್ತುಗಳಿಗೊಳಪಟ್ಟು ಟೆಂಡರ್ ಸಲ್ಲಿಸಬಹುದಾಗಿದೆ.

ಕ್ರ ಸಂ	ಇಂಡೆಂಟ್ ನಂ.	ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)	ಮೀಸಲಾತಿ	ಇ.ಎಂ.ಡಿ. ರೂಗಳಲ್ಲಿ
1	DMA/2025-26/RD/WORK_INDENT53163/CALL-3	100.00	ಸಾಮಾನ್ಯ	42.350.00

ಟೆಂಡರ್ ಫಾರಂ ಬೆಲೆ ಇ–ಪ್ರೊಕ್ಯೂರ್‌ಮೆಂಟ್‌ನಂತೆ, ಕಾಲಾವಧಿ–06 ತಿಂಗಳು (ಮಳೆಗಾಲ ಹೊರತುಪಡಿಸಿ)
1. ಇ–ಪ್ರೊಕ್ಯೂರ್ ಮೆಂಟ್ ಪೋರ್ಟಲ್‌ನಲ್ಲಿ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 19–06–2026ರ 17.00ಗಂಟೆಯವರೆಗೆ.
2. ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 20.06.2026 ರ 17.10 ಗಂಟೆಗೆ
3. ಆರ್ಥಿಕ ಬಿಡ್ ತೆರೆಯುವ ದಿನಾಂಕ: 23.06.2026 ರ 11.00 ಗಂಟೆಗೆ

ಹೆಚ್ಚಿನ ವಿವರಗಳನ್ನು ಈ ಕಛೇರಿಯ ಕೆಲಸದ ವೇಳೆಯಲ್ಲಿ ಮತ್ತು https://kppp.karnataka.gov.in ನಲ್ಲಿ ಪಡೆಯಬಹುದಾಗಿದೆ. ಕಾರಣಾಂತರಗಳಿಂದ ಯಾವುದೇ ಬದಲಾವಣೆಗಳಾದ್ದಲ್ಲಿ ಇ–ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು. ದಿನಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ. ಗುತ್ತಿಗೆದಾರರು ಕೆ.ಪಿ.ಪಿ.ಪಿ ಪೋರ್ಟಲ್‌ನಲ್ಲಿ ಗಮನಿಸಬಹುದಾಗಿದೆ.

ಸಹಿ/– ಕಾರ್ಯಪಾಲಕ ಅಭಿಯಂತರರು,
ಜಿಲ್ಲಾ ನಗರಾಭಿವೃದ್ಧಿ ಕೋಶ, ಚಿಕ್ಕಮಗಳೂರು

ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ರಾಯಚೂರು
ಆಸ್ತಿ ಅಧಿಕಾರಿಗಳು ಆಸ್ತಿ ವಿಭಾಗ, ರಾಯಚೂರು.
ಸಂಖ್ಯೆ/ಆಅ/ಆವಿ/ಟೆ.ನೋ–193/2026–27 ದಿನಾಂಕ:02–06–2026.

ಟೆಂಡರ್ ಅಧಿಸೂಚನೆ

ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ರಾಯಚೂರು ಮುಖ್ಯ ಆವರಣ, ಮತ್ತು ಇತರೆ ಆವರಣಗಳಲ್ಲಿರುವ ವಿವಿಧ ಶೈಕ್ಷಣಿಕ ಹಾಗೂ ಆಡಳಿತಾತ್ಮಕ ವಿಭಾಗಗಳಿಗೆ ಹಾಗೂ ಅಲ್ಲಿಯ ಸ್ಥಿರ ಮತ್ತು ಚರಾಸ್ತಿಗಳಿಗೆ, ರಕ್ಷಣೆ ಒದಗಿಸಲು ಆದೇಶ ನೀಡಿದ ದಿನಾಂಕದಿಂದ ಒಂದು ವರ್ಷದ ಅವಧಿಗೆ ಭದ್ರತಾ ಸೇವೆ ಒದಗಿಸಲು ನಿಗದಿತ ನಮೂನೆಯಲ್ಲಿ ನೊಂದಾಯಿತ ಹಾಗೂ ಅರ್ಹ ಭದ್ರತಾ ಏಜನ್ಸಿದಾರರಿಂದ ಟೆಂಡರ್ ಕರೆಯಲಾಗಿದೆ. ಟೆಂಡರ್ ಪ್ರಕಟಣೆಯ ಹೆಚ್ಚಿನ ವಿವರಗಳು ವೆಬ್‌ಸೈಟ್ ವಿಳಾಸ https://kppp.karnataka.gov.in ದಲ್ಲಿ ಲಭ್ಯವಿರುತ್ತದೆ. ಟೆಂಡರ್ ವೇಳಾ ಪಟ್ಟಿ :– (1) ತುಂಬಿದ ಟೆಂಡರನ್ನು ವೆಬ್‌ಸೈಟ್‌ನ ಮೂಲಕ ಸಲ್ಲಿಸುವ ಕೊನೆಯ ದಿನಾಂಕ:– 02–07–2026 ಸಾಯಂಕಾಲ 4.00 ಗಂಟೆಯವರೆಗೆ (2) ತಾಂತ್ರಿಕ ಬಿಡ್ಡನ್ನು ತೆರೆಯುವ ದಿನಾಂಕ:– 03–07–2026 ಸಾಯಂಕಾಲ 4.10 ಗಂಟೆಗೆ. ಹೆಚ್ಚಿನ ವಿವರಗಳಿಗಾಗಿ ಕೆಲಸದ ದಿನಗಳಂದು ಸದರಿ ಕಛೇರಿಯನ್ನು ಸಂಪರ್ಕಿಸಿ ಮಾಹಿತಿಯನ್ನು ಪಡೆಯಬಹುದು (Ph. No. 08532 – 220640) ಅಥವಾ ಇ–ಪ್ರೊಕ್ಯೂರ್‌ಮೆಂಟ್‌ನ ವೆಬ್‌ಸೈಟ್ https://kppp.karnataka.gov.in ನಲ್ಲಿ ಇಲ್ಲವೆ ಹೆಲ್ಪಡೆಸ್ಕನಿಂದ (ಸಹಾಯಕ ದೂರವಾಣಿ ಸಂಖ್ಯೆ : 080–25501216 ಮತ್ತು 25501227) ಪಡೆಯಬಹುದು.

ಸಹಿ/– ಆಸ್ತಿ ಅಧಿಕಾರಿಗಳು
ಕೃವಿವಿ, ರಾಯಚೂರು.
DIP/RCR/98/KSMC&A/100/2026-27

ಕರ್ನಾಟಕ ಗೃಹ ಮಂಡಳಿ
Karnataka Housing Board Building Communities
ಗೃಹ ಆಯುಕ್ತರ ಕಛೇರಿ, ಕಾವೇರಿ ಭವನ, ಬೆಂಗಳೂರು–560 009.
ಸಂಖ್ಯೆ: ಕಗೃಮಂ/ಕಾ/ಹಂಚಿಕೆ/ಲಾಟರಿ/2026–27 ದಿನಾಂಕ: 04–06–2026

ಸಾರ್ವಜನಿಕ ಪ್ರಕಟಣೆ

ಕರ್ನಾಟಕ ಗೃಹ ಮಂಡಳಿ ವತಿಯಿಂದ ಕಲಬುರಗಿ ನಗರದ ಶೇಖ್ ರೋಜಾ ಬಡಾವಣೆಯಲ್ಲಿ ನಿರ್ಮಿಸಿರುವ ಗ್ರೀನ್ ಪಾರ್ಕ್ ವಸತಿ ಸಮುಚ್ಚಯದಲ್ಲಿ ಎಲ್ಲಾ ಸೌಲಭ್ಯಗಳನ್ನು ಹೊಂದಿರುವ 2BHK & 2.5BHK ಫ್ಲಾಟ್‌ಗಳು ಹಾಗೂ ಆಳಂದ ಗ್ರಾಮದ ಸರ್ವೆ ನಂ. 228/2/1 ಮತ್ತು 229/2/1 ರಲ್ಲಿ ಅಭಿವೃದ್ಧಿಪಡಿಸಿರುವ ಬಡಾವಣೆಯಲ್ಲಿ ವಿವಿಧ ವರ್ಗದ ಮನೆ/ನಿವೇಶನಗಳನ್ನು (ಬಿಡಿ ನಿವೇಶನಗಳು ಸೇರಿ) ವಿಲೇವಾರಿ ಮಾಡಲು **ದಿನಾಂಕ: 06–02–2026** ರಂದು ಪತ್ರಿಕಾ ಪ್ರಕಟಣೆ ನೀಡಿ ಸಾರ್ವಜನಿಕರಿಂದ ಆರಂಭಿಕ ಠೇವಣಿಯೊಂದಿಗೆ ಹೊಸದಾಗಿ ಆನ್‌ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿತ್ತು.
ಸದರಿ ಪ್ರಕಟಣೆಗೆ ಅನುಗುಣವಾಗಿ ನಿಗಧಿತ ಆರಂಭಿಕ ಠೇವಣಿ ಮೊತ್ತದೊಂದಿಗೆ ಅರ್ಜಿ ಸಲ್ಲಿಸಿದ ಅರ್ಜಿದಾರರಿಗೆ ಇ–ಲಾಟರಿ ಮುಖಾಂತರ ಪ್ರವರ್ಗವಾರು ವಿಂಗಡಿಸದೇ ಎಲ್ಲಾ ಅರ್ಜಿಗಳನ್ನು ಒಟ್ಟಿಗೆ ಸೇರಿಸಿ ಹಂಚಿಕೆ ಮಾಡುವ ಸಂಬಂಧ ತಾತ್ಕಾಲಿಕ & ಅಂತಿಮ ಅರ್ಹ/ಅನರ್ಹ ಅರ್ಜಿದಾರರ ಪಟ್ಟಿ ದಿನಾಂಕವನ್ನು ಪ್ರಕಟಿಸಿ ಈ ಕೆಳಕಂಡಂತೆ ವೇಳಾಪಟ್ಟಿಯನ್ನು ನಿಗಧಿಪಡಿಸಲಾಗಿದೆ.

ಬಡಾವಣೆ	ಅರ್ಹ & ಅನರ್ಹ ಅರ್ಜಿದಾರರ ತಾತ್ಕಾಲಿಕ ಪಟ್ಟಿ ಪ್ರಕಟಣೆ ದಿನಾಂಕ	ಆಕ್ಷೇಪಣೆ ಸಲ್ಲಿಸಲು ಕೊನೆಯ ದಿನಾಂಕ	ಅರ್ಹ & ಅನರ್ಹ ಅರ್ಜಿದಾರರ ಅಂತಿಮ ಪಟ್ಟಿ ಪ್ರಕಟಣೆ ದಿನಾಂಕ	ಇ–ಲಾಟರಿ ದಿನಾಂಕ ಮತ್ತು ಸಮಯ
ಕಲಬುರಗಿ ನಗರದ ಶೇಖ್ ರೋಜಾ ಗ್ರೀನ್ ಪಾರ್ಕ್ ವಸತಿ ಸಮುಚ್ಚಯ	05–06–2026	12–06–2026	15–06–2026	17–06–2026 ಬೆಳಿಗ್ಗೆ 11.00 ಗಂಟೆಗೆ ಕರ್ನಾಟಕ ಗೃಹ ಮಂಡಳಿ ಸಭಾಂಗಣ, 4ನೇ ಮಹಡಿ, ಕೇಂದ್ರ ಕಛೇರಿ, ಕಾವೇರಿ ಭವನ, ಕೆ.ಜಿ. ರಸ್ತೆ, ಬೆಂಗಳೂರು.
ಆಳಂದ ವಸತಿ ಬಡಾವಣೆ, ಕಲಬುರಗಿ ಜಿಲ್ಲೆ	05–06–2026	12–06–2026	15–06–2026	

ವಿಶೇಷ ಸೂಚನೆ: 1) ಅರ್ಜಿದಾರರ ತಾತ್ಕಾಲಿಕ ಮತ್ತು ಅಂತಿಮ ಅರ್ಹ/ಅನರ್ಹ ಅರ್ಜಿಗಳ ವಿವರಗಳನ್ನು ಮಂಡಳಿಯ ವೆಬ್‌ಸೈಟ್, ಕೇಂದ್ರ ಕಛೇರಿಯ ಹಾಗೂ ಆಯಾ ಜಿಲ್ಲಾ ಯೋಜನಾ ಕಛೇರಿಯ ಸೂಚನಾಫಲಕಗಳಲ್ಲಿ ಮೇಲೆ ತಿಳಿಸಿರುವ ದಿನಾಂಕಗಳಂದು ಪ್ರಕಟಿಸಲಾಗುವುದು. ಅನರ್ಹ ಅರ್ಜಿದಾರರು ಆಕ್ಷೇಪಣೆ ಸಲ್ಲಿಸಲು ತಿಳಿಸಿರುವ ಕೊನೆಯ ದಿನಾಂಕದೊಳಗೆ ಮಾಹಿತಿ/ದಾಖಲೆಯನ್ನು ಸಂಬಂಧಿಸಿದ ಜಿಲ್ಲಾ ಯೋಜನಾ ಕಛೇರಿಗಳಲ್ಲಿ ಅಥವಾ ಕೇಂದ್ರ ಕಛೇರಿ, ಹಂಚಿಕೆ ಶಾಖೆ, ಕಾವೇರಿ ಭವನ ಬೆಂಗಳೂರು ಇಲ್ಲಿ ಸಲ್ಲಿಸಲು ತಿಳಿಸಲಾಗಿದೆ. ನಿಗಧಿತ ಅವಧಿಯ ನಂತರ ಸಲ್ಲಿಸಲಾಗುವ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.
2) ಹಂಚಿಕೆಯಾದ ಸ್ವತ್ತುಗಳಿಗೆ ಬದಲಾವಣೆ ಮಾಡಲು ಅವಕಾಶವಿರುವುದಿಲ್ಲ.

ಸಹಿ/– ಕಾರ್ಯದರ್ಶಿಗಳು
ಕರ್ನಾಟಕ ಗೃಹ ಮಂಡಳಿ, ಬೆಂಗಳೂರು.
DIPR/CP/RO986/AAPL/2026-27

ಪೊಲೀಸ್ ಮಹಾನಿರ್ದೇಶಕರವರ ಕಛೇರಿ
ಪೊಲೀಸ್ ಗಣಕ ವಿಭಾಗ, ಕರ್ನಾಟಕ ರಾಜ್ಯ ಪೊಲೀಸ್, ದ್ವಾರ 1, 7ನೇ ಮಹಡಿ, ಬಹುಮಹಡಿಗಳ ಕಟ್ಟಡ
ಡಾ.ಬಿ.ಆರ್. ಅಂಬೇಡ್ಕರ್ ವೀದಿ, ಬೆಂಗಳೂರು–560001. ದೂರವಾಣಿ: 080–22254790, ಇ–ಮೇಲ್: digpscrb@ksp.gov.in
ಸಂ.: 05/STS/DIGP/PCW/2026-27 ದಿನಾಂಕ: 04.06.2026

ಸಂಕ್ಷಿಪ್ತ ಟೆಂಡರ್ ಪ್ರಕಟಣೆ

ಪೊಲೀಸ್ ಗಣಕ ವಿಭಾಗ, ಕರ್ನಾಟಕ ರಾಜ್ಯ ಪೊಲೀಸ್, ಬೆಂಗಳೂರು ರವರಿಂದ **ವಿವಿಧ ಉಪಕರಣ/ತಂತ್ರಾಂಶಗಳ ಸರಬರಾಜು, ಅಳವಡಿಕೆ ಮತ್ತು ನಿರ್ವಹಣೆಗಾಗಿ** ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ **(https://kppp.karnataka.gov.in)** ಮೂಲಕ ಟೆಂಡರ್‌ಗಳನ್ನು ಈ ಕೆಳಕಂಡಂತೆ ಆಹ್ವಾನಿಸಲಾಗಿದೆ.

ಕ್ರ. ಸಂ.	ಟೆಂಡರ್ ವಿವರಗಳು	ಟೆಂಡರ್ ಸಂಖ್ಯೆ ದಿನಾಂಕ	ಅಂದಾಜು ಮೌಲ್ಯ ರೂ. ಲಕ್ಷಗಳಲ್ಲಿ	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ
1	Providing Cloud Services	KSP/2026-27/SE0099 21-05-2026	348.00	20.06.2026
2	Mobile Forensic Acquisition and Analysis Tool Along With Workstations	KSP/2026-27/IND0613 22-05-2026	7500.00	22.06.2026
3	Mobile Forensic Acquisition and Analysis Tool Cellebrite Inseyets.	KSP/2026-27/IND0615 22-05-2026	819.66	22.06.2026
4	Medium End Laptops	KSP/2026-27/IND0617 27-05-2026	16.71	11.06.2026
5	LAN Cabling and OFC Extension	KSP/2026-27/IND0618 30-05-2026	1400.00	29.06.2026

ಟೆಂಡರ್ ಪೂರ್ವಭಾವಿ ಸಭೆಯ ದಿನಾಂಕ, ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಇತರೆ ಮಾಹಿತಿಯನ್ನು https://kppp.karnataka.gov.in ಕಛೇರಿಯನ್ನು ಸಂಪರ್ಕಿಸಬಹುದಾಗಿದೆ.

ಸಹಿ/–
ಪೊಲೀಸ್ ಮಹಾನಿರ್ದೇಶಕರು
ಮತ್ತು ಟೆಂಡರ್ ಕರೆಯುವ ಪ್ರಾಧಿಕಾರ
ಪೊಲೀಸ್ ಗಣಕ ವಿಭಾಗ, ಕರ್ನಾಟಕ ರಾಜ್ಯ ಪೊಲೀಸ್, ಬೆಂಗಳೂರು
DIPR/CP/991/SA/2026-27

ಅಭಿಮತದ ವಿಳಾಸ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು–01 editpage@prajavani.co.in

ಅಭಿಮತ



ಸುಭಾಷಿತ

ನಾವು ಅನುಸರಿಸಬೇಕಾದುದು ಸಂತರ ಚಾರಿತ್ರ್ಯವನ್ನೇ ಹೊರತು ಚರಿತ್ರೆಯನ್ನಲ್ಲ.

–ವಿನೋಬಾ ಭಾವೆ

ಸಂಪಾದಕೀಯ

ಅತಿಗಣ್ಯ ವ್ಯಕ್ತಿಗಳಿಗೆ ಜೀರೊ ಟ್ರಾಫಿಕ್ ನಾಗರಿಕರ ಸಹನೆಯ ಪರೀಕ್ಷೆ ಸಲ್ಲದು

ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರ ಬೆಂಗಾವಲು ವಾಹನಗಳ ಸಂಚಾರಕ್ಕೆ ಅನುವು ಮಾಡಿಕೊಡುವ ಉದ್ದೇಶದಿಂದ ಬೆಂಗಳೂರಿನ ಹಳೆ ವಿಮಾನ ನಿಲ್ದಾಣ ರಸ್ತೆಯಲ್ಲಿ ಇತರ ವಾಹನಗಳ ಸಂಚಾರ ಬಂದ್ ಮಾಡಿದ್ದರಿಂದಾಗಿ ತೊಂದರೆಗೆ ಒಳಗಾದ ವ್ಯಕ್ತಿಯೊಬ್ಬರು ರಸ್ತೆಯ ಮೇಲೆ ಕುಳಿತು ನಡೆಸಿದ ಪ್ರತಿಭಟನೆಯು ಹಲವರ ಗಮನ ಸೆಳೆದಿದೆ. ಈ ಪ್ರತಿಭಟನೆಯು ತಕ್ಷಣದ ಸಮಸ್ಯೆಯನ್ನು ಮಾತ್ರವೇ ಅಲ್ಲದೆ, ಇತರ ಹಲವು ಸಮಸ್ಯೆಗಳತ್ತಲೂ ಜನರ ಗಮನ ಹರಿಯುವಂತೆ ಮಾಡಿದೆ. ತನ್ನ ಪತ್ನಿ ಗರ್ಭಿಣಿ, ಆಕೆಗೆ ತೊಂದರೆ ಆಗುತ್ತಿದೆ ಎಂದು ಪ್ರತಿಭಟನೆ ನಡೆಸಿದ ವ್ಯಕ್ತಿ ಹೇಳಿದ್ದು ಸುಳ್ಳು ಎಂಬುದನ್ನು ಪೊಲೀಸರು ನಂತರ ಕಂಡುಕೊಂಡಿದ್ದಾರೆ. ಆದರೆ ವಿಷಯ ಅಷ್ಟಕ್ಕೇ ಸೀಮಿತವಾದುದಲ್ಲ. ಈ ಘಟನೆಗೆ ಜನರು ನೀಡಿದ ಪ್ರತಿಕ್ರಿಯೆಯು ಸಮಸ್ಯೆಯ ಆಳವನ್ನು ಹೇಳುತ್ತಿದೆ. ಕೆಲವರ ಆರಾಮಕ್ಕಾಗಿ ಸಹಸ್ರಾರು ಮಂದಿ ಜನಸಾಮಾನ್ಯರಿಗೆ ತೊಂದರೆ ಉಂಟುಮಾಡುವ ವ್ಯವಸ್ಥೆಯ ಬಗ್ಗೆ ಜನರಲ್ಲಿ ಅಸಹನೆ ಮಡುಗಟ್ಟುತ್ತಿದೆ. ರಾಜ್ಯಪಾಲರು ವೈದ್ಯಕೀಯ ತುರ್ತು, ಪ್ರಾಕೃತಿಕ ವಿಕೋಪ ಅಥವಾ ಸರ್ಕಾರಕ್ಕೆ ಸಂಬಂಧಿಸಿದ ಇತರ ಯಾವುದೋ ತುರ್ತಿಗೆ ಸ್ಪಂದಿಸಲು ಸಂಚರಿಸುತ್ತಿರಲಿಲ್ಲ; ವಿಮಾನ ನಿಲ್ದಾಣದಲ್ಲಿ ಇಳಿದು ಅವರು ಲೋಕಭವನಕ್ಕೆ ತೆರಳುತ್ತಿದ್ದರು. ಹೀಗಿದ್ದರೂ ಆ ರಸ್ತೆಯಲ್ಲಿ ಸಾರ್ವಜನಿಕರ ಸಂಚಾರ ಸ್ಥಗಿತಗೊಳಿಸಲಾಯಿತು; ಸಾರ್ವಜನಿಕರು ರಸ್ತೆಯಲ್ಲೇ ಕಾಯುವಂತೆ ಆಯಿತು. ರಾಜ್ಯಪಾಲರ ಭದ್ರತೆಗೆ ಬೆದರಿಕೆಯೇನೂ ಇರಲಿಲ್ಲ. ಅವರಿಗೆ ಇರುವ ಭದ್ರತೆ ಅವರ ಹುದ್ದೆಯ ಕಾರಣದಿಂದಾಗಿ ದಕ್ಕಿರುವಂಥದ್ದು; ಅದು ವ್ಯಕ್ತಿಯ ಕಾರಣಕ್ಕಾಗಿ ಅಲ್ಲ. ಈ ವ್ಯತ್ಯಾಸವನ್ನು ಅರಿತು, ಹೆಚ್ಚಿನ ಸಂಯಮ ಪ್ರದರ್ಶಿಸಬೇಕು.



ಜನರನ್ನು ಪ್ರತಿನಿಧಿಸುವ ರಾಜಕೀಯ ಮುಖಂಡರು, ಜನಸಾಮಾನ್ಯರು ಪ್ರತಿನಿತ್ಯವೂ ಅನುಭವಿಸುವ ಸಂಚಾರ ದಟ್ಟಣೆಗೆ ತಾವು ಅತೀತರು ಎಂದು ಭಾವಿಸಬಾರದು.

ಈ ಸಮಸ್ಯೆಯು ರಾಜ್ಯಪಾಲರ ಸವಾರಿಗೆ ಮಾತ್ರ ಸೀಮಿತವಲ್ಲ. ಅತಿಗಣ್ಯ ವ್ಯಕ್ತಿಗಳು ಒಂದೆಡೆಯಿಂದ ಇನ್ನೊಂದೆಡೆ ಪ್ರಯಾಣ ಮಾಡುವಾಗ ಹೆದ್ದಾರಿಗಳನ್ನು ಇತರರಿಗೆ ಬಂದ್ ಮಾಡುವುದು, ಆ ರಸ್ತೆಯನ್ನು ಸಂಪರ್ಕಿಸುವ ಇತರ ರಸ್ತೆಗಳನ್ನೂ ಬಂದ್ ಮಾಡುವುದು, ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಕಡೆ ಸಾಗುವ ರಸ್ತೆಗಳನ್ನು ಕೆಲವೊಮ್ಮೆ ಬಂದ್ ಮಾಡುವುದರ ಪರಿಣಾಮವನ್ನು ಬೆಂಗಳೂರಿಗರು ಅನುಭವಿಸಿದ್ದಾರೆ. ಅತಿಗಣ್ಯ ವ್ಯಕ್ತಿಗಳ ಬೆಂಗಾವಲು ವಾಹನಗಳ ಸಂಚಾರಕ್ಕೆ ವಿಮಾನ ನಿಲ್ದಾಣ ರಸ್ತೆಯನ್ನು ಬಂದ್ ಮಾಡಿದ್ದರ ಪರಿಣಾಮವಾಗಿ ಜನಸಾಮಾನ್ಯರು ವಿಮಾನ ತಪ್ಪಿಸಿಕೊಂಡಿದ್ದು ಅಥವಾ ವಿಮಾನ ತಪ್ಪುವ ಭೀತಿಗೆ ಒಳಗಾಗಿರುವುದೂ ಇದೆ. ಜನಸಾಮಾನ್ಯರಿಗೆ ಆಗುವ ತೊಂದರೆಯನ್ನು ಕಡಿಮೆ ಮಾಡಲು ಪರ್ಯಾಯ ಮಾರ್ಗಗಳು ಇವೆ ಎಂಬುದನ್ನು ಕರ್ನಾಟಕ ಇತರರಿಗೆ ತೋರಿಸಿಕೊಟ್ಟಿದೆ ಎಂಬುದು ಇಲ್ಲಿ ಉಲ್ಲೇಖನೀಯ. ಸಿದ್ದರಾಮಯ್ಯ ಅವರು ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದ ನಂತರ, ಜನಸಾಮಾನ್ಯರಿಗೆ ಆಗುವ ತೊಂದರೆಯನ್ನು ಗುರ್ತಿಸಿ, ಜೀರೊ–ಟ್ರಾಫಿಕ್ ಸೌಲಭ್ಯ ತಮಗೆ ಬೇಡ ಎಂದು ಹೇಳಿದ್ದರು. ಒಂದು ಸಿಗ್ನಲ್‌ನಿಂದ ಇನ್ನೊಂದು ಸಿಗ್ನಲ್ ನಡುವೆ ಪೊಲೀಸರು ಸಮನ್ವಯ ಸಾಧಿಸಿ ಮುಖ್ಯಮಂತ್ರಿಯವರ ಸಂಚಾರಕ್ಕೆ ಅನುವು ಮಾಡಿಕೊಟ್ಟು, ಇಡೀ ರಸ್ತೆಯನ್ನು ಬಂದ್ ಮಾಡುವ ಸಮಸ್ಯೆಯನ್ನು ನಿವಾರಿಸಿದ್ದರು. ಆಗ ಆಕಾಶವೇನೂ ತಲೆಯ ಮೇಲೆ ಕವುಚಿ ಬಿದ್ದಿರಲಿಲ್ಲ.

ರಾಜ್ಯಪಾಲರು, ಮುಖ್ಯಮಂತ್ರಿ ಮತ್ತು ಗೃಹ ಸಚಿವರಿಗೆ ಮಾತ್ರ ಅಧಿಕೃತವಾಗಿ ಜೀರೊ–ಟ್ರಾಫಿಕ್ ಸೌಲಭ್ಯವನ್ನು ಕಲ್ಪಿಸಲು ಅವಕಾಶ ಇದೆ. ಆದರೆ ವಾಸ್ತವದಲ್ಲಿ ಬೆಂಗಾವಲು ವಾಹನಗಳು ಹಾಗೂ ಪೊಲೀಸ್ ವಾಹನ ಭದ್ರತೆಯು ಹಲವು ಮಂದಿ ಜನಪ್ರತಿನಿಧಿಗಳಿಗೆ ಪ್ರತಿಷ್ಠೆಯ ದ್ಯೋತಕವಾಗಿ ಪರಿಣಮಿಸಿದೆ. ಭದ್ರತೆಯನ್ನು ಪ್ರತಿಷ್ಠೆಯ ಜೊತೆ ಸಮೀಕರಿಸಲಾಗುತ್ತಿದೆ. ಅತಿಗಣ್ಯ ವ್ಯಕ್ತಿಗಳ ಸಂಚಾರದಿಂದಾಗಿ ಅನಗತ್ಯ ತೊಂದರೆ ಆಗುತ್ತಿರುವ ಬಗ್ಗೆ ನ್ಯಾಯಾಲಯಗಳು ಮತ್ತೆ ಮತ್ತೆ ಆಕ್ರೋಶ ವ್ಯಕ್ತಪಡಿಸಿವೆ. ಸಾರ್ವಜನಿಕ ಜೀವನದಲ್ಲಿ ಮಿತವ್ಯಯದ ಅಗತ್ಯದ ಬಗ್ಗೆ ಪ್ರಧಾನಿಯವರೂ ಮಾತನಾಡಿದ್ದಾರೆ. ಅತಿಗಣ್ಯ ವ್ಯಕ್ತಿಗಳ ಸಂಚಾರಕ್ಕಾಗಿ ಇಡೀ ರಸ್ತೆಯನ್ನು ಬಂದ್ ಮಾಡಿಸುವುದು ಬ್ರಿಟಿಷರ ಕಾಲದ ಪದ್ಧತಿ. ವಸಾಹತು ಯುಗ ಮುಗಿದ ನಂತರವೂ ಅದು ಮುಂದುವರಿದಿದೆ. ಇಂತಹ ವ್ಯವಸ್ಥೆಯನ್ನು ಕೊನೆಗಾಣಿಸಲು ರಾಜಕೀಯ ಹಾಗೂ ಆಡಳಿತ ವ್ಯವಸ್ಥೆಯ ಧೋರಣೆಗಳಲ್ಲಿ ಬದಲಾವಣೆ ಅಗತ್ಯ. ಜನಸೇವೆಯ ಹುದ್ದೆಗಳು ವಿಶೇಷ ಸೌಲಭ್ಯ ಪಡೆಯಲು ಇರುವ ಪರವಾನಗಿ ಅಲ್ಲ; ಅವು ಹೊಣೆಗಾರಿಕೆಯನ್ನು ಹೊತ್ತು ತರುವ ಹುದ್ದೆಗಳು. ಆಡಳಿತದಲ್ಲಿ ಇರುವವರು ತಾವು ಯಾರ ಸೇವಕರು ಎಂದು ಹೇಳಿಕೊಳ್ಳುತ್ತಾರೋ ಆ ಜನಸಾಮಾನ್ಯರು ಅನುಭವಿಸುವ ಸಂಚಾರ ದಟ್ಟಣೆ, ವಿಳಂಬವನ್ನೂ ಅನುಭವಿಸಬೇಕು. ಹಳೆ ವಿಮಾನ ನಿಲ್ದಾಣ ರಸ್ತೆಯಲ್ಲಿ ವ್ಯಕ್ತಿ ನಡೆಸಿದ ಪ್ರತಿಭಟನೆ ಸಮಸ್ಯೆಯ ಲಕ್ಷಣ ಮಾತ್ರ. ಜನರ ಸಹನೆ ತಗ್ಗುತ್ತಿದೆ. ಜನರ ಸಹನೆಯ ಬಗ್ಗೆ ಆಡಳಿತಾರೂಢರು ಉಪೇಕ್ಷೆಯ ಧೋರಣೆ ಬೆಳೆಸಿಕೊಳ್ಳದಿದ್ದರೆ ಚೆನ್ನ.

ಜಾಲತಾಣ

ತಳಮಳ ಮತ್ತು ವಾಸ್ತವ



‘ಡಿ.ಕೆ. ಶಿವಕುಮಾರ್ ಅವರು ಬಿಜೆಪಿ ನಾಯಕರಿಗಿಂತಲೂ ಹೆಚ್ಚು ಧಾರ್ಮಿಕ ವ್ಯಕ್ತಿ, ಇದು ಬಿಜೆಪಿಯಲ್ಲಿ ತಳಮಳ ಉಂಟು ಮಾಡಿದೆ’ ಎಂದು ಕೆಲವರು ಮಾತಾಡುತ್ತಿದ್ದಾರೆ. ಆದರೆ, ಬಿಜೆಪಿಯ ರಾಜಕಾರಣ ನಿಂತಿರುವುದು ಮತೀಯ ದ್ವೇಷ ಹಾಗೂ ಕೋಮುವಾದದ ಮೇಲೆ.

ಮುನೀರ್ ಕಾಟಿಪಳ್ಳ, ಸಾಮಾಜಿಕ ಕಾರ್ಯಕರ್ತ, ‘ಫೇಸ್‌ಬುಕ್’ನಿಂದ

ಕಿಡಿನುಡಿ



ರಾಜ್ಯದ ಸಾಲ ಎಷ್ಟು ಹೆಚ್ಚಾಗಿದೆ? ಸರ್ಕಾರದ ಖಜಾನೆಯ ನಿಜವಾದ ಸ್ಥಿತಿಗತಿ ಏನು? ಅವೈಜ್ಞಾನಿಕ ಯೋಜನೆಗಳು, ಮತಬ್ಯಾಂಕ್ ರಾಜಕಾರಣ ಮತ್ತು ದುಂದುವೆಚ್ಚಗಳಿಂದ ರಾಜ್ಯದ ಆರ್ಥಿಕತೆಗೆ ಎಷ್ಟು ಹಾನಿಯಾಗಿದೆ? ಎಂಬುದನ್ನು ಜನರು ಅರಿಯಬೇಕಿದೆ. ಹಾಗಾಗಿ, ಸರ್ಕಾರ ತಕ್ಷಣವೇ ವಿಧಾನಸಭೆಯಲ್ಲಿ ಹಣಕಾಸು ಶ್ವೇತಪತ್ರ ಮಂಡಿಸಲಿ.

ಆರ್. ಅಶೋಕ, ಬಿಜೆಪಿ ಶಾಸಕ

25 ವರ್ಷಗಳ ಹಿಂದೆ

ಮಂಗಳವಾರ, 5-6-2001

• ಚಿಕ್ಕಮಗಳೂರಲ್ಲಿ ವೃಕ್ಷ ವಿವಾಹ

ಚಿಕ್ಕಮಗಳೂರು, ಜೂನ್ 4– ಬಾಲ್ಯ ವಿವಾಹ, ಸತ್ತವರಿಗೆ ಮದುವೆ ಬಗ್ಗೆ ಕೇಳಿರಬಹುದು. ಆದರೆ, ನೂರಾರು ಜನ ಸೇರಿ ವೃಕ್ಷ ಸಂಕುಲಕ್ಕೂ ಮದುವೆ ಮಾಡುವುದು ವಿರಳ. ಅಂಥದ್ದೊಂದು ಅಪರೂಪದ ಸಂಭ್ರಮ, ಸಡಗರ ಇಂದು ಇಲ್ಲಿ ನಡೆಯಿತು. ಪರಿಸರ ದಿನಕ್ಕೆ ಇದೊಂದು ಕೊಡುಗೆ ಆಯಿತು.

ಭಯ–ಭಕ್ತಿ, ದೈವೀಶ್ರದ್ಧೆ ಅಳಿಯುತ್ತಿರುವ ಈ ಕಾಲದಲ್ಲಿ ವೃಕ್ಷವಂಶಕ್ಕೆ ಮದುವೆಯ ನಂಟು ಬೆಸೆಯುವ ಕಾರ್ಯಕ್ರಮ ನಗರದ ಕೆಪಿಟಿಸಿಎಲ್ ಕಚೇರಿ ಆವರಣದಲ್ಲಿ ಅದ್ದೂರಿಯಾಗಿ ನಡೆಯಿತು. 23 ವರ್ಷ ತುಂಬಿದ ಅರಳಿಮರವು, 18 ವರ್ಷ ತುಂಬಿದ ಬೇವಿನ ಮರವನ್ನು ಶಾಸ್ತ್ರೋಕ್ತವಾಗಿ ವರಿಸಿತು.

• ಶಾಸಕರಿಗೆ ಉಚಿತ ಕಂಪ್ಯೂಟರ್

ಬೆಂಗಳೂರು, ಜೂನ್ 4– ರಾಜ್ಯದ ಎಲ್ಲ 225 ಶಾಸಕರಿಗೆ ಇನ್ನೊಂದು ತಿಂಗಳೊಳಗಾಗಿ ಸರ್ಕಾರ ಉಚಿತವಾಗಿ ಕಂಪ್ಯೂಟರ್‌ಗಳನ್ನು ನೀಡಲಿದೆ ಎಂದು ವಿಧಾನಸಭಾಧ್ಯಕ್ಷ ಎಂ.ವಿ. ವೆಂಕಟಪ್ಪ ಇಂದು ಇಲ್ಲಿ ತಿಳಿಸಿದರು. ದೇಶದಲ್ಲಿ ಪ್ರಥಮ ಬಾರಿಗೆ ಶಾಸಕರ ವಿವರ ಕುರಿತು ವರ್ಣ ಕಮ್ಯುನಿಕೇಷನ್ ಸಂಸ್ಥೆ ಹೊರ ತಂದಿರುವ ‘ಕರ್ನಾಟಕ ಎಂಎಲ್‌ಎ.ಕಾಂ’ ಕನ್ನಡ ವೆಬ್‌ಸೈಟ್ ಉದ್ಘಾಟಿಸಿ ಅವರು ಮಾತನಾಡಿದರು.

75 ವರ್ಷಗಳ ಹಿಂದೆ

ಮಂಗಳವಾರ, 5-6-1951

• ಮುಂಬೈ ಅರ್ಥ ಸಚಿವರಿಗೆ ಒದಗಿದ ಅನರ್ಥ ಘಟನೆ

ಮುಂಬೈ, ಜೂ. 4– ಮುಂಬಯಿ ಅರ್ಥ ಸಚಿವರಾದ ವೈಕುಂಠ್ ಎಲ್. ಮೆಹತಾರವರನ್ನು ದಾರಿಯಲ್ಲಿ ಇಬ್ಬರು ಅಡ್ಡಗಟ್ಟಿ ಅವರ ಚಿನ್ನದ ಗುಂಡಿ, ಪಾಕೆಟ್ ಡೈರಿ ಮತ್ತು ಕನ್ನಡಕಗಳನ್ನು ಕಿತ್ತುಕೊಂಡರು. ಮುಂಬಯಿಯ ಉಪನಗರವಾದ ಅಂಧೇರಿಯ ಬಳಿಯ ಪಾರ್ಕ್ ಬಳಿ ಬೆಳಿಗ್ಗೆ ತಿರುಗಾಡಿಕೊಂಡು ಬರುತ್ತಿದ್ದಾಗ ಈ ಘಟನೆ ನಡೆಯಿತು.

‘ಇದು ಪೂರ್ತಿ ವೈಯಕ್ತಿಕ ವಿಷಯ’ ಎಂದು ಮೆಹತಾರವರು, ಆತಂಕಗೊಂಡಿದ್ದ ವರದಿಗಾರರನ್ನುದ್ದೇಶಿಸಿ ಘಟನೆ ನಡೆದ ಒಂದು ಗಂಟೆಯ ಬಳಿಕ ಶಾಂತರಾಗಿ ಹೇಳಿದರು. ಈ ಸಂಬಂಧದಲ್ಲಿ ಅಂಧೇರಿ ಪೊಲೀಸರು ಹತ್ತು ಮಂದಿಯನ್ನು ಬಂಧಿಸಿದ್ದಾರೆ.

ಕಸವೆಂಬ ಬೆಟ್ಟದಡಿ ನಿಂತು...



ವಿಶ್ಲೇಷಣೆ

ನೂತನ ದೋಶೆಟ್ಟಿ

ಆಧುನಿಕ ಜಗತ್ತಿನ ಬಹುದೊಡ್ಡ ಬಿಕ್ಕಟ್ಟುಗಳಲ್ಲಿ ಕಸದ ಸಮಸ್ಯೆಯೂ ಒಂದು. ನಾವೇ ಸೃಷ್ಟಿಸಿಕೊಂಡಿರುವ ರಕ್ಕಸರೂಪಿ ಕಸ ನಮ್ಮನ್ನೇ ಆವರಿಸಿಕೊಂಡಿದೆ, ಆಪೋಶನ ತೆಗೆದುಕೊಳ್ಳಲು ಹವಣಿಸುತ್ತಿದೆ. ನಮ್ಮ ಕಾಳಜಿಯ ಆದ್ಯತೆ ಯಾವುದೆನ್ನುವುದನ್ನು ನಿಚ್ಚಳಗೊಳಿಸಿಕೊಳ್ಳಬೇಕಾದ ಕಾಲಘಟ್ಟವಿದು.

ಎರಡು ಮಹಾಯುದ್ಧಗಳನ್ನು ಕಂಡಿರುವ ಈ ಜಗತ್ತು ಅಪಾರ ಸಾವು–ನೋವನ್ನು ದಾಖಲಿಸಿರುವುದರ ಜೊತೆಗೆ, ಪರಿಸರ ಹಾನಿಯನ್ನೂ ಕಂಡಿದೆ. ಆ ಹಾನಿಗೆ ಜೀವಂತದರ್ಶಿಕೆಗಳಾಗಿ ಹಿರೋಶಿಮಾ, ನಾಗಸಾಕಿ ಪಟ್ಟಣಗಳ ವಿನಾಶ ನಮ್ಮೆದುರು ಇದೆ. ಆದರೂ, ನಂತರದ ಜಗತ್ತೇನೂ ಸಂತನಾಗಲಿಲ್ಲ. ವಿನಾಶದ ದಾಹ ಅಭಿವೃದ್ಧಿಯ ಹೆಸರಲ್ಲಿ ನಿರಂತರವಾಗಿದೆ. ಇದರ ಫಲಿತಾಂಶ, ಭೂಮ್ಯಾಕಾಶವನ್ನು ಆವರಿಸಿಬಿಡುವಷ್ಟು ಬೃಹತ್ತಾದ ಕಸ!

ಭೂಮಿ, ಬಾನು, ದೊಡ್ಡ ದೊಡ್ಡ ಪರ್ವತಗಳು, ಸಮುದ್ರಗಳು, ನದಿಗಳು ಎಲ್ಲೆಂದರಲ್ಲಿ ಕಸವೀಗ ವ್ಯಾಪಿಸಿದೆ. ಹೆಚ್ಚಿನ ಪಾಲು ಕಸ ಅತ್ಯಂತ ಮುಂದುವರಿದ ರಾಷ್ಟ್ರಗಳು, ಸುಶಿಕ್ಷಿತರು, ಸುಸಂಸ್ಕೃತರೆಂದು ಕರೆದುಕೊಳ್ಳುವವರ ಸೃಷ್ಟಿ. ಬಾಹ್ಯಾಕಾಶದ ತಾಂತ್ರಿಕ ಕಸವನ್ನು ಹಾಗೂ ಮೌಂಟ್ ಎವರೆಸ್ಟ್‌ನಂತಹ ಪರ್ವತಗಳ ಮೇಲೆ ಶೇಖರವಾಗಿರುವ ಕಸವನ್ನು ಸಾಮಾನ್ಯರಾದ ನಾವು ಗುಡಿಸಿ ಸ್ವಚ್ಛಗೊಳಿಸಲು ಆಗುವುದಿಲ್ಲ. ಅದಕ್ಕೆ ಸಂಬಂಧಪಟ್ಟ ಪ್ರಪಂಚದ ಬೇರೆ ಬೇರೆ ಭಾಗದ ಸರ್ಕಾರಗಳು, ಇಲಾಖೆಗಳೂ ಈಗ ಈ ಹಿಂದಿನಂತೆ ತಲೆಕೆಡಿಸಿಕೊಳ್ಳುತ್ತಿಲ್ಲ. ತೈಲವೊಂದೇ ಈಗ ಪ್ರಪಂಚದ ಒನ್ ಪಾಯಿಂಟ್ ಅಜೆಂಡಾ.

ಮೂರನೇ ವಿಶ್ವಯುದ್ಧ ನೀರಿಗಾಗಿ ನಡೆಯುತ್ತದೆ ಎಂಬುದು 20ನೇ ಶತಮಾನದವರೆಗೂ ಬಹಳ ಪ್ರಚಲಿತವಾಗಿದ್ದ ಮಾತಾಗಿತ್ತು. ಈಗ ನೀರಿನ ಸ್ಥಾನವನ್ನು ತೈಲ ಆಕ್ರಮಿಸಿಕೊಳ್ಳುವ ಲಕ್ಷಣಗಳು ಕಾಣುತ್ತಿವೆ. ಸಾರ್ವಜನಿಕ ಆರೋಗ್ಯ, ಪರಿಸರ, ಶಿಕ್ಷಣ, ಉದ್ಯೋಗ, ಸ್ವಂತ ಸೂರು ಮೊದಲಾದ ಮೂಲಭೂತ ಅವಶ್ಯಕತೆಗಳು ಆದ್ಯತೆಯಲ್ಲಿ ಕೆಳಸ್ಥಾನ ಪಡೆಯುತ್ತಿರುವುದು ಇಂದಿನ ಕಟು ವಾಸ್ತವ. ಇಷ್ಟು ಉದ್ದದ ಪೀಠಿಕೆಯ ಹಿಂದೆ ಇರುವುದು ಪ್ರತಿದಿನ ವಿಶ್ವದಾದ್ಯಂತ ಪ್ರತಿ ಮನೆಯಿಂದ ಸೃಷ್ಟಿಯಾಗುತ್ತಿರುವ ಹಸಿ ಕಸ ಹಾಗೂ ಒಣಕಸ!

ಪ್ರಸ್ತುತ ನಗರಗಳು ದೂಳು ಹಾಗೂ ಇಂಗಾಲ ಮಿಶ್ರಿತ ಗಾಳಿಯನ್ನು ಉಸಿರಾಡುತ್ತ, ಇಂಗಾಲದ ಹೆಜ್ಜೆಗುರುತು ಹೆಚ್ಚಿಸುತ್ತಲೇ ಇವೆ. ಸಹಸ್ರಾರು ಟನ್ ತ್ಯಾಜ್ಯವನ್ನು ಪ್ರತಿದಿನ ಸೃಷ್ಟಿಸುತ್ತಿವೆ. ಇದು ಅಭಿವೃದ್ಧಿಯ ಊರ್ಧ್ವಮುಖತೆಯೋ ಅಧೋಗತಿಯೋ ತಿಳಿಯದೆ ಸಾಮಾನ್ಯ ಪ್ರಜೆ ಕಂಗಾಲಾಗಿದ್ದಾನೆ. ಬೆಂಗಳೂರು ಮಹಾನಗರವೊಂದೇ ಪ್ರತಿದಿನ 6,000 ಟನ್ ಕಸ ಸೃಷ್ಟಿಸುತ್ತಿದೆ. ಇಷ್ಟು ಪ್ರಮಾಣದ ಕಸದ ವಿಲೇವಾರಿ ಸಾಧಾರಣ ಸಂಗತಿಯಲ್ಲ. ಇದನ್ನು ಸುಲಭಗೊಳಿಸಿಕೊಳ್ಳಲು ಹೊರಟ ಆಡಳಿತ, ನಗರದಿಂದ ದೂರ ಇರುವ ಹಳ್ಳಿಗಳನ್ನು ತಿಪ್ಪೆಗಳನ್ನಾಗಿ ಮಾಡಿಕೊಂಡಿದ್ದು, ಈಗ ಅಲ್ಲಿಯೂ ವಿಷಾನಿಲ ಗಾಳಿಯಲ್ಲಿ, ನೀರಿನಲ್ಲಿ, ಮಣ್ಣಿನಲ್ಲಿ ಸೇರುತ್ತಿದೆ.

2000 ಇಸವಿಯ ಆಸುಪಾಸಿನಲ್ಲಿ ಬೆಂಗಳೂರು ಈ ಪರಿಯಲ್ಲಿ ಕಸ ಸೃಷ್ಟಿಸುತ್ತಿರಲಿಲ್ಲ. ಆಗ ಪ್ರತಿದಿನ 200 ಟನ್ ಕಸ ಉತ್ಪತ್ತಿಯಾಗುತ್ತಿತ್ತು. 2015ರ ಹೊತ್ತಿಗೆ ಅದು 600 ಟನ್‌ಗೆ, 2024ರಲ್ಲಿ 4,000 ಟನ್‌ಗೆ ಏರಿತು. ಈಗ 6,000 ಟನ್ ಇದೆ ಎಂದು ಅಂದಾಜು ಮಾಡಲಾಗಿದೆ. ಬರೀ 10 ವರ್ಷಗಳಲ್ಲಿ ಕಸ ಉತ್ಪಾದನೆಯಲ್ಲಿ ಆದ ಸ್ಫೋಟ, ಬೆಂಗಳೂರು ನಗರ ಹಾಗೂ ಸುತ್ತಲ ಹಳ್ಳಿಗಳ ಆರೋಗ್ಯಕ್ಕೆ ಸಂಚಕಾರ ತಂದಿದೆ. ಹಳ್ಳಿಗರು ಬೆಂಗಳೂರಿನ ಕಸದ ಲಾರಿಗಳನ್ನು ಊರ ಹೊರಗೆ ತಡೆದು ‘ನಿಮ್ಮ ಕಸವನ್ನು ನೀವೇ ನಿರ್ವಹಣೆ ಮಾಡಿಕೊಳ್ಳಿ’ ಎಂಬ ಖಡಕ್ ಸಂದೇಶವನ್ನು ಆಗಾಗ ಕೊಡುತ್ತಾರೆ. ಒಂದು ಹಳ್ಳಿ ತಡೆದರೆ ಇನ್ನೊಂದು ಹಳ್ಳಿ... ಮಂಡೂರಿನಿಂದ ಮಿಟ್ಟಗಾನಹಳ್ಳಿ, ದೊಡ್ಡಬಿದರಕಲ್ಲು, ಬೆಳಹಳ್ಳಿ... ಹೀಗೇ ಕಸ ಸೇರಿಸಿಕೊಂಡ ಹಳ್ಳಿಗಳು ಅಭಿವೃದ್ಧಿಯಾಗುವುದು ಬೇಡ.

ಇಲ್ಲಿ ಎರಡು ವಿಷಯಗಳು ಮುಖ್ಯವಾಗುತ್ತವೆ. ಮೊದಲನೆಯದಾಗಿ ಗಾಬರಿ ಹುಟ್ಟಿಸುವಷ್ಟು ಕಸ ಉತ್ಪಾದನೆ, ಎರಡನೆಯದು, ಅದರ ವಿಲೇವಾರಿಗೆ ಅಮಾಯಕ ಹಳ್ಳಿಗಳ ಬಲಿ.

ಬೆಂಗಳೂರು ಮಹಾನಗರ ಈಗ ವಿಶ್ವದಲ್ಲೇ ಅತ್ಯಂತ ವೇಗವಾಗಿ ಬೆಳೆಯುತ್ತಿರುವ ನಗರ. ಅದರಂತೆ ಜನಸಂಖ್ಯೆಯ ದಟ್ಟಣೆಯಲ್ಲೂ ಮೊದಲ ಸ್ಥಾನಕ್ಕೆ ದಾಪುಗಾಲಿಡುತ್ತಿದೆ. ಇದಕ್ಕೆ ಐಟಿ ಉದ್ಯಮದ ಜೊತೆಗೆ ಕಟ್ಟಡ ಕಾಮಗಾರಿ, ಮೆಟ್ರೊ, ಏರ್‌ಪೋರ್ಟ್ ಮೊದಲಾದ ಬೃಹತ್ ಯೋಜನೆಗಳು, ಹೇರಳವಾದ ಬಂಡವಾಳ ಹೂಡಿಕೆ ಮೊದಲಾದ ಹತ್ತಾರು ಕಾರಣಗಳನ್ನು ಹೆಸರಿಸಬಹುದು.

ವಲಸಿಗರು ಹೆಚ್ಚಿದಂತೆ ಭೂ ಮಾಫಿಯಾ ಚುರುಕಾಗಿ ಸಹಸ್ರಾರು ಕಟ್ಟಡ ಯೋಜನೆಗಳನ್ನು ಬೆಂಗಳೂರಿನ ಉದ್ದಗಲಕ್ಕೂ ಮಾಡಿತು. ಈಗ ಬೆಂಗಳೂರಲ್ಲಿ ಎಲ್ಲ ರಾಜ್ಯಗಳ ವಲಸಿಗರೊಂದಿಗೆ ಪಶ್ಚಿಮ ಬಂಗಾಳ, ಈಶಾನ್ಯ ರಾಜ್ಯಗಳ ಜನ ತುಂಬಿ ತುಳುಕುತ್ತಿದ್ದಾರೆ. ಈ ವಲಸೆಯ ಕಾರಣ ಬೆಂಗಳೂರು ನಗರ ಅನೇಕ ಸವಾಲುಗಳನ್ನು ಎದುರಿಸುತ್ತಿದೆ. ಅದರಲ್ಲಿ ಅಗಾಧ ಪ್ರಮಾಣದ ಕಸ ಉತ್ಪಾದನೆಯೂ ಒಂದು.

2011ರ ಹೊತ್ತಿಗೆ 84 ಲಕ್ಷ ಇದ್ದ ಬೆಂಗಳೂರು ಜನಸಂಖ್ಯೆ ಈಗ 1.5 ಕೋಟಿಯಾಗಿರಬಹುದು ಎನ್ನುವ ಅಂದಾಜಿದೆ. ಇಡುಕಿರಿದು ಒಂದೆಡೆ ನೆಲೆಸಿರುವ ಜನಸಮೂಹದ ಅವಶ್ಯಕತೆಗಳನ್ನು ಪೂರೈಸಲು ಇರುವ ನೂರಾರು ಉದ್ಯಮಗಳು, ಹೋಟೆಲುಗಳು, ಬೀದಿಬದಿಯ ವ್ಯಾಪಾರಗಳು, ಅಂಗಡಿ ಮುಂಗಟ್ಟುಗಳು, ಮುಂತಾದವು ಉತ್ಪಾದಿಸುವ ಕಸದ ಪ್ರಮಾಣವೂ ಗಣನೀಯವಾಗಿ ಏರಿದೆ. ಹಬ್ಬ ಹರಿದಿನಗಳಲ್ಲಿ ರಸ್ತೆಯಲ್ಲಿ ಶೇಖರವಾಗುವ ಹೂವಿನ ಕಸವೇ ನೂರಾರು ಟನ್ ಆಗುವುದು. ಈ ದಟ್ಟ ಸಂದಣಿಯಲ್ಲಿ ವಾಹನಗಳನ್ನು ಕಡೆಗಣಿಸುವಂತಿಲ್ಲ. 2015ರಲ್ಲಿ 65 ಲಕ್ಷವಿದ್ದ ನೋಂದಾಯಿತ ವಾಹನಗಳ ಸಂಖ್ಯೆ 2025ರ ಆಗಸ್ಟ್ ವೇಳೆಗೆ 1.23 ಕೋಟಿಯಾಗಿತ್ತು.

ಕಳೆದ ಎರಡು ದಶಕಗಳಲ್ಲಿ ಬೆಂಗಳೂರಲ್ಲಿ ಆಗುತ್ತಿರುವ ಕಟ್ಟಡ ನಿರ್ಮಾಣ, ಅದರಿಂದ ಉತ್ಪತ್ತಿಯಾಗುತ್ತಿರುವ ತ್ಯಾಜ್ಯದ ಅಂದಾಜು ಆಡಳಿತಕ್ಕೂ ಇದ್ದಂತಿಲ್ಲ. ಈ ಎರಡು ದಶಕಗಳಲ್ಲಿ ವಸತಿ ಸಮುಚ್ಚಯಗಳಲ್ಲಿ ಕಂಡು ಕೇಳರಿಯದ ಪ್ರವಾಹ ಪರಿಸ್ಥಿತಿ, ಹೆಚ್ಚುತ್ತಲೇ ಇರುವ ಫ್ಲೈಓವರ್‌ಗಳು, ವರ್ತುಲ ರಸ್ತೆಗಳು, ಷಟ್ಪಥಗಳು, ಶತಾಯಗತಾಯ ಪ್ರಯತ್ನಿಸಿದರೂ ಅಂಕೆಗೆ ಸಿಗದಿರುವ ವಾಹನ ದಟ್ಟಣೆ, ಎಲ್ಲದಕ್ಕೂ ಅತೀ ವಲಸೆಯೇ ಕಾರಣ. ಇದಕ್ಕೆ ಅಮಾಯಕ ಹಳ್ಳಿಗರು ಏಕೆ ಬೆಲೆ ತೆರಬೇಕು ಎಂದು ನಮ್ಮ ಆಡಳಿತಗಳಿಗೆ ಒಮ್ಮೆಯೂ ಅನಿಸುವುದಿಲ್ಲವೇ? ತಮ್ಮತಮ್ಮ ಮನೆಗಳ ಒಂದು ದಿನದ ಕಸಕ್ಕೆ ಮೂಗು ಮುಚ್ಚಿಕೊಂಡು, ಅದನ್ನು ಕಸದ ಗಾಡಿಗೆ ಕೊಡುವಾಗ ಮುಖ ಕಿವುಚಿಕೊಳ್ಳುವವರು ಆ ಕಸದ ಉತ್ಪಾದಕರು ತಾವೇ ಎಂಬುದನ್ನು ಹೇಗೆ ತಾನೇ ಮರೆಯಬಹುದು? ಮನೆ ಬಾಗಿಲಿಗೆ ಬಂದು ಬೀಳುವ ಎಲ್ಲ ಸೌಕರ್ಯಗಳ ಉಪಸೃಷ್ಟಿ ಅಹಂಕಾರ, ಅಸಡ್ಡೆ, ಮರೆಯಾದ ಮನುಷ್ಯತ್ವ ಹಾಗೂ ಈ ಪಾಟ ಕಸದ ಉತ್ಪಾದನೆ.

ವಲಸೆಗಂತೂ ಕಡಿವಾಣ ಹಾಕಲಾಗದು. ಹಾಗಿರುವಾಗ ಬೆಂಗಳೂರು ನಗರ ಹಾಗೂ ಸುತ್ತಲ ಹಳ್ಳಿಗಳು, ಮೂಲನೆಲದ ವಾಸಿಗಳು ಆರೋಗ್ಯಪೂರ್ಣವಾಗಿ ಬದುಕಬೇಕು, ಅವರ ಮುಂದಿನ ಪೀಳಿಗೆಗಳಿಗೆ ಒಳ್ಳೆಯ, ಸುರಕ್ಷಿತ ಜೀವನ ದಕ್ಕುವಂತಿರಬೇಕು ಎಂದಾದರೆ, ಬೇರೆ ಬೇರೆ ರಾಜ್ಯಗಳು ತಮ್ಮ ನಗರಗಳನ್ನು ಔದ್ಯೋಗಿಕವಾಗಿ ಸದೃಢಗೊಳಿಸಬೇಕು. ಕಾನೂನಾತ್ಮಕವಾಗಿ ಸಾಧ್ಯವಾಗುವುದಾದರೆ ಕರ್ನಾಟಕದ, ಅದರಲ್ಲೂ ಬೆಂಗಳೂರು ಸುತ್ತಮುತ್ತಲಿನ ಜಾಗಗಳನ್ನು ಪರರಾಜ್ಯದವರು ಬೇಕಾಬಿಟ್ಟಿ ಕೊಂಡುಕೊಳ್ಳಲು ಸಾಧ್ಯವಾಗದಂತೆಯಾದರೂ ಪ್ರಯತ್ನಿಸಬೇಕು. ಈಗ ಬೆಂಗಳೂರು ನಗರದ ಹೊರವಲಯದಲ್ಲಿ ಬೇರೆ ರಾಜ್ಯಗಳ ವಲಸಿಗರು ಭೂಮಿಯನ್ನು ಖರೀದಿ ಮಾಡಿದ್ದಾರೆ. ಇದು ಆಡಳಿತಗಳ ಮೂಗಿನ ಅಡಿಯಲ್ಲೇ ನಡೆಯುವುದರಿಂದ ಅವರಿಗೆ ಅರಿಯದ್ದೇನಲ್ಲ. ಇಂಥ ಕೆಲವು ದೃಢ ನಿರ್ಧಾರಗಳನ್ನು ಮಾಡದಿದ್ದರೆ ಬೆಂಗಳೂರು ನಗರದ ಕಸ ನಿರ್ವಹಣೆ ಎಂದೆಂದಿಗೂ ಮರೀಚಿಕೆಯೇ. ಜೊತೆಗೆ ಕರ್ನಾಟಕದ ಜನರ ಸ್ವಾಸ್ಥ್ಯ, ಅವರ ಹಕ್ಕುಗಳು, ಸ್ವಾವಲಂಬನೆ, ಸಾಮಾಜಿಕ, ಆರ್ಥಿಕ ಉನ್ನತಿಯೂ ರೋಗಗ್ರಸ್ತವಾಗುವುದು.

ಒಂದು ದಶಕದ ಹಿಂದೆ ‘ಕಸದಿಂದ ಕಾಸು’ ಎಂಬ ಅಭಿಯಾನವನ್ನು ಕೆಲ ಸಂಘ ಸಂಸ್ಥೆಗಳು ಬಿಬಿಎಂಪಿ ಜೊತೆಗೂಡಿ ಆರಂಭಿಸಿದ್ದವು. ಅದು ಕಸದ ರೀಸೈಕ್ಲಿಂಗ್ ಅಭಿಯಾನ. ಕಸದಿಂದ ರಸ್ತೆ ಮಾಡಬಹುದು, ಸಂಗ್ರಹಿತ ಕಸಕ್ಕೆ ತಕ್ಕ ಹಣಪಾವತಿ ಮೊದಲಾದ ಹೊಸ ಆಲೋಚನೆಗಳು ಮುನ್ನೆಲೆಗೆ ಬಂದು ಚರ್ಚಿತವಾದರೂ ಕಾರ್ಯರೂಪಕ್ಕೆ ಬರಲಿಲ್ಲ. ಅಲ್ಲಲ್ಲಿ ಕಾರ್ಯಗತಗೊಂಡರೂ ಉತ್ಪತ್ತಿಯಾಗುವ ಕಸದ ಪ್ರಮಾಣಕ್ಕೆ ಹೋಲಿಸಿದರೆ ಅದು ಅಣುಮಾತ್ರವಾಗಿದೆ.

ಇದು ಮಹಾನಗರ ಬೆಂಗಳೂರಿನ ಕಥೆ ಮಾತ್ರವಲ್ಲ. ರಾಜ್ಯದಾದ್ಯಂತ ಇರುವ ಎಲ್ಲ ಪ್ರಮುಖ ಪ್ರವಾಸಿ ತಾಣಗಳು, ಇತರ ನಗರಗಳು ಹಾಗೂ ಪಟ್ಟಣಗಳ ಕಥೆಯೂ ಹೌದು. ಕೆರೆ–ಕೊಳ್ಳಗಳು, ನದಿ, ಸಮುದ್ರ ತೀರಗಳು, ಬೆಟ್ಟ–ಗುಡ್ಡಗಳು ಎಲ್ಲವೂ ಕಸಮಯ. ಇದಕ್ಕೆ ಪಶ್ಚಿಮಘಟ್ಟದ ಭಾಗಗಳೂ ಹೊರತಲ್ಲ. ಎಲ್ಲಿ ನೋಡಿದರೂ ಜನಜಾತ್ರೆ; ಕಸಸಂತೆ!

ಕಸವೀಗ ವಿಶ್ವವ್ಯಾಪಿ. ಹಿಮಾಲಯ ಟನ್‌ಗಟ್ಟಲೆ ಕಸದಿಂದ ತುಂಬಿಹೋಗಿದೆ. ಉತ್ತರಾಖಂಡದ ಚಾರ್ ಧಾಮ್‌ಗಳು, ಅಲ್ಲಿಯ ನದಿಗಳು ಪ್ರತಿವರ್ಷ ಬರುವ ಲಕ್ಷಾಂತರ ಪ್ರವಾಸಿಗಳು ಎಸೆದುಹೋಗುವ ಕಸದ ಗೂಡಾಗಿವೆ. ಇದುವರೆಗೂ ಪರಿಸರ ಸಂರಕ್ಷಣೆ ಎಂದರೆ ತಲೆ ಎತ್ತಿ ಆಕಾಶ ನೋಡುತ್ತಿದ್ದವರು, ಕಾಡಿನತ್ತ ಬೊಟ್ಟು ಮಾಡುತ್ತಿದ್ದವರು ತಾವು ನಿಂತ ಕಾಲ ಕೆಳಗಿನ ಚದರಡಿಯ ನೆಲವನ್ನು ನೋಡಬೇಕಾಗಿದೆ. ಅದು ಇಂದು ಪರಿಸರ ಕಾಳಜಿಯ ಮೂಲ ನೆಲೆ ಎನ್ನುವುದು ಇನ್ನೂ ಅರ್ಥವಾಗಬೇಕಿದೆ.

ಕಳೆದ ದಶಕಗಳಲ್ಲಿ ಏನೇ ನಡೆದಿರಲಿ. ಈಗ ಕರ್ನಾಟಕದ ಭೂಪ್ರದೇಶ ಹಾಗೂ ಮೂಲ ಜನತೆಯ ಆರೋಗ್ಯ ಪ್ರಥಮ ಆದ್ಯತೆಯಾಗಬೇಕಿದೆ. ಅದನ್ನು ನಮ್ಮ ಮನೆಯಿಂದಲೇ ಆರಂಭಿಸೋಣ.



ವಾಚಕರ ವಾಣಿ

‘ಕನ್ನಡ ರಾಜಕೀಯ’ ವರ್ತಮಾನದ ತುರ್ತು

ಭಾಷೆಯೊಂದು ಜನರನ್ನು ಬೆಸೆದರೆ ಏನೆಲ್ಲಾ ಸಾಧ್ಯ ಎನ್ನುವುದಕ್ಕೆ ತಮಿಳುನಾಡು ಅತ್ಯುತ್ತಮ ಉದಾಹರಣೆ. ಆ ರಾಜ್ಯದ ಪ್ರಾತಿನಿಧಿಕ ಸಿನಿಮಾ ಅಥವಾ ರಾಜಕೀಯ ಪ್ರಯೋಗಗಳು ನಡೆಯುತ್ತಿರುವುದು ತಮಿಳು ಭಾಷೆಯ ಅಗಾಧ ಶಕ್ತಿಯಿಂದಲೇ. ಯುವ ಸಮುದಾಯವನ್ನು ಸಾಮಾಜಿಕ ಮಾಧ್ಯಮಗಳ ಮೂಲಕ ಮಾತೃಭಾಷೆಯಲ್ಲಿ ತಲುಪಿ ವಿಜಯ್ ಅವರು ಮುಖ್ಯಮಂತ್ರಿಯಾಗಿರುವ ವಿಚಾರ ಅಧ್ಯಯನ ಯೋಗ್ಯ. ಇದಕ್ಕೆ ತದ್ವಿರುದ್ಧವಾಗಿ ಕನ್ನಡ ಸಿನಿಮಾ–ಸಾಹಿತ್ಯ ಕನ್ನಡಿಗರಿಗೇ ಬೇಡವಾಗಿದೆ. ನಮ್ಮ ರಾಜಕೀಯ ನಿರ್ಧಾರಗಳು ಕೂಡ ರಾಷ್ಟ್ರೀಯ ಪಕ್ಷಗಳಿಂದ ತೀರ್ಮಾನಗೊಳ್ಳುತ್ತವೆ.

ದುರ್ದೈವಕ್ಕೆ ಶಾಲೆಗಳಲ್ಲಿ ಕನ್ನಡತ್ವ ಬೆಳೆಸದೆ ಭಾಷೆಯ ಕೊಂಡಿಯನ್ನು ತೆಳು ಆಗಿಸಿಕೊಂಡಿದ್ದೇವೆ. ಭಾಷೆಯಾಗಿ ಹೊಟ್ಟೆ ತುಂಬಿಸಲು ಸಾಧ್ಯವಾಗದಿದ್ದರೆ ಕನ್ನಡದ ಉಳಿವಿನ ಪ್ರಶ್ನೆ ಕಾಡುವುದು ಸಹಜವೇ. ಭಾರತ್ ಜೋಡೋ ಸಂಘಟನೆ, ವಿದ್ಯಾರ್ಥಿಗಳಿಗೆ ಉಚಿತ ಸಾರಿಗೆಗೆ ಒತ್ತು ನೀಡಿರುವ ರಾಜ್ಯ ಸರ್ಕಾರವು, ಕನ್ನಡತನವನ್ನು ಕಟ್ಟುವ–ಪೋಷಿಸುವ ವಾತಾವರಣದ ಜೊತೆಗೆ, ಕನ್ನಡತನದ ಆರ್ಥಿಕ ಆಯಾಮಗಳ ಬಗ್ಗೆ ಚಿಂತಿಸುವುದು ರಾಜ್ಯದ ಅಸ್ಮಿತೆಯ ಪ್ರಶ್ನೆ. ರಾಜಕೀಯ ಕಾರಣಕ್ಕಾದರೂ ಒಂದು ಸಮುದಾಯವಾಗಿ ಒಂದಾಗಿಸುವ ‘ಕನ್ನಡ ರಾಜಕೀಯ’ ಇಂದಿನ ತುರ್ತು.

ಶಾಂತರಾಜು ಎಸ್., ಬೆಂಗಳೂರು

ಸ್ತ್ರೀಯರಿಗೆ ಪ್ರಾತಿನಿಧ್ಯ: ಕಾಣದ ‘ಕೈ’ವಾಡ

ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ಸಾರಥ್ಯದಲ್ಲಿ ಹೊಸ ಸಚಿವ ಸಂಪುಟ ಅಸ್ತಿತ್ವಕ್ಕೆ ಬಂದಿದೆ. ಈ ಸಂಪುಟದಲ್ಲಿ ಒಬ್ಬ ಮಹಿಳೆಯೂ ಸ್ಥಾನ ಪಡೆಯದೆ ಇರುವುದು ಅಚ್ಚರಿ ತಂದಿದೆ. ಕಾಂಗ್ರೆಸ್‌ನಿಂದ ವಿಧಾನ ಪರಿಷತ್ತಿಗೆ ಆಯ್ಕೆ ಮಾಡುತ್ತಿರುವ ಸದಸ್ಯರ ಪಟ್ಟಿಯಲ್ಲೂ ಮಹಿಳೆಯರಿಗೆ ಅವಕಾಶ ನೀಡಿಲ್ಲ. ರಾಜಕಾರಣದಲ್ಲಿ ಮಹಿಳೆಯರ ಪ್ರಾತಿನಿಧ್ಯ ಕುರಿತಂತೆ ವಿಶ್ಲೇಷಣೆ ನಡೆಯುತ್ತಿದೆ. ಈ ಹೊತ್ತಿನಲ್ಲಿಯೇ ಸ್ತ್ರೀಯರಿಗೆ ಆದ್ಯತೆ ನೀಡದಿರುವುದು ದುರದೃಷ್ಟಕರ.

ಹಕೀಮ್, ತೀರ್ಥಹಳ್ಳಿ

ಸೈಕಲ್ ಹವ್ಯಾಸ: ಮನಸ್ಸಿಗೆ ಉಲ್ಲಾಸ

ತಾಲ್ಲೂಕು ಕೇಂದ್ರದಿಂದ ಹಿಡಿದು ಬೆಂಗಳೂರಿನವರೆಗೂ ಭಾನುವಾರಗಳಂದು ಆಸ್ಪತ್ರೆ, ಮದುವೆ ಮುಂತಾದ ವಿಷಯ ಹೊರತುಪಡಿಸಿ, ಇನ್ನುಳಿದ ಯಾವುದೇ ಕಾರಣಕ್ಕೆ ಹೊರಗಡೆ ಬಂದರೆ ಬೈಸಿಕಲ್ ಸವಾರಿ ಕಡ್ಡಾಯ ಎನ್ನುವ ನಿಯಮವನ್ನು ಜಾರಿಗೆ ತರಲು ರಾಜ್ಯ ಸರ್ಕಾರ ಕ್ರಮವಹಿಸಬೇಕಿದೆ. ಖಾಸಗಿ ಮತ್ತು ಸಾರ್ವಜನಿಕ ಸಾರಿಗೆ ವ್ಯವಸ್ಥೆ ಎಂದಿನಂತೆ ಇರಬೇಕು. ಜನರು ಹೊರಗೆ ಹೋಗಬೇಕೆಂದರೆ ಸಾರ್ವಜನಿಕ ಸಾರಿಗೆ, ಬೈಸಿಕಲ್ ಅಥವಾ ನಡಿಗೆಯನ್ನೇ ಅವಲಂಬಿಸಬೇಕು ಎನ್ನುವ ನಿಯಮ ರೂಪಿಸಬೇಕು. ಅದರಿಂದ ಆಗಬಹುದಾದ ಅನುಕೂಲಗಳನ್ನು ವಿವರಿಸಬೇಕಾಗಿಲ್ಲ. ಪರಿಸರ ಸಂರಕ್ಷಣೆಯ ದೃಷ್ಟಿಯಿಂದ ಇಂತಹ ತೀರ್ಮಾನ ಕೈಗೊಳ್ಳಬೇಕು.

ತೇಜಸ್ವಿ ವಿ. ಪಟೇಲ್, ಕಾರಿಗನೂರು

ಕನ್ನಡದಲ್ಲಿ ನಿರೂಪಣೆ: ಸಹಜತೆ ಕಣ್ಮರೆ

ನೂತನ ಮುಖ್ಯಮಂತ್ರಿ ಮತ್ತು ಸಚಿವ ಸಂಪುಟದ ಪ್ರಮಾಣ ವಚನ ಸ್ವೀಕಾರ ಸಮಾರಂಭದಲ್ಲಿ ರಾಜ್ಯ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಅವರು ಕನ್ನಡದಲ್ಲಿ ಮಾಡಿದ ನಿರೂಪಣೆಯ ಬಗ್ಗೆ ಸಾಮಾಜಿಕ ಜಾಲತಾಣಗಳಲ್ಲಿ ವಿರೋಧ ವ್ಯಕ್ತವಾಗಿದೆ. ದೀರ್ಘಕಾಲದಿಂದ ಕರ್ನಾಟಕದಲ್ಲಿ ಸೇವೆ ಸಲ್ಲಿಸುತ್ತಿದ್ದರೂ ಅವರ ನಿರೂಪಣೆಯ ಕನ್ನಡ ಸಹಜವಾಗಿರಲಿಲ್ಲ ಎಂಬುದು ತಕರಾರಿನ ಸಾರಾಂಶ. ಅದು ನಿಜವೂ ಆಗಿದೆ. ಅದಕ್ಕೆ ಪರಿಹಾರ ಆಯಾ ರಾಜ್ಯಗಳಿಗೆ ಬೇಕಾದ ಐಎಎಸ್, ಐಪಿಎಸ್ ಅಧಿಕಾರಿಗಳನ್ನು ಆಯಾ ರಾಜ್ಯಗಳಿಂದಲೇ ತುಂಬಬೇಕು. ಯುಪಿಎಸ್‌ಸಿ ಪರೀಕ್ಷೆಯ ಎಲ್ಲಾ ಹಂತಗಳನ್ನು ಹಿಂದಿಯಲ್ಲಿ ಕೊಟ್ಟಂತೆ ಕನ್ನಡದಲ್ಲಿಯೂ ಕೊಡಬೇಕು. ಆಗ ಇಂತಹ ಅಪಸವ್ಯಗಳು ಆಗುವುದಿಲ್ಲ. ರಾಜ್ಯದ ಬೆಳವಣಿಗೆಯ ವೇಗವೂ ಹೆಚ್ಚಲಿದೆ.

ಗಿರೀಶ್ ಮತ್ತೇರ, ದಾವಣಗೆರೆ

ನೇಮಕಾತಿ: ಸಾಮಾಜಿಕ ನ್ಯಾಯ ಪಾಲಿಸಿ

ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು, 56,432 ಸರ್ಕಾರಿ ಹುದ್ದೆಗಳ ಭರ್ತಿಗೆ ವೇಳಾಪಟ್ಟಿ ಪ್ರಕಟಿಸುವುದಾಗಿ ಹೇಳಿದ್ದಾರೆ. ಈಗಾಗಲೇ, ಪರಿಶಿಷ್ಟ ಜಾತಿಯ ಒಳಮೀಸಲಾತಿ ಜಾರಿಯಾಗಿದೆ. ರೋಸ್ಟರ್ ಬಿಂದುಗಳ ವರ್ಗೀಕರಣವೂ ಆಗಿದೆ. ಸರ್ಕಾರ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯ (ಜಾತಿ ಗಣತಿ) ವರದಿಯನ್ನೂ ಸ್ವೀಕರಿಸಿದೆ. ಶೀಘ್ರವೇ, ಈ ವರದಿಯನ್ನು ಸಚಿವ ಸಂಪುಟದ ಸಭೆಯಲ್ಲಿ ಮಂಡಿಸಿ ಒಪ್ಪಿಗೆ ಪಡೆದು ಜಾರಿಗೊಳಿಸಬೇಕಿದೆ. ಉದ್ಯೋಗ ನೇಮಕಾತಿಯಲ್ಲೂ ಈ ವರದಿ ಅನ್ವಯ ಹುದ್ದೆಗಳ ಮೀಸಲಾತಿ ವರ್ಗೀಕರಣ ನಿಗದಿಪಡಿಸಬೇಕು. ಆ ಮೂಲಕ ಸಾಮಾಜಿಕ ನ್ಯಾಯ ತತ್ತ್ವದಡಿ ಖಾಲಿ ಹುದ್ದೆಗಳ ಭರ್ತಿಗೆ ಕ್ರಮವಹಿಸಬೇಕಿದೆ. ಜತೆಗೆ, ಗ್ರಾಮೀಣ ಕೃಪಾಂಕವನ್ನು ಮರುಜಾರಿಗೊಳಿಸುವ ಮೂಲಕ ಗ್ರಾಮೀಣ ಪ್ರದೇಶದ ಅಭ್ಯರ್ಥಿಗಳಿಗೆ ಅನುಕೂಲ ಕಲ್ಪಿಸಬೇಕಿದೆ.

ವಡ್ನಾಳ್ ಅಂಜನ್‌ಕುಮಾರ್ ಜಿ., ಚನ್ನಗಿರಿ

ಗಿಡ ನೆಡುವ ಆಂದೋಲನ ಜಾರಿಗೊಳಿಸಿ

ಪ್ರತಿವರ್ಷದ ಮಳೆಗಾಲದಲ್ಲಿ ಅರಣ್ಯ ಇಲಾಖೆಯಿಂದ ರಸ್ತೆಬದಿಗಳಲ್ಲಿ ಗಿಡಗಳನ್ನು ನೆಟ್ಟು ಬೆಳೆಸಲಾಗುತ್ತದೆ. ಪರಿಸರ ಸಂರಕ್ಷಣೆ ದೃಷ್ಟಿಯಿಂದ ಇದು ಒಳ್ಳೆಯ ಕ್ರಮ. ಕಲಬುರಗಿ ಜಿಲ್ಲೆಯ ಜೇವರ್ಗಿ ತಾಲ್ಲೂಕಿನ ಹರವಾಳ ಗ್ರಾಮದಲ್ಲಿ ಅವಶ್ಯವಿರುವ ಸ್ಥಳಗಳಲ್ಲಿ ಗಿಡ ನೆಟ್ಟು ಬೆಳೆಸುವ ಬಗ್ಗೆ ಸಾಮಾಜಿಕ ಅರಣ್ಯ ವಿಭಾಗದ ಉಪ ಅರಣ್ಯ ಸಂರಕ್ಷಣಾಧಿಕಾರಿಗೆ ಕಳೆದ ವರ್ಷ ಮನವಿ ಸಲ್ಲಿಸಲಾಗಿತ್ತು. ಜೇವರ್ಗಿ ವಲಯ ಅರಣ್ಯ ಅಧಿಕಾರಿಗೆ ನಿಯಮಾನುಸಾರ ಕ್ರಮವಹಿಸಲು ಅವರು ಸೂಚಿಸಿದ್ದಾರೆ. ಆದರೆ, ಗಿಡ ನೆಟ್ಟಿಲ್ಲ. ರಾಜ್ಯದ ಬಹುತೇಕ ಗ್ರಾಮಗಳ ಸ್ಥಿತಿ ಇದಕ್ಕಿಂತ ಭಿನ್ನವಾಗಿಲ್ಲ. ಗ್ರಾಮೀಣ ಪ್ರದೇಶದ ಆಯ್ದ ಸ್ಥಳಗಳಲ್ಲಿ ಗಿಡಗಳನ್ನು ನೆಡುವ ಆಂದೋಲನಕ್ಕೆ ಸರ್ಕಾರ ಚಾಲನೆ ನೀಡಲಿ.

ಬಸವರಾಜ, ಕಲಬುರಗಿ

ಚುರುಮುರಿ



ನಿಂತ್ರೆ ಪೂರ್ವ, ಕುಂತ್ರೆ ಉತ್ತರ!

• ಬಿ.ಎನ್. ಮಲ್ಲೇಶ್

ರಾತ್ರಿ ಒಂದು ಹೊತ್ತಲ್ಲಿ ರಾಜಗುರು ಅವರ ಮೊಬೈಲ್ ರಿಂಗಾಯಿತು. ಗಾಢನಿದ್ರೆಯಲ್ಲಿದ್ದ ಅವರು ಫೋನೆತ್ತಿ ‘ಹಲೋ’ ಎಂದರು.

‘ಗುರೂಜಿ ನಾನು...’

‘ಗೊತ್ತಾಯ್ತು, ಏಕೆ ನಿದ್ರೆ ಬರಲಿಲ್ವೆ?’

‘ಇಲ್ಲ ಗುರೂಜಿ, ಏನೋ ಒಂಥರ...’

‘ಅದು ಹಾಗೇ... ಪಟ್ಟಾಭಿಷೇಕ ಆಯ್ತಲ್ವ, ಸ್ವಲ್ಪ ದಿನ ಅದರ ಪ್ರಭಾವ ಇರುತ್ತೆ. ನಿನ್ ತರಾನೇ ನಿನ್ನ ವಿರೋಧಿಗಳಿಗೂ ಈಗ ನಿದ್ರೆ ಬಂದಿರಲ್ಲ ಗೊತ್ತಾ?’

‘ಹೌದಾ ಗುರೂಜಿ, ಇದಕ್ಕೆ ಪರಿಹಾರ?’

‘ನಿನ್ನ ವಿರೋಧಿಗಳಿಗೆಲ್ಲ ಫೋನ್ ಮಾಡಿ ಧನ್ಯವಾದ ಹೇಳು. ಮೈನಸ್ ಇಂಟು ಮೈನಸ್ ಪ್ಲಸ್ ಆಗಿ ನಿದ್ರೆ ತಾನಾಗೇ ಬರುತ್ತೆ. ಇನ್ಮೇಲೆ ಉತ್ತರ ದಿಕ್ಕಿಗೆ ತಲೆ ಇಟ್ಟು ಮಲಗಬೇಡ, ನಿನ್ನ ಬೆನ್ನ ಹಿಂದೆ ಯಾರನ್ನೂ ಕೂರೋಕೆ ಬಿಡಬೇಡ, ಕೊರಳಿಗೆ ಹಾರ, ಕೈಗೆ ದಾರ ಯಾರ್ಯಾರೋ ಕೊಟ್ಟಿದ್ದು ಹಾಕ್ಕೋಬೇಡ, ಗ್ರಹಗಳು ಆಗಾಗ ಮನೆ ಬದಲಿಸ್ತಾ ಇರ್ತಾವೆ... ನಿಂತ್ರೆ ಪೂರ್ವ, ಕೂತ್ರೆ ಉತ್ತರ... ದಿಕ್ಕು ಮರೀಬೇಡ. ಬಂಡೆ ಹಗುರಾಗಲಿ, ಮಾತು ತೂಕವಾಗಲಿ...’

‘ಆಯ್ತು ಗುರೂಜಿ, ಏನೇ ಆದ್ರು ನೀವಿದೀರಲ್ಲ...’

‘ಎಲ್ಲ ಸಮಯ ನಾನು ನಿನ್ ಜೊತೆ ಇರೋಕಾಗುತ್ತೇನಯ್ಯ?’

‘ನಿಮ್ಮ ಮಾರ್ಗದರ್ಶನ ಸದಾ ಬೇಕು, ನಿಮ್ಮನ್ನ ‘ಮುಖ್ಯಮಂತ್ರಿಗಳ ಜ್ಯೋತಿಷ ಕಾರ್ಯದರ್ಶಿ’ ಅಂತ ಮಾಡ್ಕೊಳ್ಲಾ?’

‘ಅಂಥದೂ ಒಂದು ಹುದ್ದೆ ಇದೆಯಾ?’

‘ಇಲ್ಲ, ಸೃಷ್ಟಿ ಮಾಡಿದ್ರಾಯ್ತು, ಈಗ ಮೊದಲ ಸಮಸ್ಯೆ... ಮಂತ್ರಿ ಸ್ಥಾನ ಸಿಗದೋರನ್ನ ಹೇಗೆ ಸಮಾಧಾನಿಸಲಿ ಗುರೂಜಿ?’

‘ಸಂಪುಟದಲ್ಲಿ ಎರಡು ಸ್ಥಾನ ಖಾಲಿ ಬಿಡು, ಕೊನೇತನಕ ತುಂಬಬೇಡ, ಅವನ್ನೇ ಎಲ್ರಿಗೂ ತೋರಿಸ್ತಾ ಎರಡು ವರ್ಷ ಮುಗಿಸು...’

‘ಆಯ್ತು ಗುರೂಜಿ, ಈಗ ಮಲಗಲಾ?’

‘ಬೇಡ, ಎರಡು ನಿಮಿಷ ಬಿಟ್ಟು ಮಲಗು...’

‘ಯಾಕೆ?’

‘ಈಗ ಟೈಮ್ ಸರಿ ಇಲ್ಲ!’ ಗುರೂಜಿ ಫೋನಿಟ್ಟರು.

ಸಂಗತ

ಶೈಕ್ಷಣಿಕ ವಲಸೆ: ಕಮರದಿರಲಿ ಬಡಮಕ್ಕಳ ಆಸೆ

ಯುವಜನರು ಖಾಲಿಯಾಗಿ ವೃದ್ಧರಷ್ಟೇ ಉಳಿದಿರುವ ಗ್ರಾಮಗಳಂತೆ ಸರ್ಕಾರಿ ಶಾಲೆಗಳು ಕಾಣಿಸುತ್ತಿವೆ. ಸರ್ಕಾರ ಅವುಗಳಿಗೆ ಜೀವ ತುಂಬುವ ಕೆಲಸ ಮಾಡಲಿ.

• ರಾಜಕುಮಾರ ಕುಲಕರ್ಣಿ

‘ಮಕ್ಕಳಿಗೆ ಗುಣಮಟ್ಟದ ಶಿಕ್ಷಣ, ಬಿಸಿಯೂಟ ಹಾಗೂ ಪಠ್ಯದ ಜೊತೆಗೆ ಬಸ್ ಸೌಕರ್ಯವನ್ನೂ ಕಲ್ಪಿಸಲಾಗುತ್ತಿದೆ. ಮಕ್ಕಳನ್ನು ಸರ್ಕಾರಿ ಶಾಲೆಗೇ ಸೇರಿಸಲು ಪೋಷಕರ ಮನವೊಲಿಸಬೇಕು’ ಎಂದು ಶಾಲಾ ಶಿಕ್ಷಣ ಸಚಿವರು ಕರ್ನಾಟಕ ಪಬ್ಲಿಕ್ ಶಾಲೆಗಳಲ್ಲಿನ ಸೌಲಭ್ಯ ಕುರಿತು ಶಿಕ್ಷಣ ಇಲಾಖೆಯ ಪ್ರಗತಿ ಪರಿಶೀಲನಾ ಸಭೆಯಲ್ಲಿ ಹೇಳಿರುವುದು ವರದಿಯಾಗಿತ್ತು. ಗದಗ ಜಿಲ್ಲೆಯ ಮುಂಡರಗಿ ತಾಲ್ಲೂಕಿನ ಗ್ರಾಮವೊಂದರಲ್ಲಿ ಸರ್ಕಾರಿ ಶಾಲೆಯಲ್ಲಿನ ಮಕ್ಕಳ ದಾಖಲಾತಿ ವೃದ್ಧಿಸಲು ಅಲ್ಲಿನ ಶಿಕ್ಷಕರೊಬ್ಬರು ಒಂದನೇ ತರಗತಿಗೆ ದಾಖಲಾಗುವ ಪ್ರತಿ ವಿದ್ಯಾರ್ಥಿಗೂ ತಮ್ಮ ಸ್ವಂತ ಖರ್ಚಿನಲ್ಲಿ ಒಂದು ಸಾವಿರ ರೂಪಾಯಿ ಠೇವಣಿ ಇಡಲು ಮುಂದಾಗಿರುವ ಸುದ್ದಿ ಕೂಡ ಪ್ರಕಟವಾಗಿತ್ತು.

ಸರ್ಕಾರ ಮತ್ತು ಶಿಕ್ಷಕರ ಪ್ರಯತ್ನಗಳ ನಡುವೆಯೂ ಖಾಸಗಿ ಶಾಲೆಗಳತ್ತ ವಿದ್ಯಾರ್ಥಿಗಳ ವಲಸೆ ಅವ್ಯಾಹತವಾಗಿ ಮುಂದುವರಿದಿದೆ. ಹಳ್ಳಿಯಲ್ಲಿ ವ್ಯವಸಾಯ ಮಾಡಿಕೊಂಡಿರುವ ನನ್ನ ಸ್ನೇಹಿತರು ತಮ್ಮ ಮಕ್ಕಳ ಶಿಕ್ಷಣಕ್ಕಾಗಿ ಈಗ ನಗರ ಪ್ರದೇಶಕ್ಕೆ ವಸತಿ ಬದಲಿಸಿದ್ದಾರೆ. ನಗರದ ಬಾಡಿಗೆ ಮನೆಯಲ್ಲಿದ್ದುಕೊಂಡು ದಿನನಿತ್ಯ ಕೃಷಿ ಕೆಲಸಕ್ಕಾಗಿ ಹಳ್ಳಿಗೆ ಹೋಗಿ ಬರಲು ನಿರ್ಧರಿಸಿದ್ದಾರೆ. ಮಕ್ಕಳಿಗೆ ಅಗತ್ಯವಾದ ಗುಣಮಟ್ಟದ ಶಿಕ್ಷಣ ಅವರ ಮೊದಲ ಆದ್ಯತೆಯಾಗಿದೆ.



ಕೆಲವು ಪಾಲಕರು ಖಾಸಗಿ ಶಾಲೆಗಳಲ್ಲೇ ವಸತಿಶಾಲೆಗಳಿಗೆ ಆದ್ಯತೆ ನೀಡುತ್ತಿರುವರು. ವಸತಿ ಶಾಲೆಗಳಲ್ಲಿ ಮಕ್ಕಳು ಸದಾಕಾಲ ಶಿಕ್ಷಕರ ಕಣ್ಗಾವಲಿನಲ್ಲಿ ಇರುವುದರಿಂದ ದಿನಪೂರ್ತಿ ಪಠ್ಯಪುಸ್ತಕಗಳ ಓದು ಮತ್ತು ಇನ್ನಿತರ ಶೈಕ್ಷಣಿಕ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಲು ಸಾಧ್ಯವಾಗುತ್ತದೆ. ಬಿಡುವಿನ ಅವಧಿ ಕಡಿಮೆ ಇರುವುದರಿಂದ ಮಕ್ಕಳ ಸಮಯ ವ್ಯರ್ಥ ಆಗಲಾರದು ಎನ್ನುವ ದೂರಾಲೋಚನೆ ಪಾಲಕರದು. ಜೂನ್ ತಿಂಗಳು ಆರಂಭವಾಗುತ್ತಿದ್ದಂತೆ ಮಕ್ಕಳ ಓದಿಗೆ ಅನುಕೂಲವಾಗಲೆಂದು ಕೇಂದ್ರೀಯ ಪಠ್ಯಕ್ರಮದ ಅತ್ಯುತ್ತಮ ಖಾಸಗಿ ಶಾಲೆಗಳಿರುವ ನಗರಗಳಿಗೆ ವರ್ಗ ಮಾಡಿಸಿಕೊಳ್ಳಲು ಬಯಸುವ ನೌಕರರ ಸಂಖ್ಯೆಯೂ ಕಡಿಮೆ ಇಲ್ಲ.

ಗುಣಮಟ್ಟದ ಶಿಕ್ಷಣಕ್ಕಾಗಿ ಖಾಸಗಿ ಶಾಲೆಗಳನ್ನು ಹುಡುಕಿಕೊಂಡು ಹೋಗುತ್ತಿರುವ ಈ ಪ್ರಕ್ರಿಯೆಯನ್ನು ‘ಶೈಕ್ಷಣಿಕ ವಲಸೆ’ ಎಂದು ಹೆಸರಿಸಬಹುದು. ಸರ್ಕಾರದ ಬಹುದೊಡ್ಡ ಶಿಕ್ಷಣ ವ್ಯವಸ್ಥೆ ಅಸ್ತಿತ್ವದಲ್ಲಿದ್ದರೂ ಖಾಸಗಿ ಶಿಕ್ಷಣ ಸಂಸ್ಥೆಗಳತ್ತ ಮಕ್ಕಳ ವಲಸೆಗೆ ಕಾರಣವೇನು? ಇದಕ್ಕೆ ಹೆಚ್ಚಿನ ಪಾಲಕರು ಕೊಡುವ ಕಾರಣ, ಸರ್ಕಾರಿ ಶಾಲೆಗಳಲ್ಲಿ ಗುಣಮಟ್ಟದ ಶಿಕ್ಷಣ ದೊರೆಯುತ್ತಿಲ್ಲ ಎನ್ನುವುದಾಗಿದೆ. ಉಚಿತ ಶಿಕ್ಷಣ, ಬಿಸಿಯೂಟ, ಕರ್ನಾಟಕ ಪಬ್ಲಿಕ್ ಶಾಲೆ ಯೋಜನೆಯಡಿ ಶಿಕ್ಷಣದ ಬಲವರ್ಧನೆ– ಹೀಗೆ ಸರ್ಕಾರ ಪ್ರಯತ್ನಿಸುತ್ತಿದ್ದರೂ, ಸರ್ಕಾರಿ ಶಾಲೆಗಳಲ್ಲಿನ ಗುಣಾತ್ಮಕ ಶಿಕ್ಷಣದ ಕೊರತೆ ಬಗ್ಗೆ ಪೋಷಕರ ಅಪನಂಬಿಕೆ ಕಣ್ಣಿಗೆ ಢಾಳಾಗಿ ಗೋಚರಿಸುತ್ತಿದೆ.

ಖಾಸಗಿ ಶಾಲೆಗಳಲ್ಲಿ ಸುಸಜ್ಜಿತ ಶಾಲಾ ಕಟ್ಟಡ, ಆಧುನಿಕ ಬೋಧನಾ ಕೊಠಡಿಗಳು, ಪ್ರಯೋಗಾಲಯ, ಗ್ರಂಥಾಲಯ, ಉನ್ನತ ಶಿಕ್ಷಣದ ವಿದ್ಯಾರ್ಹತೆ ಹೊಂದಿರುವ ಶಿಕ್ಷಕರು– ಈ ಎಲ್ಲ ಅನುಕೂಲಗಳಿವೆ. ವಿದ್ಯಾರ್ಥಿಗಳ ಬುದ್ಧಿಮತ್ತೆ ಆಧರಿಸಿ ‘ಕೆನೆಪದರ’ (ಕ್ರೀಮಿ ಲೇಯರ್) ಎಂಬ ಪ್ರತ್ಯೇಕ ತರಗತಿಗಳಿರುತ್ತವೆ. ಆ ತರಗತಿಗಳಲ್ಲಿ ಅತಿಜಾಣ ವಿದ್ಯಾರ್ಥಿಗಳು ಮಾತ್ರವಿದ್ದು, ಅವರಿಗೆ ವಿಶೇಷ ಬೋಧನಾ ವ್ಯವಸ್ಥೆ ಇರುತ್ತದೆ. ಪ್ರೌಢಶಾಲಾ ಹಂತದಲ್ಲೇ ವಿದ್ಯಾರ್ಥಿಗಳಿಗೆ ನೀಟ್ ಮತ್ತು ಜೆಇಇ ಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತಿಯನ್ನು ನೀಡಲಾಗುತ್ತದೆ. ಈ ಎಲ್ಲ ಸೌಲಭ್ಯಗಳು ಸರ್ಕಾರದ ಶಾಲೆಗಳಲ್ಲಿಲ್ಲ ಎನ್ನುವ ಆರೋಪ ಪಾಲಕರದಾಗಿದೆ. ತಮ್ಮ ಮಕ್ಕಳನ್ನು ತಾವು ಬೋಧಿಸುವ ಶಾಲೆಗಳಲ್ಲೇ ದಾಖಲಿಸುವ ಸರ್ಕಾರಿ ಶಾಲೆಗಳ ಶಿಕ್ಷಕರ ಸಂಖ್ಯೆ ಎಷ್ಟಿದೆ ಎನ್ನುವ ಪ್ರಶ್ನೆಗೆ ಉತ್ತರವೂ ಆಶಾದಾಯಕವಾಗಿಲ್ಲ. ಸರ್ಕಾರಿ ಶಾಲೆಗಳ ಶಿಕ್ಷಕರಿಗೇ ಅಲ್ಲಿನ ಗುಣಮಟ್ಟದ ಕುರಿತು ವಿಶ್ವಾಸವಿಲ್ಲ.

ನಾಲ್ಕು ದಶಕಗಳ ಹಿಂದೆ ನಾನು ಮತ್ತು ನನ್ನ ವಯೋಮಾನದವರು ಸರ್ಕಾರದ ಕನ್ನಡ ಶಾಲೆಗಳಲ್ಲಿ ಓದುತ್ತಿದ್ದ ದಿನಗಳ ಅಂದಿನ ಶೈಕ್ಷಣಿಕ ಮತ್ತು ಸಾಮಾಜಿಕ ವಾತಾವರಣಕ್ಕೂ ಇಂದಿನ ಸನ್ನಿವೇಶಕ್ಕೂ ಸಾಕಷ್ಟು ವ್ಯತ್ಯಾಸವಿದೆ. ಆಗ ಖಾಸಗಿ ಶಾಲೆಗಳ ಸಂಖ್ಯೆ ಕಡಿಮೆ ಇದ್ದು, ಪಾಲಕರಿಗೆ ಆಯ್ಕೆಗಳಿರಲಿಲ್ಲ. ಶಿಕ್ಷಣ ಎನ್ನುವುದು ವಿದ್ಯೆ ಕಲಿತು ಹಣಗಳಿಸುವ ಕ್ಷೇತ್ರ ಎನ್ನುವ ಮನೋಭಾವ ಅಂದಿನ ಪಾಲಕರದಾಗಿರಲಿಲ್ಲ. ಓದಿನ ನಂತರ ವಿದ್ಯಾವಂತ ಯುವಕರು ಒಕ್ಕಲುತನದಲ್ಲಿ ತೊಡಗಿಸಿಕೊಂಡಿರುವುದಕ್ಕೆ ಸಾಕಷ್ಟು ಉದಾಹರಣೆಗಳಿವೆ.

ಪ್ರಸ್ತುತ ದಿನಗಳಲ್ಲಿ ಮಕ್ಕಳು ಉತ್ತಮ ಶಿಕ್ಷಣ ಪಡೆದು ವೈದ್ಯ, ಎಂಜಿನಿಯರ್, ಸರ್ಕಾರಿ ಅಧಿಕಾರಿಗಳಾಗಿ ಹಣಗಳಿಸಬೇಕೆಂಬ ಮನೋಭಾವ ಪಾಲಕರಲ್ಲಿ ಬಲವಾಗಿದೆ. ಮಕ್ಕಳ ಶಿಕ್ಷಣದ ಮೇಲೆ ಮಾಡುತ್ತಿರುವ ಖರ್ಚನ್ನು ಅವರು ಬಂಡವಾಳ ಹೂಡಿಕೆ ಎಂದು ಪರಿಗಣಿಸಿರುವರು. ಹೂಡಿದ ಬಂಡವಾಳದಿಂದ ಭವಿಷ್ಯದಲ್ಲಿ ಲಾಭಗಳಿಸುವ ಆಸೆ ಅವರದು. ಮಕ್ಕಳನ್ನು ಭೌತಿಕ ಸಂಪತ್ತೆಂದು ಪರಿಗಣಿಸುತ್ತಿರುವ ಪಾಲಕರ ಉದ್ದೇಶ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ಒದಗಿಸುವುದಾಗಿದೆ. ಈ ಉದ್ದೇಶ ಸಾಧನೆಗಾಗಿ ಅವರೆಂದೂ ರಾಜಿ ಮಾಡಿಕೊಳ್ಳಲು ಬಯಸುವುದಿಲ್ಲ.

ಪ್ರಸ್ತುತ ಸರ್ಕಾರಿ ಶಾಲೆಗಳೆಂಬ ಕೃಪಾಪೋಷಿತ ಮಂಡಳಿಗಳ ಫಲಾನುಭವಿಗಳಾಗಿ ಉಳಿದಿರುವವರು ಬಡವರ ಮಕ್ಕಳು ಮಾತ್ರ ಎನ್ನುವುದು ಕಟುಸತ್ಯ. ‘ಶೈಕ್ಷಣಿಕ ವಲಸೆ’ಯ ಈ ಕಾಲದಲ್ಲಿ ಹಣಕಾಸಿನ ಮುಗ್ಗಟ್ಟಿನಿಂದ ಅನಿವಾರ್ಯವಾಗಿ ಸರ್ಕಾರಿ ಶಾಲೆಗಳಲ್ಲೇ ನೆಲೆನಿಂತಿರುವ ಬಡಮಕ್ಕಳು ಗುಣಾತ್ಮಕ ಶಿಕ್ಷಣದ ನಿರೀಕ್ಷೆಯಲ್ಲಿದ್ದಾರೆ. ಈ ಬಡಮಕ್ಕಳಲ್ಲೂ ಆಸೆ ಮತ್ತು ಕನಸುಗಳಿಗೆ ಬರವಿಲ್ಲ. ಒಂದಿಷ್ಟು ಭೌತಿಕ ಬದಲಾವಣೆಗಳೊಂದಿಗೆ ಹಲವು ಶಾಲೆಗಳನ್ನು ವಿಲೀನಗೊಳಿಸಿ ಹೊಸ ಹೆಸರಿನಿಂದ ಕರೆದರೂ ಆತ್ಮ ಹಳೆಯದೇ ಆಗಿದೆ. ಬಡಮಕ್ಕಳ ಕನಸುಗಳನ್ನು ನನಸಾಗಿಸಲು ಪ್ರಾಮಾಣಿಕವಾಗಿ ಪ್ರಯತ್ನಿಸುವುದು ಸರ್ಕಾರದ ಸಾಮಾಜಿಕ ಮತ್ತು ನೈತಿಕ ಜವಾಬ್ದಾರಿ.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. To know more about The Printers (Mysore) Private Ltd, visit www.printersmysore.com.

ಹವಾಮಾನ ಬದಲಾವಣೆ ಬೇಕಿದೆ ಕ್ಷಿಪ್ರ ಕಾರ್ಯಯೋಜನೆ

ಪ್ರಜಾವಾಣಿ ವಾರ್ತೆ

‘ಭೂಮಿ ನಮ್ಮೊಂದಿಗೆ ವಾದ ಮಾಡುವುದಿಲ್ಲ. ಚೌಕಾಶಿ ಮಾಡುವುದಿಲ್ಲ. ಕೇವಲ ಸಂದೇಶಗಳನ್ನಷ್ಟೇ ಕಳಿಸುತ್ತದೆ. ಆ ಸಂದೇಶಗಳು ಉಗ್ರವಾಗಿರುತ್ತವೆ; ಸಮುದ್ರದ ಮಟ್ಟ ಏರುತ್ತಿದೆ. ಕಾಳ್ಗಿಚ್ಚು ವ್ಯಾಪಿಸುತ್ತಿದೆ. ಬಿಸಿಗಾಳಿ ಹೆಚ್ಚುತ್ತಿದೆ. ನೀರ್ಗಲ್ಲುಗಳು (ಗ್ಲೇಸಿಯರ್) ಕರಗುತ್ತಿವೆ. ಇವುಗಳಿಗೆ ಮನುಷ್ಯ ಪ್ರತಿಕ್ರಿಯಿಸಬೇಕಿದೆ. ಜಗತ್ತು ಎಷ್ಟು ಬೇಗ ಮತ್ತು ಹೇಗೆ ಪ್ರತಿಕ್ರಿಯಿಸಲಿದೆ ಎನ್ನುವುದು ಬಹಳ ಮುಖ್ಯವಾಗಿದೆ’.

–ಇದು ‘ವಿಶ್ವ ಪರಿಸರ’ಕ್ಕೆ ದಿನಕ್ಕೆ ವಿಶ್ವಸಂಸ್ಥೆ ನೀಡಿರುವ ಸಂದೇಶ. ಕ್ಷಿಪ್ರವಾಗಿ ಕಾರ್ಯಪ್ರವೃತ್ತರಾಗಬೇಕು ಎಂದು ವಿಶ್ವಸಂಸ್ಥೆ ಕರೆ ನೀಡಲು ಕಾರಣಗಳಿವೆ. ಜಾಗತಿಕ ಮಟ್ಟದಲ್ಲಿ ಹವಾಮಾನ ಬದಲಾವಣೆಯ ಪರಿಣಾಮಗಳು ತೀವ್ರವಾಗಿ ಕಾಣಿಸಿಕೊಳ್ಳುತ್ತಿದ್ದು, ಈ ದಿಸೆಯಲ್ಲಿ ಹವಾಮಾನ ಕ್ರಿಯಾಯೋಜನೆ ರೂಪಿಸಬೇಕಾದ ತುರ್ತು ಎದುರಾಗಿದೆ. ಪ್ರತಿಯೊಬ್ಬರೂ ಅದರ ಭಾಗವಾಗಬೇಕಿದೆ.

ಹವಾಮಾನ ಬದಲಾವಣೆ, ಓಝೋನ್ ಪದರದ ಸವಕಳಿ, ಸಾಗರದ ಆಮ್ಲೀಕರಣ, ಜೀವ ವೈವಿಧ್ಯದ ನಷ್ಟ, ಭೂ ವ್ಯವಸ್ಥೆಯ ಬದಲಾವಣೆ ಮುಂತಾದ ಅಂಶಗಳಲ್ಲಿ (ಪ್ಲಾನೆಟರಿ ಬೌಂಡರೀಸ್) ನಿರ್ದಿಷ್ಟ ಮಿತಿ ದಾಟದಿದ್ದುದೇ ಭೂಮಿ ಮೇಲೆ ಜೀವಿ ವ್ಯವಸ್ಥೆ ಉಳಿಯಲು ಕಾರಣವಾಗಿದೆ. ಈ ಮಿತಿ ದಾಟುವುದು ಅಪಾಯಕಾರಿ. ಆದರೆ, ಜಾಗತಿಕ ಮಟ್ಟದಲ್ಲಿ ಈ ಮಿತಿಗಳನ್ನು ಈಗಾಗಲೇ ಉಲ್ಲಂಘಿಸಲಾಗಿದೆ ಎಂದು ಪ್ಲಾನೆಟರಿ ಹೆಲ್ತ್ ಚೆಕ್ ರಿಪೋರ್ಟ್ (2025) ವರದಿ ತಿಳಿಸಿದೆ. ಇವುಗಳಲ್ಲಿ ಹವಾಮಾನ ಬದಲಾವಣೆಯು ಅತ್ಯಂತ ಪ್ರಮುಖ ಅಂಶವಾಗಿದ್ದು, ಇದು ಇತರೆ ಅಂಶಗಳನ್ನೂ ಪ್ರಭಾವಿಸುತ್ತಿದೆ. ಹವಾಮಾನ ಬದಲಾವಣೆಯು ಬಗ್ಗೆ ಎಚ್ಚೆತ್ತುಕೊಳ್ಳಬೇಕಾದ ಅಗತ್ಯದತ್ತ ವರದಿ ಗಮನ ಸೆಳೆಯುತ್ತಿದೆ.

ಭಾರತಕ್ಕೆ 9ನೇ ಸ್ಥಾನ: ಹವಾಮಾನ ಬದಲಾವಣೆಯು ಭೂಮಿ ಮೇಲಿನ ಜೀವಿ ವ್ಯವಸ್ಥೆಯನ್ನು ಅಸ್ಥಿರಗೊಳಿಸುತ್ತಿದೆ. ಇದು ಜಾಗತಿಕ ಮಟ್ಟದ ವಿದ್ಯಮಾನ. ಆದರೆ, ಇದರ ಪ್ರಮಾಣವು ಭಾರತದಲ್ಲಿ ಹೆಚ್ಚಾಗಿದೆ. ‘ಜರ್ಮನ್‌ವಾಚ್’ ಬಿಡುಗಡೆ ಮಾಡಿರುವ ಹವಾಮಾನ ಅಪಾಯ ಸೂಚ್ಯಂಕ (ಕ್ಲೈಮೇಟ್ ರಿಸ್ಕ್ ಇಂಡೆಕ್ಸ್–2026) ಪ್ರಕಾರ, ಹವಾಮಾನ ಅಪಾಯದ ಸಾಧ್ಯತೆಗಳ ಜಾಗತಿಕ ಪಟ್ಟಿಯಲ್ಲಿ ಭಾರತವು ಒಂಬತ್ತನೇ ಸ್ಥಾನ ಪಡೆದಿದೆ.


2025ರ ಜನವರಿ ಮತ್ತು ನವೆಂಬರ್ ನಡುವೆ ಭಾರತವು ಶೇ 99ರಷ್ಟು ದಿನಗಳಲ್ಲಿ ಪ್ರಕೃತಿ ವೈಪರೀತ್ಯಗಳನ್ನು ಕಂಡಿದೆ. ಬಿಸಿಗಾಳಿ, ಶೀತ ಮಾರುತ, ಪ್ರವಾಹ, ಚಂಡಮಾರುತ ಇವು ದೇಶದಲ್ಲಿ ಒಟ್ಟು 4,419 ಮಂದಿಯ ಸಾವಿಗೆ ಕಾರಣವಾದರೆ, ಸುಮಾರು 1.74 ಕೋಟಿ ಹೆಕ್ಟೇರ್ ಪ್ರದೇಶದಲ್ಲಿನ ಬೆಳೆ ಹಾನಿ ಮಾಡಿವೆ. ಜತೆಗೆ, 77,189 ಪ್ರಾಣಿಗಳ ಸಾವಿಗೆ ಮತ್ತು 1,81,459 ಮನೆಗಳ ಹಾನಿಗೂ ಕಾರಣವಾಗಿವೆ. 2026ರ ಮೇ ತಿಂಗಳಲ್ಲಿ ದೇಶದಾದ್ಯಂತ ತೀವ್ರ ಸ್ವರೂಪದ ಬಿಸಿಗಾಳಿ ಕಾಣಿಸಿಕೊಂಡಿತ್ತು. ಏಪ್ರಿಲ್ 27ರಂದು ಜಗತ್ತಿನ ಅತ್ಯಂತ ಹೆಚ್ಚಿನ ಉಷ್ಣಾಂಶ ದಾಖಲಾದ 50 ನಗರಗಳೂ ಭಾರತದವೇ ಆಗಿದ್ದವು.

ಹವಾಮಾನ ಬದಲಾವಣೆ ಎನ್ನುವುದು ಕೇವಲ ಪರಿಸರಕ್ಕೆ ಸಂಬಂಧಿಸಿದ ವಿಚಾರ, ಭಾರತದ ಜನರ ದೈನಂದಿನ ಬದುಕಿಗೆ ಅದರಿಂದ ತೊಂದರೆಯಿಲ್ಲ ಎನ್ನುವ ದಿನಗಳು ಮುಗಿದಿವೆ. ಅದರ ಪರಿಣಾಮಗಳು ಜನರ ಮನೆ ಬಾಗಿಲಿಗೆ ಬಂದಿದ್ದು, ಜನ ಮತ್ತು ಸರ್ಕಾರಗಳು ತಕ್ಷಣವೇ ಕಾರ್ಯಪ್ರವೃತ್ತರಾಗಬೇಕಾಗಿದೆ ಎಂದು ತಜ್ಞರು ಎಚ್ಚರಿಸಿದ್ದಾರೆ.

ಆಧಾರ: ಪಿಟಿಐ, ವಿಶ್ವಸಂಸ್ಥೆ ವೆಬ್‌ಸೈಟ್, ಡೌನ್ ಟು ಅರ್ಥ್, ಪಿಐಬಿ, ನೀತಿ ಆಯೋಗದ ದತ್ತಾಂಶಗಳು

ತಾಯಿ ಹೆಸರಿನಲ್ಲಿ ಒಂದು ಮರ

ಪ್ರಧಾನಿ ನರೇಂದ್ರ ಮೋದಿ ಅವರು 2024ರಲ್ಲಿ ‘ಏಕ್ ಪೇಡ್ ಮಾ ಕೇ ನಾಮ್’ (ತಾಯಿಯ ಹೆಸರಿನಲ್ಲಿ ಒಂದು ಮರ) ಎಂಬ ಅಭಿಯಾನಕ್ಕೆ ಚಾಲನೆ ನೀಡಿದ್ದರು. ಈ ಕಾರ್ಯಕ್ರಮದ ಅಡಿಯಲ್ಲಿ 2025ರ ಡಿ.31ರವರೆಗೆ ದೇಶದಾದ್ಯಂತ 262.4 ಕೋಟಿ ಗಿಡಗಳನ್ನು ನೆಡಲಾಗಿದೆ. ಗಿಡ ನೆಡುವ ಚಟುವಟಿಕೆಗಳನ್ನು ‘ಮೇರಿ ಲೈಫ್ ಪೋರ್ಟಲ್’ ಮೂಲಕ ಉಸ್ತುವಾರಿ ಮಾಡಲಾಗುತ್ತಿದೆ ಎಂದು ಸರ್ಕಾರ ಹೇಳಿದೆ.



ದಕ್ಷಿಣ ಏಷ್ಯಾದಲ್ಲಿ ಬಿಕ್ಕಟ್ಟು ತೀವ್ರ

ಇತ್ತೀಚಿನ ವರ್ಷಗಳಲ್ಲಿ ಭಾರತದಲ್ಲಿ ದೀರ್ಘಕಾಲದ ಮತ್ತು ತೀವ್ರವಾದ ತಾಪಮಾನ ಏರಿಕೆ ಸಾಮಾನ್ಯ ಎನ್ನುವಂತಾಗಿದೆ. ಜಾಗತಿಕ ಹವಾಮಾನ ಸಂಸ್ಥೆ ಪ್ರಕಾರ, ದಕ್ಷಿಣ ಏಷ್ಯಾದಲ್ಲಿ ಜಾಗತಿಕ ಸರಾಸರಿಗಿಂತ ವೇಗವಾಗಿ ತಾಪಮಾನವು ಹೆಚ್ಚಾಗುತ್ತಿದೆ. ಇದರಿಂದ ಬಿಸಿಗಾಳಿಯ ದಿನಗಳು ಹೆಚ್ಚಾಗಿ ಕಾಣಿಸಿಕೊಳ್ಳುತ್ತಿವೆ. ಅಂತರ್ಜಲ ಕುಸಿತ, ಅರಣ್ಯ ನಾಶ, ನಗರೀಕರಣದಿಂದ ಬಿಕ್ಕಟ್ಟು ಉಲ್ಬಣಿಸುತ್ತಿದೆ. ಕೋಲ್ಕತ್ತ, ದೆಹಲಿ, ಅಹಮದಾಬಾದ್ ಮತ್ತು ಹೈದರಾಬಾದ್‌ನಂಥ ನಗರಗಳು ತೀವ್ರವಾದ ಬಿಸಿಗಾಳಿ ಎದುರಿಸಿವೆ. ಈ ಬೇಸಿಗೆಯಲ್ಲಿ ಬೆಂಗಳೂರಿನ ತಾಪಮಾನ ಕೂಡ ಹೆಚ್ಚಾಗಿ, ಜನರನ್ನು ಬಸವಳಿಯುವಂತೆ ಮಾಡಿತು. ಜನರ ಆರೋಗ್ಯದ ಮೇಲೂ ಇದು ವ್ಯತಿರಿಕ್ತ ಪರಿಣಾಮ ಬೀರುತ್ತಿದ್ದು, ಕೆಲಸದ ಸಾಮರ್ಥ್ಯ ಕುಸಿತ, ಮಾನಸಿಕ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಕರಾವಳಿ ತೀರಪ್ರದೇಶ ಸೇರಿದಂತೆ ದೇಶದ ಗ್ರಾಮೀಣ ಪ್ರದೇಶಗಳಲ್ಲಿ ಜನರು ಹಲವು ಸಂಕಷ್ಟಗಳನ್ನು ಅನುಭವಿಸುತ್ತಿದ್ದಾರೆ.

ಪ್ರಜಾವಾಣಿ– ಡೆಕ್ಕನ್ ಹೆರಾಲ್ಡ್ ನೆರವು ನಿಧಿ

ಎಸ್‌ಎಸ್‌ಎಲ್‌ಸಿಯಲ್ಲಿ ಉನ್ನತ ಶ್ರೇಣಿಯಲ್ಲಿ ಪಾಸಾಗಿರುವ ಬಡ ವಿದ್ಯಾರ್ಥಿಗಳಿಗೆ ದಾನಿಗಳ ನೆರವಿನಿಂದ ಪ್ರಜಾವಾಣಿ– ಡೆಕ್ಕನ್ ಹೆರಾಲ್ಡ್ ಪತ್ರಿಕೆಗಳು ಆರ್ಥಿಕ ನೆರವು ನೀಡಲಿವೆ. ಇದಕ್ಕಾಗಿ ದಾನಿಗಳು ಆನ್‌ಲೈನ್ ಮೂಲಕ ಹಣವನ್ನು 'Deccan Herald- Prajavani Relief Trust'ಗೆ ಕಳುಹಿಸಬಹುದು.

₹ 5,000ಕ್ಕಿಂತ ಹೆಚ್ಚು ಹಣ ನೀಡುವವರ ಹೆಸರನ್ನು ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದು. ದಾನ ನೀಡಿದ ಹಣಕ್ಕೆ 2025ನೇ ಸಾಲಿನ ಆದಾಯ ತೆರಿಗೆ ಕಾಯ್ದೆಯ ಸೆಕ್ಷನ್ 133ರ ಅನ್ವಯ ಆದಾಯ ತೆರಿಗೆ ವಿನಾಯಿತಿ ಇದೆ.

ಆನ್‌ಲೈನ್‌ನಲ್ಲಿ ಹಣ ಸಂದಾಯ ಮಾಡುವವರು ಪಕ್ಕದಲ್ಲಿರುವ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ ಅಥವಾ ಲಿಂಕ್ ಬಳಸಿ. ಚೆಕ್, ನಗದು ಮತ್ತು ಡಿ.ಡಿ ಸ್ವೀಕರಿಸುವುದಿಲ್ಲ.

https://bit.ly/3xFpoz4

ಇತರರಿಗೂ ಮಾದರಿ



‘ಪ್ರಜಾವಾಣಿ’ ಪತ್ರಿಕೆ ನೀಡಿದ ವಿದ್ಯಾರ್ಥಿವೇತನದಿಂದ ಕಾಲೇಜಿನ ಶುಲ್ಕ ಕಟ್ಟಿ, ಉಳಿದ ಹಣದಲ್ಲಿ ಪಠ್ಯಪುಸ್ತಕ, ಸಮವಸ್ತ್ರ ಖರೀದಿಸಿದೆ. ಆರ್ಥಿಕವಾಗಿ ಹಿಂದುಳಿದ ಕುಟುಂಬಗಳ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಪತ್ರಿಕೆ ನೀಡುತ್ತಿರುವ ವಿದ್ಯಾರ್ಥಿವೇತನ ಬಹಳಷ್ಟು ಅನುಕೂಲವಾಗುತ್ತಿದೆ. ಇದು ಇತರರಿಗೂ ಮಾದರಿ.

ಶುಭಾ ಪಿ.ಕೆ, ಕೆ.ಬಿದರೆ, ಚಿಕ್ಕಮಗಳೂರು

‘ಪಾಲಕರ ಒತ್ತಡ ತಗ್ಗಿಸಿತು’



ನಾನು ಡಿಪ್ಲೊಮಾದಲ್ಲಿ ಕಂಪ್ಯೂಟರ್ ಸೈನ್ಸ್ ಓದುತ್ತಿರುವೆ. ‘ಪ್ರಜಾವಾಣಿ’ ವಿದ್ಯಾರ್ಥಿವೇತನವು ಪುಸ್ತಕಗಳನ್ನು ಖರೀದಿ, ಅಸೈನ್ಮೆಂಟ್ ಸಾಮಗ್ರಿ, ಪ್ರಾಜೆಕ್ಟ್‌ಗಳ ಸಲಕರಣೆ, ವರ್ಕ್ ಶೀಟ್‌ಗಳ ಖರೀದಿಗೆ ತುಂಬಾ ನೆರವಾಯಿತು. ಜೊತೆಗೆ ನಮ್ಮ ಪಾಲಕರ ಮೇಲಿನ ಆರ್ಥಿಕ ಒತ್ತಡವನ್ನೂ ತಗ್ಗಿಸಿತು. ಪ್ರಜಾವಾಣಿ ನೆರವಿಗೆ ಧನ್ಯವಾದಗಳು.

ಸುಮಿತ್ ಬೆಳಕೇರ, ಭವಾನಿ ನಗರ, ಕಲಬುರಗಿ

ಮಹಿಳೆಯರ ಮೇಲೆ ಹೆಚ್ಚು ಪರಿಣಾಮ

ಕೃಷಿ ಕೂಲಿ ಕಾರ್ಮಿಕರು, ಮನೆಗೆಲಸ ಮಾಡುವವರು, ನೈರ್ಮಲ್ಯ ಸಂಬಂಧಿತ ಕೆಲಸಗಳಲ್ಲಿರುವವರು, ನಿರ್ಮಾಣ ಕ್ಷೇತ್ರದಲ್ಲಿರುವವರು, ಉತ್ಪಾದನಾ ವಲಯದಲ್ಲಿ ತೊಡಗಿರುವ ಮಹಿಳೆಯರು– ಹೀಗೆ ಅಸಂಘಟಿತ ವಲಯದಲ್ಲಿ ಕೆಲಸ ಮಾಡುತ್ತಿರುವ ಮಹಿಳೆಯರು ಬಿಸಿಗಾಳಿ, ಚಳಿ, ಮಳೆ ಮುಂತಾದ ಹವಾಮಾನ ವೈಪರೀತ್ಯದ ಪರಿಣಾಮಗಳಿಗೆ ಹೆಚ್ಚು ಗುರಿಯಾಗುತ್ತಿದ್ದಾರೆ. ಗ್ರಾಮೀಣ ಪ್ರದೇಶದ, ಅದರಲ್ಲೂ ಕೃಷಿ ಕಾರ್ಯದಲ್ಲಿ ತೊಡಗಿರುವ ಮಹಿಳೆಯರು ಕೂಡ ಇದರ ಸಂತ್ರಸ್ತರಾಗಿದ್ದಾರೆ. ದೀರ್ಘಕಾಲ ಬಯಲಿನಲ್ಲಿ ಅಥವಾ ಹೊರವಲಯದಲ್ಲಿ ಕೆಲಸ ಮಾಡುವವರು ಹೆಚ್ಚು ಸಮಸ್ಯೆ ಎದುರಿಸುತ್ತಿದ್ದಾರೆ. ಪ್ರಕೃತಿ ವಿಕೋಪಗಳು ಗರ್ಭಿಣಿ ಮಹಿಳೆಯರ ಮೇಲೆ ತೀವ್ರ ಪರಿಣಾಮ ಉಂಟುಮಾಡುತ್ತಿವೆ.

ತಾಪಮಾನ ಏರಿಕೆ ಸೇರಿದಂತೆ ಹವಾಮಾನ ಬದಲಾವಣೆಯ ಪರಿಣಾಮಗಳನ್ನು ಎದುರಿಸುವ ದಿಸೆಯಲ್ಲಿ ಭಾರತದಲ್ಲಿ ಹಲವು ಪ್ರಯತ್ನಗಳು ನಡೆಯುತ್ತಿವೆ. ಅಹಮದಾಬಾದ್, ದೆಹಲಿ ಮತ್ತು ನಾಗ್ಪುರದಲ್ಲಿ ಹವಾಮಾನ ಕ್ರಿಯಾ ಯೋಜನೆ ರೂಪಿಸಲಾಗಿದೆ. ಪ್ರಕೃತಿ ವಿಕೋಪಗಳ ಬಗ್ಗೆ ಮುಂಚಿತ ಎಚ್ಚರಿಕೆ ನೀಡುವ ವ್ಯವಸ್ಥೆ, ಸಾರ್ವಜನಿಕರಿಗೆ ಅರಿವು ಮೂಡಿಸುವುದು, ಕ್ಷಿಪ್ರ ಪರಿಹಾರ ಪಡೆಗಳನ್ನು ಸಜ್ಜುಗೊಳಿಸಲಾಗಿದೆ. ಆದರೆ, ಹವಾಮಾನ ಬದಲಾವಣೆಯ ಪರಿಹಾರ ಕಾರ್ಯಗಳನ್ನು ರೂಪಿಸುವಾಗ ಮಹಿಳೆಯರಿಗೆ ವಿಶೇಷವಾದ ಆದ್ಯತೆ ನೀಡುತ್ತಿಲ್ಲ ಎನ್ನುವ ವಾದವೂ ಇದೆ. ಹವಾಮಾನ ಬದಲಾವಣೆಯು ಮಹಿಳೆಯರ ಮೇಲೆ ಹೆಚ್ಚು ಪರಿಣಾಮ ಬೀರುತ್ತಿರುವುದರಿಂದ, ಅದರ ಪರಿಹಾರ ಕಾರ್ಯಗಳು ಕೂಡ ಮಹಿಳಾಕೇಂದ್ರಿತವಾಗಿಯೇ ಇರಬೇಕು ಎನ್ನುವುದು ಅವರ ವಾದದ ತಿರುಳು.

ಶೂನ್ಯ ಇಂಗಾಲ @2070

2070ರ ಹೊತ್ತಿಗೆ ದೇಶದಲ್ಲಿ ಹಸಿರು ಮನೆ ಅನಿಲಗಳ (ಇಂಗಾಲ) ಹೊರಸೂಸುವಿಕೆಯ ಪ್ರಮಾಣವನ್ನು ಶೂನ್ಯಕ್ಕೆ ಇಳಿಸುವ ಗುರಿಯನ್ನು (ನೆಟ್–ಝೀರೋ) ಭಾರತ ಹೊಂದಿದೆ. ಈ ದಿಸೆಯಲ್ಲಿ, ಇಂಗಾಲದ ಉಗುಳುವಿಕೆಗೆ ಕಾರಣವಾಗುವ ಪಳೆಯುಳಿಕೆ ಇಂಧನಗಳ ಬಳಕೆಯನ್ನು ಕಡಿಮೆಗೊಳಿಸಿ, ಪರಿಸರಸ್ನೇಹಿ ಇಂಧನಕ್ಕೆ ಉತ್ತೇಜನ ನೀಡಲು ಗುರಿ ನಿರ್ದೇಶಿತ ಕಾರ್ಯಕ್ರಮಗಳನ್ನು ರೂಪಿಸಿದೆ.

ಪ್ಯಾರಿಸ್ ಒಪ್ಪಂದದ ಅಡಿಯಲ್ಲಿ ಭಾರತ ಕೂಡ ಹಸಿರುಮನೆ ಅನಿಲದ ಹೊರಸೂಸುವಿಕೆ ಕಡಿಮೆಗೊಳಿಸಲು 2031–2035ರ ಅವಧಿಗೆ ರಾಷ್ಟ್ರ ಮಟ್ಟದ ಒಪ್ಪಿತ ಕ್ರಮಗಳಿಗೆ (ಎನ್‌ಡಿಸಿ) ಕೇಂದ್ರ ಸಚಿವ ಸಂಪುಟ ಈ ವರ್ಷದ ಮಾರ್ಚ್‌ನಲ್ಲಿ ಅನುಮೋದನೆ ನೀಡಿದೆ.

ಅದರ ಪ್ರಕಾರ,


- 2035ರ ವೇಳೆಗೆ ಭಾರತವು ತನ್ನ ಜಿಡಿಪಿಗೆ ಪ್ರತಿಯಾಗಿ ಹಸಿರುಮನೆ ಅನಿಲಗಳ ಹೊರಸೂಸುವಿಕೆ ಪ್ರಮಾಣವನ್ನು 2005ರ ಮಟ್ಟಕ್ಕಿಂತ ಶೇ 47ರಷ್ಟು ಕಡಿಮೆಗೊಳಿಸಲು ಬದ್ಧವಾಗಿದೆ
- 2035ರ ವೇಳೆಗೆ ಪಳೆಯುಳಿಕೆಯೇತರ ಇಂಧನ ಮೂಲಗಳಿಂದ ವಿದ್ಯುತ್ ಉತ್ಪಾದನೆ ಮಾಡುವ ಸಾಮರ್ಥ್ಯವನ್ನು ಶೇ 60ಕ್ಕೆ ಏರಿಸಲಿದೆ
- ಮರ–ಗಿಡಗಳನ್ನು ನೆಟ್ಟು, ಅರಣ್ಯ ಅಭಿವೃದ್ಧಿಯ ಮೂಲಕ ವಾತಾವರಣದಲ್ಲಿನ ಇಂಗಾಲದ ಡೈಆಕ್ಸೈಡ್ ಪ್ರಮಾಣವನ್ನು 350 ಕೋಟಿಯಿಂದ– 400 ಕೋಟಿ ಟನ್‌ಗಳಷ್ಟು ತಗ್ಗಿಸಲಿದೆ

ಭಾರತವು ಪ್ಯಾರಿಸ್ ಒಪ್ಪಂದಕ್ಕೆ ಅನುಗುಣವಾಗಿ 2030ರ ಒಳಗಾಗಿ ಹವಾಮಾನ ಬದಲಾವಣೆ ತಡೆಗಾಗಿ ಸಾಧಿಸಬೇಕಾದ ಗುರಿಗಳಿಗೆ ಸಂಬಂಧಿಸಿದ ಎನ್‌ಡಿಸಿಯನ್ನು 2015ರಲ್ಲಿ ವಿಶ್ವಸಂಸ್ಥೆಗೆ ಸಲ್ಲಿಸಿತ್ತು.


ಅದರಂತೆ ಭಾರತವು 2030ರ ಒಳಗಾಗಿ ಜಿಡಿಪಿಗೆ ಪ್ರತಿಯಾಗಿ ಹಸಿರು ಮನೆ ಅನಿಲಗಳ ಹೊರಸೂಸುಕೆಯನ್ನು ಶೇ 33–ಶೇ 35ರಷ್ಟು ಇಳಿಸುವ ಮತ್ತು ಪಳೆಯುಳಿಕೆಯೇತರ ಇಂಧನ ಮೂಲಗಳಿಂದ ವಿದ್ಯುತ್ ಉತ್ಪಾದನೆ ಮಾಡುವ ಸಾಮರ್ಥ್ಯವನ್ನು ಶೇ 40ಕ್ಕೆ ಹೆಚ್ಚಿಸುವ ಗುರಿಗಳನ್ನು ಹೊಂದಿತ್ತು. ಇವೆರಡನ್ನೂ 11 ವರ್ಷ 9 ತಿಂಗಳ ಮುಂಚಿತವಾಗಿಯೇ (2021ರ ಹೊತ್ತಿಗೆ) ಭಾರತ ಸಾಧಿಸಿದೆ ಎಂದು ಕೇಂದ್ರ ಸರ್ಕಾರ ಹೇಳಿದೆ.

ಇಂಧನ ಮೂಲವಾರು ವಿದ್ಯುತ್ ಉತ್ಪಾದನಾ ಸಾಮರ್ಥ್ಯ

(ಗಿಗಾವಾಟ್‌ಗಳಲ್ಲಿ) (2026 ಏಪ್ರಿಲ್) (ಆವರಣದಲ್ಲಿರುವುದು ಪ್ರಮಾಣ)



ಶುದ್ಧ ಇಂಧನ ಮೂಲದಿಂದ ವಿದ್ಯುತ್ ಉತ್ಪಾದನಾ ಸಾಮರ್ಥ್ಯ ಹೆಚ್ಚಳ (ಗಿಗಾವಾಟ್‌ಗಳಲ್ಲಿ)





ವಿದ್ಯುತ್: ಕಲ್ಲಿದ್ದಲೇ ಮೂಲ

ವಿದ್ಯುತ್ ಉತ್ಪಾದನೆಗೆ ನವೀಕರಿಸಬಹುದಾದ ಪರಿಸರಸ್ನೇಹಿ ಇಂಧನ ಮೂಲ ಬಳಕೆಗೆ ಉತ್ತೇಜನ ನೀಡುತ್ತಿದ್ದರೂ, ಈಗಲೂ ದೇಶದಲ್ಲಿ ವಿದ್ಯುತ್ ಉತ್ಪಾದನೆಗೆ ಕಲ್ಲಿದ್ದಲನ್ನೇ ಹೆಚ್ಚು ಬಳಸಲಾಗುತ್ತಿದೆ.


ಶುದ್ಧ ಇಂಧನಮೂಲಗಳಾದ ಸೌರ ಶಕ್ತಿ, ಜಲಶಕ್ತಿ, ಪವನಶಕ್ತಿ, ಪರಮಾಣು, ಜೈವಿಕ ಶಕ್ತಿಯನ್ನು ಬಳಸಿ ವಿದ್ಯುತ್ ಉತ್ಪಾದನೆ ಮಾಡುವ ಸಾಮರ್ಥ್ಯದಲ್ಲಿ ಗಣನೀಯವಾಗಿ ಹೆಚ್ಚಳವಾಗಿದೆಯಾದರೂ (ಒಟ್ಟು ಸಾಮರ್ಥ್ಯದಲ್ಲಿ ಪಳೆಯುಳಿಕೆಯೇತರ ಇಂಧನ ಮೂಲಗಳಿಂದ ವಿದ್ಯುತ್ ಉತ್ಪಾದನೆ ಸಾಮರ್ಥ್ಯ ಶೇ 53.62ರಷ್ಟು ಇದೆ) ಈ ಮೂಲಗಳಿಂದ ಸಾಮರ್ಥ್ಯಕ್ಕೆ ತಕ್ಕಷ್ಟು ವಿದ್ಯುತ್ ಉತ್ಪಾದನೆಯಾಗುತ್ತಿಲ್ಲ. ಕೇಂದ್ರ ಸರ್ಕಾರದ 2025–26ನೇ ಸಾಲಿನ ಅಂಕಿ ಅಂಶಗಳನ್ನು ಅವಲೋಕಿಸಿದರೆ, ಶೇ 69.56ರಷ್ಟು ವಿದ್ಯುತ್ ಅನ್ನು ಈಗಲೂ ಕಲ್ಲಿದ್ದಲು ಬಳಸಿಯೇ ಉತ್ಪಾದಿಸಲಾಗುತ್ತದೆ. ಕಳೆದ ವರ್ಷ ಉತ್ಪಾದಿಸಲಾದ ಒಟ್ಟು ವಿದ್ಯುತ್‌ನಲ್ಲಿ ಶೇ 1.44ರಷ್ಟನ್ನು ತೈಲ ಮತ್ತು ಅನಿಲ ಬಳಸಿ ಉತ್ಪಾದಿಸಲಾಗಿದೆ.

ನವೀಕರಿಸಬಹುದಾದ ಇಂಧನ ಮೂಲಗಳಿಂದ ಉತ್ಪಾದಿಸಿದ ವಿದ್ಯುತ್ ಪ್ರಮಾಣ ಪ್ರಮಾಣ ಶೇ 29ರಷ್ಟು ಮಾತ್ರ.

ಆದರೆ, ಶುದ್ಧ ಇಂಧನ ಮೂಲಗಳಿಂದ ಉತ್ಪಾದಿಸಲಾಗುತ್ತಿರುವ ವಿದ್ಯುತ್‌ನ ಪ್ರಮಾಣ ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಿದೆ. ಉದಾಹರಣೆಗೆ 2021–22ನೇ ಸಾಲಿನಲ್ಲಿ ಸೌರಶಕ್ತಿಯಿಂದ 7,348 ಕೋಟಿ ಯೂನಿಟ್‌ಗಳಷ್ಟು (1 ಕೋಟಿ ಯೂನಿಟ್ ಎಂದರೆ 10 ಸಾವಿರ ಮೆಗಾವಾಟ್ ಅವರ್) ವಿದ್ಯುತ್ ಉತ್ಪಾದಿಸಿದ್ದರೆ, 2025–26ರಲ್ಲಿ ಅದು 17,476 ಕೋಟಿ ಯೂನಿಟ್‌ಗೆ ಏರಿದೆ. ಅದೇ ರೀತಿ 2021–22ರಲ್ಲಿ ಪವನಶಕ್ತಿ ಬಳಸಿಕೊಂಡು 6,864 ಕೋಟಿ ಯೂನಿಟ್ ವಿದ್ಯುತ್ ಉತ್ಪಾದಿಸಿದ್ದರೆ, 2025–26ರಲ್ಲಿ ಇದು 10,670 ಕೋಟಿ ಯೂನಿಟ್‌ಗಳಿಗೆ ಏರಿದೆ. ಇದೇ ಹೊತ್ತಿನಲ್ಲಿ ಕಲ್ಲಿದ್ದಲು ಬಳಸಿ ಉತ್ಪಾದಿಸುತ್ತಿರುವ ವಿದ್ಯುತ್‌ನ ಪ್ರಮಾಣದಲ್ಲೂ ಏರಿಕೆ ಕಂಡಿದೆ (2024–25ಕ್ಕೆ ಹೋಲಿಸಿದರೆ 2025–26ರಲ್ಲಿ ಮಾತ್ರ ಸ್ವಲ್ಪ ಕಡಿಮೆಯಾಗಿದೆ).

ಯಾವ ಮೂಲದಿಂದ ಎಷ್ಟು ವಿದ್ಯುತ್ ಉತ್ಪಾದನೆ?

(ಕೋಟಿ ಯೂನಿಟ್‌ಗಳಲ್ಲಿ) (2025–26)



ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ಬಾಲಿವುಡ್ ನಟ ಶಾರುಕ್ ಖಾನ್ ಅವರು ಕಾರ್ಯಕ್ರಮವೊಂದರಲ್ಲಿ ಮಾತನಾಡುತ್ತಿರುವ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ತಾವು ‘ಕಾಕ್ರೋಚ್ ಜನತಾ ಪಾರ್ಟಿ’ (ಸಿಜೆಪಿ) ಸೇರಲು ಬಯಸಿರುವುದಾಗಿ ಅವರು ಹೇಳಿದ್ದಾರೆ ಎಂದು ವಿಡಿಯೊ ಹಂಚಿಕೊಳ್ಳುತ್ತಿರುವವರು ಪ್ರತಿಪಾದಿಸಿದ್ದಾರೆ. ಆದರೆ, ಇದು ಸುಳ್ಳು ಪ್ರತಿಪಾದನೆ.



ನಿರ್ದಿಷ್ಟ ಪದದ ಮೂಲಕ ಗೂಗಲ್‌ನಲ್ಲಿ ಹುಡುಕಾಡಿದಾಗ ಶಾರುಕ್ ಖಾನ್ ಕಾಕ್ರೋಚ್ ಜನತಾ ಪಾರ್ಟಿ ಸೇರುವ ಬಗ್ಗೆ ಮಾತನಾಡಿರುವುದನ್ನು ದೃಢಪಡಿಸುವ ಯಾವುದೇ ವರದಿ ಪ್ರಕಟವಾಗಿದ್ದು ಕಾಣಲಿಲ್ಲ. ವಿಡಿಯೊದ ಕೀಫ್ರೇಮ್ ಅನ್ನು ರಿವರ್ಸ್ ಇಮೇಜ್ ಸರ್ಚ್‌ಗೆ ಒಳಪಡಿಸಿದಾಗ, ಹುಡುಕಾಟವು 2023ರ ಆ.30ರಂದು ‘ಸೊಸೌಥ್’ ಯುಟ್ಯೂಬ್ ಚಾನೆಲ್‌ನಲ್ಲಿ ಅಪ್ಲೋಡ್ ಆಗಿರುವ ವಿಡಿಯೊಕ್ಕೆ ಸಂಪರ್ಕ ಕಲ್ಪಿಸಿತು. ಅದು ಶಾರುಕ್ ಖಾನ್ ನಾಯಕ ನಟನಾಗಿದ್ದ ‘ಜವಾನ್’ ಚಿತ್ರದ ಪ್ರೀರಿಲೀಸ್ ಕಾರ್ಯಕ್ರಮದ ವಿಡಿಯೊ ಎಂದು ಉಲ್ಲೇಖಿಸಲಾಗಿತ್ತು. ಕಾರ್ಯಕ್ರಮ ಚೆನ್ನೈನಲ್ಲಿ ನಡೆದಿತ್ತು. ಅದಕ್ಕೆ ಸಂಬಂಧಿಸಿದಂತೆ ಹಲವು ಮಾಧ್ಯಮಗಳಲ್ಲಿ ವರದಿಯೂ ಪ್ರಕಟವಾಗಿರುವುದು ಕಂಡಿತು. ವಿಡಿಯೊ ಅನ್ನು ರಿಸೆಂಬಲ್ ಎಐ ಪತ್ತೆ ಸಾಧನದ ಮೂಲಕ ಪರಿಶೀಲಿಸಿದಾಗ, ವಿಡಿಯೊದಲ್ಲಿ ಶಾರುಕ್ ಖಾನ್ ಧ್ವನಿಯನ್ನು ಬದಲಾಯಿಸಿರುವುದು ಸ್ಪಷ್ಟವಾಯಿತು. ಶಾರುಕ್ ಖಾನ್ ಅವರ ಹಳೆಯ ವಿಡಿಯೊ ಅನ್ನು ಕಾಕ್ರೋಚ್ ಜನತಾ ಪಾರ್ಟಿಗೆ ತಳಕು ಹಾಕಿ ಸುಳ್ಳು ಪ್ರತಿಪಾದನೆ ಮಾಡಲಾಗುತ್ತಿದೆ ಎಂದು ಫ್ಯಾಕ್ಟ್‌ಲಿ ಫ್ಯಾಕ್ಟ್ ಚೆಕ್ ವರದಿ ತಿಳಿಸಿದೆ.

ದೇವರು ಕಾಪಾಡುತ್ತಾನೆ

ನುಡಿ ಬೆಳಗು — ರೇಣುಕಾ ನಿಡಗುಂದಿ



ಒಂದು ಗ್ರಾಮದ ಬಳಿ ಒಬ್ಬ ಸಾಧು ವಾಸಿಸುತ್ತಿದ್ದನು. ಅವನು ದೇವರ ಮಹಾಭಕ್ತನಾಗಿದ್ದನು. ಯಾವಾಗಲೂ ಒಂದು ಮರದ ಕೆಳಗೆ ಕುಳಿತು ತಪಸ್ಸು ಮಾಡುತ್ತಿದ್ದನು. ದೇವರ ಮೇಲೆ ಅವನಿಗೆ ಅಚಲವಾದ ನಂಬಿಕೆ ಇತ್ತು ಮತ್ತು ಗ್ರಾಮಸ್ಥರೂ ಅವನನ್ನು ತುಂಬ ಗೌರವಿಸುತ್ತಿದ್ದರು.

ಒಮ್ಮೆ ಆ ಗ್ರಾಮದಲ್ಲಿ ಭೀಕರ ಪ್ರವಾಹ ಬಂತು. ಎಲ್ಲೆಡೆ ನೀರೇ ನೀರು. ಎಲ್ಲರೂ ತಮ್ಮ ಪ್ರಾಣ ಉಳಿಸಿಕೊಳ್ಳಲು ಎತ್ತರದ ಸ್ಥಳಗಳತ್ತ ಓಡತೊಡಗಿದರು. ಜನರು ನೋಡಿದಾಗ ಸಾಧು ಇನ್ನೂ ಮರದ ಕೆಳಗೆ ಕುಳಿತು ದೇವರ ನಾಮ ಜಪಿಸುತ್ತಿದ್ದನು. ಜನರು ಸಾಧುವಿಗೆ ಆ ಸ್ಥಳವನ್ನು ಬಿಡಲು ಸಲಹೆ ನೀಡಿದರು. ಆದರೆ ಸಾಧು ಹೇಳಿದನು: ‘ನೀವು ನಿಮ್ಮ ಪ್ರಾಣ ಉಳಿಸಿಕೊಳ್ಳಿ. ನನ್ನನ್ನು ನನ್ನ ದೇವರೇ ಕಾಪಾಡುತ್ತಾನೆ’. ನೀರು ನಿಧಾನವಾಗಿ ಏರತೊಡಗಿತು. ಕೊನೆಗೆ ಅದು ಸಾಧುವಿನ ಸೊಂಟದವರೆಗೆ ತಲುಪಿತು. ಅಷ್ಟರಲ್ಲಿ ಅಲ್ಲಿ ಒಂದು ದೋಣಿ ಬಂತು. ಅಂಬಿಗ ಹೇಳಿದನು: ‘ಓ ಸಾಧು ಮಹಾರಾಜರೇ, ಈ ದೋಣಿಯಲ್ಲಿ ಬನ್ನಿ. ನಾನು ನಿಮ್ಮನ್ನು ಸುರಕ್ಷಿತ ಸ್ಥಳಕ್ಕೆ ಕರೆದೊಯ್ಯುತ್ತೇನೆ’ ಆದರೆ ಸಾಧು ಉತ್ತರಿಸಿದನು: ‘ಬೇಡ, ನನಗೆ ನಿಮ್ಮ ಸಹಾಯದ ಅಗತ್ಯವಿಲ್ಲ. ನನ್ನನ್ನು ನನ್ನ ದೇವರೇ ಕಾಪಾಡುತ್ತಾನೆ’. ಅಂಬಿಗ ಮೌನವಾಗಿ ಅಲ್ಲಿಂದ ಹೊರಟನು.

ಸ್ವಲ್ಪ ಹೊತ್ತಿನ ನಂತರ ಪ್ರವಾಹ ಇನ್ನೂ ಭೀಕರವಾಯಿತು. ಸಾಧು ಮರದ ಮೇಲೆ ಹತ್ತಿ ಕುಳಿತು ದೇವರನ್ನು ಸ್ಮರಿಸುತ್ತಿದ್ದನು. ಆಗ ಹಠಾತ್ತಾಗಿ ಗದ್ದಲದ ಶಬ್ದ ಕೇಳಿಸಿತು. ಒಂದು ಹೆಲಿಕಾಪ್ಟರ್ ಅವನನ್ನು ರಕ್ಷಿಸಲು ಬಂದಿತ್ತು. ರಕ್ಷಣಾ ಸಿಬ್ಬಂದಿ ಒಂದು ಹಗ್ಗವನ್ನು ಕೆಳಗೆ ಎಸೆದು ಅದನ್ನು ಬಿಗಿಯಾಗಿ ಹಿಡಿಯಲು ಹೇಳಿದರು. ಆದರೂ ಸಾಧು ಮತ್ತೆ ಹೇಳಿದನು: ‘ನಾನು ಇದನ್ನು ಹಿಡಿಯುವುದಿಲ್ಲ. ನನ್ನನ್ನು ನನ್ನ ದೇವರೇ ಕಾಪಾಡುತ್ತಾನೆ’. ಅವನ ಹಟದ ಮುಂದೆ ರಕ್ಷಣಾ ಸಿಬ್ಬಂದಿಯೂ ಏನೂ ಮಾಡಲಾಗದೆ ಅಲ್ಲಿಂದ ತೆರಳುತ್ತಾರೆ. ಕೆಲವೇ ಕ್ಷಣಗಳಲ್ಲಿ ಆ ಮರ ಪ್ರವಾಹದ ಹೊಳೆಯೊಂದಿಗೆ ಕೊಚ್ಚಿಕೊಂಡು ಹೋಯಿತು ಮತ್ತು ಸಾಧು ಸಾವಿಗೀಡಾದನು.

ಸಾಧು ಸತ್ತ ನಂತರ ಸ್ವರ್ಗಕ್ಕೆ ಹೋಗಿ ದೇವರನ್ನು ಕೇಳಿದನು: ‘ಓ ಪ್ರಭು, ನಾನು ನಿಮ್ಮನ್ನು ಪೂರ್ಣ ಭಕ್ತಿಯಿಂದ ಆರಾಧಿಸಿದೆ, ತಪಸ್ಸು ಮಾಡಿದೆ. ಆದರೆ ನಾನು ಮುಳುಗಿ ಸಾಯುವಾಗ ನೀವು ನನ್ನನ್ನು ರಕ್ಷಿಸಲು ಬರಲಿಲ್ಲ. ಯಾಕೆ ಪ್ರಭು’. ಅದಕ್ಕೆ ದೇವರು ಉತ್ತರಿಸಿದರು: ‘ಓ ಸಾಧುವೇ, ನಾನು ನಿನ್ನನ್ನು ರಕ್ಷಿಸಲು ಒಂದು ಬಾರಿ ಅಲ್ಲ, ಮೂರು ಬಾರಿ ಬಂದೆ. ಮೊದಲಿಗೆ ಗ್ರಾಮಸ್ಥರ ರೂಪದಲ್ಲಿ, ನಂತರ ಅಂಬಿಗನ ರೂಪದಲ್ಲಿ, ಕೊನೆಗೆ ಹೆಲಿಕಾಪ್ಟರ್ ರಕ್ಷಣಾ ದಳದ ರೂಪದಲ್ಲಿ. ಆದರೆ ನೀನು ನಾನು ನೀಡಿದ ಈ ಅವಕಾಶಗಳನ್ನು ಗುರುತಿಸಲಿಲ್ಲ’.

ಮಿತ್ರರೇ, ಜೀವನದಲ್ಲಿ ದೇವರು ನಮಗೆ ಅನೇಕ ಅವಕಾಶಗಳನ್ನು ನೀಡುತ್ತಾನೆ. ಆ ಅವಕಾಶಗಳು ಯಾರಿಗಾಗಿಯೂ ಕಾಯುವುದಿಲ್ಲ. ಅವು ಓಡುತ್ತಿರುವ ಕುದುರೆಯಂತೆ—ನಮ್ಮ ಕಣ್ಮುಂದೆಯೇ ಹಾದುಹೋಗುತ್ತವೆ. ನಾವು ಅವನ್ನು ಗುರುತಿಸಿ ಬಳಸಿಕೊಂಡರೆ ಅವೇ ನಮ್ಮನ್ನು ಗುರಿಯವರೆಗೆ ತಲುಪಿಸಬಲ್ಲವು. ಆದರೆ ನಾವು ಭ್ರಮೆಗಳಲ್ಲಿಯೇ ಕಳೆದುಹೋಗಿರುತ್ತೇವೆ. ನಮ್ಮ ಕಣ್ಣಿಗೆ ಅವಕಾಶಗಳು ಕಾಣಿಸುವುದಿಲ್ಲ.

ಪದಬಂಧ 6424


ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಒಪ್ಪವಾಗಿ ರೂಪವಿದ್ದಾಗ ಯೋಗ್ಯನಾದವನು ಕಂಡಾನು (4)
3.ನಾಪಿತನ ಹತ್ತಿರ ಹಳಬ ಇದ್ದನಲ್ಲಾ! (4)
5.ಅಧಿಕಕ್ಕೊಂದು ಪರ್ಯಾಯ ಪದ (3)
7.ಸೊಂಟಕ್ಕೆ ಸುತ್ತುವ ಪಂಜೆ (2)
8.ಗೂಢಾರ್ಥ ಇಲ್ಲಿಯೇ ಕಾಣುತ್ತಿದೆ (2)
9.ಗುಗ್ಗರಿಯನ್ನು ತಿನ್ನುವತ್ತಲೇ ಈ ಲಕ್ಷ್ಯ! (2)
10.ಮಕರ ಸಂಕ್ರಾಂತಿಯಿಂದ ಕರ್ಕಾಟಕ ಸಂಕ್ರಾಂತಿಯವರೆಗಿನ ಕಾಲ (5)
12.ಪ್ರತಿಜ್ಞೆಯೂ ಆಗಿರುವ ನುಡಿ (2)
13.ದಿವಸದ ಎಂಟನೆಯ ಒಂದು ಭಾಗದಷ್ಟು ಕಾಲ (2)
14.ಜಾಗರೂಕತೆಯಿಂದ ಹುಡುಕಿದ ಸ್ಥಳ (2)
15.ಪವಿತ್ರವಾದ ಮಣ್ಣು (3)
17.ಒಳಗಿನ ಅಭಿಪ್ರಾಯವಿದು (4)
18.ಸನ್ನಿಗೊಳಗಾದವನ ಎದುರು! (4)

ಮೇಲಿಂದ ಕೆಳಕ್ಕೆ

1.ಹೃದಯದಿಂದ ದೇಹದ ಇತರೆಡೆಗೆ ರಕ್ತ ಪೂರೈಸುವ ನಾಳ (5)
2.ಪದ ಹೇಳಿ ಪಡೆದ ಡಿಗ್ರಿ! (3)
3.ಇದೇ ಯುಕ್ತವಾದ ವೇಳೆ (3)
4.ತರಿ ಹಿಡಿದಿರುವ ಚಲುವಾದ ಹೆಂಗಸು (4)
6.ಮತ್ತೆ ಮತ್ತೆ ಉಂಟಾಗುವುದು (5)
9.ಗುಡಾಣದಂತಿರುವವನ ಸ್ವಭಾವ (2)
10.ಅರುಣೋದಯದ ಕಾಲ (2)
11.ಅವನಲೋಕವನ್ನು ನೋಡುವುದು (5)
12.ಪಾಲು ಹಿಡಿದಿರುವ ಹರಿದಾಸ! (4)
15.ಎಲ್ಲರೂ ದಂಗಾಗುವಂತೆ ನುಡಿಸಿದ ಚರ್ಮವಾದ್ಯ (3)
16.ಕೆಲವರಷ್ಟೇ ಮಾಡುವ ಕಾರ್ಯ (3)



6423ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಕೋವಿ 3.ಸಮೀಕ್ಷಕ 5.ಪ್ರಥಮಾ 6.ಕಟುಕ 8.ಸುಭಗ 10.ಆನಂದಾಶ್ರು 11.ರಸದಾಳಿ 12.ತಮಾಳ 14.ಕದಂಬ 16.ಲಾಲಸ 18.ಅವಧಾನಿ 19.ಖಡ್ಗ

ಮೇಲಿಂದ ಕೆಳಕ್ಕೆ: 2.ವಿಪ್ರ 3.ಸಮಾರಂಭ 4.ಕ್ಷಣಿಕ 7.ಕದಳಿ 8.ಸುಶ್ರುತ 9.ಗರಳ 10.ಆಸ್ತಿಕ 13. ಮಾತುಲಾನಿ 15.ಬಡವ 17.ಸಖ

ಸುಡೊಕು 6807

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

4		6			8	5		1
			2	1			7	
1		2			5	3		8
6		9				8		
			5	4	6			
3		5				2		7
		4				1		
			1	5			3	9
9		1			2	7		

6806 ಸುಡೊಕು

8	3	7	1	9	2	5	6	4
6	1	5	7	3	4	8	2	9
2	9	4	5	6	8	1	3	7
7	6	8	9	5	3	2	4	1
5	2	3	6	4	1	7	9	8
9	4	1	8	2	7	3	5	6
3	7	2	4	8	6	9	1	5
1	5	6	2	7	9	4	8	3
4	8	9	3	1	5	6	7	2

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

05 ಜೂನ್ 2026 ಶುಕ್ರವಾರ, ಶ್ರೀ ಪರಾಭವ ನಾಮ ಸಂವತ್ಸರ ಉತ್ತರಾಯಣ ಗ್ರೀಷ್ಮ ಋತು ತಿಥಿ: ಅಧಿಕ ಜ್ಯೇಷ್ಠ ಕೃಷ್ಣ ಪಂಚಮಿ ಗಂ. 25-21 ನಕ್ಷತ್ರ: ಶ್ರವಣ ಅಹೋರಾತ್ರ ಯೋಗ: ಬ್ರಹ್ಮ ಗಂ. ಕರಣ: ಕೌಲವ ಗಂ. 12-29, ವೃಷಭ ಮಾಸದ 22 ನೇ ದಿನ. ಮಳೆ ನಕ್ಷತ್ರ : ರೋಹಿಣಿ 4 ನೇ ಪಾದ. ರಾಹುಕಾಲ : ಬೆಳಿಗ್ಗೆ 10-30 - 12-00, ಸೂರ್ಯೋದಯ : 06-06 ಸೂರ್ಯಾಸ್ತ : 06-52, ಮುಸ್ಲಿಂ ದಿನಾಂಕ : 19 ದುಲ್ ಹಿಜ್ಜಾ, ಅದೃಷ್ಟ ಸಂಖ್ಯೆ : 7, 11

ಮೇಷ: ದೇಹದಲ್ಲಿ ಪಿತ್ತಾಧಿಕ್ಯದಿಂದ ಅಥವಾ ನಿದ್ದೆಯ ಅಭಾವದಿಂದ ಅನಾರೋಗ್ಯ ಉಂಟಾಗಬಹುದು. ಸಹೋದ್ಯೋಗಿಯೊಬ್ಬನ ನೆರವಿನಿಂದ ಕಾರ್ಯಗಳು ಪೂರ್ಣಗೊಳ್ಳಲಿವೆ. ವೈದ್ಯರ ಭೇಟಿ ಅವಶ್ಯಕವಿದ್ದಲ್ಲಿ ಮಾಡಿ.

ವೃಷಭ: ಪ್ರಾಚೀನ ವಸ್ತುಗಳ ಸಂಗ್ರಹದಂಥ ವಿಚಾರದಲ್ಲಿ ಆಸಕ್ತಿ ಮೂಡಲಿದೆ. ತಾಂತ್ರಿಕ ಪದವೀಧರರಿಗೆ ಹೆಚ್ಚಿನ ಬೇಡಿಕೆ ಇದ್ದು ಒಳ್ಳೆಯ ಅವಕಾಶಗಳು ಒದಗಿ ಬರಲಿವೆ.

ಮಿಥುನ: ಆದರ್ಶ ಹಾಗೂ ತತ್ವಗಳ ಜೊತೆಗೆ ಹಿರಿಯರ ಉತ್ತಮ ಅನುಭವ ಹಾಗೂ ಸಲಹೆಗಳನ್ನು ಅಳವಡಿಸಿಕೊಂಡಲ್ಲಿ ಯೋಚಿಸಿದ ಕೆಲಸ ಸಂಪೂರ್ಣವಾಗುವುದು. ನೂತನ ವಾಹನ ಖರೀದಿಸುವಿರಿ.

ಕರ್ಕಾಟಕ: ವಂಶಪಾರಂಪರ್ಯದಿಂದ ಬಂದ ವ್ಯವಹಾರಗಳು ಮತ್ತಷ್ಟು ಏಳಿಗೆ ಕಾಣಲಿವೆ. ವ್ಯಾವಹಾರಿಕ ಸಲಹೆಗಳಿಗೆ ಆದ್ಯತೆ ದೊರೆಯಲಿದೆ. ಕಷ್ಟವನ್ನು ಎದುರಿಸುವ ಧೈರ್ಯವನ್ನು ತಂದುಕೊಳ್ಳಿರಿ.

ಸಿಂಹ: ಹಿಂದಿನಿಂದ ಬಾಕಿ ಇರುವ ಮನೆದೇವರ ಕೆಲಸಗಳನ್ನು ಮಾಡಿ ಮುಗಿಸುವ ನಿರ್ಧಾರಕ್ಕೆ ಬರುವಂತಾಗುವುದು. ಧಾರ್ಮಿಕ ಕಾರ್ಯಕ್ರಮದ ನಿಮಿತ್ತ ಸಹೋದರ ಸಹೋದರಿಯರ ಸಮಾಗಮವಾಗಲಿದೆ.

ಕನ್ಯಾ: ಈಗಾಗಲೇ ನಿಮ್ಮಿಂದ ನಡೆದ ತಪ್ಪುಗಳಿಗೆ ಪ್ರಾಯಶ್ಚಿತ್ತವಾಗಿ ಯಾವುದೇ ಅವ್ಯವಹಾರ ನಡೆಯದಂತೆ ಜಾಗ್ರತೆ ವಹಿಸಿ. ತಂದೆಯವರ ಮಾತಿನಂತೆ ನಡೆಯುವುದು ಶ್ರೇಯಸ್ಕರ.

ತುಲಾ: ಕೌಟುಂಬಿಕ ವಿಷಯಗಳನ್ನು ಹೆಂಡತಿಯೊಡನೆ ಚರ್ಚಿಸಿ ತೀರ್ಮಾನಕ್ಕೆ ಬರುವುದು ಒಳ್ಳೆಯದು. ಎಣ್ಣೆ, ಬೇಳೆ– ಕಾಳು ವ್ಯಾಪಾರದಲ್ಲಿ ಮಾರಾಟ ಉತ್ತಮ. ವಿನಾಯಕನ ಆರಾಧನೆ ಶುಭ ಉಂಟುಮಾಡುತ್ತದೆ.

ವೃಶ್ಚಿಕ: ನಿರೀಕ್ಷೆಗೆ ಪೂರಕ ಪ್ರಚೋದನೆ ಲಭಿಸಲಿದೆ. ಅನವಶ್ಯಕವಾಗಿ ಕಾಲಹರಣ ಮಾಡಬೇಕಾಗುವುದು. ಸಂಶೋಧನಾ ಕ್ಷೇತ್ರದಲ್ಲಿನ ಕಾರ್ಯಗಳಲ್ಲಿ ಪ್ರಗತಿ ಸಾಧಿಸುವಿರಿ. ವಿವಾಹದ ವಿಷಯಗಳು ಚರ್ಚೆಯಾಗುವುದು.

ಧನು: ಸ್ವಯಂಕೃತ ಅಪರಾಧಗಳಿಂದ ವ್ಯವಹಾರದಲ್ಲಿ ಹಿನ್ನಡೆ ಉಂಟಾಗುವ ಲಕ್ಷಣ ತೋರುವುದು. ಸ್ವಂತ ಉದ್ಯೋಗ ಘಟಕವನ್ನು ಹೊಂದಿದ್ದರೆ ಕಾರ್ಮಿಕರ ಉತ್ತಮ ಬೆಂಬಲ ಲಭ್ಯವಾಗಲಿದೆ.

ಮಕರ: ಸಹವರ್ತಿಗಳ ಜತೆಗೆ ವ್ಯವಹಾರಿಕವಾಗಿರುವುದು ಸರಿಯಲ್ಲ. ಮಾನವೀಯತೆಯನ್ನು ಬೆಳೆಸಿಕೊಳ್ಳಿ. ಅನುಮಾನಾಸ್ಪದವಾದ ಘಟನೆಗಳು ನಡೆದರೂ ಯಶ ನಿಮ್ಮದೇ.


ಕುಂಭ: ಸರ್ಕಾರಿ ಕಾಮಗಾರಿಯ ಗುತ್ತಿಗೆದಾರರಿಗೆ ದೊಡ್ಡ ಯೋಜನೆಯೊಂದು ಹುಡುಕಿಕೊಂಡು ಬರಲಿದೆ. ನಾಲ್ಕಾರು ದಿನದ ಹಿಂದೆ ಪ್ರಾರಂಭಿಸಿದ್ದ ಒಂದು ಯೋಜನೆ ನಿಶ್ಚಿತ ಹಂತ ತಲುಪಲಿದೆ.

ಮೀನ: ಉದ್ಯೋಗದ ಅನಿವಾರ್ಯತೆಗಳನ್ನು ಬಿಟ್ಟು ದೇಹದ ಆರೋಗ್ಯದ ಬಗೆ ಕಾಳಜಿ ವಹಿಸುವುದು ಒಳ್ಳೆಯದು. ವೈವಾಹಿಕ ಜೀವನದಲ್ಲಿ ಬದಲಾವಣೆಯೊಂದನ್ನು ಕಾಣುವಿರಿ.

ಗುಂಡಣ್ಣ



ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	23,405
ಇಂದಿನ ಅಂತ್ಯ	23,416
ದಿನದ ಕನಿಷ್ಠ	23,247
	10

ಮೊಟ್ಟೆ ಧಾರಣೆ (ಎನ್‌ಇಸಿಸಿ)

ಬೆಂಗಳೂರು	
100 ಕ್ಕೆ	₹620
12 ಕ್ಕೆ	₹86
ಮೈಸೂರು: 100 ಕ್ಕೆ	₹630

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹257.50
ಆರ್‌ಎಸ್‌ಎಸ್-5	₹249
ಗುಡ್ ಲಾಟ್	₹214

ರಾಮನಗರ ರೇಷ್ಮೆಗೂಡು

ಮಿಶ್ರತಳಿ(ಸಿ.ಬಿ)	₹376-655
ದ್ವಿತಳಿ (ಬಿ.ವಿ)	₹468-851

ಮುಂಬೈ ಖಾದ್ಯ ತೈಲ (ಆವರಣದಲ್ಲಿ ಹಿಂದಿನ ವಹಿವಾಟಿನ ದರ)

ಶೇಂಗಾ (ಕ್ವಿಂಟಲ್)	₹1610 (1610)
ಸೋಯಾ (ಕ್ವಿಂಟಲ್)	₹1500 (1500)
ಸೂರ್ಯಕಾಂತಿ (ಕ್ವಿಂಟಲ್)	₹1660 (1660)
ಪಾಮೋಲಿನ್	₹1490 (1490)

ಮುದ್ರೆಮನೆ ಕಾಫಿ

ಎಪಿ	₹22500
ಎಸಿ	₹14000
ಆರ್‌ಪಿ	₹18100
ಆರ್‌ಸಿ	₹9580

ಅಡಿಕೆ ಧಾರಣೆ

ಕುಮಟಾ					
ಚಿಪ್ಪು	16301-39109	ಕೋಕ	23919-33699	ಕೆಂಪುಗೋಟು	17099-36799
ಕೋಕ	15999-36596	ಕೆಂಪುಗೋಟು	34000-35800	ರಾಶಿ	51009-57119
ಹಳೆಚಾಲಿ	47698-48398	ರಾಶಿ	47639-52899	ತಟ್ಟಿಬೆಟ್ಟೆ	38701-48119
ಹೊಸಚಾಲಿ	35689-47699	ತಟ್ಟಿಬೆಟ್ಟೆ	37619-45269	**ಸಾಗರ**	
ಚಿತ್ರದುರ್ಗ		**ಶಿರಸಿ**		ಬಿಳಿಗೋಟು	12099-36001
ಅಪಿ	52719-53129	ಬೆಟ್ಟೆ	42699-49909	ಚಾಲಿ	34099-42009
ಬೆಟ್ಟೆ	37949-38399	ಬಿಳಿಗೋಟು	25099-36698	ಕೋಕ	14099-36800
ಕೆಂಪುಗೋಟು	32209-32610	ಚಾಲಿ	44099-49019	ಕೆಂಪುಗೋಟು	31599-39519
ರಾಶಿ	52239-52669	ಕೆಂಪುಗೋಟು	27509-41699	ರಾಶಿ	36170-60670
ಶಿವಮೊಗ್ಗ		ರಾಶಿ	50000-54559	ಸಿಪ್ಪೆಗೋಟು	7469-22099
ಸರಕು/ಹಸ	61699-97999	ಕೋಕ	20000-33000	**ಮಂಗಳೂರು**	
ಬೆಟ್ಟೆ	52069-62499	ಹೊಸತು	44000-45500	ಕೋಕ	25000-33500
ರಾಶಿಇಡಿ	47669-54199	**ಯಲ್ಲಾಪುರ**		ಹೊಸತು	30000-47000
ಗೊರಬಲು	30009-43000	ಅಪಿ	60299-60299	ಹಳತು	36000-55000
ಸಿದ್ದಾಪುರ		ಬಿಳಿಗೋಟು	17109-35600	**ತೀರ್ಥಹಳ್ಳಿ**	
ಬಿಳಿಗೋಟು	26079-35299	ಚಾಲಿ	38199-48700	ಸಿಪ್ಪೆಗೋಟು	13100-14000
ಚಾಲಿ	39099-48039	ಕೋಕ	16000-32899	ರಾಶಿ	49000-50072

‘100 ಎಥೆನಾಲ್ ಇಂಧನ ಕೇಂದ್ರ’

2027ರ ಹೊತ್ತಿಗೆ ದೇಶದಲ್ಲಿ ಒಟ್ಟು 5,000 ಎಥೆನಾಲ್ ಇಂಧನ ಕೇಂದ್ರ ಆರಂಭ

ನವದೆಹಲಿ (ಪಿಟಿಐ): ದೆಹಲಿ, ಪುಣೆ, ಮುಂಬೈ ಮತ್ತು ನಾಗ್ಪುರದಲ್ಲಿ 50ರಿಂದ 100 ಎಥೆನಾಲ್ ಇಂಧನ ಮಾರಾಟ ಕೇಂದ್ರಗಳನ್ನು ಆರಂಭಿಸಲಾಗುವುದು ಎಂದು ಕೇಂದ್ರ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವ ಹರದೀಪ್ ಸಿಂಗ್ ಪುರಿ ಹೇಳಿದ್ದಾರೆ.

ಈ ವರ್ಷದ ಅಂತ್ಯದೊಳಗೆ ಎಥೆನಾಲ್ ಇಂಧನ ಕೇಂದ್ರಗಳ ಸಂಖ್ಯೆಯನ್ನು 500ಕ್ಕೆ ಹೆಚ್ಚಿಸುವ ಗುರಿ ಇದೆ ಎಂದು ಅವರು ತಿಳಿಸಿದ್ದಾರೆ.

ಮಾರುತಿ ಸುಜುಕಿ ಕಂಪನಿ ಆಯೋಜಿಸಿದ್ದ ಕಾರ್ಯಕ್ರಮದ ವೇಳೆ ಸುದ್ದಿಗಾರರ ಜೊತೆ ಮಾತನಾಡಿದ ಅವರು, ‘2027ರ ಅಂತ್ಯದ ವೇಳೆಗೆ ದೇಶದಲ್ಲಿ ಇಂತಹ ಇಂಧನ ಕೇಂದ್ರಗಳ ಸಂಖ್ಯೆಯು 5 ಸಾವಿರ ಆಗುವ ನಿರೀಕ್ಷೆ ಇದೆ’ ಎಂದು ಹೇಳಿದ್ದಾರೆ.

ಯೂರೊ-6 ಮಾನದಂಡ ಹೊಂದಿರುವ ವಾಹನಗಳನ್ನು ‘ಇ100’ (ಇದರಲ್ಲಿ ಎಥೆನಾಲ್ ಪ್ರಮಾಣ ಸರಿಸುಮಾರು ಶೇ 95ರವರೆಗೂ ಇರುತ್ತದೆ) ಇಂಧನಕ್ಕೆ ಹೊಂದಿಕೊಳ್ಳುವಂತೆ ಮಾಡಬಹುದಾದರೆ ಕಚ್ಚಾ ತೈಲ ಆಮದು ತಗ್ಗಿಸಲು ಸಹಾಯವಾಗುತ್ತದೆ ಎಂದು ಅವರು ವಿವರಿಸಿದ್ದಾರೆ.

ಇಂತಹ ವಾಹನಗಳಿಗೆ ರಸ್ತೆ ತೆರಿಗೆ ವಿನಾಯಿತಿಯಂತಹ ಕೊಡುಗೆಗಳನ್ನು ನೀಡುವ ಬಗ್ಗೆ ಸರ್ಕಾರ ಆಲೋಚನೆ ನಡೆಸಿದೆ ಎಂದಿದ್ದಾರೆ.

ಪೆಟ್ರೋಲ್, ಡೀಸೆಲ್ ಬೆಲೆ ಹೆಚ್ಚಳದ ನಂತರವೂ ಸರ್ಕಾರಿ ಸ್ವಾಮ್ಯದ ತೈಲೋತ್ಪನ್ನಗಳ ಮಾರಾಟ ಕಂಪನಿಗಳು ದಿನವೊಂದಕ್ಕೆ ₹550



ಕೋಟಿಯವರೆಗೆ ನಷ್ಟ ಅನುಭವಿಸುತ್ತಿವೆ ಎಂದು ಪುರಿ ಅವರು ಪ್ರಶ್ನೆಯೊಂದಕ್ಕೆ ಉತ್ತರವಾಗಿ ತಿಳಿಸಿದ್ದಾರೆ.

ಪ್ರಯಾಣಿಕ ವಾಹನ ವರ್ಗದಲ್ಲಿ ಫ್ಲೆಕ್ಸ್-ಫ್ಯುಯೆಲ್ ಚಾಲಿತ ವಾಹನಗಳನ್ನು ಕಂಪನಿಗಳು ಬಿಡುಗಡೆ ಮಾಡುವುದು ಉತ್ಪನ್ನವೊಂದರ ಬಿಡುಗಡೆ ಮಾತ್ರವೇ ಅಲ್ಲ, ಅದು ದೇಶದ ಇಂಧನ ಪರಿವರ್ತನೆಯಲ್ಲಿ ಹೊಸ ಅಧ್ಯಾಯ ಎಂದೂ ಅವರು ಹೇಳಿದ್ದಾರೆ.

ಭಾರತದಲ್ಲಿ ಪೆಟ್ರೋಲ್‌ನಲ್ಲಿ ಎಥೆನಾಲ್ ಮಿಶ್ರಣ ಮಾಡುತ್ತಿರುವುದು ಇಂಧನ ಪರಿವರ್ತನೆಯ ಉಪಕ್ರಮಗಳಲ್ಲೇ ಅತಿದೊಡ್ಡ ಯಶಸ್ಸಾಗಿದೆ ಎಂದೂ ಅವರು ಅಭಿಪ್ರಾಯಪಟ್ಟಿದ್ದಾರೆ.

ಧಾನ್ಯದ ನುಚ್ಚು, ಕೃಷಿ ತ್ಯಾಜ್ಯ, ಬಿದಿರು ಸೇರಿದಂತೆ ಬೇರೆ ಬೇರೆ ಮೂಲಗಳಿಂದ ಎಥೆನಾಲ್ ಉತ್ಪಾದಿಸುವ ಸಾಮರ್ಥ್ಯ ಈಗ ದೇಶಕ್ಕೆ ಇದೆ.

ಕೇಂದ್ರ ಮೋಟಾರು ವಾಹನಗಳ ನಿಯಮ – 1989ಕ್ಕೆ ತಿದ್ದುಪಡಿ ತರಲು ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳ ಸಚಿವಾಲಯ ಉದ್ದೇಶಿಸಿದೆ. ‘ಇ85’ (ಪೆಟ್ರೋಲ್‌ನಲ್ಲಿ ಶೇ 85ರಷ್ಟು ಎಥೆನಾಲ್ ಮಿಶ್ರಣ) ಮತ್ತು ‘ಇ100’ (ಸರಿಸುಮಾರು ಶೇ 95ರಷ್ಟು ಎಥೆನಾಲ್ ಬಳಕೆ) ಹಾಗೂ ಬಿ100 ಜೈವಿಕ ಡೀಸೆಲ್ ಬಳಸುವ ವಾಹನಗಳನ್ನು ವ್ಯಾಪಕವಾಗಿ ಬಳಕೆಗೆ ತರಲು ಈ ತಿದ್ದುಪಡಿಗಳು ಅವಕಾಶ ಕಲ್ಪಿಸುತ್ತವೆ. ದೇಶದಲ್ಲಿ ‘ಇ20’ ಪೆಟ್ರೋಲ್ ಈಗಾಗಲೇ ಬಳಕೆಯಲ್ಲಿ ಇದೆ.

ಸುದ್ದಿ 2 ನಿಮಿಷ

ಒತ್ತಡದಿಂದ ಎಲ್ಐಸಿ ಷೇರು ಖರೀದಿಸಿದೆಯೆ?: ಕಾಂಗ್ರೆಸ್


ನವದೆಹಲಿ (ಪಿಟಿಐ): ‘ಸಂಶಯಾಸ್ಪದ ವಹಿವಾಟುಗಳ ಕಾರಣಕ್ಕಾಗಿ ಭಾರತೀಯ ಷೇರುಪೇಟೆ ನಿಯಂತ್ರಣ ಮಂಡಳಿ (ಸೆಬಿ) ತನಿಖೆ ಎದುರಿಸುತ್ತಿರುವ ರಾಜೇಶ್ ಎಕ್ಸ್‌ಪೋರ್ಟ್ಸ್ ಲಿಮಿಟೆಡ್‌ನಿಂದ (ಆರ್‌ಇಎಲ್) ಭಾರತೀಯ ಜೀವವಿಮಾ ನಿಗಮವು ಶೇಕಡ 10.8ರಷ್ಟು ಷೇರು ಖರೀದಿಸಿದೆ. ವ್ಯವಸ್ಥೆಯೊಳಗಿನವರ ಒತ್ತಡದಿಂದಲೇ ಈ ಖರೀದಿ ನಡೆದಿದೆಯೇ’ ಎಂದು ಕಾಂಗ್ರೆಸ್ ಪ್ರಶ್ನಿಸಿದೆ.

‘2026ರ ಜೂನ್ 3ರಂದು ಸೆಬಿ ಬಿಡುಗಡೆಗೊಳಿಸಿರುವ ಮಧ್ಯಂತರ ವರದಿ ಪ್ರಕಾರ, ಈ ಕಂಪನಿಯು ದೃಢ ಹಗರಣದಲ್ಲಿ ಭಾಗಿಯಾಗಿದೆ ಎಂದು ಉಲ್ಲೇಖಿಸಿದೆ’ ಎಂದು ಕಾಂಗ್ರೆಸ್‌ನ ಪ್ರಧಾನ ಕಾರ್ಯದರ್ಶಿ (ಸಂವಹನ ವಿಭಾಗ) ಜೈರಾಮ್ ರಮೇಶ್ ತಿಳಿಸಿದ್ದಾರೆ.

‘2020-21ರಿಂದ 2024-25ರ ಅವಧಿಯಲ್ಲಿ ಕಂಪನಿಯು ವರಮಾನಕ್ಕೆ ಸಂಬಂಧಿಸಿದಂತೆ ಸುಳ್ಳು ಮಾಹಿತಿ ನೀಡಿದೆ. ಈ ಮೊತ್ತವು ಸುಮಾರು ₹15 ಲಕ್ಷ ಕೋಟಿಯಷ್ಟಾಗಬಹುದು’ ಎಂದು ಅವರು ಹೇಳಿದ್ದಾರೆ.

‘ಇದು ನಿಜಕ್ಕೂ ಬೆರಗುಗೊಳಿಸುವ ಸಂಖ್ಯೆಯಾಗಿದೆ. ತನಿಖೆ ಮುಂದುವರಿದಿದ್ದು, ಅಂತಿಮ ವರದಿಗಾಗಿ ಎದುರು ನೋಡಲಾಗುತ್ತಿದೆ’ ಎಂದು ಜೈರಾಮ್ ರಮೇಶ್ ವಿವರಿಸಿದ್ದಾರೆ.

‘ಈ ಸಂಸ್ಥೆಯಲ್ಲಿ ಎಲ್ಐಸಿಯು ಶೇ 10.8ರಷ್ಟು ಪಾಲು ಹೊಂದಿದೆ ಎಂಬುದು ಹೆಚ್ಚು ಗಂಭೀರವಾದ ವಿಚಾರವಾಗಿದೆ. ರಾಜಕೀಯವಾಗಿ ಪ್ರಭಾವಶಾಲಿಯಾಗಿರುವ ಈ ಕಂಪನಿಯೊಂದಿಗೆ ಬ್ಯಾಂಕ್‌ಗಳು ಕೂಡ ಗಣನೀಯ ಸಂಪರ್ಕ ಹೊಂದಿವೆ. ದೊಡ್ಡ ಪಾಲು ಹೊಂದಿದ್ದರೂ, ಇಷ್ಟು ದೊಡ್ಡ ಪ್ರಮಾಣದ ವಂಚನೆ ನಡೆದಿದ್ದರೂ ಎಲ್ಐಸಿ ಗಮನಿಸದೇ ಇರುವುದು ಹೇಗೆ? ಆಡಳಿತ ವ್ಯವಸ್ಥೆಯೊಳಗಿನಿಂದ ಬಂದ ನಿರ್ದೇಶನವೇ ಈ ರೀತಿಯ ಷೇರು ಖರೀದಿಗೆ ಕಾರಣವಾಗಿರಬಹುದೆ’ ಎಂದು ಅವರು ಪ್ರಶ್ನಿಸಿದ್ದಾರೆ.



‘ಭಾರತೀಯರಿಗೆ ಅಗತ್ಯ ನೆರವು’

ದುಬೈ (ಪಿಟಿಐ): ಕುವೈತ್ ವಿಮಾನ ನಿಲ್ದಾಣದ ಮೇಲೆ ಇರಾನ್ ನಡೆಸಿದ ದಾಳಿಯಲ್ಲಿ ಮೃತಪಟ್ಟ ಭಾರತೀಯ ಪ್ರಜೆಯನ್ನು ಇರಿಸಿರುವ ಶವಾಗಾರಕ್ಕೆ ಗುರುವಾರ ಕುವೈತ್‌ನಲ್ಲಿರುವ ಭಾರತದ ರಾಯಭಾರಿ ಪರಮಿತಾ ತ್ರಿಪಾಠಿ ಭೇಟಿ ನೀಡಿದರು.

ದಾಳಿಯಲ್ಲಿ ಗಾಯಗೊಂಡು ವಿವಿಧ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಭಾರತೀಯರನ್ನು ಭೇಟಿಯಾದ ಅವರು, ಸ್ವದೇಶಕ್ಕೆ ಮರಳಲು ಅಗತ್ಯ ನೆರವಿನ ಭರವಸೆ ನೀಡಿದರು.

ಬ್ರಿಗೇಡಿಯರ್ ಅಬ್ದುಲ್ ರಹೀಮ್ ಅಲ್-ಅವಾಧಿ ಅವರನ್ನೂ ಭೇಟಿಯಾದ ತ್ರಿಪಾಠಿ, ಕುವೈತ್ ಅಧಿಕಾರಿಗಳ ತ್ವರಿತ ಮತ್ತು ಸೂಕ್ಷ್ಮವಾದ ಸ್ಪಂದನೆಗೆ ಧನ್ಯವಾದ ಸಲ್ಲಿಸಿದರು.

ಕುವೈತ್‌ನ ನೀರು ನಿರ್ಲವಣೀಕರಣ ಘಟಕದ ಮೇಲೆ ಮಾರ್ಚ್ 31ರಂದು ಇರಾನ್ ನಡೆಸಿದ ದಾಳಿಯಲ್ಲಿ ಭಾರತೀಯರೊಬ್ಬರು ಮೃತಪಟ್ಟಿದ್ದರು. ಮಾರ್ಚ್ 18ರಂದು ಸೌದಿ ಅರೇಬಿಯಾದ ರಿಯಾದ್ ಮೇಲೆ ಇರಾನ್ ನಡೆಸಿದ ಡ್ರೋನ್ ದಾಳಿಯಲ್ಲಿ ಭಾರತೀಯ ಪ್ರಜೆಯೊಬ್ಬರು, ಮಾರ್ಚ್ 13ರಂದು ಒಮಾನ್ ಕೈಗಾರಿಕಾ ಪ್ರದೇಶದ ಮೇಲೆ ನಡೆದ ದಾಳಿಯಲ್ಲಿ ಇಬ್ಬರು ಭಾರತೀಯರು ಮೃತಪಟ್ಟಿದ್ದರು.

ಮುಂಬೈ ಧಾರಣೆ (ಶೇಂಗಾ)

04-06-2026	
ಜಾವಾ 70/80(ಹೊಸ)	11200-11300
ಜಾವಾ 80/90(ಹೊಸ)	10500-10600
ದಪ್ಪ ಮಧ್ಯಪ್ರದೇಶ (ಹೊಸ)	8500-8600
ದಪ್ಪ ಗುಜರಾತ್ (ಹೊಸ)	9300-9400
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1620 (1620)
ಒಂದು ವಾರದ ಡೆಲಿವರಿ	1615 (1615)
ಪಾಮ್ ವಾರದ ಡೆಲಿವರಿ	1488 (1488)
ಸೂರ್ಯಕಾಂತಿ ಎಣ್ಣೆ ಕಚ್ಚಾ	1560 (1560)
ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	1,55,400 (1,54,400)
ಬೆಳ್ಳಿ ಕೆ.ಜಿಗೆ	2,61,500 (2,61,500)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಭಾರತದ ಬೆಳವಣಿಗೆ: ‘ಸಿಟಿ’ ವಿಶ್ವಾಸ

ಮುಂಬೈ (ಪಿಟಿಐ): ಜಾಗತಿಕ ಮಟ್ಟದಲ್ಲಿ ಪ್ರಮುಖ ಬ್ಯಾಂಕಿಂಗ್ ಕಂಪನಿಗಳ ಪೈಕಿ ಒಂದಾಗಿರುವ ‘ಸಿಟಿ’ಯ ಸಿಇಒ ಜೇನ್ ಫ್ರೇಸರ್ ಅವರು ಭಾರತದ ದೀರ್ಘಾವಧಿ ಬೆಳವಣಿಗೆ ಸಾಮರ್ಥ್ಯದ ಬಗ್ಗೆ ವಿಶ್ವಾಸ ವ್ಯಕ್ತಪಡಿಸಿದ್ದಾರೆ. ಅಲ್ಲದೆ, ಅಲ್ಪಾವಧಿಯಲ್ಲಿ ಸವಾಲುಗಳು ಇದ್ದರೂ, ದೇಶದ ಬೆಳವಣಿಗೆಯ ನಡಿಗೆ ದೃಢವಾಗಿದೆ ಎಂದು ಹೇಳಿದ್ದಾರೆ.

ಕೃತಕ ಬುದ್ಧಿಮತ್ತೆಯಂತಹ (ಎ.ಐ) ಹೊಸ ತಂತ್ರಜ್ಞಾನಗಳು ದೇಶದ ಅರ್ಥ ವ್ಯವಸ್ಥೆಯ ಉದ್ದಕ್ಕೂ ಗಣನೀಯ ಪ್ರಮಾಣದಲ್ಲಿ ಅವಕಾಶಗಳನ್ನು ಸೃಷ್ಟಿಸಬಲ್ಲವು ಎಂದು ಅವರು ಹೇಳಿದ್ದಾರೆ.

ಪ್ರಧಾನಿ ಮೋದಿ ಅವರನ್ನು ಭೇಟಿ ಮಾಡಿದ ನಂತರ ಫ್ರೇಸರ್ ಅವರು ‘ಸಿಟಿ ಇಂಡಿಯಾ ಕಾರ್ಯಕ್ರಮ’ದಲ್ಲಿ ಮಾತನಾಡಿ, ‘ಸುಧಾರಣೆಗಳ ವೇಗ, ಡಿಜಿಟಲ್ ಪರಿವರ್ತನೆ,ತಂತ್ರಜ್ಞಾನ ವಲಯದಲ್ಲಿನ ಪ್ರತಿಭೆಯ ಕಾರಣದಿಂದಾಗಿ ಭಾರತವು ಜಾಗತಿಕ ಮಟ್ಟದಲ್ಲಿ ಗುರುತಿಸಿಕೊಂಡಿದೆ’ ಎಂದರು.

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)

ಅರಸೀಕೆರೆ	₹29000-29000
ತಿಪಟೂರು	₹29200-31500

ಫ್ಲೆಕ್ಸ್–ಫ್ಯುಯೆಲ್ ಕಾರು ಅನಾವರಣ

ನವದೆಹಲಿ (ಪಿಟಿಐ): ದೇಶದ ಅತಿದೊಡ್ಡ ಕಾರು ತಯಾರಿಕಾ ಕಂಪನಿ ಮಾರುತಿ ಸುಜುಕಿ ಇಂಡಿಯಾ ಲಿಮಿಟೆಡ್ ದೇಶದ ಮೊದಲ ಫ್ಲೆಕ್ಸ್-ಫ್ಯುಯೆಲ್ ಚಾಲಿತ ವ್ಯಾಗನ್-ಆರ್ ಕಾರನ್ನು ಗುರುವಾರ ಅನಾವರಣ ಮಾಡಿದೆ.

ಫ್ಲೆಕ್ಸ್-ಫ್ಯುಯೆಲ್ ಕಾರು ‘ಇ20’ ಅಥವಾ ‘ಇ100’ ಸೇರಿದಂತೆ ಯಾವುದೇ ಪ್ರಮಾಣದಲ್ಲಿ ಎಥೆನಾಲ್-ಪೆಟ್ರೋಲ್ ಮಿಶ್ರಣ ಇರುವ ಇಂಧನ ಬಳಸಿ ಸಾಗಬಲ್ಲದು.

ದೇಶದ ಇಂಧನ ಭದ್ರತೆ ಹಾಗೂ ಸುಸ್ಥಿರತೆ ಗುರಿಗೆ ಹೊಂದಾಣಿಕೆ ಆಗುವ ರೀತಿಯಲ್ಲಿ ಹೊಸತನವನ್ನು ತರಲಾಗುತ್ತಿದೆ ಎಂದು ಕಂಪನಿಯು ಹೇಳಿದೆ.

ಕಾರು ಅನಾವರಣ ಸಮಾರಂಭದಲ್ಲಿ ಮಾತನಾಡಿದ ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವ ನಿತಿನ್ ಗಡ್ಕರಿ ಅವರು, ‘ದೇಶವು ಪ್ರತಿವರ್ಷ ಭಾರಿ ಪ್ರಮಾಣದಲ್ಲಿ ಕಚ್ಚಾ ತೈಲವನ್ನು ಆಮದು ಮಾಡಿಕೊಳ್ಳುತ್ತಿದೆ. ಈ ಅವಲಂಬನೆಯನ್ನು ಕಡಿಮೆ ಮಾಡಲು ಎಥೆನಾಲ್‌ನಂತಹ ಜೈವಿಕ ಇಂಧನಗಳು ಪ್ರಮುಖ ಮಾರ್ಗ. ಇದು ನಮ್ಮ ಗ್ರಾಮೀಣ ಅರ್ಥವ್ಯವಸ್ಥೆಯನ್ನು ಬಲಪಡಿಸುತ್ತದೆ’ ಎಂದು ಹೇಳಿದ್ದಾರೆ.



ಮಾರುತಿ ಸುಜುಕಿ ಇಂಡಿಯಾ ಕಂಪನಿಯ ಸಿಇಒ ಹಿಸಾಷಿ ತಕೆಯುಚಿ, ಕೇಂದ್ರ ಸಚಿವರಾದ ನಿತಿನ್ ಗಡ್ಕರಿ ಮತ್ತು ಹರದೀಪ್ ಸಿಂಗ್ ಪುರಿ ಅವರು ಫ್ಲೆಕ್ಸ್–ಫ್ಯುಯೆಲ್ ವ್ಯಾಗನ್‌ಆರ್ ಕಾರು ಬಿಡುಗಡೆ ಸಮಾರಂಭದಲ್ಲಿ ಇದ್ದರು —ಪಿಟಿಐ ಚಿತ್ರ

‘ಫ್ಲೆಕ್ಸ್-ಫ್ಯುಯೆಲ್ ವಾಹನಗಳು ಎಥೆನಾಲ್‌ಗೆ ಸುಸ್ಥಿರ ಬೇಡಿಕೆ ಸೃಷ್ಟಿಸಬಲ್ಲವು. ಆ ಮೂಲಕ ಅವು ನಮ್ಮ ರೈತರಿಗೆ, ಕೈಗಾರಿಕೆಗಳಿಗೆ ಮತ್ತು ಪರಿಸರಕ್ಕೆ ಅನುಕೂಲ ಮಾಡಿಕೊಡಬಲ್ಲವು’ ಎಂದು ಗಡ್ಕರಿ ಹೇಳಿದ್ದಾರೆ.

ಮಾರುತಿ ಸುಜುಕಿ ಫ್ಲೆಕ್ಸ್-ಫ್ಯುಯೆಲ್ ಕಾರು ಅನಾವರಣ ಮಾಡಿರುವುದು ಇತರ ಕಂಪನಿಗಳಿಗೂ ಇದೇ ಬಗೆಯ ಕಾರುಗಳನ್ನು ಬಿಡುಗಡೆ ಮಾಡಲು ಹಾಗೂ ಇಂಧನ ಉದ್ಯಮಕ್ಕೆ ಎಥೆನಾಲ್ ವಿತರಣೆ ಮೂಲಸೌಕರ್ಯ ಹೆಚ್ಚಿಸಲು ಪ್ರೇರಣೆ ಆಗಲಿದೆ ಎಂಬ ವಿಶ್ವಾಸವನ್ನು ಅವರು ವ್ಯಕ್ತಪಡಿಸಿದ್ದಾರೆ.

‘ನಾವು ನಮ್ಮ ಅನ್ನದಾತ ರೈತರನ್ನು ಇಂಧನದಾತರನ್ನಾಗಿಯೂ ಪರಿವರ್ತಿಸಿದ್ದೇವೆ’ ಎಂದು ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವ ಹರದೀಪ್ ಸಿಂಗ್ ಪುರಿ ಹೇಳಿದ್ದಾರೆ.

ಕಚ್ಚಾ ತೈಲದ ಆಮದನ್ನು ತಗ್ಗಿಸುವುದಲ್ಲದೆ ಈ ಬಗೆಯ ವಾಹನಗಳು ರೈತರ ಆದಾಯವನ್ನು ಹೆಚ್ಚಿಸಲು ಕೂಡ ನೆರವು ಒದಗಿಸಬಲ್ಲವು ಎಂದು ಮಾರುತಿ ಸುಜುಕಿ ಇಂಡಿಯಾ ಕಂಪನಿಯ ಸಿಇಒ ಹಿಸಾಷಿ ತಕೆಯುಚಿ ಹೇಳಿದ್ದಾರೆ.

ಮಸ್ಕ್ ವಿರುದ್ಧ ಮೊಕದ್ದಮೆಗೆ ನಿರ್ಧಾರ

ಲಂಡನ್ (ಪಿಟಿಐ): ಗ್ರೋಕ್ ತನ್ನ ಚಾಟ್‌ಬಾಟ್ ಬಳಸಿಕೊಂಡು, ಬಿಕಿನಿ ಧರಿಸಿದ ನಕಲಿ ಚಿತ್ರಗಳನ್ನು ರಚಿಸಿದೆ ಎಂದು ಆರೋಪಿಸಿರುವ ಬ್ರಿಟನ್‌ನ ಸಂಸದೆಯೊಬ್ಬರು ಸಂಸ್ಥೆಯ ಮಾಲೀಕ ಇಲಾನ್ ಮಸ್ಕ್ ವಿರುದ್ಧ ಮೊಕದ್ದಮೆ ಹೂಡುವುದಾಗಿ ತಿಳಿಸಿದ್ದಾರೆ.

ಜನವರಿಯಲ್ಲಿ ತನ್ನ ಅನುಮತಿಯಿಲ್ಲದೇ, ಬಿಕಿನಿ ಧರಿಸಿದ್ದ ನಕಲಿ ಚಿತ್ರಗಳನ್ನು ಗ್ರೋಕ್ ತಯಾರಿಸಿದೆ. ಡೀಪ್‌ಫೇಕ್ ಆನ್‌ಲೈನ್ ಪೋರ್ನೋಗ್ರಫಿಯಲ್ಲಿ ಕೂಡ ಈ ಚಿತ್ರ ಹರಿದಾಡುತ್ತಿದೆ ಎಂದು ಲೇಬರ್ ಪಕ್ಷದ ಸಂಸದೆಯಾಗಿರುವ ಜೆಸ್ ಅಸಾಟೊ ತಿಳಿಸಿದ್ದಾರೆ.

ಖಾಸಗಿ ಮಾಹಿತಿಯನ್ನು ದುರುಪಯೋಗಪಡಿಸಿಕೊಳ್ಳಲಾಗಿದೆ ಎಂದು ಆರೋಪಿಸಿ ಲಂಡನ್‌ನ ಹೈಕೋರ್ಟ್‌ನಲ್ಲಿ ಮೊಕದ್ದಮೆ ಹೂಡಿದ್ದಾರೆ.

ಶ್ರೀಲಂಕಾ: ವೃದ್ಧಾಶ್ರಮದಲ್ಲಿ ಬೆಂಕಿ ಅವಘಡ; 11 ಮಂದಿ ಸಾವು

ಕೊಲಂಬೊ (ಪಿಟಿಐ): ಇಲ್ಲಿನ ವೃದ್ಧಾಶ್ರಮವೊಂದರಲ್ಲಿ ಸಂಭವಿಸಿದ ಬೆಂಕಿ ಅವಘಡದಲ್ಲಿ 11 ಮಂದಿ ಮೃತಪಟ್ಟಿದ್ದು, ಏಳು ಮಂದಿ ಗಾಯಗೊಂಡಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಇಲ್ಲಿನ ಕಲುತರ ಜಿಲ್ಲೆಯಲ್ಲಿರುವ ಅಂಗುರುವ ತೋಟದಲ್ಲಿರುವ ಮವಾಪಿಯ ಸೇವಾನ ವೃದ್ಧಾಶ್ರಮದಲ್ಲಿ ಬುಧವಾರ ಸಂಜೆ 5.30ರ ಸುಮಾರಿಗೆ ಬೆಂಕಿ ಕಾಣಿಸಿಕೊಂಡಿತು. 10 ಮಂದಿ ಆವರಣದಲ್ಲಿಯೇ ಮೃತಪಟ್ಟರೆ, ಮತ್ತೊಬ್ಬರು ಹೋರಾನದ ಜಿಲ್ಲಾಸ್ಪತ್ರೆಯಲ್ಲಿ ಕೊನೆಯುಸಿರೆಳೆದರು ಎಂದು ತಿಳಿಸಿದ್ದಾರೆ.

ದುರಂತ ನಡೆದ ಸ್ಥಳವು ರಾಜಧಾನಿ ಕೊಲಂಬೊದಿಂದ 65 ಕಿ.ಮೀ ಆಗ್ನೇಯ ದಿಕ್ಕಿನಲ್ಲಿದೆ.

ಸ್ಥಳದಿಂದ 51 ಮಂದಿಯನ್ನು ರಕ್ಷಿಸಲಾಗಿದ್ದು, ಏಳು ಮಂದಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.



ಶ್ರೀಲಂಕಾದ ಕಲುತರ ಜಿಲ್ಲೆಯಲ್ಲಿರುವ ಅಂಗುರುವ ತೋಟದಲ್ಲಿರುವ ಬೆಂಕಿ ಅವಘಡ ಸಂಭವಿಸಿದ ವೃದ್ಧಾಶ್ರಮದ ಒಳಗೆ ಪರಿಶೀಲಿಸಿದ ಅಧಿಕಾರಿಗಳು —ಎಎಫ್‌ಪಿ ಚಿತ್ರ

ಸ್ಥಳೀಯರ ನೆರವು ಪಡೆದುಕೊಂಡು, ಬೆಂಕಿ ನಂದಿಸಲಾಗಿದೆ. ಪ್ರಕರಣದ ಕುರಿತಂತೆ ಮ್ಯಾಜಿಸ್ಟ್ರೇಟ್ ತನಿಖೆಗೆ ಆದೇಶಿಸಲಾಗಿದೆ.

ಅಡುಗೆ ಅನಿಲ ಸಿಲಿಂಡರ್ ಸ್ಫೋಟದಿಂದ ಈ ಅವಘಡ ಸಂಭವಿಸಿರುವುದು ಮೇಲ್ನೋಟಕ್ಕೆ ಕಂಡುಬಂದಿದೆ.

ಆಮದು ಇಳಿಕೆ: 6 ತಂಡ ರಚನೆ

ನವದೆಹಲಿ (ಪಿಟಿಐ): ವಿವಿಧ ಉತ್ಪನ್ನಗಳನ್ನು ದೇಶದಲ್ಲಿಯೇ ತಯಾರು ಮಾಡಿ, ಅವುಗಳ ಆಮದು ಅವಲಂಬನೆಯನ್ನು ಕಡಿಮೆ ಮಾಡಲು ಕೇಂದ್ರ ಸರ್ಕಾರವು ಆರು ಕಾರ್ಯಕಾರಿ ತಂಡಗಳನ್ನು ರಚಿಸಿದೆ. ಈ ತಂಡಗಳು ಆರು ವಲಯಗಳಿಗೆ ಸಂಬಂಧಿಸಿ ಸರಿಸುಮಾರು 100 ಉತ್ಪನ್ನಗಳನ್ನು ಗುರುತಿಸಬೇಕಿದೆ.

‘ಈ ಉತ್ಪನ್ನಗಳನ್ನು ದೇಶದಲ್ಲಿಯೇ ತಯಾರು ಮಾಡುವುದನ್ನು ಉತ್ತೇಜಿಸುವುದು ನಮ್ಮ ಗುರಿ’ ಎಂದು ಕೇಂದ್ರದ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಕಾರ್ಯಕಾರಿ ಗುಂಪುಗಳು ಚರ್ಚಿಸಿ, ಈ ಉತ್ಪನ್ನಗಳ ಹೆಸರು ಅಂತಿಮಗೊಳಿಸಲಿವೆ. ಗುಂಪುಗಳು ಸಲ್ಲಿಸುವ ಉತ್ಪನ್ನಗಳ ಅಂತಿಮ ಹೆಸರುಗಳನ್ನು ಸಂಪುಟ ಸಚಿವಾಲಯಕ್ಕೆ ಮೂರು ವಾರಗಳಲ್ಲಿ ನೀಡಲಾಗುತ್ತದೆ ಎಂದು ಅವರು ಹೇಳಿದ್ದಾರೆ.

ಔಷಧ, ಬಯೋಟೆಕ್ ಮತ್ತು ವೈದ್ಯಕೀಯ ಉಪಕರಣಗಳು, ರಾಸಾಯನಿಕಗಳು ಮತ್ತು ಪೆಟ್ರೊರಾಸಾಯನಿಕಗಳು, ಜವಳಿ ಮತ್ತು ಪಾದರಕ್ಷೆಗಳು, ಬಂಡವಾಳ ಸರಕುಗಳು, ವಾಹನ ಮತ್ತು ಇ.ವಿ., ಆಧುನಿಕ ಬಂಡವಾಳ ಸರಕುಗಳು, ಇಂಧನ, ನಿರ್ಮಾಣ ಸಲಕರಣೆಗಳು ಮತ್ತು ಮೂಲಸೌಕರ್ಯ, ರಕ್ಷಣೆ ಮತ್ತು ವೈಮಾಂತರಿಕ್ಷ (ನಾಗರಿಕ ಬಳಕೆಗೆ ಅನ್ವಯವಾಗುವಂಥವು ಮಾತ್ರ), ಎಲೆಕ್ಟ್ರಾನಿಕ್ಸ್ ವಲಯದ ಉತ್ಪನ್ನಗಳನ್ನು ಈ ಗುಂಪುಗಳು ಗುರುತಿಸಲಿವೆ.

ಈಗ ಭಾರತದಲ್ಲಿ ತಯಾರಿಕೆಯಲ್ಲಿ ಇಲ್ಲದ ಅಥವಾ ಕಡಿಮೆ ಪ್ರಮಾಣದಲ್ಲಿ ತಯಾರಾಗುತ್ತಿರುವ ಉತ್ಪನ್ನಗಳನ್ನು ಈ ಗುಂಪುಗಳು ಗುರುತಿಸಲಿವೆ. ವಿದೇಶಿ ವಿನಿಮಯದ ಹೊರಹರಿವು ಕಡಿಮೆ ಮಾಡುವ ಉದ್ದೇಶ ಕೂಡ ಈ ಕ್ರಮದ ಹಿಂದಿದೆ.

ಎಬೋಲಾ ಸೋಂಕು: ಆಫ್ರಿಕಾದಿಂದ ಬಂದ ಮೂವರು ಪ್ರತ್ಯೇಕ ವಾಸ

ದುರ್ಗ್ (ಪಿಟಿಐ): ಆಫ್ರಿಕಾದಲ್ಲಿನ ಎಬೋಲಾ ವೈರಸ್ ಪೀಡಿತ ಪ್ರದೇಶಗಳಿಂದ ಇತ್ತೀಚೆಗೆ ಛತ್ತೀಸಗಢದ ದುರ್ಗ್ ಜಿಲ್ಲೆಗೆ ಬಂದಿರುವ ಮೂವರನ್ನು 21 ದಿನಗಳವರೆಗೆ ಮನೆಯಲ್ಲೇ ಪ್ರತ್ಯೇಕ ವಾಸದಲ್ಲಿ ಇರಿಸಲಾಗಿದೆ.

ಸೋಂಕಿನ ಯಾವುದೇ ಲಕ್ಷಣಗಳು ಮೂವರಲ್ಲೂ ಕಾಣಿಸಿಕೊಂಡಿಲ್ಲ. ಎಲ್ಲರ ಆರೋಗ್ಯವೂ ಉತ್ತಮವಾಗಿಯೇ ಇದೆ. ಆದರೂ ಮುಂಜಾಗ್ರತಾ ಕ್ರಮ ಕೈಗೊಳ್ಳಲಾಗಿದ್ದು, ಅವರ ಆರೋಗ್ಯದ ಮೇಲೆ ನಿಗಾ ಇರಿಸಲಾಗಿದೆ ಎಂದು ಅಧಿಕಾರಿಗಳು ಗುರುವಾರ ತಿಳಿಸಿದರು.

ಒಬ್ಬ ಮಹಿಳೆ ಆಫ್ರಿಕಾದ ಕಾಂಗೊದಿಂದ ಹಾಗೂ ಉಳಿದ ಇಬ್ಬರು ಇಥಿಯೋಪಿಯಾ ಮತ್ತು ಉಗಾಂಡಾದಿಂದ ಬಂದಿದ್ದಾರೆ. ಮೂವರ ಪೈಕಿ ಇಬ್ಬರು ಭಾರತೀಯರು ಹಾಗೂ ಇನ್ನೊಬ್ಬರು ಉಗಾಂಡಾದವರು ಎಂದು ದುರ್ಗ್ ಜಿಲ್ಲಾಧಿಕಾರಿ ಅಭಿಜೀತ್ ಸಿಂಗ್ ತಿಳಿಸಿದರು.

ಆಫ್ರಿಕನ್ ದೇಶಗಳಾದ ಉಗಾಂಡಾ, ಕಾಂಗೊಗಳಲ್ಲಿ ಎಬೋಲಾ ಪ್ರಕರಣಗಳು ಪತ್ತೆಯಾಗಿವೆ.

‘ಡೊನಾಲ್ಡ್ ಟ್ರಂಪ್’ ಹೆಸರಿನ ಎಮ್ಮೆ ಇದೀಗ ಬಾಂಗ್ಲಾ ಸೆಲೆಬ್ರಿಟಿ

ಢಾಕಾ (ಪಿಟಿಐ): ಬಾಂಗ್ಲಾ ದೇಶದ ಢಾಕಾದ ಮೃಗಾಲಯದಲ್ಲಿರುವ ‘ಡೊನಾಲ್ಡ್ ಟ್ರಂಪ್’ ಹೆಸರಿನ ಅಲ್ಬಿನೊ ಎಮ್ಮೆ ಭಾರಿ ಜನಪ್ರಿಯಗೊಂಡಿದ್ದು, ಇದನ್ನು ನೋಡಲು ಸಾವಿರಾರು ಜನರು ಆಗಮಿಸುತ್ತಿದ್ದಾರೆ.

700 ಕೆ.ಜಿ ತೂಕವಿರುವ ಕೆಂಬಣ್ಣದ ಈ ಎಮ್ಮೆಯು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರಂತೆಯೇ ಬಂಗಾರದ ಬಣ್ಣದ ಕೂದಲು ಹಾಗೂ ಅದೇ ರೀತಿಯ ವಿನ್ಯಾಸವನ್ನು ಹೊಂದಿದೆ ಎಂದು ಅದರ ಚಿತ್ರಗಳು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿದವು.

ಇದು ಬಾಂಗ್ಲಾದ ರೈತರೊಬ್ಬರ ಒಡೆತನದ ಎಮ್ಮೆಯಾಗಿತ್ತು. ಇದನ್ನು ಬಕ್ರೀದ್ ಹಬ್ಬದಂದು ವಧಿಸಲೂ ಯೋಜಿಸಲಾಗಿತ್ತು. ಅಷ್ಟರಲ್ಲಿ ಎಮ್ಮೆಯನ್ನು ರಕ್ಷಿಸಿದ ಅಧಿಕಾರಿಗಳು ಮೃಗಾಲಯಕ್ಕೆ ಸ್ಥಳಾಂತರಿಸಿದ್ದಾರೆ.

ಇದೀಗ ಈ ಎಮ್ಮೆ ನೋಡಲು ಜನರ ದಂಡೇ ಮೃಗಾಲಯಕ್ಕೆ ಹರಿದು ಬರುತ್ತಿದೆ. ಜನರು ಎಮ್ಮೆ ಬಳಿ ಸೆಲ್ಫಿ ಕ್ಲಿಕ್ಕಿಸಿಕೊಳ್ಳುತ್ತಿದ್ದಾರೆ. ಚಿಕ್ಕ ಮಕ್ಕಳನ್ನು ಕರೆತರುವ ಪೋಷಕರು ಅವರನ್ನು ಹೆಗಲ ಮೇಲೆ ಹೊತ್ತು ಎಮ್ಮೆಯನ್ನು ತೋರಿಸುವ ದೃಶ್ಯಗಳು ಕಂಡು ಬರುತ್ತಿವೆ.



ಡೊನಾಲ್ಡ್ ಟ್ರಂಪ್ ಹೆಸರಿನ ಎಮ್ಮೆ

‘ಮೃಗಾಯಲಯದಲ್ಲಿನ ಕೆಲಸಗಾರರು ಎಮ್ಮೆಯ ಕೂದಲನ್ನು ಬಾಚುವುದು ಸೇರಿದಂತೆ ಅದನ್ನು ಚೆನ್ನಾಗಿ ನೋಡಿಕೊಳ್ಳುತ್ತಿದ್ದಾರೆ’ ಎಂದು ಅಲ್ಲಿನ ಜನರು ಹೇಳುತ್ತಿದ್ದಾರೆ.

₹15 ಲಕ್ಷ ಕೋಟಿ ತಪ್ಪು ಲೆಕ್ಕ

ಒಂದನೇ ಪುಟದಿಂದ...

ಆರ್‌ಇಎಲ್ ಕಂಪನಿಯು 2021–22ರಿಂದ 2024–25ರವರೆಗಿನ ಅವಧಿಯಲ್ಲಿ ಒಟ್ಟು ₹15.18 ಲಕ್ಷ ಕೋಟಿ ವರಮಾನ ಗಳಿಸಿರುವುದಾಗಿ ಹೇಳಿದೆ. ಇದರಲ್ಲಿ ₹15.15 ಲಕ್ಷ ಕೋಟಿ (ಅಂದರೆ ಶೇ 99.8ರಷ್ಟು ವರಮಾನ) ಅಂಗ ಸಂಸ್ಥೆಗಳಿಂದ ಬಂದಿರುವುದಾಗಿ ಕಂಪನಿ ತಿಳಿಸಿದೆ. ಆದರೆ, ಸಮೂಹದ ಪ್ರಮುಖ ಅಂಗಸಂಸ್ಥೆಯಾದ ‘ವಲ್ಕಂಬಿ’ಯ ಹಣಕಾಸಿನ ವಿವರಗಳು ವರಮಾನದೊಂದಿಗೆ ತಾಳೆಯಾಗುತ್ತಿಲ್ಲ ಎಂದು ಸೆಬಿ ವಿವರಿಸಿದೆ.

ಈ ನಡುವೆ ಷೇರುಪೇಟೆಗೆ ಹೇಳಿಕೆಯೊಂದನ್ನು ಬಿಡುಗಡೆ ಮಾಡಿರುವ ರಾಜೇಶ್ ಎಕ್ಸ್‌ಪೋರ್ಟ್ಸ್ ಲಿಮಿಟೆಡ್, ತಾನು ಬಹಿರಂಗಪಡಿಸಿರುವ ವರಮಾನವು ಸರಿಯಾಗಿಯೇ ಇದೆ, ತನ್ನ ಹಾಗೂ ಸೆಬಿ ನಡುವೆ ಸಂವಹನದ ಸಮಸ್ಯೆ ಉಂಟಾಗಿರುವಂತೆ ಕಾಣುತ್ತಿದೆ ಎಂದು ಹೇಳಿದೆ. ಎಂದು ಹೇಳಿದೆ.

ಸೆಬಿ ಆದೇಶದಲ್ಲಿ ಏನಿದೆ?

ಒಂದನೇ ಪುಟದಿಂದ...

ಕಾರ್ಯಾಚರಣೆ ನಡೆಸುವ ಅಂಗಸಂಸ್ಥೆಯು ಪ್ರಕ್ರಿಯಾ ಶುಲ್ಕವನ್ನು ಮಾತ್ರ ವರಮಾನ ಎಂದು ಗುರುತಿಸಿರುವಾಗ, ಸ್ವತಂತ್ರವಾದ ಯಾವುದೇ ಕಾರ್ಯಾಚರಣೆ ನಡೆಸದ ಮಾಲೀಕತ್ವದ ಕಂಪನಿಯು ಲಕ್ಷಾಂತರ ಕೋಟಿ ರೂಪಾಯಿಯಷ್ಟು ಆಗುವ ಒಟ್ಟು ವಹಿವಾಟಿನ ಮೌಲ್ಯವನ್ನು ಲೆಕ್ಕಪತ್ರದಲ್ಲಿ ತೋರಿಸಿದ್ದು ಹೇಗೆ ಎಂದು ಸೆಬಿ ಪ್ರಶ್ನಿಸಿದೆ.

ಇದರ ಬಗ್ಗೆ ವಿವರ ನೀಡುವಂತೆ ಸೆಬಿ ಕೇಳಿದಾಗ ಆರ್‌ಇಎಲ್ ಕಂಪನಿಯು, ‘ವಲ್ಕಂಬಿ ಪ್ರಕ್ರಿಯಾ ಶುಲ್ಕವನ್ನು ಮಾತ್ರ ವರಮಾನ ಎಂದು ಹೇಳಿದೆ.

ಜಿಜಿಆರ್ ಕಂಪನಿಯು ಚಿನ್ನದ ವಹಿವಾಟಿನ ಮೌಲ್ಯ ಮತ್ತು ಪ್ರಕ್ರಿಯಾ ಶುಲ್ಕವನ್ನು ಲೆಕ್ಕಪತ್ರದಲ್ಲಿ ತೋರಿಸಿದೆ’ ಎಂದು ಉತ್ತರ ನೀಡಿದೆ.

ಇದನ್ನು ಸೆಬಿ ಒಪ್ಪಿಲ್ಲ. ‘ಲೆಕ್ಕಪತ್ರಗಳ ಮೂಲಭೂತ ಅಂಶಗಳನ್ನೇ ಬದಲು ಮಾಡಿ, ಸರಕುಗಳ ಮಾರುಕಟ್ಟೆ ಮೌಲ್ಯವನ್ನು ವರಮಾನವನ್ನಾಗಿ ತೋರಿಸುವುದು ಹೇಗೆ ಎಂಬುದು ಸ್ಪಷ್ಟವಾಗುತ್ತಿಲ್ಲ’ ಎಂದು ಸೆಬಿ ಹೇಳಿದೆ.

ಸಂಘರ್ಷಕ್ಕೆ ತೆರೆ ಎಳೆಯಲು ಅಮೆರಿಕದ ಸಂಸತ್ತು ಅನುಮೋದನೆ: ಟ್ರಂಪ್‌ಗೆ ಹಿನ್ನಡೆ

ಯುದ್ಧಾಂತ್ಯಕ್ಕೆ ನಿರ್ಣಯ ಅಂಗೀಕಾರ

ವಾಷಿಂಗ್ಟನ್ (ಎಪಿ): ಇರಾನ್ ವಿರುದ್ಧ ಅಮೆರಿಕದ ಸೇನಾ ಕ್ರಮವನ್ನು ಕೊನೆಗೊಳಿಸುವ ‘ಯುದ್ಧಾಧಿಕಾರ ನಿರ್ಣಯ’ಕ್ಕೆ ಅಮೆರಿಕದ ಸಂಸತ್ತು ಗುರುವಾರ ಅನುಮೋದನೆ ನೀಡಿದೆ.

ಮೂರು ತಿಂಗಳಿಂದ ಮುಂದುವರಿದಿರುವ ಪಶ್ಚಿಮ ಏಷ್ಯಾ ಸಂಘರ್ಷವನ್ನು ಕೊನೆಗೊಳಿಸುವ ದಿಸೆಯಲ್ಲಿ ಈ ನಿರ್ಣಯವು ಮಹತ್ವದ್ದಾಗಿದೆ. ಅಮೆರಿಕದ ಅಧ್ಯಕ್ಷರಿಗೆ ಇರುವ ‘ಯುದ್ಧ ಅಧಿಕಾರ’ ವಿಷಯದಲ್ಲಿ ಡೊನಾಲ್ಡ್ ಟ್ರಂಪ್ ವಿರುದ್ಧ ನಾಲ್ಕು ಬಾರಿ ನಿರ್ಣಯ ಮಂಡನೆ ಆಗಿದ್ದು, ಇದೇ ಮೊದಲ ಬಾರಿಗೆ ಸಂಸತ್ತಿನ ಅನುಮೋದನೆ ಲಭಿಸಿದೆ.

ಇರಾನ್ ಯುದ್ಧದ ಬಗ್ಗೆ ಅಮೆರಿಕದಲ್ಲಿ ರಾಜಕೀಯ ಅಸಮಾಧಾನ ಹೆಚ್ಚುತ್ತಿದ್ದು, ಈ ಬಾರಿ ಮತಗಳ ಸಂಖ್ಯೆಯೂ ಹೆಚ್ಚಾಗಿದೆ. ನಿರ್ಣಯದ ಪರವಾಗಿ 215 ಸಂಸದರು ಹಾಗೂ ನಿರ್ಣಯದ ವಿರುದ್ಧವಾಗಿ 208 ಸದಸ್ಯರು ಮತ ಚಲಾಯಿಸಿದ್ದಾರೆ. ನಿರ್ಣಯಕ್ಕೆ ಅನುಮೋದನೆ ಸಿಗುತ್ತಿದ್ದಂತೆಯೇ ಸದನದಲ್ಲಿ ಹರ್ಷೋದ್ಗಾರಗಳು ಮೊಳಗಿದವು.

ಯುದ್ಧ ಆದಷ್ಟು ಬೇಗ ಕೊನೆಗೊಳ್ಳಬೇಕು ಎಂಬ ಅಭಿಪ್ರಾಯವನ್ನು ಹೆಚ್ಚಿನ ಸಂಸದರು ಹೊಂದಿದ್ದಾರೆ.

‘ಯುದ್ಧದ ಅಧಿಕಾರವನ್ನು ಅಮೆರಿಕದ ಅಧ್ಯಕ್ಷರಿಗೆ ವಹಿಸುವುದು ಕಾನೂನುಬಾಹಿರ ಮತ್ತು ನ್ಯಾಯಸಮ್ಮತ ಅಲ್ಲ’ ಎಂದು ಡೆಮಾಕ್ರಟಿಕ್ ಪಕ್ಷದ ಮುಖಂಡರು ವಾದಿಸಿದ್ದರು. ‘ದುಡುಕಿನ ಮತ್ತು ದುಬಾರಿ ಆಯ್ಕೆಯ ಈ ಯುದ್ಧವು ಇಂದಿಗೆ ಕೊನೆಗೊಳ್ಳಬೇಕು’ ಎಂದು ಡೆಮಾಕ್ರಟಿಕ್ ಪಕ್ಷದ ಸಂಸದ ಹಕೀಮ್ ಜೆಫ್ರೀಸ್ ಒತ್ತಾಯಿಸಿದ್ದರು.

ಸ್ಪೀಕರ್ ಮೈಕ್ ಜಾನ್ಸನ್ ಕೂಡ ಈ ನಿರ್ಣಯದ ವಿರುದ್ಧವಾಗಿದ್ದರು.

ಈ ಹಿಂದೆ ನಿರ್ಣಯವು ಅನುಮೋದನೆಯ ಅಂಚಿನಲ್ಲಿದ್ದಾಗ ಅವರು ಪ್ರಕ್ರಿಯೆಯನ್ನು ಹಠಾತ್ ಸ್ಥಗಿತಗೊಳಿಸಿದ್ದರು. ಆದರೆ, ಇತ್ತೀಚೆಗೆ ಪಶ್ಚಿಮ ಏಷ್ಯಾ ಸಂಘರ್ಷ ತೀವ್ರಗೊಂಡು, ಟ್ರಂಪ್ ಪರಿಹಾರಕ್ಕಾಗಿ ಹೆಣಗಾಡುತ್ತಿರುವಾಗ ನಿರ್ಣಯ ಅನುಮೋದನೆ ಅನಿವಾರ್ಯವಾಗಿತ್ತು ಎಂದು ಮೂಲಗಳು ಹೇಳಿವೆ.



ಇಸ್ರೇಲ್ ಪಡೆ ದಕ್ಷಿಣ ಲೆಬನಾನ್‌ನ ನಬಾತಿಹ್ ಪ್ರದೇಶದ ಮೇಲೆ ನಡೆಸಿದ ವೈಮಾನಿಕ ದಾಳಿಯಿಂದಾಗಿ ದಟ್ಟ ಹೊಗೆ ಮೇಲೆದ್ದಿರುವ ದೃಶ್ಯ – ಎಎಫ್‌ಪಿ ಚಿತ್ರ

ರಿಪಬ್ಲಿಕನ್ ಸದಸ್ಯರ ಬೆಂಬಲ

ಯಾವುದೇ ದೇಶದ ಮೇಲೆ ಸೇನಾ ಕಾರ್ಯಾಚರಣೆ ನಡೆಸಬೇಕಿದ್ದರೆ ಶ್ವೇತಭವನವು ಯುದ್ಧ ಅಧಿಕಾರ ಕಾಯ್ದೆಯಡಿ ಅಮೆರಿಕದ ಸಂಸತ್ತಿನ ಅನುಮೋದನೆ ಪಡೆದುಕೊಳ್ಳಬೇಕು. ಅನುಮೋದನೆ ನೀಡಲು ಅಥವಾ ತಿರಸ್ಕರಿಸಲು ಸಂಸತ್ತಿಗೆ 60 ದಿನಗಳ ಕಾಲಾವಕಾಶ ಇದೆ.

‘ಯುದ್ಧದಿಂದಾಗಿ ಅಮೆರಿಕದ ತೆರಿಗೆದಾರರಿಗೆ 10 ಸಾವಿರ ಕೋಟಿ ಡಾಲರ್‌ಗಿಂತ (ಸುಮಾರು ₹9.56 ಲಕ್ಷ ಕೋಟಿ) ಹೆಚ್ಚು ನಷ್ಟವಾಗುತ್ತಿತ್ತು. ಹಣದುಬ್ಬರ ಏರಿಕೆ ಸೇರಿ ದೇಶೀಯ ಸಮಸ್ಯೆಗಳನ್ನು ಬಗೆಹರಿಸುವುದಾಗಿ ಟ್ರಂಪ್ ಭರವಸೆ ನೀಡಿದರೂ, ಅಂತರರಾಷ್ಟ್ರೀಯ ಮಟ್ಟದಲ್ಲಿ ದಿನೇ ದಿನೇ ಇಂಧನ ಬಿಕ್ಕಟ್ಟು ಉಲ್ಬಣಿಸುತ್ತಿತ್ತು. ಹೊರ್ಮುಜ್ ಜಲಸಂಧಿ ತೆರೆಯಲು ಟ್ರಂಪ್ ತೀವ್ರ ಪ್ರಯತ್ನ ನಡೆಸಿದರೂ ಅದು ಯಶಸ್ವಿಯಾಗಲಿಲ್ಲ. ಹೀಗಾಗಿ ಅಂತಿಮವಾಗಿ ನಿರ್ಣಯದ ಪರವಾಗಿ ರಿಪಬ್ಲಿಕನ್ ಸಂಸದರೂ ನಮ್ಮೊಂದಿಗೆ ಕೈಜೋಡಿಸಿದ್ದಾರೆ’ ಎಂದು ಡೆಮಾಕ್ರಟಿಕ್ ಪಕ್ಷದ ಸಂಸದ ಹಕೀಮ್ ಜೆಫ್ರೀಸ್ ಹೇಳಿದ್ದಾರೆ.

ಇಸ್ರೇಲ್–ಲೆಬನಾನ್ ಕದನ ವಿರಾಮ

ಬೈರೂತ್ (ಎಪಿ): ಉಭಯ ದೇಶಗಳ ನಡುವೆ ಜಾರಿಯಲ್ಲಿರುವ ತಾತ್ಕಾಲಿಕ ಕದನ ವಿರಾಮವನ್ನು ನವೀಕರಿಸಿ, ಸಂಘರ್ಷಕ್ಕೆ ತೆರೆ ಎಳೆಯಲು ಇಸ್ರೇಲ್ ಮತ್ತು ಲೆಬನಾನ್ ಒಪ್ಪಿಕೊಂಡಿವೆ.

ಲೆಬನಾನ್‌ನಲ್ಲಿ ಹಿಜ್ಬುಲ್ಲಾ ಬಂಡುಕೋರರನ್ನು ನಿಷೇಧಿಸಲು, ಸ್ಥಳೀಯ ಶಸ್ತ್ರರಹಿತ ಭದ್ರತಾ ವಲಯಗಳನ್ನು ರಚಿಸುವುದರ ಬಗ್ಗೆಯೂ, ಅಮೆರಿಕದ ಮಧ್ಯಸ್ಥಿಕೆಯಲ್ಲಿ ವಾಷಿಂಗ್ಟನ್‌ನಲ್ಲಿ ನಡೆದ ನಾಲ್ಕನೆಯ ಸುತ್ತಿನ ಮಾತುಕತೆಯಲ್ಲಿ ಒಪ್ಪಂದಕ್ಕೆ ಬರಲಾಗಿದೆ ಎಂದು ಇಸ್ರೇಲ್–ಲೆಬನಾನ್ ಜಂಟಿ ಪ್ರಕಟಣೆ ತಿಳಿಸಿದೆ. ಶಸ್ತ್ರರಹಿತ ಭದ್ರತಾ ವಲಯಗಳನ್ನು ಹೇಗೆ ನಿರ್ಮಿಸಲಾಗುತ್ತದೆಎನ್ನುವುದು ಸ್ಪಷ್ಟವಾಗಿಲ್ಲ. ಆದರೆ, ಲೆಬನಾನ್ ಸೇನೆಯು ಈ ವಲಯದ ಮೇಲೆ ಸಂಪೂರ್ಣ ನಿಯಂತ್ರಣ ಹೊಂದಿರುತ್ತದೆ ಎಂದು ಮೂಲಗಳು ಹೇಳಿವೆ. ದಕ್ಷಿಣ ಲೆಬನಾನ್‌ನ ಲಿಟಾನಿ ನದಿ ಪಾತ್ರದಿಂದ ಹಿಜ್ಬುಲ್ಲಾ ಬಂಡುಕೋರರನ್ನು ಪೂರ್ಣವಾಗಿ ಸ್ಥಳಾಂತರಿಸಲು ಲೆಬನಾನ್ ಸಹಯೋಗದಲ್ಲಿ ಇಸ್ರೇಲ್ ಯೋಜನೆ ರೂಪಿಸಿದೆ ಎನ್ನಲಾಗಿದೆ.

‘ಇಸ್ರೇಲ್–ಲೆಬನಾನ್ ಸಂಬಂಧ ಪುನಸ್ಥಾಪನೆಯ ಬಗ್ಗೆ ಉಭಯ ದೇಶಗಳ ಸಾರ್ವಭೌಮ ಸರ್ಕಾರಗಳೇ ನಿರ್ಧಾರ ಕೈಗೊಳ್ಳಬೇಕು. ಲೆಬನಾನ್ ಭವಿಷ್ಯವನ್ನು ಒತ್ತೆ ಮಾಡಿಕೊಳ್ಳಲು ಮೂರನೆಯ ವ್ಯಕ್ತಿ ಅಥವಾ ದೇಶಕ್ಕೆ ಅವಕಾಶ ನೀಡುವುದಿಲ್ಲ’ ಎನ್ನುವುದೂ ಈ ಒಪ್ಪಂದದಲ್ಲಿ ಸೇರಿದೆ.

‘ಲೆಬನಾನ್ ಮೇಲೆ ಇಸ್ರೇಲ್ ದಾಳಿ ಮುಂದುವರಿಸಿರುವುದರಿಂದ ಅಮೆರಿಕ–ಇರಾನ್ ನಡುವಿನ ಒಪ್ಪಂದ ವಿಳಂಬವಾಗುತ್ತಿದೆ’ ಎಂದು ಇರಾನ್ ಹೇಳಿತ್ತು. ಇರಾನ್ ಹಿಜ್ಬುಲ್ಲಾ ಬಂಡುಕೋರರನ್ನು ಬೆಂಬಲಿಸುತ್ತಿದೆ. ಆದರೆ, ಇಸ್ರೇಲ್ –ಲೆಬನಾನ್ ನಡುವಿನ ಮಾತುಕತೆಯಲ್ಲಿ ಹಿಜ್ಬುಲ್ಲಾ ಬಂಡುಕೋರರಿಗೆ ಅವಕಾಶ ನಿರಾಕರಿಸಲಾಗಿತ್ತು.

ಲಾಂಗ್‌ಜಂಪ್: ಆರ್ಯ ಹೊಸ ದಾಖಲೆ

ಕಂಠೀರವ ಕ್ರೀಡಾಂಗಣ: ರಾಜ್ಯ ಸೀನಿಯರ್ ಅಥ್ಲೆಟಿಕ್ಸ್ ಆರ್ಯನ್ ಮನೋಜ್, ಪ್ರಕೃತಿ ರೂಪಾ ವೇಗಿಗಳು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆರ್ಯ ಎಸ್. ಅವರು ಕಂಠೀರವ ಕ್ರೀಡಾಂಗಣದಲ್ಲಿ ಗುರುವಾರ ನಡೆದ ರಾಜ್ಯ ಸೀನಿಯರ್ ಅಥ್ಲೆಟಿಕ್ ಕೂಟದ ಪುರುಷರ ಲಾಂಗ್‌ಜಂಪ್ ಸ್ಪರ್ಧೆಯಲ್ಲಿ 7.98 ಮೀಟರ್ ಜಿಗಿದು ನೂತನ ರಾಜ್ಯ ದಾಖಲೆ ನಿರ್ಮಿಸಿದರು.

ಬೆಂಗಳೂರಿನ ಸಾಯ್ ಕೇಂದ್ರದಲ್ಲಿ ತರಬೇತಿ ಪಡೆಯುತ್ತಿರುವ ಆರ್ಯ ಅವರು 2019ರಲ್ಲಿ ಸಂಶೀರ್ ಎಸ್.ಇ. (7.91 ಮೀ) ನಿರ್ಮಿಸಿದ್ದ ದಾಖಲೆ ಮುರಿದರು. ಮತ್ತೊಬ್ಬ ಸ್ಪರ್ಧಿ ಪುರುಷೋತ್ತಮ್ ಅವರು 7.97 ಮೀ. ದೂರ ಜಿಗಿದು, ಕೇವಲ ಒಂದು ಸೆಂಟಿಮೀಟರ್ ಅಂತರದಿಂದ ಎರಡನೇ ಸ್ಥಾನಕ್ಕೆ ಸರಿದರು.

24 ವರ್ಷದ ಆರ್ಯ ಮತ್ತು ಪುರುಷೋತ್ತಮ್ ಅವರು ಏಷ್ಯನ್ ಕ್ರೀಡಾಕೂಟದ ಅಂತಿಮ ಟ್ರಯಲ್ಸ್ ಆಗಿರುವ ಅಂತರ ರಾಜ್ಯ ಅಥ್ಲೆಟಿಕ್ಸ್ ಚಾಂಪಿಯನ್‌ಷಿಪ್‌ಗೆ ಸ್ಥಾನ ಖಚಿತಪಡಿಸಿಕೊಂಡರು. ಈ ಚಾಂಪಿಯನ್‌ಷಿಪ್ ತಿಂಗಳಾಂತ್ಯದಲ್ಲಿ ಒಡಿಶಾದ ಭುವನೇಶ್ವರದಲ್ಲಿ ನಡೆಯಲಿದೆ.

ಮತ್ತೊಬ್ಬ ಹೈಜಂಪ್‌ಪಟು ಲೋಕೇಶ್ ಸತ್ಯನಾಥನ್ ಗಾಯದ ಕಾರಣದಿಂದಾಗಿ ಹೊರ ಗುಳಿದಿದ್ದರು. ಆರ್ಯ ಮತ್ತು ಪುರುಷೋತ್ತಮ್ ಆರಂಭದಲ್ಲೇ ಕ್ರಮವಾಗಿ 7.66 ಮತ್ತು 7.67 ಮೀ. ಜಿಗಿದು, ಮುನ್ನಡೆ ಸಾಧಿಸಿದ್ದರು. ನಂತರದ ಪ್ರಯತ್ನಗಳಲ್ಲಿ ಜಿಗಿತವನ್ನು ಉತ್ತಮಪಡಿಸಿಕೊಂಡರು.

ಮಹಿಳೆಯರ ಹ್ಯಾಮರ್ ಥ್ರೋ ಸ್ಪರ್ಧೆಯಲ್ಲಿ ಸ್ಪ್ರುಹಾ ನಾಯಕ್ ಅವರು 48.83 ಮೀಟರ್ ಸಾಧನೆಯೊಂದಿಗೆ ಹೊಸ ದಾಖಲೆ ಬರೆದರು. 2022ರಲ್ಲಿ ಅಮ್ರೀನ್ (46.54ಮೀ) ನಿರ್ಮಿಸಿದ್ದ ದಾಖಲೆಯನ್ನು ಹಿಂದಿಕ್ಕಿದರು. ಅಮ್ರೀನ್ ಅವರು 41.99 ಮೀ. ದೂರ ಹ್ಯಾಮರ್ ಎಸೆದು ಎರಡನೇ ಸ್ಥಾನ ಗಳಿಸಿದರು.

ಫಲಿತಾಂಶ: ಪುರುಷರು: 100 ಮೀ: ಆರ್ಯನ್ ಮನೋಜ್ (ಕಾಲ 10.51ಸೆ)–1, ಪ್ರಸನ್ನಕುಮಾರ್ ವಿ ಮಣ್ಣೂರ್–2, ಧನುಷ್ ಕೆ–3; 110 ಮೀ. ಹರ್ಡಲ್ಸ್: ರತನಗೌಡ ಪಾಟೀಲ (ಕಾಲ: 15.26)–1, ಆದೇಶ್ ಜಿ. ಹೆಗ್ಡೆ–2, ಲಬ್ಬೈಕ್ ನಲಬಂದ್–3; 400 ಮೀ: ತೀರ್ಥೇಶ್ ಪಿ.ಶೆಟ್ಟಿ (ಕಾಲ: 47.09ಸೆ)–1, ಮಿಜೊ ಚಾಕೋ ಕುರಿಯನ್–2, ಚರಣ್‌ವೀರ್ ಸಿಂಗ್ ಎನ್–3; 800 ಮೀ: ಬೋಪಣ್ಣ ಕೆ.ಟಿ. (ಕಾಲ:1ನಿ.48.33ಸೆ)–1, ತುಷಾರ್ ವಿ. ಭೇಕಾನೆ–2, ಕಮಲಕಣ್ಣನ್ ಎಸ್–3; 1500 ಮೀ: ಕಲ್ಯಾಣ್ ಜೆ.ಆರ್. (ಕಾಲ:3ನಿ.50.29ಸೆ)–1, ಕರಣ್ ಜೆ.ಆರ್.ಆರ್–2, ರಂಗಣ್ಣ ನಾಯ್ಕರ್–3; 3000 ಮೀ. ಸ್ಟೀಪಲ್‌ಚೇಸ್: ಬಾಲು ವೈ. ಹೆಗ್ರಿ (ಕಾಲ:9ನಿ.30.07ಸೆ)–1, ಪರಶುರಾಮ್ ಆರ್. ಗಸ್ತಿ–2, ಚನ್ನಕೇಶವ ಜಿ.ಎಲ್–3; 5000 ಮೀ ಓಟ: ಓಂಕಾರ್ ಆರ್ ಪನ್ವಾಲ್ಕರ್ (ಕಾಲ:14 ನಿ. 34.55ಸೆ)–1, ಶಿವಾಜಿ ಪಿ.ಎಂ–2, ಶೈಲೇಶ್ ಕುಶ್ವಾಹ–3

ಶಾಟ್‌ಪಟ್: ಪ್ರಜ್ವಲ್ ಎಂ. ಶೆಟ್ಟಿ (ದೂರ: 17.09 ಮೀ)–1, ಶಶಿಕುಮಾರ್ ಕೆ–2, ಆಕಾಶ್ ಎಸ್. ಕುಂದರ್–3; ಡಿಸ್ಕಸ್ ಥ್ರೋ: ಸ್ಮಿತ್ ಬಿ ಜಾವಿಯಾ (ದೂರ: 48.90 ಮೀ)–1, ಭರತ್ ವೈ–2, ಬಿ.ವಿಶಾಲ್ ಅನ್ವೇಕರ್–3; ಹ್ಯಾಮರ್ ಥ್ರೋ: ಧೀರಜ್ ಆರ್.ಪೂಜಾರಿ (ದೂರ: 56.69ಮೀ)–1, ಮುತ್ತಪ್ಪ–2, ಯಶಸ್ ಪಿ. ಕುರ್ಬಾರ್–3; ಹೈಜಂಪ್: ಜೆಸ್ಸಿ ಸಂದೇಶ್ (ಎತ್ತರ: 2.15 ಮೀ)–1, ಸುದೀಪ್–2, ದರ್ಶನ್ ಕೆ–3; ಲಾಂಗ್‌ಜಂಪ್: ಆರ್ಯ ಎಸ್. (ದೂರ: 7.98ಮೀ)–1, ಪುರುಷೋತ್ತಮ್–2, ಸಿದ್ಧಾರ್ಥ್ ಮೋಹನ್ ನಾಯಕ್–3; ಟ್ರಿಪಲ್ ಜಂಪ್: ಯಶಸ್ ಆರ್.ಗೌಡ (ದೂರ: 15.08ಮೀ)–1, ನವೀನ್ ಬಿ–2, ರಮೇಶ ನಾಯಕ–3.

ಮಹಿಳೆಯರು: 100 ಮೀ: ಪ್ರಕೃತಿ ರೂಪಾ (ಕಾಲ: 11.65ಸೆ)–1, ಉನ್ನತಿ ಅಯ್ಯಪ್ಪ–2, ದಾನೇಶ್ವರಿ ಎ.ಟಿ–3; 110 ಮೀ. ಹರ್ಡಲ್: ಶ್ರೀಯಾ ರಾಜೇಶ್ (ಕಾಲ: 13.71ಸೆ)–1, ಅಕ್ಷತಾ–2, ಪ್ರತೀಕಾ–3; 400 ಮೀ: ಪ್ರಿಯಾ ಮೋಹನ್ (ಕಾಲ: 54.67ಸೆ)–1, ಮೇಘಾ ಆರ್.ಎಂ–2, ಶ್ರಾವಣಿ ಭಾಟೆ–3; 800 ಮೀ: ವೈಷ್ಣವಿ ರಾವಲ್ (ಕಾಲ: 2ನಿ.11.13ಸೆ)–1, ನಾಗಿಣಿ–2, ಉಷಾ ಆರ್–3; 1500 ಮೀ: ಪ್ರಿಯಾಂಕಾ ಸಿ. (4ನಿ.37.51ಸೆ)–1, ಜಿ.ಎಸ್.ನಾಗಶ್ರೀ–2, ಜಯಶ್ರೀ ಬಗಾಲಿ–3; 3000 ಮೀ ಸ್ಟೀಪಲ್‌ಚೇಸ್: ಶ್ರೇಯಾ ಎಂ. (ಕಾಲ: 12ನಿ.13.06ಸೆ); 5000 ಮೀ: ಆರಾಧನಾ (ಕಾಲ: 17ಸೆ.21.70ಸೆ)–1, ತೇಜಸ್ವಿನಿ ಎನ್–2, ವಿಜಯಲಕ್ಷ್ಮಿ ಕರಲಿಂಗಣ್ಣವರ–3

ಶಾಟ್‌ಪಟ್: ಅಂಬಿಕಾ ವಿ. (ದೂರ: 13.75ಮೀ)–1, ಆಕಾಂಕ್ಷಾ ಕೆಂಜಾ–2, ಮಾಧುರ್ಯ–3; ಡಿಸ್ಕಸ್ ಥ್ರೋ: ಮಾಧುರ್ಯ (ದೂರ: 44.00ಮೀ)–1, ದೇವಿಕಾ ವಿ.ರಾವ್–2, ದೀಕ್ಷಿತಾ ಎಂ.ಎಂ–3; ಜಾವೆಲಿನ್ ಥ್ರೋ: ಕರಿಶ್ಮಾ ಎಸ್.ಸನಿಲ್ (ದೂರ: 45.82ಮೀ)–1, ಶ್ರಾವ್ಯಾ–2, ತನ್ಮಯ ಪ್ರಸಾದ್–3; ಹ್ಯಾಮರ್ ಥ್ರೋ: ಸ್ಪ್ರುಹಾ ನಾಯಕ್ (ದೂರ: 48.83ಮೀ)–1, ಅಮ್ರೀನ್–2, ಖುಷಿ ಸಾಲ್ಯಾನ್–3; ಹೈಜಂಪ್: ಪಲ್ಲವಿ ಪಾಟೀಲ (ಎತ್ತರ: 1.73ಮೀ)–1, ಸುಪ್ರಿಯಾ ಎಸ್. ಬಿ–2; ಲಾಂಗ್‌ಜಂಪ್: ಪಾವನಾ ನಾಗರಾಜ್ (ದೂರ:6.02ಮೀ)–1, ಶ್ರೀದೇವಿಕಾ–2, ದೀಶಾ ಗಣಪತಿ–3. ಟ್ರಿಪಲ್ ಜಂಪ್: ಭೂಮಿಕಾ ಕೆ.ಎನ್. (ದೂರ: 12.58 ಮೀ)–1, ದೀಶಾ ಗಣಪತಿ–2



ಲಾಂಗ್‌ಜಂಪ್ ಸ್ಪರ್ಧೆಯಲ್ಲಿ ನೂತನ ದಾಖಲೆ ಬರೆದ ಆರ್ಯ ಎಸ್ ಮತ್ತು ಪುರುಷೋತ್ತಮ್
ಪ್ರಜಾವಾಣಿ ಚಿತ್ರ: ಬಿ.ಕೆ. ಜನಾರ್ದನ್

ಮಹಾರಾಜ ಟ್ರೋಫಿ ಆಟಗಾರರ ಬಿಡ್ ಇಂದು
ಕಣದಲ್ಲಿ ಮಯಂಕ್, ಕರುಣ್, ಮನೀಷ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆಯ ಆಶ್ರಯದಲ್ಲಿ ನಡೆಯಲಿರುವ ಮಹಾರಾಜ ಟ್ರೋಫಿ ಕ್ರಿಕೆಟ್ ಟೂರ್ನಿಯ ಬಿಡ್ ಪ್ರಕ್ರಿಯೆ ಶುಕ್ರವಾರ ನಡೆಯಲಿದೆ. ಖ್ಯಾತನಾಮ ಆಟಗಾರರ ಖರೀದಿಗೆ ಪೈಪೋಟಿ ನಡೆಯುವ ನಿರೀಕ್ಷೆ ಇದೆ.

ಭಾರತ ತಂಡದಲ್ಲಿ ಆಡಿರುವ ಅನುಭವಿ ಆಟಗಾರರಾದ ಕರುಣ್ ನಾಯರ್, ಮಯಂಕ್ ಅಗರವಾಲ್ ಮತ್ತು ಮನೀಷ್ ಪಾಂಡೆ ಅವರು ಬಿಡ್ ಪ್ರಕ್ರಿಯೆಯಲ್ಲಿದ್ದಾರೆ. ಒಟ್ಟು ಆರು ಫ್ರಾಂಚೈಸಿಗಳು ತಲಾ ₹ 60 ಲಕ್ಷದ ಥೈಲಿಯೊಂದಿಗೆ ಬಿಡ್‌ನಲ್ಲಿ ಪಾಲ್ಗೊಳ್ಳಲಿವೆ. 150ಕ್ಕೂ ಹೆಚ್ಚು ಕ್ರಿಕೆಟಿಗರು ಬಿಡ್‌ನಲ್ಲಿದ್ದಾರೆ.

ಪ್ರತಿ ಫ್ರ್ಯಾಂಚೈಸಿಯೂ ಕನಿಷ್ಠ 16 ಮತ್ತು ಗರಿಷ್ಠ 18 ಆಟಗಾರರನ್ನು ಸೇರ್ಪಡೆ ಮಾಡಿಕೊಳ್ಳಲು ಅವಕಾಶವಿದೆ. ಅದರಲ್ಲಿ ಫ್ರ್ಯಾಂಚೈಸಿ ಪ್ರತಿನಿಧಿಸುವ ಸ್ಥಳೀಯ ಪ್ರದೇಶದ ಇಬ್ಬರು ಆಟಗಾರರು ತಂಡದಲ್ಲಿರುವುದು ಕಡ್ಡಾಯವಾಗಿದೆ. ಐದು ಗುಂಪುಗಳಲ್ಲಿ (ಎ,ಬಿ,ಸಿ,ಡಿ ಮತ್ತು ಇ) ಆಟಗಾರರನ್ನು ವರ್ಗೀಕರಿಸಲಾಗಿದೆ.


'ಎ' ಗುಂಪಿನಲ್ಲಿ ಭಾರತ ತಂಡ ಮತ್ತು ಐಪಿಎಲ್ ತಂಡಗಳನ್ನು ಪ್ರತಿನಿಧಿಸಿರುವ ಕ್ರಿಕೆಟಿಗರು ಇದ್ದಾರೆ. ಅವರಿಗೆ ₹ 2ಲಕ್ಷ ಮೂಲಬೆಲೆ ನಿಗದಿ ಮಾಡಲಾಗಿದೆ. ಹೋದ ವರ್ಷದ ಋತುವಿನಲ್ಲಿ 26 ವಿಕೆಟ್ ಗಳಿಸಿದ್ದ ವೇಗಿ ವೈಶಾಖ ವಿಜಯಕುಮಾರ್, ಬ್ಯಾಟರ್ ಆರ್. ಸ್ಮರಣ್ ಹಾಗೂ ಸ್ಪಿನ್ನರ್ ಯಶ್ ರಾಜ್ ಪೂಂಜಾ ಅವರಿಗೆ ಉತ್ತಮ ಮೌಲ್ಯ ಸಿಗುವ ನಿರೀಕ್ಷೆ ಇದೆ. ಈ ವಿಭಾಗದಲ್ಲಿ ಅಭಿನವ್ ಮನೋಹರ್, ವಿದ್ವತ್ ಕಾವೇರಪ್ಪ ಹಾಗೂ ಬಿ.ಆರ್. ಶರತ್ ಇದ್ದಾರೆ.

'ಬಿ' ವರ್ಗದಲ್ಲಿ; 30 ವರ್ಷಕ್ಕಿಂತ ಕಡಿಮೆ ವಯಸ್ಸಿನ ಆಟಗಾರರು ಇದ್ದಾರೆ. ಸೀನಿಯರ್ ರಾಜ್ಯ ತಂಡವನ್ನು ಪ್ರತಿನಿಧಿಸಿದ ಎಲ್ಲಾ ಕ್ರಿಕೆಟಿಗರನ್ನು ಒಳಗೊಂಡಿದೆ ಮತ್ತು ₹ 1 ಲಕ್ಷ ಮೂಲಬೆಲೆ ನಿಗದಿ ಮಾಡಲಾಗಿದೆ. ಎಲ್.ಆರ್. ಚೇತನ್, ಹಾರ್ದಿಕ್ ರಾಜ್, ಲವನೀತ್ ಸಿಸೋಡಿಯಾ, ಮೆಕ್ನಿಲ್ ನರೊನ್ಹಾ, ಮನ್ವಂತ್ ಕುಮಾರ್ ಎಲ್, ಅನೀಶ್ ಕೆ. ವಿ, ನಿಕಿನ್ ಜೋಸ್, ಶುಭಾಂಗ್ ಹೆಗ್ಡೆ ಮತ್ತು ಅಭಿಲಾಷ್ ಶೆಟ್ಟಿ ಸೇರಿದಂತೆ ದೇಶೀಯ ಆಟಗಾರರು ಇದ್ದಾರೆ.

'ಸಿ' ಗುಂಪಿನಲ್ಲಿ 30 ವರ್ಷಕ್ಕಿಂತ ಕಡಿಮೆ ವಯಸ್ಸಿನ ಆಟಗಾರರಿದ್ದಾರೆ. ಅವರು ಜೂನಿಯರ್ ಮಟ್ಟದಲ್ಲಿ ಕರ್ನಾಟಕವನ್ನು ಪ್ರತಿನಿಧಿಸಿದವರಾಗಿದ್ದಾರೆ. ₹ 50 ಸಾವಿರ ಮೂಲಬೆಲೆಯನ್ನು ನಿಗದಿ ಮಾಡಲಾಗಿದೆ. ಹರ್ಷಿಲ್ ಧರ್ಮಾನಿ, ಕಾರ್ತಿಕ್ ಎಸ್. ಯು, ಆದರ್ಶ್ ಪ್ರಜ್ವಲ್, ಅನ್ವಯ್ ದ್ರಾವಿಡ್, ಅನೀಶ್ವರ್ ಗೌತಮ್ ಮತ್ತು ಸಮಿತ್ ದ್ರಾವಿಡ್ ಈ ಗುಂಪಿನಲ್ಲಿದ್ದಾರೆ.

'ಡಿ' ಗುಂಪಿನಲ್ಲಿ ರಾಜ್ಯದ ಸೀನಿಯರ್ ತಂಡವನ್ನು ಪ್ರತಿನಿಧಿಸಿರುವವರು ಇದ್ದಾರೆ. ₹ 75 ಸಾವಿರ ಮೂಲ ಬೆಲೆ ನಿಗದಿಯಾಗಿದೆ. 30 ರಿಂದ 35 ವರ್ಷದೊಳಗಿನ ಆಟಗಾರರು ಇದ್ದಾರೆ. ಮೊಹಮ್ಮದ್ ತಾಹಾ, ಕೌಶಿಕ್ ವಿ, ಮೇಲು ಕ್ರಾಂತಿಕುಮಾರ್ ಮತ್ತು ನಿಹಾಲ್ ಉಳ್ಳಾಲ್ ಈ ಗುಂಪಿನಲ್ಲಿದ್ದಾರೆ. ತಂಡಗಳು ತಮ್ಮ 11ರ ಬಳಗದಲ್ಲಿ ಈ ವಿಭಾಗದ ಇಬ್ಬರು ಆಟಗಾರರಿಗೆ ಮಾತ್ರ ಅವಕಾಶ ಕೊಡಬೇಕು ಎಂಬ ನಿಯಮವಿದೆ.

'ಇ' ಗುಂಪಿನಲ್ಲಿ 30 ವರ್ಷಕ್ಕಿಂತ ಕಡಿಮೆ ವಯಸ್ಸಿನ ಕೆಎಸ್‌ಸಿಎ ನೋಂದಾಯಿತ ಕ್ರಿಕೆಟಿಗರನ್ನು ಒಳಗೊಂಡಿದೆ, ಅವರನ್ನು ರಾಜ್ಯ ಆಯ್ಕೆ ಸಮಿತಿಯು ಅಂತಿಮಗೊಳಿಸಿದೆ. ₹ 30 ಸಾವಿರ ಮೂಲ ಬೆಲೆಯನ್ನು ಹೊಂದಿದೆ.



ಮಯಂಕ್ ಅಗರವಾಲ್



ಕರುಣ್ ನಾಯರ್



ಮನೀಷ್ ಪಾಂಡೆ

ಐವರು ಪೈಲ್ವಾನರ ಅಮಾನತು

ನವದೆಹಲಿ (ಪಿಟಿಐ): ನಕಲಿ ಜನನ ಪ್ರಮಾಣಪತ್ರ ನೀಡಿದ ಐವರು ಪೈಲ್ವಾನರನ್ನು ಭಾರತ ಕುಸ್ತಿ ಫೆಡರೇಷನ್ ಗುರುವಾರ ನಾಲ್ಕು ವರ್ಷ ಅಮಾನತುಗೊಳಿಸಿದೆ. ಇವರಲ್ಲಿ 20 ವರ್ಷದೊಳಗಿನವರ ವಿಭಾಗದ ಏಷ್ಯನ್ ಚಾಂಪಿಯನ್‌ಷಿಪ್ ಟ್ರಯಲ್ಸ್ ವಿಜೇತ ದೀಪಾನ್ಶು ಒಳಗೊಂಡಿದ್ದಾರೆ.

ಕ್ರೀಡೆಯಲ್ಲಿ ವಯಸ್ಸಿಗೆ ಸಂಬಂಧಿಸಿದ ವಂಚನೆ ಪ್ರಕರಣಗಳಿಗೆ ಕಡಿವಾಣ ಹಾಕಲು ನಡೆಯುತ್ತಿದ್ದ ಪ್ರಮಾಣಪತ್ರಗಳ ಪರಿಶೀಲನೆ ಸಂದರ್ಭದಲ್ಲಿ ಈ ಐವರ ಪ್ರಮಾಣಪತ್ರ ನಕಲಿ ಎಂದು ದೃಢಪಟ್ಟಿದೆ. ಬುಧವಾರ ನಡೆದ ಪುರುಷರ 55 ಕೆ.ಜಿ. ಫ್ರೀಸ್ಟೈಲ್ ವಿಭಾಗದಲ್ಲಿ ದೀಪಾನ್ಶು ವಿಜೇತ ರಾಗಿದ್ದರು. ಈಗ ಅವರ ಬದಲು ಪವನ್ ಬಾಲಾಜಿ ಧಯಾಗುಡೆ ಅವರನ್ನು ಭಾರತ ತಂಡಕ್ಕೆ ಸೇರ್ಪಡೆಗೊಳಿಸಲಾಗಿದೆ.

ತನುಜ್ ಅಂಟಿಲ್, ಬಲಜೋತ್ ಸಿಂಗ್, ನಿಖಿಲ್ ದಲಾಲ್ ಮತ್ತು ಸಾಕೇತ್ ಡ್ರಾಲ್ ಅವರು ಅಮಾನತುಗೊಂಡ ಇತರ ನಾಲ್ವರು. ಸಾಕೇತ್ ದಲಾಲ್ 86 ಕೆ.ಜಿ. ಟ್ರಯಲ್ಸ್ ಫೈನಲ್ ತಲುಪಿದ್ದರು. ಅವರನ್ನು ಫೈನಲ್‌ನಿಂದ ಕಿತ್ತುಹಾಕಿ ಸಾಹಿಲ್ ದಲಾಲ್ ಅವರಿಗೆ ಅವಕಾಶ ನೀಡಲಾಯಿತು. ಸಾಹಿಲ್ ಫೈನಲ್‌ನಲ್ಲೂ ಗೆದ್ದು ಭಾರತ ತಂಡದಲ್ಲಿ ಸ್ಥಾನ ಕಾದಿರಿಸಿದರು.

'ನಕಲಿ ಪ್ರಮಾಣಪತ್ರಗಳನ್ನು ಸಲ್ಲಿಸಿ ರಾಷ್ಟ್ರೀಯ ಕುಸ್ತಿ ಚಾಂಪಿಯನ್‌ಷಿಪ್‌ನಲ್ಲಿ ಭಾಗವಹಿಸುವುದಕ್ಕೆ ಅರ್ಹತೆ ಗಳಿಸಲು ಯತ್ನಿಸುವ ಕುಸ್ತಿಪಟುಗಳ ವಿರುದ್ಧ ಗಂಭೀರ ಕ್ರಮ ಕೈಗೊಳ್ಳಲಾಗುವುದು ಎಂದು ಫೆಡರೇಷನ್ ಅಧ್ಯಕ್ಷ ಸಂಜಯ್ ಕುಮಾರ್ ಸಿಂಗ್ ಬಿಡುಗಡೆ ಮಾಡಿರುವ ಆದೇಶದಲ್ಲಿ ತಿಳಿಸಲಾಗಿದೆ.

ರೆಫ್ರಿ ವಿರುದ್ಧ ಕ್ರಮ: ಮೇ 31ರಂದು ಲಖನೌದಲ್ಲಿ ನಡೆದ ಏಷ್ಯನ್ ಗೇಮ್ಸ್ ಟ್ರಯಲ್ಸ್‌ನಲ್ಲಿ ಹಿತಾಸಕ್ತಿ ಸಂಘರ್ಷ, ದುರ್ನಡತೆ ತೋರಿದ ಡಬ್ಲ್ಯುಎಫ್‌ಐ ರೆಫ್ರಿ ಕಮಿಷನ್ ಸದಸ್ಯ ಜೈಬೀರ್ ಅವರಿಗೆ ನೋಟಿಸ್ ಜಾರಿಗೊಳಿಸಲಾಗಿದೆ ಎಂದೂ ಫೆಡರೇಷನ್ ಹೇಳಿಕೆಯಲ್ಲಿ ತಿಳಿಸಿದೆ.

ರಾಬಿನ್ಸನ್ ದಾಳಿಗೆ ಕುಸಿದ ಕಿವೀಸ್

ಲಂಡನ್ (ಎಎಫ್‌ಪಿ): ಓಲಿ ರಾಬಿನ್ಸನ್ (10ಕ್ಕೆ 4) ಅವರ ಅಮೋಘ ದಾಳಿಗೆ ಸಿಲುಕಿದ ನ್ಯೂಜಿಲೆಂಡ್ ತಂಡವು ಗುರುವಾರ ಇಂಗ್ಲೆಂಡ್ ವಿರುದ್ಧದ ಮೊದಲ ಟೆಸ್ಟ್‌ನಲ್ಲಿ ಅಲ್ಪ ಮೊತ್ತಕ್ಕೆ ಕುಸಿಯುವ ಭೀತಿಯಲ್ಲಿದೆ.

ಮೊದಲು ಬ್ಯಾಟಿಂಗ್ ಮಾಡಿದ ಇಂಗ್ಲೆಂಡ್ 140 ರನ್‌ಗಳಿಗೆ ಆಲೌಟ್ ಆಯಿತು. ಕೈಲ್ ಜೆಮಿಸನ್ ಐದು ವಿಕೆಟ್ ಗೊಂಚಲು ಪಡೆದರು. ಈ ಮಧ್ಯೆ ಇಂಗ್ಲೆಂಡ್‌ನ ಹ್ಯಾರಿ ಬ್ರೂಕ್ (56;71ಎ) ಏಕಾಂಗಿ ಹೋರಾಟ ನಡೆಸಿದರು.

ನಂತರ ಬ್ಯಾಟಿಂಗ್‌ಗೆ ಇಳಿದ ನ್ಯೂಜಿಲೆಂಡ್ ತಂಡಕ್ಕೆ ರಾಬಿನ್ಸನ್ ಆರಂಭದಲ್ಲೇ ಪೆಟ್ಟು ನೀಡಿದರು. 29 ರನ್‌ಗಳಿಗೆ ಆರು ವಿಕೆಟ್ ಕಳೆದುಕೊಂಡ ತಂಡಕ್ಕೆ ಗ್ಲೆನ್ ಫಿಲಿಪ್ಸ್ (ಔಟಾಗದೇ 31) ಮತ್ತು ನೇಥನ್ ಸ್ಮಿತ್ (ಔಟಾಗದೇ 6) ಚೇತರಿಕೆ ನೀಡಿ, ಎರಡನೇ ದಿನಕ್ಕೆ ಆಟವನ್ನು ಕಾಯ್ದುಕೊಂಡಿದ್ದಾರೆ.

ಗೌರವ ಸಲ್ಲಿಕೆ

ಪ್ರಜಾವಾಣಿ ಚಿತ್ರ



ಬೆಂಗಳೂರಿನಲ್ಲಿ ಹೋದ ವರ್ಷ ಜೂನ್ 4ರಂದು ಆರ್‌ಸಿಬಿ ತಂಡದ ವಿಜಯೋತ್ಸವದ ವೇಳೆ ಸಂಭವಿಸಿದ್ದ ಕಾಲ್ತುಳಿತದಲ್ಲಿ ಮೃತಪಟ್ಟ 11 ಅಭಿಮಾನಿಗಳಿಗೆ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಿರ್ಮಿಸಲಾದ ಸ್ಮಾರಕದ ಬಳಿ ಗುರುವಾರ ಗೌರವ ಸಲ್ಲಿಸಲಾಯಿತು. ಸರ್ವಧರ್ಮಗಳ ಗುರುಗಳು ಪ್ರಾರ್ಥನೆ ಸಲ್ಲಿಸಿದರು. ಕೆಎಸ್‌ಸಿಎ ಪದಾಧಿಕಾರಿಗಳು ಹಾಜರಿದ್ದರು

ಅಂತರರಾಷ್ಟ್ರೀಯ ಕ್ರಿಕೆಟ್‌ಗೆ ಭರತ್ ನಿವೃತ್ತಿ

ಮುಂಬೈ (ಪಿಟಿಐ): ಭಾರತದ ಪರ ಏಳು ಟೆಸ್ಟ್ ಪಂದ್ಯಗಳನ್ನು ಆಡಿದ್ದ ವಿಕೆಟ್‌ಕೀಪರ್–ಬ್ಯಾಟರ್ ಕೆ.ಎಸ್. ಭರತ್ ಅವರು ಗುರುವಾರ ಅಂತರರಾಷ್ಟ್ರೀಯ ಕ್ರಿಕೆಟ್‌ಗೆ ವಿದಾಯ ಘೋಷಿಸಿದ್ದಾರೆ.

ಆಂಧ್ರಪ್ರದೇಶದ ಭರತ್ ಅವರು 2023ರ ಫೆಬ್ರುವರಿಯಲ್ಲಿ (ನಾಗ್ಪುರ) ಆಸ್ಟ್ರೇಲಿಯಾ ವಿರುದ್ಧದ ಟೆಸ್ಟ್ ಪಂದ್ಯದಲ್ಲಿ ಪದಾರ್ಪಣೆ ಮಾಡಿದ್ದರು. 2024ರಲ್ಲಿ ಇಂಗ್ಲೆಂಡ್ ವಿರುದ್ಧ ಕೊನೆಯ ಬಾರಿ ಆಡಿದ್ದರು. ಅವರು ಏಳು ಪಂದ್ಯಗಳಲ್ಲಿ 20.09 ಸರಾಸರಿಯಲ್ಲಿ 221 ರನ್ ಗಳಿಸಿದ್ದಾರೆ.

ದೇಶೀಯ ಕ್ರಿಕೆಟ್‌ನಲ್ಲಿ ಆಂಧ್ರ ಪರ ಆಡಿದ್ದ ಅವರು ರಣಜಿ ಟ್ರೋಫಿಯಲ್ಲಿ ತ್ರಿಶತಕ ಬಾರಿಸಿದ ಮೊದಲ ವಿಕೆಟ್ ಕೀಪರ್–ಬ್ಯಾಟರ್ ಆಗಿದ್ದಾರೆ. 2014-2015ರಲ್ಲಿ ಗೋವಾ ವಿರುದ್ಧ 311 ಎಸೆತಗಳಲ್ಲಿ 308 ರನ್ ಗಳಿಸಿದ್ದರು. ಆಂಧ್ರದ ಬ್ಯಾಟರ್‌ರೊಬ್ಬರು ಗಳಿಸಿದ ಮೊದಲ ತ್ರಿಶತಕ ಇದಾಗಿದೆ. 105 ಪ್ರಥಮ ದರ್ಜೆ ಪಂದ್ಯಗಳನ್ನು ಆಡಿರುವ ಅವರು 5,686 ರನ್ ಗಳಿಸಿದ್ದಾರೆ.

ಐಪಿಎಲ್ ಟೂರ್ನಿಯಲ್ಲಿ ಅವರು 2021ರಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ಪರ ಆಡಿದ್ದರು. 2022ರಲ್ಲಿ ದೆಹಲಿ ಕ್ಯಾಪಿಟಲ್ಸ್ ತಂಡವನ್ನು ಪ್ರತಿನಿಧಿಸಿದ್ದರು.



ಕೆ.ಎಸ್. ಭರತ್



ಪ್ರಧಾನಿ ನರೇಂದ್ರ ಮೋದಿ ಅವರು ವೆನೆಜುವೆಲಾದ ಹಂಗಾಮಿ ಅಧ್ಯಕ್ಷರಾದ ಡೆಲ್ಸಿ ರಾಡ್ರಿಗಸ್ ಅವರೊಂದಿಗೆ ಗುರುವಾರ ಮಾತುಕತೆ ನಡೆಸಿದರು — ಪಿಟಿಐ ಚಿತ್ರ

ವೆನೆಜುವೆಲಾದ ಅಧ್ಯಕ್ಷರ ಜತೆ ಪ್ರಧಾನಿ ಮೋದಿ ಮಾತುಕತೆ

ನವದೆಹಲಿ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಅವರು ವೆನೆಜುವೆಲಾದ ಹಂಗಾಮಿ ಅಧ್ಯಕ್ಷರಾದ ಡೆಲ್ಸಿ ರಾಡ್ರಿಗಸ್ ಅವರೊಂದಿಗೆ ಗುರುವಾರ ಮಾತುಕತೆ ನಡೆಸಿದರು. ಇಂಧನ, ವ್ಯಾಪಾರ ಮತ್ತು ಹೂಡಿಕೆ ಕ್ಷೇತ್ರಗಳಲ್ಲಿ ದ್ವಿಪಕ್ಷೀಯ ಸಂಬಂಧಗಳನ್ನು ಬಲಗೊಳಿಸುವ ಬಗ್ಗೆ ಉಭಯ ನಾಯಕರು ಚರ್ಚಿಸಿದ್ದಾರೆ.

ಡೆಲ್ಸಿ ರಾಡ್ರಿಗಸ್ ಅವರು ಬುಧವಾರ ಭಾರತಕ್ಕೆ ಬಂದಿಳಿದರು.

ಪಶ್ಚಿಮ ಏಷ್ಯಾದಲ್ಲಿನ ಬಿಕ್ಕಟ್ಟಿನಿಂದಾಗಿ ಭಾರತವು ಇಂಧನ ಪೂರೈಕೆಯಲ್ಲಿ ಸಮಸ್ಯೆ ಎದುರಿಸುತ್ತಿರುವ ಕಾರಣ ಇಂಧನ ಕುರಿತಾದ ಒಪ್ಪಂದವನ್ನು ವಿಸ್ತರಿಸಿಕೊಳ್ಳಲು ಎರಡೂ ದೇಶಗಳು ಎದುರು ನೋಡುತ್ತಿವೆ.

ಈ ಹಿಂದೆ ಭಾರತವು ವೆನೆಜುವೆಲಾದಿಂದ ಹೆಚ್ಚು ಕಚ್ಚಾತೈಲವನ್ನು ಆಮದು ಮಾಡಿಕೊಳ್ಳುತ್ತಿತ್ತು. ದಿನಕ್ಕೆ 4 ಲಕ್ಷ ಬ್ಯಾರೆಲ್ ತೈಲವನ್ನೂ ಆಮದು ಮಾಡಿಕೊಳ್ಳಲಾಗಿದೆ. 2020ರಲ್ಲಿ ಅಮೆರಿಕದ ನಿರ್ಬಂಧ ಮತ್ತು ಇತರ ಕಾರಣಗಳಿಂದಾಗಿ ಆಮದನ್ನು ನಿಲ್ಲಿಸಬೇಕಾಯಿತು.

ಮಡೊರೊ ಅವರ ಬಂಧನದ ಬಳಿಕ ಭಾರತವು ಮತ್ತೆ ವೆನೆಜುವೆಲಾದಿಂದ ಕಚ್ಚಾತೈಲ ಆಮದು ಮಾಡಿಕೊಳ್ಳಲು ಪ್ರಾರಂಭಿಸಿತು. ಪಶ್ಚಿಮ ಏಷ್ಯಾ ಬಿಕ್ಕಟ್ಟಿನ ಕಾರಣ ಭಾರತೀಯ ತೈಲ ಕಂಪನಿಗಳು ಇದೀಗ ವೆನೆಜುವೆಲಾದಿಂದ ಕಚ್ಚಾತೈಲ ಆಮದನ್ನು ಹೆಚ್ಚಿಸಿವೆ.

ಜನವರಿ 3ರಂದು ಅಮೆರಿಕದ ಪಡೆಗಳು ವೆನೆಜುವೆಲಾದ ಆಗಿನ ಅಧ್ಯಕ್ಷ ನಿಕೊಲಸ್ ಮಡೊರೊ ಅವರನ್ನು ವಶಕ್ಕೆ ಪಡೆದು ಕರೆದೊಯ್ದ ನಂತರ ಡೆಲ್ಸಿ ರಾಡ್ರಿಗಸ್ ಅವರು ಹಂಗಾಮಿ ಅಧ್ಯಕ್ಷರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

ಈ ಭೇಟಿಯು ಎರಡೂ ದೇಶಗಳ ನಡುವಿನ ಸಂಬಂಧವನ್ನು ಬಲಪಡಿಸುತ್ತದೆ ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯದ ವಕ್ತಾರ ರಣಧೀರ್ ಜೈಸ್ವಾಲ್ ಹೇಳಿದರು.

ಟಿಎಂಸಿ ಬಿರುಕು ಮತ್ತಷ್ಟು ಆಳ

ಪ್ರಜಾವಾಣಿ ವಾರ್ತೆ/ಪಿಟಿಐ

ಕೋಲ್ಕತ್ತ: ಪಶ್ಚಿಮ ಬಂಗಾಳದಲ್ಲಿ 15 ವರ್ಷಗಳಿಂದ ಅಧಿಕಾರದಲ್ಲಿದ್ದ ಟಿಎಂಸಿ, ಈ ಬಾರಿಯ ವಿಧಾನಸಭೆ ಚುನಾವಣೆಯಲ್ಲಿ ಹೀನಾಯವಾಗಿ ಸೋಲು ಕಂಡಿತು. ಸದ್ಯ ಸ್ಥಳೀಯ ಸಂಸ್ಥೆಗಳು, ಕೋಲ್ಕತ್ತ ಮಹಾನಗರ ಪಾಲಿಕೆಯಲ್ಲಿ ಚುಕ್ಕಾಣಿ ಉಳಿದಿದೆ. ಇನ್ನು ಲೋಕಸಭೆಯಲ್ಲಿ ಎರಡನೇ ಪ್ರಮುಖ ವಿರೋಧ ಪಕ್ಷದ ಸ್ಥಾನದಲ್ಲಿ ಟಿಎಂಸಿ ಇದೆ. ಆದರೆ, ಈಗ ಈ ಎಲ್ಲ ಅಧಿಕಾರ ಸ್ಥಾನಗಳು ಅಲುಗಾಡಲು ಆರಂಭಿಸಿವೆ.

ವಿಧಾನಸಭೆ ವಿರೋಧ ಪಕ್ಷದ ನಾಯಕ ಯಾರಾಗಬೇಕು ಎಂಬ ವಿಚಾರವು ಪಕ್ಷವನ್ನು ಇಬ್ಭಾಗ ಮಾಡಿತು. ಇನ್ನೊಂದೆಡೆ, ಬಿಜೆಪಿಯು ರಾಜ್ಯದಲ್ಲಿ ಅಧಿಕಾರ ವಹಿಸಿಕೊಂಡ ಬಳಿಕ, ಟಿಎಂಸಿ ಕಾರ್ಯಕರ್ತರು ಸೇರಿದಂತೆ ಪ್ರಧಾನ ಕಾರ್ಯದರ್ಶಿ ಅಭಿಷೇಕ್ ಬ್ಯಾನರ್ಜಿ, ಸಂಸದ ಕಲ್ಯಾಣ್ ಬ್ಯಾನರ್ಜಿಯನ್ನೂ ಒಳಗೊಂಡು ಕೌನ್ಸಿಲರ್‌ಗಳು, ಮಾಜಿ ಶಾಸಕರ ಮೇಲೆ ದಾಳಿಗಳು ಪ್ರತಿದಿನದಂತೆ ನಡೆಯುತ್ತಿವೆ.

ಕೋಲ್ಕತ್ತ ಪಾಲಿಕೆಯ ಮೇಯರ್ ಫಿರ್ಹಾದ್ ಹಕೀಮ್ ಅವರ ರಾಜೀನಾಮೆ ಘೋಷಣೆ ಮತ್ತು ಅಧಿಕೃತವಾಗಿ ರಾಜೀನಾಮೆ ನೀಡದಿರುವುದು ಹಲವು ಚರ್ಚೆಗಳಿಗೆ ಕಾರಣವಾಗಿದೆ. ಹಕೀಮ್ ಅವರು ಪಕ್ಷದ ಮುಖ್ಯಸ್ಥೆ ಮಮತಾ ಬ್ಯಾನರ್ಜಿ ಅವರ ಆಪ್ತವಲಯದಲ್ಲಿ ಗುರುತಿಸಿಕೊಂಡವರಾಗಿದ್ದರು. ಮತ್ತೊಬ್ಬ ಆಪ್ತೆ ಬಿಧಾನನಗರ್ ನಗರಪಾಲಿಕೆಯ ಮೇಯರ್ ಟಿಎಂಸಿ ಪಕ್ಷದ ಕೃಷ್ಣ ಚಕ್ರವರ್ತಿ ಅವರು ಗುರುವಾರ ರಾಜೀನಾಮೆ ನೀಡಿದ್ದಾರೆ.

ರಾಜ್ಯದಾದ್ಯಂತ ವಿವಿಧ ನಗರಪಾಲಿಕೆಗಳ ಮೇಯರ್‌ಗಳು ಕೂಡ ರಾಜೀನಾಮೆ ನೀಡುತ್ತಿದ್ದಾರೆ. ನಗರ ಸಭೆಗಳಿಗೆ ಟಿಎಂಸಿ ಕೌನ್ಸಿಲರ್‌ಗಳು ಹಾಜರಾಗುತ್ತಿಲ್ಲ. ವಸೂಲಿ ಮತ್ತು ಭ್ರಷ್ಟಾಚಾರ ಆರೋಪದ ಪ್ರಕರಣಗಳಲ್ಲಿ ವಿವಿಧೆಡೆ ಕೌನ್ಸಿಲರ್‌ಗಳನ್ನು ಪೊಲೀಸರು ಬಂಧಿಸುತ್ತಿದ್ದಾರೆ. ಕಳೆದ ಒಂದು ವಾರದಲ್ಲಿ ನಾಲ್ವರು ಕೌನ್ಸಿಲರ್‌ಗಳನ್ನು ಬಂಧಿಸಲಾಗಿದೆ.

ಲೈಂಗಿಕ ದೌರ್ಜನ್ಯ ಆರೋಪದಡಿ ಮಹಾನಗರ ಪಾಲಿಕೆಯ ಸದಸ್ಯ ಬಿಸ್ವಜಿತ್ ಮಂಡಲ್ ಅವರನ್ನು ಗುರುವಾರ ಪೊಲೀಸರು ಬಂಧಿಸಿದ್ದಾರೆ. 'ಮಂಡಲ್ ಅವರು ನನಗೆ ಬೆದರಿಕೆ ಒಡ್ಡಿ, ಅವಾಚ್ಯ ಪದಗಳಿಂದ ನಿಂದಿಸಿದ್ದಾರೆ' ಎಂದು ರಾಜ್ಯದಲ್ಲಿ ಸರ್ಕಾರ ಬದಲಾದ ಬಳಿಕ ಮಹಿಳೆಯೊಬ್ಬರು ಜೂನ್ 1ರಂದು ಪೊಲೀಸರಿಗೆ ದೂರು ನೀಡಿದ್ದರು.

ಇದರ ಜೊತೆಗೆ, ವಿಧಾನಸಭೆ ಚುನಾವಣೆ ವೇಳೆ ಬಂಘರ್ ಪ್ರದೇಶದಲ್ಲಿ ಬಾಂಬ್ ಸ್ಫೋಟಗೊಂಡಿದ್ದ ಪ್ರಕರಣದ ತನಿಖೆ ನಡೆಸುತ್ತಿರುವ ರಾಷ್ಟ್ರೀಯ ತನಿಖಾ ಸಂಸ್ಥೆಯು (ಎನ್‌ಐಎ) ಟಿಎಂಸಿ ಮಾಜಿ ಶಾಸಕ ಶೌಕತ್ ಮೊಲ್ಲಾ ಅವರ ನಿವಾಸ ಹಾಗೂ ಕಚೇರಿಗಳ ಮೇಲೆ ಗುರುವಾರ ದಾಳಿ ಮಾಡಿ, ಶೋಧ ಕಾರ್ಯ ನಡೆಸಿದೆ.

ಆಡಳಿತಾತ್ಮಕ ಸಭೆ ಸುತ್ತ ರಾಜಕಾರಣ

ಮುಖ್ಯಮಂತ್ರಿ ಸುವೇಂದು ಅಧಿಕಾರಿ ಅವರು ಬುಧವಾರ ನಡೆಸಿದ ಆಡಳಿತ ಪರಿಶೀಲನಾ ಸಭೆಯು ರಾಜಕಾರಣದ ಕೇಂದ್ರಬಿಂದುವಾಗಿದೆ. ಸುವೇಂದು ಅವರು ಈ ಸಭೆಗೆ ಟಿಎಂಸಿ ಶಾಸಕರು, ಮೇಯರ್‌ಗಳನ್ನು ಆಹ್ವಾನಿಸಿದ್ದರು. ಟಿಎಂಸಿ ಪಕ್ಷದ ಯಾರ‍್ಯಾರು ಈ ಸಭೆಯಲ್ಲಿ ಹಾಜರಿದ್ದರು, ಇರಲಿಲ್ಲ ಎನ್ನುವುದು ಆಯಾ ನಾಯಕರು ಯಾರಿಗೆ ನಿಷ್ಠರಾಗಿದ್ದಾರೆ ಎನ್ನುವುದನ್ನು ತಿಳಿಸಿತು ಎನ್ನಲಾಗುತ್ತಿದೆ. 58 ಬಂಡಾಯ ಶಾಸಕರು ಮತ್ತು ಮಹಾನಗರ ಪಾಲಿಕೆಯ ಮೇಯರ್ ಹಕೀಮ್ ಅವರು ಈ ಸಭೆಯಲ್ಲಿ ಹಾಜರಿದ್ದರು.

ಆಕಸ್ಮಿಕ ಭೇಟಿ– ನಂತರ ಬಂಡಾಯ: ರಾಜ್ಯಸಭೆ ಚುನಾವಣೆಗೆ ಸಂಬಂಧಿಸಿ ದೆಹಲಿಗೆ ತೆರಳಿದ್ದ ಶಾಸಕ ರುತಬ್ರತಾ ಬ್ಯಾನರ್ಜಿ ಅವರು ಬಂಗಾ ಭವನಕ್ಕೆ ತೆರಳಿದ್ದರು. ಈ ವೇಳೆ ಮುಖ್ಯಮಂತ್ರಿ ಸುವೇಂದು ಅಧಿಕಾರಿ ಅವರು ಆಕಸ್ಮಿಕವಾಗಿ ಮುಖಾಮುಖಿಯಾದರು. ಈ ಬಳಿಕ, ಎಲ್ಲವೂ ಬದಲಾಯಿತು. ಸುವೇಂದು ಅವರು ಆಡಳಿತ ಪರಿಶೀಲನಾ ಸಭೆಗೆ ವಿರೋಧ ಪಕ್ಷಗಳನ್ನು ಕರೆದಿದ್ದನ್ನು ರುತಬ್ರತಾ ಸಾರ್ವಜನಿಕವಾಗಿಯೇ ಪ್ರಶಂಸಿಸಿದ್ದರು. ಈ ಬಳಿಕ ಟಿಎಂಸಿ ಒಳಗೆ ಬಂಡಾಯದ ಚಟುವಟಿಕೆಗಳು ತೀವ್ರಗೊಂಡವು ಎನ್ನಲಾಗುತ್ತಿದೆ.

ಸಂಸದರ ಚಿತ್ತ ಎತ್ತ?

'ಟಿಎಂಸಿಯ 20 ಸಂಸದರು (ಲೋಕಸಭೆ ಮತ್ತು ರಾಜ್ಯಸಭೆ) ಬಿಜೆಪಿಗೆ ಪತ್ರ ಬರೆದಿದ್ದಾರೆ' ಎಂದು ಎಜೆಯುಪಿ ಪಕ್ಷದ ಸ್ಥಾಪಕ ಹುಮಾಯೂನ್ ಕಬೀರ್ ಅವರು ಎನ್‌ಡಿಟಿವಿಗೆ ತಿಳಿಸಿದ್ದಾರೆ. ಲೋಕಸಭೆಯಲ್ಲಿ ಮುಂಗಾರು ಅಧಿವೇಶನ ನಡೆಯಲಿದೆ. ಈ ವೇಳೆಗೆ ಸಂಸದರು ಯಾವ ನಿರ್ಧಾರ ತೆಗೆದುಕೊಳ್ಳಲಿದ್ದಾರೆ ಎಂಬುದನ್ನು ಕಾದುನೋಡಬೇಕಿದೆ.

ಮಮತಾ ಬ್ಯಾನರ್ಜಿ ಅವರು ಪಕ್ಷದ ಮೇಲಿನ ಹಿಡಿತ ಕಳೆದುಕೊಳ್ಳುತ್ತಿದ್ದಾರೆ ಎಂದು ವಿಶ್ಲೇಷಿಸಲಾಗುತ್ತಿದೆ. ಅಭಿಷೇಕ್ ಬ್ಯಾನರ್ಜಿ ಅವರ ನಾಯಕತ್ವದ ಕುರಿತು ಶಾಸಕರಲ್ಲಿ ಅಸಮಾಧಾನವಿತ್ತು. ಇದೇ ಅಸಮಾಧಾನವನ್ನು ಸಂಸದರೂ ಹೊರಹಾಕಬಹುದು ಎನ್ನಲಾಗುತ್ತಿದೆ.

'ನನ್ನ ಬಳಿ ಬರಲಿ, ನಾನು ಗೆಲ್ಲಿಸಿಕೊಡುತ್ತೇನೆ'

'ಮಮತಾ ಬ್ಯಾನರ್ಜಿ ಅವರನ್ನು ವಿಧಾನಸಭೆಗೆ ಮತ್ತೊಮ್ಮೆ ಕಳುಹಿಸಲು ನಾನು ಸಿದ್ಧನಿದ್ದೇನೆ' ಎಂದು ಎಜೆಯುಪಿ ಪಕ್ಷದ ಸ್ಥಾಪಕ ಹುಮಾಯೂನ್ ಕಬೀರ್ ಹೇಳಿದ್ದಾರೆ. ಈ ಚುನಾವಣೆಯಲ್ಲಿ ಅವರು ನವ್ಪುದಾ ಮತ್ತು ರೆಜೀನಗರ ವಿಧಾನಸಭಾ ಕ್ಷೇತ್ರಗಳಿಂದ ಆಯ್ಕೆಯಾಗಿದ್ದರು. 'ಮಮತಾ ಅವರು ನನ್ನ ಬಳಿ ಬಂದರೆ, ರೆಜೀನಗರ ಕ್ಷೇತ್ರದಿಂದ ಗೆಲ್ಲಿಸಿಕೊಟ್ಟು ನಾನು ಅವರನ್ನು ವಿಧಾನಸಭೆಗೆ ಕಳುಹಿಸುತ್ತೇನೆ. ನಂದಿಗ್ರಾಮ ಕ್ಷೇತ್ರದಿಂದಲೇ ಅವರು ಸ್ಪರ್ಧಿಸಿದರೆ, ಅವರ ಗೆಲುವು ಅಸಾಧ್ಯ. ಅವರಿಗೆ ಇಷ್ಟವಿದ್ದರೆ, ನಾನು ರೆಜೀನಗರ ಕ್ಷೇತ್ರವನ್ನು ಬಿಟ್ಟುಕೊಡುತ್ತೇನೆ' ಎಂದು ಹೇಳಿದ್ದಾರೆ. ಕಬೀರ್ ಅವರನ್ನು ಟಿಎಂಸಿ ಪಕ್ಷದಿಂದ ಕಳೆದ ವರ್ಷ ಹೊರಹಾಕಲಾಗಿತ್ತು.

ಕಗ್ಗಂಟು ನಡುವೆ ಖಾತೆ ಹಂಚಿಕೆ

ಒಂದನೇ ಪುಟದಿಂದ...

ಶಿವಕುಮಾರ್ ನೇತೃತ್ವದ ಸರ್ಕಾರದಲ್ಲಿ ರಾಮಲಿಂಗಾರೆಡ್ಡಿ ಅವರಿಗೆ ಜಲಸಂಪನ್ಮೂಲ ಖಾತೆ ನೀಡಲಾಗಿದ್ದು, ಕೃಷ್ಣ ಬೈರೇಗೌಡ ಅವರಿಗೆ ಬೆಂಗಳೂರು ಅಭಿವೃದ್ಧಿ ಖಾತೆ ಹೊಣೆ ವಹಿಸಲಾಗಿದೆ.

ಹಿಂದಿನ ಸರ್ಕಾರದಲ್ಲಿ ರಾಮಲಿಂಗಾ ರೆಡ್ಡಿ ನಿರ್ವಹಿಸಿದ್ದ ಖಾತೆಯನ್ನು ಬೈರತಿ ಸುರೇಶ್ ಅವರಿಗೆ ನೀಡಲಾಗಿದೆ.

'ರಾಮಲಿಂಗಾ ರೆಡ್ಡಿ ಅವರು 2023ರಲ್ಲಿ ಸಿದ್ದರಾಮಯ್ಯ ಸರ್ಕಾರ ಅಸ್ತಿತ್ವಕ್ಕೆ ಬಂದ ಅವಧಿಯಲ್ಲಿ ಡಿ.ಕೆ. ಶಿವಕುಮಾರ್ ಅವರು ನೀಡಿದ್ದ ವಾಗ್ದಾನದಂತೆ ಬೆಂಗಳೂರು ಅಭಿವೃದ್ಧಿ ಖಾತೆ ನೀಡದಿದ್ದರೆ ನಾನು ಶಾಸಕನಾಗಿ ಮುಂದುವರಿಯುತ್ತೇನೆಯೇ ವಿನಃ ಸಚಿವನಾಗಿ ಇರುವುದಿಲ್ಲ ಎಂದು ಶಿವಕುಮಾರ್ ಅವರಿಗೆ ಹೇಳಿದ್ದರು' ಎಂಬುದಾಗಿ ರಾಮಲಿಂಗಾರೆಡ್ಡಿ ಅವರ ಆಪ್ತಮೂಲಗಳು ಹೇಳಿವೆ.

ಅವರ ಮುಂದಿನ ನಿರ್ಣಯ ಏನು ಎಂಬುದು ಸದ್ಯಕ್ಕೆ ನಿಗೂಢವಾಗಿಯೇ ಉಳಿದಿದೆ.

ರಾಮಲಿಂಗಾರೆಡ್ಡಿ ಅತೃಪ್ತಿ?: ಸಚಿವ ಸಂಪುಟದ ಹಿರಿಯ ಸಚಿವ ರಾಮಲಿಂಗಾರೆಡ್ಡಿ ಅವರಿಗೆ ಈ ಹಿಂದೆ ಶಿವಕುಮಾರ್ ನೀಡಿದ್ದರು ಎನ್ನಲಾದ ವಾಗ್ದಾನದ ವಿಚಾರ ಕಾಂಗ್ರೆಸ್ ವಲಯದಲ್ಲಿ ಚರ್ಚೆಗೆ ಕಾರಣವಾಗಿದೆ.

2023ರಲ್ಲಿ ಕಾಂಗ್ರೆಸ್ ಸರ್ಕಾರ ಅಸ್ತಿತ್ವಕ್ಕೆ ಬಂದ ಆರಂಭದಲ್ಲಿ ಅಂದಿನ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಬೆಂಗಳೂರಿನ ರಾಮಲಿಂಗಾರೆಡ್ಡಿ ಅವರಿಗೆ ಬೆಂಗಳೂರು ಅಭಿವೃದ್ಧಿ ಖಾತೆ ನೀಡಲು ನಿರ್ಧರಿಸಿದ್ದರು.

'ಅಧ್ಯಕ್ಷ, ಸಚಿವ ಸ್ಥಾನ ಎರಡೂ ಬೇಕಿತ್ತು'

ಒಂದನೇ ಪುಟದಿಂದ...

'ಒಬ್ಬರಿಗೆ ಒಂದೇ ಹುದ್ದೆ ಎಂದು ಪಕ್ಷದಲ್ಲಿ ತೀರ್ಮಾನವಾಗಿದೆ. ಆ ಬಗ್ಗೆ ಸ್ಪಷ್ಟತೆಯೂ ಇತ್ತು. ಕೊನೆಕ್ಷಣದವರೆಗೆ ನನಗೆ ಕೆಪಿಸಿಸಿ ಅಧ್ಯಕ್ಷ ಸ್ಥಾನ ಎಂದೇ ಇತ್ತು. ಆದರೆ, ನನಗೆ ಸಚಿವ ಸ್ಥಾನ ಬೇಕಿತ್ತು. ಹೀಗಾಗಿ, ಕೆಪಿಸಿಸಿ ಅಧ್ಯಕ್ಷ ಸ್ಥಾನ ವಿಚಾರವಾಗಿ ಸುಮ್ಮನಾದೆ. ಕೆಪಿಸಿಸಿ ಅಧ್ಯಕ್ಷ ಸ್ಥಾನ ಅವರಿಗೆ (ಬಿ.ಕೆ. ಹರಿಪ್ರಸಾದ್) ಸಿಕ್ಕಿದೆ. ಅವರು ಕೆಲಸ ಮಾಡುತ್ತಾರೆ' ಎಂದೂ ಹೇಳಿದರು.

'ಒಬ್ಬರಿಗೆ ಒಂದು ಹುದ್ದೆ ಎಂದು ತೀರ್ಮಾನವಾದಾಗ ಡಿ.ಕೆ. ಶಿವಕುಮಾರ್ ಎರಡು ಹುದ್ದೆಯಲ್ಲಿ ಇದ್ದರು. ಆಗ ಇಳಿಸುವುದು ಸರಿಯಲ್ಲವೆಂದು ಪಕ್ಷದ ವರಿಷ್ಠರು ಸುಮ್ಮನಾಗಿದ್ದರು. ಕೆಪಿಸಿಸಿ ಅಧ್ಯಕ್ಷ ಸ್ಥಾನ ಮುಖ್ಯಮಂತ್ರಿ ಹುದ್ದೆಗಿಂತಲೂ ಮೇಲು' ಎಂದರು.

7 ವೈದ್ಯಕೀಯ ಕಾಲೇಜಿಗೆ ಶೋಕಾಸ್ ನೋಟಿಸ್

ನವದೆಹಲಿ (ಪಿಟಿಐ): 756 ವೈದ್ಯಕೀಯ ಕಾಲೇಜುಗಳ ಪೈಕಿ 7 ಕಾಲೇಜುಗಳಲ್ಲಿ ತರಬೇತಿನಿರತ ವೈದ್ಯರು, ಹಿರಿಯ ಮತ್ತು ಕಿರಿಯ ರೆಸಿಡೆಂಟ್ಸ್‌ಗಳಿಗೆ ಶಿಷ್ಯವೇತನ ಪಾವತಿಸುತ್ತಿಲ್ಲ ಎಂದು ರಾಷ್ಟ್ರೀಯ ವೈದ್ಯಕೀಯ ಆಯೋಗವು (ಎನ್‌ಎಮ್‌ಸಿ) ಸುಪ್ರೀಂ ಕೋರ್ಟ್‌ಗೆ ತಿಳಿಸಿದೆ.

ದಂಡ ವಿಧಿಸಲು ಏಳು ಕಾಲೇಜುಗಳಿಗೆ ಶೋಕಾಸ್ ನೋಟಿಸ್ ನೀಡಲಾಗಿದೆ.

'ಇಂಡಿಯಾ' ಸಭೆಗೆ ಗೈರಾಗಲು ಡಿಎಂಕೆ ನಿರ್ಧಾರ

ಚೆನ್ನೈ: ಕಾಂಗ್ರೆಸ್ ದ್ರೋಹದಿಂದ ನೊಂದಿರುವ ಪಕ್ಷದ ಕಾರ್ಯಕರ್ತರ ಭಾವನೆಗಳನ್ನು ಗೌರವಿಸುವ ಕಾರಣಕ್ಕೆ, ಜೂನ್ 8ರಂದು ದೆಹಲಿಯಲ್ಲಿ ನಡೆಯಲಿರುವ ಇಂಡಿಯಾ ಮೈತ್ರಿಕೂಟದ ಸಭೆಯಲ್ಲಿ ಭಾಗಿಯಾಗುವುದಿಲ್ಲ ಎಂದು ಡಿಎಂಕೆ ಗುರುವಾರ ಹೇಳಿದೆ.

ಕಾಂಗ್ರೆಸ್ ಜೊತೆ ಗುರುತಿಸಿಕೊಳ್ಳದಿರಲು ಡಿಎಂಕೆ ನಿರ್ಧರಿಸಿದೆ ಎಂದು ಮೂಲಗಳು ತಿಳಿಸಿವೆ.

'ಡಿಎಂಕೆ ತನ್ನ ರಾಜಕೀಯ ವಿರೋಧಿ ಎಂದು ಟಿವಿಕೆ ಭಾವಿಸಿದೆ. ಹೀಗಿರುವಾಗ ಅದರ ಮಿತ್ರಪಕ್ಷ ಕಾಂಗ್ರೆಸ್ ಜೊತೆ ನಾವು ರಾಷ್ಟ್ರ ಮಟ್ಟದಲ್ಲಿ ಹೇಗೆ ಗುರುತಿಸಿಕೊಳ್ಳಲು ಸಾಧ್ಯ? ಭವಿಷ್ಯದ ದೃಷ್ಟಿಯಿಂದ ಇದು ಒಳ್ಳೆಯದಲ್ಲ ಮತ್ತು ತಪ್ಪು ಸಂದೇಶವನ್ನು ರವಾನಿಸುತ್ತದೆ. ತಮಿಳುನಾಡಿನಲ್ಲಿ ನಮ್ಮ ಉಳಿವಿಗಾಗಿ ನಾವು ಕಾಂಗ್ರೆಸ್‌ನಿಂದ ದೂರವಿರಬೇಕಾಗುತ್ತದೆ' ಎಂದು ಡಿಎಂಕೆಯ ಹಿರಿಯ ನಾಯಕರೊಬ್ಬರು ತಿಳಿಸಿದ್ದಾರೆ.

'ವಿದ್ಯಾರ್ಹತೆಗೆ ತಕ್ಕಂತೆ ಅರ್ಹರಿಗೆ ಉದ್ಯೋಗ ಸಿಗಲಿ'

ನವದೆಹಲಿ (ಪಿಟಿಐ): 'ಕಡಿಮೆ ವಿದ್ಯಾರ್ಹತೆ ಹೊಂದಿರುವವರಿಗೆ ಮೀಸಲಿಟ್ಟ ಕೆಲಸವನ್ನು ಹೆಚ್ಚಿನ ವಿದ್ಯಾರ್ಹತೆ ಹೊಂದಿರುವ ವ್ಯಕ್ತಿ ಪಡೆದುಕೊಳ್ಳಲು ಅನುಮತಿ ನೀಡುವುದರಿಂದ ನಿಜವಾಗಿಯೂ ಆ ಹುದ್ದೆಗೆ ಅರ್ಹರಾದ ಅಭ್ಯರ್ಥಿಯ ಅವಕಾಶವನ್ನು ಕಸಿದುಕೊಂಡಂತಾಗುತ್ತದೆ. ನಿಗದಿತ ವಿದ್ಯಾರ್ಹತೆಗಳಿಗೆ ಅನುಗುಣವಾಗಿ ಅರ್ಹ ಅಭ್ಯರ್ಥಿಗಳಿಗೆ ಸರ್ಕಾರಿ ಉದ್ಯೋಗಾವಕಾಶಗಳು ಸಿಗುವಂತೆ ಮಾಡಬೇಕು' ಎಂದು ಸುಪ್ರೀಂ ಕೋರ್ಟ್ ಹೇಳಿದೆ.

ತಾತ್ಕಾಲಿಕ ಬ್ಯಾಂಕ್ ಅಟೆಂಡೆಂಟ್ ಒಬ್ಬರನ್ನು ಕೆಲಸಕ್ಕೆ ಮರು ನೇಮಕಗೊಳಿಸುವಂತೆ ಮದ್ರಾಸ್ ಹೈಕೋರ್ಟ್ ನೀಡಿದ್ದ ಆದೇಶವನ್ನು ರದ್ದುಗೊಳಿಸುವ ಸಂದರ್ಭದಲ್ಲಿ ನ್ಯಾಯಮೂರ್ತಿಗಳಾದ ಅಹ್ಸಾನುದ್ದೀನ್ ಅಮಾನುಲ್ಲಾ ಮತ್ತು ಆರ್. ಮಹದೇವನ್ ಅವರ ಪೀಠವು ಈ ಅಭಿಪ್ರಾಯಪಟ್ಟಿದೆ.

'ಅಭ್ಯರ್ಥಿಯು ತಾನು ಪದವೀಧರ ಎಂಬ ವಿಷಯವನ್ನು ಮುಚ್ಚಿಟ್ಟು, ಗರಿಷ್ಠ 10ನೇ ತರಗತಿಯವರೆಗಿನ ವಿದ್ಯಾರ್ಹತೆ ಹೊಂದಿರುವವರಿಗೆ ಮಾತ್ರ ಮೀಸಲಾಗಿದ್ದ ಹುದ್ದೆಗೆ ನೇಮಕವಾಗಿರುವುದನ್ನು ಹೈಕೋರ್ಟ್ ನಿರ್ಲಕ್ಷಿಸಿದೆ' ಎಂದು ಪೀಠವು ಹೇಳಿದೆ.

'ಉನ್ನತ ವಿದ್ಯಾರ್ಹತೆಯ ಮಿತಿಯನ್ನು ನಿಗದಿಪಡಿಸುವುದರ ಹಿಂದಿನ ತರ್ಕವು ಸಮಂಜಸ ಹಾಗೂ ನ್ಯಾಯಸಮ್ಮತವಾಗಿದೆ. ಜೀವನದ ಪರಿಸ್ಥಿತಿಗಳಿಂದಾಗಿ ಉನ್ನತ ಶಿಕ್ಷಣವನ್ನು ಪಡೆಯಲು ಸಾಧ್ಯವಾಗದ ವ್ಯಕ್ತಿಗಳಿಗೆ ಉದ್ಯೋಗಾವಕಾಶ ಒದಗಿಸುವುದು ಇದರ ಉದ್ದೇಶವಾಗಿದೆ' ಎಂದು ತಿಳಿಸಿದೆ.

'ಸರ್ಕಾರವು ಇಂತಹ ವ್ಯಕ್ತಿಗಳಿಗೆ ಕೆಲವು ನಿರ್ದಿಷ್ಟ ವರ್ಗಗಳ ಹುದ್ದೆಗಳನ್ನು ಮೀಸಲಿಡುವುದು ನ್ಯಾಯಸಮ್ಮತವಾಗಿದೆ. ಇದರಿಂದ ಅವರು ಹೆಚ್ಚು ಅರ್ಹತೆ ಹೊಂದಿರುವ ಅಭ್ಯರ್ಥಿಗಳೊಂದಿಗೆ ಸ್ಪರ್ಧಿಸುವ ಪರಿಸ್ಥಿತಿ ಬರುವುದಿಲ್ಲ. ಏಕೆಂದರೆ, ಅವರ ಮುಂದೆ ಇವರು ಆಯ್ಕೆಯಾಗುವ ಸಾಧ್ಯತೆಗಳು ತೀರಾ ಕಡಿಮೆ ಇರುತ್ತವೆ. ಇಂತಹ ನೀತಿಯನ್ನು ನ್ಯಾಯಾಲಯಗಳು ಸದಾ ಎತ್ತಿಹಿಡಿದಿವೆ' ಎಂದು ಪೀಠವು ಹೇಳಿದೆ.

ಕೋರ್ಟ್‌ಗಳಲ್ಲಿ ಎ.ಐ ಬಳಕೆ: ನಿಯಮಗಳ ಕರಡು ಬಿಡುಗಡೆ



ನ್ಯಾಯಾಂಗ ವ್ಯವಸ್ಥೆಯ ಆಧುನೀಕರಣಕ್ಕೆ ಪ್ರೋತ್ಸಾಹ ನೀಡಿರುವ ಸುಪ್ರೀಂ ಕೋರ್ಟ್, ನ್ಯಾಯಾಲಯಗಳಲ್ಲಿ ಕೃತಕ ಬುದ್ಧಿಮತ್ತೆ (ಎ.ಐ) ಬಳಕೆಯ ನಿಯಮಾವಳಿಗಳ ಕುರಿತ ಕರಡನ್ನು ಬಿಡುಗಡೆಗೊಳಿಸಿದೆ.

'ಅಲ್ಗಾರಿದಮ್ ಆಧಾರಿತವಾಗಿ ನ್ಯಾಯಾಂಗದಲ್ಲಿ ನಿರ್ಧಾರಗಳನ್ನು ಕೈಗೊಳ್ಳಲಾಗದು' ಎಂದು ಕರಡುವಿನಲ್ಲಿ ಉಲ್ಲೇಖಿಸಲಾಗಿದೆ. ನ್ಯಾಯಾಂಗ ವ್ಯವಸ್ಥೆಗೆ ಸಂಬಂಧಿಸಿದವರು ಮತ್ತು ಸಾರ್ವಜನಿಕರು ಜೂನ್ 20ರೊಳಗಾಗಿ ಸಲಹೆ–ಸೂಚನೆಗಳನ್ನು ನೀಡುವಂತೆ ಸುಪ್ರೀಂ ಕೋರ್ಟ್‌ನ ಎ.ಐ ಸಮಿತಿ ತಿಳಿಸಿದೆ.

'ಮುಖಚಹರೆ ಗುರುತು ತಂತ್ರಜ್ಞಾನ ಬಳಕೆ'

ನವದೆಹಲಿ: 2026ರ ನಾಗರಿಕ ಸೇವೆಗಳ ಪೂರ್ವಭಾವಿ ಪರೀಕ್ಷೆ ವೇಳೆ ಅಭ್ಯರ್ಥಿಗಳ ಮುಖಚಹರೆ ಗುರುತಿಸುವಿಕೆ ತಂತ್ರಜ್ಞಾನವನ್ನು ಯಶಸ್ವಿಯಾಗಿ ಬಳಕೆ ಮಾಡಲಾಗಿದೆ ಎಂದು ಕೇಂದ್ರ ಲೋಕಸೇವಾ ಆಯೋಗ (ಯುಪಿಎಸ್‌ಸಿ) ಗುರುವಾರ ತಿಳಿಸಿದೆ.

'ಇದು ಪರೀಕ್ಷೆಯ ಸಮಗ್ರತೆಯನ್ನು ಹೆಚ್ಚಿಸಲು ಮತ್ತು ಬೇರೆಯವರ ಹೆಸರಿನಲ್ಲಿ ಪರೀಕ್ಷೆ ಬರೆಯುವುದನ್ನು ತಡೆಗಟ್ಟಲು ಸಹಕಾರಿಯಾಗಿದೆ' ಎಂದು ಹೇಳಿದೆ.

'ಅರ್ಜಿ ಸಲ್ಲಿಸುವಾಗ ಅಪ್‌ಲೋಡ್ ಮಾಡಿದ್ದ ಭಾವಚಿತ್ರಕ್ಕೆ ಪರೀಕ್ಷೆಗೆ ಹಾಜರಾಗುವ ಅಭ್ಯರ್ಥಿಯ ಮುಖವು ಹೊಂದಿಕೆಯಾಗುತ್ತದೆಯೇ ಎಂಬುದನ್ನು ಈ ವ್ಯವಸ್ಥೆಯು ಪರಿಶೀಲಿಸುತ್ತದೆ. ಮೊಬೈಲ್ ಫೋನ್‌ಗಳನ್ನು ಬಳಸಿಕೊಂಡು ದೇಶದಾದ್ಯಂತ ಎಲ್ಲ 2,072 ಪರೀಕ್ಷಾ ಕೇಂದ್ರಗಳಲ್ಲಿ ಮುಖಚಹರೆ ಗುರುತಿಸುವಿಕೆಯನ್ನು ನಡೆಸಲಾಗಿದೆ' ಎಂದು ಆಯೋಗ ತಿಳಿಸಿದೆ.

ಪೂರ್ವಭಾವಿ ಪರೀಕ್ಷೆಯು ಮೇ 24ರಂದು ನಡೆದಿತ್ತು. ಅರ್ಜಿ ಸಲ್ಲಿಸಿದ್ದ 8.19 ಲಕ್ಷ ಅಭ್ಯರ್ಥಿಗಳಲ್ಲಿ 5.49 ಲಕ್ಷ ಮಂದಿ ಪರೀಕ್ಷೆಗೆ ಹಾಜರಾಗಿದ್ದರು. ಮುಖಚಹರೆ ಗುರುತಿಸುವಿಕೆ ತಂತ್ರಜ್ಞಾನದ ಆ್ಯಪ್ ಅನ್ನು ಆಯೋಗವು ರಾಷ್ಟ್ರೀಯ ಇ–ಆಡಳಿತ ವಿಭಾಗದ ನೆರವಿನೊಂದಿಗೆ ಅಭಿವೃದ್ಧಿಪಡಿಸಿದೆ.

ಫೈನಲ್‌ಗೆ ದಾಪುಗಾಲಿಟ್ಟ ಮೀರಾ

ಫ್ರೆಂಚ್ ಓಪನ್ ಟೆನಿಸ್: ರಷ್ಯಾ ಆಟಗಾರ್ತಿಗೆ ಪ್ರಶಸ್ತಿ ಸುತ್ತಿನಲ್ಲಿ ಮಾಯಾ ಎದುರಾಳಿ

ಪ್ಯಾರಿಸ್ (ಎಎಫ್‌ಪಿ): ರಷ್ಯಾದ ಹದಿಹರೆಯದ ಆಟಗಾರ್ತಿ ಮೀರಾ ಅಂದ್ರೆಯೇವಾ ಗುರುವಾರ ಫ್ರೆಂಚ್ ಓಪನ್ ಟೂರ್ನಿಯ ಸೆಮಿಫೈನಲ್‌ನಲ್ಲಿ 6–1, 6–3 ರಿಂದ ಉಕ್ರೇನ್‌ನ ಮಾರ್ತಾ ಕೋಸ್ಟ್ಯುಕ್ ಅವರನ್ನು ಅನಾಯಾಸವಾಗಿ ಸೋಲಿಸಿದರು. ಆ ಹಾದಿಯಲ್ಲಿ ಮೊದಲ ಬಾರಿ ಗ್ರ್ಯಾನ್‌ಸ್ಲಾಮ್ ಟೂರ್ನಿಯೊಂದರ ಫೈನಲ್‌ ತಲುಪಿದರು.

ರಷ್ಯಾ ಮತ್ತು ಉಕ್ರೇನ್ ಸಂಘರ್ಷದ ಕಾರಣ ಈ ಎರಡು ದೇಶಗಳ ಆಟಗಾರ್ತಿಯರ ನಡುವಣ ಪಂದ್ಯ ಜಿದ್ದಿನ ಆಯಾಮ ಪಡೆಯಿತು. ಫಿಲಿಪ್ ಶಾಟ್ರಿಯೆ ಕೋರ್ಟ್‌ನಲ್ಲಿ ಆರಂಭದಲ್ಲೇ ಹಿಡಿತ ಸಾಧಿಸಿದ ಎಂಟನೇ ಶ್ರೇಯಾಂಕದ ಮೀರಾ ಯಾವ ಹಂತದಲ್ಲೂ ತಮ್ಮ ಮೇಲುಗೈ ಬಿಟ್ಟುಕೊಡಲಿಲ್ಲ. ಕೌಶಲ ಮತ್ತು ಆಕ್ರಮಣದ ಮನೋಭಾವದಿಂದ ಎದುರಾಳಿಯನ್ನು ಒತ್ತಡಕ್ಕೆ ಸಿಲುಕಿಸಿದರು.

2022ರಲ್ಲಿ ರಷ್ಯಾ ಪಡೆಗಳು ಉಕ್ರೇನ್ ಮೇಲೆ ದಾಳಿ ನಡೆಸಿದ ನಂತರ, ಉಕ್ರೇನ್ ಆಟಗಾರ್ತಿಯರು ಪ್ರಮುಖ ಟೂರ್ನಿಗಳಲ್ಲಿ ರಷ್ಯಾ ಆಟಗಾರ್ತಿಯರ ಜೊತೆ ಪಂದ್ಯಪೂರ್ವ ಫೋಟೊಕ್ಕೆ ಪೋಸ್ ನೀಡುತ್ತಿಲ್ಲ. ಇದು ಸಂಪ್ರದಾಯವೇ ಆಗಿಹೋಗಿದೆ. ಮಾರ್ತಾ ಅವರೂ ಅದನ್ನು ಪಾಲಿಸಿದರು. ಪಂದ್ಯದ ಮೊದಲು ಅಥವಾ ನಂತರ ಹಸ್ತಲಾಘವವೂ ನಡೆಯಲಿಲ್ಲ.

15ನೇ ಶ್ರೇಯಾಂಕದ ಕೊಸ್ಟ್ಯುಕ್ ಈ ಹಿಂದಿನ ಎರಡು ಮುಖಾಮುಖಿಗಳಲ್ಲಿ ಮೀರಾ ಅವರನ್ನು ಸೋಲಿಸಿದ್ದರು. ಮ್ಯಾಡ್ರಿಡ್ ಫೈನಲ್ ಸೇರಿದಂತೆ ಈ ಎರಡೂ ಪಂದ್ಯಗಳು ಇದೇ ವರ್ಷ ನಡೆದಿದ್ದವು. ಗುರುವಾರ ಆಡಲು ಬರುವ ಮೊದಲು ಮಾರ್ತಾ ಅವರು ಕೆಂಬಣ್ಣದ ಮಣ್ಣಿನ ಕೋರ್ಟ್‌ನಲ್ಲಿ ಸತತ 17 ಪಂದ್ಯಗಳಲ್ಲಿ ಅಜೇಯರಾಗಿದ್ದರು.

ಮೀರಾ–ಮಾಯಾ ಮುಖಾಮುಖಿ: 19 ವರ್ಷ ವಯಸ್ಸಿನ ಮೀರಾ ಶನಿವಾರ ನಡೆಯುವ ಫೈನಲ್‌ನಲ್ಲಿ ಪೋಲೆಂಡ್‌ನ ಮಾಯಾ ಕಲ್ಟಿನ್‌ಸ್ಕಾ ಅವರನ್ನು ಎದುರಿಸಲಿದ್ದಾರೆ. 114ನೇ ಕ್ರಮಾಂಕದ ಮಾಯಾ 7-6 (7/4), 6-4ರಿಂದ 25ನೇ ಶ್ರೇಯಾಂಕದ ಡಿಯಾನಾ ಶ್ನೈಡರ್ (ರಷ್ಯಾ) ಅವರನ್ನು ಸೋಲಿಸಿದರು. ಇದರೊಂದಿಗೆ ಓಪನ್ ಯುಗದಲ್ಲಿ ಫ್ರೆಂಚ್ ಓಪನ್ ಫೈನಲ್ ತಲುಪಿದ ಮೊದಲ ಕ್ವಾಲಿಫಯರ್ ಆಟಗಾರ್ತಿ ಎಂಬ ಹಿರಿಮೆಗೆ ಪಾತ್ರರಾದರು.

ಓಪನ್ ಯುಗದಲ್ಲಿ ಕ್ವಾಲಿಫಯರ್ ಹಂತದಿಂದ ಬಂದು ಗ್ರ್ಯಾನ್‌ಸ್ಲಾಮ್ ಫೈನಲ್ ತಲುಪಿದ ಎರಡನೇ ಆಟಗಾರ್ತಿ ಎಂಬ ಹಿರಿಮೆಗೆ 24 ವರ್ಷ ವಯಸ್ಸಿನ ಮಾಯಾ ಭಾಜನರಾದರು. ಬ್ರಿಟನ್‌ನ ಎಮ್ಮಾ ರಾಡುಕಾನು, 2021ರ ಅಮೆರಿಕ ಓಪನ್ ಪ್ರಶಸ್ತಿ ಜಯಿಸುವ ಹಾದಿಯಲ್ಲಿ ಈ ಸಾಧನೆ ಮಾಡಿದ್ದರು. ಮಾಯಾ ಕಳೆದ ಮೂರು ಆವೃತ್ತಿಗಳಲ್ಲಿ ಇಲ್ಲಿ ಮುಖ್ಯ ಸುತ್ತು ಪ್ರವೇಶಿಸಲು ವಿಫಲರಾಗಿದ್ದರು.


ಸೆಮಿಫೈನಲ್ ಪಂದ್ಯ ಗೆದ್ದ ಮಾಯಾ ಕಲ್ಟಿನ್‌ಸ್ಕಾ (ಎಡ) ಮತ್ತು ಮೀರಾ ಅಂದ್ರೆಯೇವಾ ಸಂಭ್ರಮ... ಎಎಫ್‌ಪಿ ಚಿತ್ರಗಳು

ಸೆಮಿಫೈನಲ್: ಇಟಲಿಯನ್ನರ ಮುಖಾಮುಖಿ

ಇಟಲಿಯ ಪ್ರಮುಖ ತಾರೆಗಳಾದ ಯಾನಿಕ್ ಸಿನ್ನರ್, ಲೊರೆಂಜೊ ಮುಸೆಟ್ಟಿ ಅವರು ಬೇಗನೇ ಹೊರಬಿದ್ದರೂ, ಆ ದೇಶದ ಇನ್ನಿಬ್ಬರು ಆಟಗಾರರು ಈಗ ಪುರುಷರ ಸಿಂಗಲ್ಸ್ ಸೆಮಿಫೈನಲ್‌ನಲ್ಲಿ ಮುಖಾಮುಖಿಯಾಗುತ್ತಿರುವುದು ವಿಶೇಷ. ಇಟಲಿಯ ಫ್ಲಾವಿಯೊ ಕೊಬೊಲಿ ಅವರು ಸ್ವದೇಶದ ಮ್ಯಾಟಿಯೊ ಅರ್ನಾಲ್ಡಿ ಅವರನ್ನು ಶುಕ್ರವಾರ ಎದುರಿಸಲಿದ್ದಾರೆ.

ಇನ್ನೊಂದು ಸೆಮಿಫೈನಲ್‌ನಲ್ಲಿ ಎರಡನೇ ಶ್ರೇಯಾಂಕದ ಅಲೆಕ್ಸಾಂಡರ್ ಜ್ವರೇವ್ (ಜರ್ಮನಿ) ಅವರು 26ನೇ ಶ್ರೇಯಾಂಕದ ಯಾಕುಬ್ ಮೆನ್ಸೆಕ್ (ಝೆಕ್ ರಿಪಬ್ಲಿಕ್) ಅವರನ್ನು ಎದುರಿಸಲಿದ್ದಾರೆ. ಬುಧವಾರ ನಡೆದ ಎಂಟರ ಘಟ್ಟದ ಪಂದ್ಯದಲ್ಲಿ ಅರ್ನಾಲ್ಡಿ ಅವರು 7–5, 5–2 ರಿಂದ ಮುಂದಿದ್ದಾಗ ಸ್ವದೇಶದ ಮ್ಯಾಟಿಯೊ ಬರೆಟಿನಿ ಅವರು ಪೃಷ್ಠದ ನೋವಿನಿಂದ ಪಂದ್ಯ ಬಿಟ್ಟುಕೊಟ್ಟರು.

ಎರ್ರಾನಿ–ಆ್ಯಂಡ್ರಿಯಾಗೆ ಮಿಶ್ರ ಡಬಲ್ಸ್ ಕಿರೀಟ

ಅಗ್ರಶ್ರೇಯಾಂಕದ ಜೋಡಿ ಸಾರಾ ಎರ್ರಾನಿ ಮತ್ತು ಆ್ಯಂಡ್ರಿಯಾ ವವಸ್ಸೋರಿ ಅವರು ಮಿಶ್ರ ಡಬಲ್ಸ್ ಪ್ರಶಸ್ತಿಯನ್ನು ತಮ್ಮಲ್ಲೇ ಉಳಿಸಿಕೊಂಡರು.

ಗುರುವಾರ ನಡೆದ ಫೈನಲ್ ಹಣಾಹಣಿಯಲ್ಲಿ ಇಟಲಿಯ ಜೋಡಿಯು ಮೊದಲ ಸೆಟ್ ಹಿನ್ನಡೆಯಿಂದ ಚೇತರಿಸಿಕೊಂಡು 4-6, 6-3, 10-4ರಿಂದ ಅಮೆರಿಕದ ಇವಾನ್ ಕಿಂಗ್ ಮತ್ತು ಕೆನಡಾದ ಗೇಬ್ರಿಯೆಲಾ ಡಬ್ರೋವ್ಸ್ಕಿ ಅವರನ್ನು ಮಣಿಸುವ ಮೂಲಕ ಮತ್ತೆ ಚಾಂಪಿಯನ್ ಆಯಿತು.

ಫಿಲಿಪ್ ಶಾಟ್ರಿಯೆ ಅಂಕಣದಲ್ಲಿ ನಡೆದ ಪಂದ್ಯದಲ್ಲಿ ಎರ್ರಾನಿ–ಆ್ಯಂಡ್ರಿಯಾ 79 ನಿಮಿಷಗಳ ಹೋರಾಟದಲ್ಲಿ ಗೆಲುವು ಸಾಧಿಸಿದರು. ಈ ಮೂಲಕ ಕ್ರೊವೇಷ್ಯಾದ ಇವಾನ್ ದೋಡಿಗ್ ಮತ್ತು ತೈವಾನ್‌ನ ಲತಿಶಾ ಚಾನ್ (2018 ಮತ್ತು 2019ರಲ್ಲಿ) ನಂತರ ಮಿಶ್ರ ಡಬಲ್ಸ್ ಪ್ರಶಸ್ತಿಯನ್ನು ಉಳಿಸಿಕೊಂಡ ಮೊದಲ ಜೋಡಿ ಎಂಬ ಹೆಗ್ಗಳಿಕೆಗೆ ಅವರು ಪಾತ್ರರಾದರು.


ಮಿಶ್ರ ಡಬಲ್ಸ್ ಪ್ರಶಸ್ತಿ ಗೆದ್ದ ಇಟಲಿಯಸಾರಾ ಎರ್ರಾನಿ ಮತ್ತು ಆ್ಯಂಡ್ರಿಯಾ ವವಸ್ಸೋರಿ

ವಿಶ್ವ ಯೋಗಾಸನ ಚಾಂಪಿಯನ್‌ಷಿಪ್‌ಗೆ ಮೋದಿ ಚಾಲನೆ

ಅಹಮದಾಬಾದ್ (ಪಿಟಿಐ): ಮೊತ್ತಮೊದಲ ವಿಶ್ವ ಯೋಗಾಸನ ಚಾಂಪಿಯನ್‌ಷಿಪ್‌ಗೆ ಇಲ್ಲಿ ಗುರುವಾರ ಚಾಲನೆ ನೀಡಿದ ಪ್ರಧಾನಿ ನರೇಂದ್ರ ಮೋದಿ ಅವರು, ‘ಸ್ಪರ್ಧಾತ್ಮಕ ಕ್ರೀಡೆಯಾಗಿ ಯೋಗ ಬೆಳೆಯಲು ಈ ಕೂಟವು ಸಹಕಾರಿಯಾಗಲಿದೆ’ ಎಂದು ಅಭಿಪ್ರಾಯಪಟ್ಟರು.

‘ಯೋಗಾಸನ ಕ್ರೀಡೆಯಾಗಿ ವಿಸ್ತರಿಸಿದಂತೆ ಅದಕ್ಕೆ ಸಂಬಂಧಿಸಿದ ಹೊಸ ಸಾಧ್ಯತೆಗಳು ಸಹ ತೆರೆದುಕೊಳ್ಳುತ್ತದೆ. ಇದು ಕ್ರೀಡಾಪಟುಗಳಿಗೆ ಹೊಸ ವೃತ್ತಿ ಅವಕಾಶಗಳನ್ನು ತರುತ್ತದೆ. ತರಬೇತುದಾರರು, ಕ್ರೀಡಾ ವಿಜ್ಞಾನಿಗಳು, ಸಂಶೋಧಕರಿಗೆ ಅವಕಾಶಗಳನ್ನು ಸೃಷ್ಟಿಸುತ್ತದೆ’ ಎಂದು ವರ್ಚುವಲ್ ಭಾಷಣದಲ್ಲಿ ಮೋದಿ ಹೇಳಿದರು.

‘ಯೋಗಾಸನವು ಮುಂದಿನ ದಿನಗಳಲ್ಲಿ ಅಂತರರಾಷ್ಟ್ರೀಯ ಕ್ರೀಡಾಕೂಟಗಳಲ್ಲಿ ಸ್ಥಾನ ಪಡೆಯಲಿದೆ’ ಎಂದು ಅವರು ವಿಶ್ವಾಸ ವ್ಯಕ್ತಪಡಿಸಿದರು.

‘ವಿಶ್ವ ಯೋಗಾಸನ ಚಾಂಪಿಯನ್‌ಷಿಪ್ ಭಾರತದಲ್ಲಿ ಆರಂಭವಾಗುತ್ತಿದೆ. ಮೊದಲ ಆವೃತ್ತಿಯಲ್ಲಿ 78 ದೇಶಗಳ 500ಕ್ಕೂ ಹೆಚ್ಚು ಯೋಗಪಟುಗಳು ಪಾಲ್ಗೊಂಡಿದ್ದಾರೆ. ನಮ್ಮ ದೇಶಕ್ಕೆ ಇದು ಐತಿಹಾಸಿಕ ಕ್ಷಣವಾಗಿದೆ’ ಎಂದು ಕ್ರೀಡಾ ಸಚಿವ ಮನ್ಸುಖ್ ಮಾಂಡವೀಯ ಹೇಳಿದರು.

ಸಿಂಧು, ಆಯುಷ್ ಶೆಟ್ಟಿ ನಿರ್ಗಮನ

ಜಕಾರ್ತಾ (ಪಿಟಿಐ): ಎರಡು ಬಾರಿಯ ಒಲಿಂಪಿಕ್ ಪದಕ ವಿಜೇತೆ ಪಿ.ವಿ.ಸಿಂಧು ಅವರು ವಿಶ್ವದ ಅಗ್ರಮಾನ್ಯ ಆಟಗಾರ್ತಿ ಆನ್ ಸೆ ಯಂಗ್ ಅವರಿಗೆ ಎರಡು ವಾರಗಳ ಅಂತರದಲ್ಲಿ ಎರಡು ಬಾರಿ ಸೋತರು. ಈ ಬಾರಿ ಇಂಡೊನೇಷ್ಯಾ ಓಪನ್ ಟೂರ್ನಿಯ 16ರ ಸುತ್ತಿನಲ್ಲಿ ಗುರುವಾರ ಕೊರಿಯಾದ ಆಟಗಾರ್ತಿಗೆ ನೇರ ಗೇಮ್‌ಗಳಲ್ಲಿ ಮಣಿದರು.



ಹೋದ ವಾರ ಸಿಂಗಪುರ ಓಪನ್ ಟೂರ್ನಿಯಲ್ಲಿ ಕೊರಿಯಾದ ಆಟಗಾರ್ತಿಗೆ ಸೋತಿದ್ದ ಸಿಂಧು 17–21, 14–21 ರಲ್ಲಿ ಸೋತರು. ಇದರಿಂದ ಹಾಲಿ ಒಲಿಂಪಿಕ್ ಚಾಂಪಿಯನ್ ಆನ್ ಅವರು ಸಿಂಧು ವಿರುದ್ಧ ಹತ್ತು ಮುಖಾಮುಖಿಗಳಲ್ಲೂ ಜಯಗಳಿಸಿದಂತಾಯಿತು.

ಪುರುಷರ ಸಿಂಗಲ್ಸ್‌ನಲ್ಲೂ ಭಾರತಕ್ಕೆ ಹಿನ್ನಡೆಯಾಯಿತು. ಆಯುಷ್ ಶೆಟ್ಟಿ ಎರಡನೇ ಸುತ್ತಿನ ಪಂದ್ಯದಲ್ಲಿ ಹಾಂಗ್‌ಕಾಂಗ್‌ನ ಲೀ ಚಿಯುಕ್ ಯಿಯು ಅವರಿಗೆ 21–16, 13–21, 14–21ರಲ್ಲಿ ಮಣಿದರು.

ಹರಿ–ಅರ್ಜುನ್ ಮುನ್ನಡೆ: ಇದೇ ವೇಳೆ ಪುರುಷರ ಡಬಲ್ಸ್‌ನಲ್ಲಿ ಹರಿಹರನ್ ಅಮ್ಸಕರುಣನ್–ಎಂ.ಆರ್.ಅರ್ಜುನ್ ಜೋಡಿ ತಮಗಿಂತ ಮೇಲಿನ ಕ್ರಮಾಂಕದ ಆರನ್ ಥಾಯ್–ಕಾಂಗ್ ಕಾಯ್– ಷಿಂಗ್ (ಮಲೇಷ್ಯಾ) ಜೋಡಿಯನ್ನು 16–21, 21–15, 21–19 ರಿಂದ ಸೋಲಿಸಿತು. ಆ ಮೂಲಕ ಇದೇ ಮೊದಲ ಬಾರಿ ಸೂಪರ್ 1000 ಮಟ್ಟದ ಟೂರ್ನಿಯೊಂದರ ಎಂಟರ ಘಟ್ಟಕ್ಕೆ ಮುನ್ನಡೆದರು.

ಮಲೇಷ್ಯಾದ ಈ ಜೋಡಿ, ಆಲ್ ಇಂಗ್ಲೆಂಡ್ ಚಾಂಪಿಯನ್‌ಷಿಪ್‌ನ ಮೊದಲ ಸುತ್ತಿನಲ್ಲಿ ಭಾರತದ ಸಾತ್ವಿಕ್ ರಣಕಿರೆಡ್ಡಿ– ಚಿರಾಗ್ ಶೆಟ್ಟಿ ಜೋಡಿಯನ್ನು ಸೋಲಿಸಿತ್ತು.

ಐಪಿಎಲ್ ಟೂರ್ನಿಯಲ್ಲಿ ಆಡುವಾಗ ಸ್ನಾಯುಸೆಳೆತ

ಕೊಹ್ಲಿಗೆ ಗಾಯ; ಅಫ್ಗನ್ ಸರಣಿಗೆ ಅಲಭ್ಯ

ನವದೆಹಲಿ (ಪಿಟಿಐ): ಸ್ನಾಯುಸೆಳೆತದ ಸಮಸ್ಯೆಯಿಂದ ಬಳಲುತ್ತಿರುವ ವಿರಾಟ್ ಕೊಹ್ಲಿ ಅವರು ಅಫ್ಗಾನಿಸ್ತಾನ ಎದುರಿನ ಏಕದಿನ ಕ್ರಿಕೆಟ್ ಸರಣಿಯಲ್ಲಿ ಕಣಕ್ಕಿಳಿಯುವುದಿಲ್ಲ. ಅವರ ಬದಲು ಋತುರಾಜ್ ಗಾಯಕವಾಡ್ ಅವರು ಸ್ಥಾನ ಪಡೆಯುವ ಸಾಧ್ಯತೆಯಿದೆ.

ಇದೇ 13ರಿಂದ ಧರ್ಮಶಾಲಾದಲ್ಲಿ ಸರಣಿಯ ಮೊದಲ ಪಂದ್ಯ ನಡೆಯಲಿದೆ. ಈಚೆಗೆ ನಡೆದ ಇಂಡಿಯನ್ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿಯಲ್ಲಿ ಆಡುವ ಸಂದರ್ಭದಲ್ಲಿ ಅವರು ಸ್ನಾಯುಸೆಳೆತದ ಸಮಸ್ಯೆಯಿಂದ ಬಳಲಿದ್ದರು. ಫೈನಲ್ ಪಂದ್ಯದಲ್ಲಿ ಅವರ ಅಮೋಘ ಬ್ಯಾಟಿಂಗ್ ಬಲದಿಂದ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವು ಚಾಂಪಿಯನ್ ಆಗಿತ್ತು.

‘ಐಪಿಎಲ್ ಫೈನಲ್ ಪಂದ್ಯದ ಸಮಯದಲ್ಲಿ ವಿರಾಟ್ ಗಾಯಗೊಂಡಿದ್ದರು. ಸ್ಕ್ಯಾನಿಂಗ್‌ನಲ್ಲಿ ಸ್ನಾಯುರಜ್ಜು ಗಾಸಿಯಾಗಿರುವುದು ಸ್ಪಷ್ಟವಾಗಿದೆ. ಆದ್ದರಿಂದ ಅವರಿಗೆ ವಿಶ್ರಾಂತಿಯ ಅಗತ್ಯವಿದೆ’ ಎಂದು ಬಿಸಿಸಿಐ ಮೂಲಗಳು ತಿಳಿಸಿವೆ.

37 ವರ್ಷದ ಕೊಹ್ಲಿ ಅವರು ಈ ಸಲದ ಐಪಿಎಲ್‌ನಲ್ಲಿ 675 ರನ್ ಗಳಿಸಿದರು. ಅದರಲ್ಲಿ ಒಂದು ಶತಕ ಮತ್ತು ಐದು ಅರ್ಧಶತಕಗಳು ಇವೆ.

ವಿರಾಟ್ ಅವರು ಅಂತರರಾಷ್ಟ್ರೀಯ ಟಿ20 ಮತ್ತು ಟೆಸ್ಟ್ ಕ್ರಿಕೆಟ್ ಮಾದರಿಗಳಿಂದ ಈಗಾಗಲೇ ನಿವೃತ್ತಿ ಪಡೆದಿದ್ದಾರೆ. ಅವರು ಪ್ರಸಕ್ತ ಏಕದಿನ ಮಾದರಿಯಲ್ಲಿ ಮಾತ್ರ ಆಡುತ್ತಿದ್ದಾರೆ. ಅಫ್ಗಾನಿಸ್ತಾನ ಎದುರಿನ ಸರಣಿಯಿಂದ ವಿರಾಟ್ ವಿಶ್ರಾಂತಿ ಪಡೆಯುವುದರಿಂದ ಅವರ ಬದಲಿಗೆ ಯಾರಿಗೆ ಸ್ಥಾನ ಸಿಗಲಿದೆ ಎಂಬ ಕುತೂಹಲ ಗರಿಗೆದರಿದೆ. ಭಾರತ ತಂಡದ ಮಾಜಿ ನಾಯಕ ರೋಹಿತ್ ಶರ್ಮಾ ಅವರು ಅಫ್ಗಾನಿಸ್ತಾನ ಎದುರು ಕಣಕ್ಕಿಳಿಯುವುದು ಬಹುತೇಕ ಖಚಿತವಾಗಿದೆ. ಅವರೂ ಕೂಡ ಏಕದಿನ ಮಾದರಿಯಲ್ಲಿ ಮಾತ್ರ ಆಡುತ್ತಿದ್ದಾರೆ.

ಋತುರಾಜ್ ಅವರು ಶ್ರೀಲಂಕಾ ಪ್ರವಾಸ ಮಾಡಲಿರುವ ಭಾರತ ಎ ತಂಡಕ್ಕೆ ಆಯ್ಕೆಯಾಗಿದ್ದರು. ಈಗ ಅವರನ್ನು ತಂಡಕ್ಕೆ ಕರೆಸಿಕೊಳ್ಳುವ ನಿರೀಕ್ಷೆಯಿದೆ.


ಅಹಮದಾಬಾದಿನಲ್ಲಿ ಈಚೆಗೆ ನಡೆದ ಐಪಿಎಲ್ ಫೈನಲ್ ಪಂದ್ಯದಲ್ಲಿ ಬ್ಯಾಟಿಂಗ್ ಮಾಡುವ ಸಂದರ್ಭದಲ್ಲಿ ವಿರಾಟ್ ಕೊಹ್ಲಿ ಅವರು ಬಲತೊಡೆಯ ಸ್ನಾಯುಸೆಳೆತದ ನೋವಿನಿಂದ ಬಳಲಿದರು. ಆರ್‌ಸಿಬಿಯ ಫಿಸಿಯೊ ಪ್ರಥಮ ಚಿಕಿತ್ಸೆ ನೀಡಿದರು –ಪಿಟಿಐ ಚಿತ್ರ

50ನೇ ಟೆಸ್ಟ್ ಆಡಲಿರುವ ರಿಷಭ್ ಪಂತ್ ಮೇಲೆ ಕಣ್ಣು

ಮುಲ್ಲನಪುರ (ಪಿಟಿಐ): ವಿಕೆಟ್‌ಕೀಪರ್– ಬ್ಯಾಟರ್ ರಿಷಭ್ ಪಂತ್ ತಮ್ಮ ವೃತ್ತಿಜೀವನದ 50ನೇ ಟೆಸ್ಟ್ ಪಂದ್ಯ ಆಡಲು ಸಜ್ಜಾಗಿದ್ದಾರೆ. ಇದೇ ಶನಿವಾರ ಇಲ್ಲಿ ಆರಂಭವಾಗಲಿರುವ ಅಫ್ಗಾನಿಸ್ತಾನ ಎದುರಿನ ಪಂದ್ಯದಲ್ಲಿ ಅವರು ಕಣಕ್ಕಿಳಿಯಲಿದ್ದು ‘ಅರ್ಧಶತಕ’ ಸಾಧನೆ ಮಾಡಲಿದ್ದಾರೆ.

ಗುರುವಾರ ಇಲ್ಲಿ ನೆಟ್ಸ್‌ನಲ್ಲಿ ಅಭ್ಯಾಸ ಮಾಡಿದ ಅವರು ತಮ್ಮದೇ ‘ನೈಜ ಶೈಲಿ’ಯ ಬ್ಯಾಟಿಂಗ್ ಮಾಡಿದರು. ಲಾಫ್ಟ್‌ಗಳ ಜೊತೆಗೆ ಮುನ್ನುಗ್ಗಿ ಹೊಡೆದ ಸ್ಟ್ರೋಕ್‌ಗಳೂ ಅಲ್ಲಿದ್ದವು. ಅವರ ಹಾವಭಾವದಲ್ಲಿ ಲವಲವಿಕೆ ಮತ್ತು ಆತ್ಮವಿಶ್ವಾಸದ ಸೆಳಕು ಇತ್ತು. ಮುಖ್ಯ ಕೋಚ್ ಗೌತಮ್ ಗಂಭೀರ್ ಅವರು ನೀಡಿದ ಸಲಹೆಗಳನ್ನು ಪಾಲಿಸುವ ಪ್ರಯತ್ನದಲ್ಲಿ ಪಂತ್ ಇದ್ದರು.

ಕೆಲವು ದಿನಗಳ ಹಿಂದೆ ಗುವಾಹಟಿಯಲ್ಲಿ ದಕ್ಷಿಣ ಆಫ್ರಿಕಾ ಎದುರಿನ ಟೆಸ್ಟ್ ಪಂದ್ಯದಲ್ಲಿ ಪಂತ್ ಅವರು ಹೊಡೆತಗಳನ್ನು ಪ್ರಯೋಗಿಸುವಲ್ಲಿ ಅಜಾಗರೂಕತೆ ತೋರಿದ್ದರು. ದುಡುಕು ಹೊಡೆತಗಳ ಮೂಲಕ ಔಟಾದಾಗ ಗಂಭೀರ್ ಅವರು ಅಸಮಾಧಾನಗೊಂಡಿದ್ದರು. ಈ ಹಿಂದೆಯೂ ಇಂತಹ ಆಟದಿಂದಾಗಿ ಪಂತ್ ಟೀಕೆಗೆ ಒಳಗಾಗಿದ್ದರು.


ರಿಷಭ್ ಪಂತ್

ಆದರೆ ಇಲ್ಲಿ ನೆಟ್ಸ್‌ನಲ್ಲಿ ಸ್ಪಿನ್ನರ್‌ಗಳನ್ನು ಎದುರಿಸುವಾಗ ಪಂತ್ ಅವರು ರಕ್ಷಣಾತ್ಮಕ ಆಟಕ್ಕೆ ಮೊರೆ ಹೋಗಿದ್ದರು. ನೆಟ್ಸ್ ಹಿಂದೆ ನಿಂತಿದ್ದ ಗಂಭೀರ್ ಅವರು ಪಂತ್ ಆಟದ ಮೇಲೆ ಹದ್ದಿನ ಕಣ್ಣು ನೆಟ್ಟಿದ್ದರು. ಅದರಿಂದಾಗಿ ಪಂತ್ ಅವರು ಕ್ರಿಕೆಟ್ ಕಾಪಿಬುಕ್ ಹೊಡೆತಗಳನ್ನು ಅಚ್ಚುಕಟ್ಟಾಗಿ ತಲೆಬಾಗಿಸಿ ಆಡಿದರು.

‘ಪಂತ್ ಅವರು ಬೇರೆಯವರಿಗೆ ಅನುಕರಣೀಯ ಹಾಗೂ ಅನುಭವಿ ಆಟಗಾರನಾಗಿ ಬೆಳೆಯುವ ಬದ್ಧತೆ ಹೊಂದಿದ್ದಾರೆ. ಗೌತಿ (ಗಂಭೀರ್) ಮತ್ತು ಅವರು ನಿನ್ನೆ ಈ ಕುರಿತು ದೀರ್ಘವಾಗಿ ಚರ್ಚೆ ಮಾಡುವುದನ್ನು ಗಮನಿಸಿದ್ದೆ. ಸೀನಿಯರ್ ಆಟಗಾರನಾಗಿ ಯಾವ ರೀತಿ ಜವಾಬ್ದಾರಿ ವಹಿಸಬೇಕು ಎಂಬುದರ ಬಗ್ಗೆ ಅವರಿಗೆ ಅರಿವು ಇದೆ’ ಎಂದು ಸಹಾಯಕ ಕೋಚ್ ರಿಯಾನ್ ಟೆನ್ ಡಾಶೆಟ್ ಅವರು ಸುದ್ದಿಗೋಷ್ಠಿಯಲ್ಲಿ ಹೇಳಿದರು.

‘ಭಾರತ ಟಿ20 ಕ್ರಿಕೆಟ್ ತಂಡಕ್ಕೆ ರಜತ್ ಪಾಟೀದಾರ್ ನಾಯಕರಾಗಲಿ’


ರಜತ್

ನವದೆಹಲಿ (ಪಿಟಿಐ): ಸತತ ಎರಡು ಐಪಿಎಲ್ ಟ್ರೋಫಿ ಗೆದ್ದ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ನಾಯಕ ರಜತ್ ಪಾಟೀದಾರ್ ಅವರಿಗೆ ಭಾರತ ಟಿ20 ತಂಡದ ನಾಯಕತ್ವ ವಹಿಸಬೇಕು ಎಂದು ಮಾಜಿ ಕ್ರಿಕೆಟಿಗ ಸಬಾ ಕರೀಂ ಹೇಳಿದ್ದಾರೆ.

ಸೂರ್ಯಕುಮಾರ್ ಯಾದವ್ ಅವರು ದೀರ್ಘ ಸಮಯದಿಂದ ಬ್ಯಾಟಿಂಗ್ ವೈಫಲ್ಯ ಅನುಭವಿಸುತ್ತಿದ್ದಾರೆ. ಆದ್ದರಿಂದ ಮುಂಬರುವ ದಿನಗಳಲ್ಲಿ ಅವರು ಭಾರತ ಟಿ20 ಕ್ರಿಕೆಟ್ ತಂಡದ ನಾಯಕತ್ವ ಕಳೆದುಕೊಳ್ಳುವ ಸಾಧ್ಯತೆ ದಟ್ಟವಾಗಿದೆ. ಆದ್ದರಿಂದ ಭಾರತ ತಂಡದ ಹೊಸ ನಾಯಕ ಯಾರಾಗಬೇಕು ಎಂಬ ಚರ್ಚೆ ಆರಂಭವಾಗಿದೆ.

ಈ ಕುರಿತು ಪಿಟಿಐ ಸಂದರ್ಶನದಲ್ಲಿ ಮಾತನಾಡಿದ ಕರೀಂ, ‘ಐಪಿಎಲ್ ಬಹಳ ಕಠಿಣ ಪೈಪೋಟಿ ಇರುವ ಟೂರ್ನಿ. ಸತತ ಎರಡು ಟ್ರೋಫಿ ಜಯಿಸುವುದು ಸುಲಭವಲ್ಲ. ಆದರೆ ಅದನ್ನು ರಜತ್ ಸಾಧ್ಯವಾಗಿಸಿದ್ದಾರೆ. ಅದರಲ್ಲಿಯೂ ಆರ್‌ಸಿಬಿ ತಂಡದಲ್ಲಿ ಖ್ಯಾತನಾಮ ಆಟಗಾರರೇ ತುಂಬಿದ್ದಾರೆ. ಅಂತಹ ತಂಡವನ್ನು ಮುನ್ನಡೆಸುವ ಜಾಣ್ಮೆ ಮತ್ತು ತಾಳ್ಮೆ ರಜತ್ ತೋರಿದ್ದಾರೆ. ಆದ್ದರಿಂದ ಅವರು ಭಾರತ ತಂಡಕ್ಕೆ ನಾಯಕರಾಗುವ ಅರ್ಹತೆ ಹೊಂದಿದ್ದಾರೆ’ ಎಂದರು.

‘ಸೂರ್ಯ ದೀರ್ಘ ಸಮಯದಿಂದ ಸತತ ವೈಫಲ್ಯ ಅನುಭವಿಸಿದ್ದಾರೆ. ಅಲ್ಲದೇ 2028ರ ಟಿ20 ವಿಶ್ವಕಪ್ ಟೂರ್ನಿಯಲ್ಲಿ ಆಡುವ ತಂಡವನ್ನು ಸಿದ್ಧಗೊಳಿಸುವ ಬಗ್ಗೆ ಆಯ್ಕೆ ಸಮಿತಿಯು ಯೋಚಿಸಿರುತ್ತದೆ. ಆದ್ದರಿಂದ ಸೂರ್ಯ ತಮ್ಮ ಸ್ಥಾನ ಉಳಿಸಿಕೊಳ್ಳುವ ಸಾಧ್ಯತೆ ತೀರಾ ಕಡಿಮೆ’ ಎಂದಿದ್ದಾರೆ. 33 ವರ್ಷದ ರಜತ್ ಅವರು ಇನ್ನೂ ಅಂತರರಾಷ್ಟ್ರೀಯ ಟಿ20 ಕ್ರಿಕೆಟ್‌ಗೆ ಪದಾರ್ಪಣೆ ಮಾಡಿಲ್ಲ.

‘15 ವರ್ಷದ ವೈಭವ್ ಸೂರ್ಯವಂಶಿ ಅವರು ಭಾರತ ತಂಡಕ್ಕೆ ಆಯ್ಕೆಯಾಗಲು ಅರ್ಹರಾಗಿದ್ದಾರೆ. ಅವರ ಕುರಿತು ಆಯ್ಕೆ ಸಮಿತಿಯ ಸಭೆಯಲ್ಲಿ ಚರ್ಚೆಯಾಗುವುದು ಖಚಿತ’ ಎಂದು ಕರೀಂ ವಿಶ್ವಾಸ ವ್ಯಕ್ತಪಡಿಸಿದರು.

ಕಟ್ಟಡದಿಂದ ಬಿದ್ದು ಪವರ್ ಲಿಫ್ಟರ್ ಸಾವು



ಉಳ್ಳಾಲ: ಪವರ್ ಲಿಫ್ಟರ್, ಇಲ್ಲಿನ ಉಳ್ಳಾಲ ಬೈಲ್ ನಿವಾಸಿ ಸಂತೋಷ್ ಪೂಜಾರಿ (43) ಗುರುವಾರ ಮಂಗಳೂರಿನ ಪದವಿನಂಗಡಿಯ ಕಟ್ಟಡವೊಂದರಲ್ಲಿ ವೆಲ್ಡಿಂಗ್ ಮಾಡುತ್ತಿದ್ದ ವೇಳೆ ಬಿದ್ದು ಸಾವಿಗೀಡಾಗಿದ್ದಾರೆ. ಅವರಿಗೆ ತಾಯಿ, ಪತ್ನಿ, ಸಹೋದರ ಮತ್ತು ಸಹೋದರಿ ಇದ್ದಾರೆ.

ಉಳ್ಳಾಲಬೈಲ್‌ನ ಶ್ರೀ ಶಕ್ತಿ ಭಾರತ್ ವ್ಯಾಯಾಮ ಶಾಲೆಯಲ್ಲಿ ಅಭ್ಯಾಸ ಮಾಡುತ್ತಿದ್ದ ಸಂತೋಷ್ ಸೀನಿಯರ್ ವಿಭಾಗದಲ್ಲಿ ರಾಜ್ಯಮಟ್ಟದಲ್ಲಿ ಮಿಂಚಿದ್ದರು.

ರಾಷ್ಟ್ರೀಯ ಚಾಂಪಿಯನ್‌ಷಿಪ್‌ಗೆ ಆಯ್ಕೆ: ಮಂಗಳೂರಿನಲ್ಲಿ ಈಚೆಗೆ ನಡೆದಿದ್ದ ರಾಜ್ಯ ಮಾಸ್ಟರ್ಸ್ ಕ್ಲಾಸಿಕ್ ಮತ್ತು ಇಕ್ವಿಪ್ಡ್ ಪವರ್ ಲಿಫ್ಟಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಚಿನ್ನ ಗೆದ್ದಿದ್ದ ಸಂತೋಷ್ ಪೂಜಾರಿ ಔರಂಗಾಬಾದ್‌ನಲ್ಲಿ ನಡೆಯಲಿರುವ ರಾಷ್ಟ್ರೀಯ ಚಾಂಪಿಯನ್‌ಷಿಪ್‌ಗೆ ಆಯ್ಕೆಯಾಗಿದ್ದರು.